

ಪ್ರಚೋದನೆ

ಲಂಕೇಶ್

ಆಗಸ್ಟ್ 29, 2012 ಪುಟ 20 ರೂ. 14/-

371ನೇ ಕಲಂ ತಿದ್ದುಪಡಿ ಸಮಸ್ಯೆಗಳು ಬಗೆಹರಿಯುತ್ತವೆಯೇ?






ಅಕ್ಕಿ ಖರೀದಿ ಹಗರಣ

ನಾಡ ಹಬ್ಬಕ್ಕೆ ಫ್ಯಾಸಿಸ್ಟ ಪೌರೋಹಿತ್ಯ

ಜಮಖಂಡಿ ಜಗಳೂರು





ಬಿಜೆಪಿಗೆ ಕಲ್ಲು ಹಾದಿ

ಪಾನಸಂಯಮ ಮಂಡಳಿ



ಮತ್ತೋನ್ಮತ್ತ ಅಧ್ಯಕ್ಷ

ಬಳ್ಳಾರಿ



ಅರುಣಾಲಕ್ಷ್ಮಿ ಕೈಗೆ ರೆಡ್ಡಿ ರಾಜಕೀಯ

ಗುನ್ನಾರ್ ಮ್ಯಾಟ್ಸನ್ ಅಪರೂಪದ ಬದುಕು ಅನನ್ಯ ಬರಹ

ಕತೆ ಹೇಳುವುದೂ ಒಂದು ಕಲೆ. ಕತೆಗಾರನೂ ಒಬ್ಬ ಕಲಾವಿದನೇ. ಕತೆ ಹೇಳುವುದು ಅನಿವಾರ್ಯವಾದಾಗ ಕಲಾವಿದ ಸಹಜವಾಗಿ ರೂಪುಗೊಳ್ಳುತ್ತಾನೆ. ಅದಕ್ಕೊಂದು ನಿದರ್ಶನ 'ಅಲಿಫ್ ಲೈಲಾ'. ಶಹ್ರಿಯಾರ್ ಎಂಬ ಪರ್ಶಿಯನ್ ಅರಸನಿಗೆ ಎರಡು ಖಯಾಲಿಗಳಿದ್ದವು. ಒಂದು ಕತೆ ಕೇಳುವುದು. ಇನ್ನೊಂದು ಪ್ರತಿ ದಿನವೂ ಒಬ್ಬ ಕನ್ಯೆಯನ್ನು ಮದುವೆಯಾಗುವುದು. ಆ ಕನ್ಯೆಯ ಜೊತೆ ಅವನು ಒಂದು ರಾತ್ರಿ ಕಳೆಯುತ್ತಿದ್ದ. ಬೆಳಗಾಗುತ್ತಲೇ ಅವಳನ್ನು ಗಲ್ಲಿಗೇರಿಸುತ್ತಿದ್ದ. ಕಡೆಗೂ ಒಮ್ಮೆ ಕನ್ಯೆಯರ ತಂದೆ ತಾಯಂದಿರು ಒಂದು ತೀರ್ಮಾನ ಕೈಗೊಂಡರು. ತಮ್ಮ ಮಗಳನ್ನು ಆ ರಾಕ್ಷಸನಿಗೆ ಮದುವೆ ಮಾಡಿಕೊಡಲು ಯಾವ ತಂದೆ ತಾಯಿಯೂ ಸಿದ್ಧರಾಗಲಿಲ್ಲ.

ತನ್ನ ಪ್ರಜೆಗಳ ತೀರ್ಮಾನ ಕೇಳಿ ಶಹ್ರಿಯಾರ್ ಕೆಂಡಾ ಮಂಡಲವಾದ. ಅರಸನ ಕೋಪಕ್ಕೆ ಜನ ಬಲಿಯಾಗದಿರಲೆಂದು ಒಬ್ಬ ಗುಲಾಮ ಹೆಣ್ಣು ಅವನನ್ನು ಮದುವೆಯಾಗಲು ಮುಂದೆ ಬಂದಳು. ಎಷ್ಟಾದರೂ ಗುಲಾಮ ಹೆಣ್ಣಲ್ಲವೆ? ಒಂದೇ ದಿನವಾದರೂ ಅವಳು ರಾಣಿಯಾಗಬಯಸಿದ್ದಾಳೆಂದು ಜನ ಆಡಿಕೊಂಡರು. ಶಹ್ರಿಯಾರ್ ಅವಳನ್ನು ಮದುವೆಯಾದ. ಸಕಲ ಶೃಂಗಾರದೊಂದಿಗೆ ಆ ಗುಲಾಮ ಹೆಣ್ಣು ತನ್ನನ್ನು ಸೇರಲಿರುವ ಅರಸನ ಬರವಿಗಾಗಿ ಎದುರು ನೋಡತೊಡಗಿದಳು. ಅರಸ ಬಂದವನೇ ಆ ಚಂದುಳ್ಳಿ ಚೆಲುವೆಯ ಮೇಲೆ ಎರಗಲು ಮುಂದಾದ. ಆದರೆ ಆ ಹೆಣ್ಣು ಮಾತ್ರ ಎದೆಗುಂದಲಿಲ್ಲ.

ಅರಸನಿಗೆ ಕತೆ ಕೇಳುವ ಗೀಳಿದೆಯೆನ್ನುವುದು ಅವಳಿಗೆ ಗೊತ್ತಿತ್ತು. ಅವಳು ಕತೆ ಹೇಳತೊಡಗಿದಳು. ಕತೆ ಅದೆಷ್ಟು ರೋಚಕವಾಗಿತ್ತೆಂದರೆ ಅರಸ ಪದೇಪದೆ "ಮುಂದೇನಾಯಿತು?" ಎಂದು ಕೇಳುತ್ತಿದ್ದ. ಹೀಗೆಯೇ ಅವನು ಒಮ್ಮೆ "ಮುಂದೇನಾಯಿತು?" ಎಂದು ಕೇಳಿದ. ಆ ಗುಲಾಮ ಹೆಣ್ಣು ಕಿಟಕಿಯಾಚೆ ನೋಡುತ್ತ "ಅಗೋ, ಸೂರ್ಯೋದಯವಾಯಿತು. ನಾನು ಸೂರ್ಯನಿಲ್ಲದ ವೇಳೆಯಲ್ಲಿ ಮಾತ್ರ ಕತೆ ಹೇಳುವವಳು" ಎಂದಳು. "ಹಾಗೋ? ನಿನಗೆ ಒಂದು ದಿನ ಜೀವ ದಾನ ಮಾಡುತ್ತೇನೆ" ಎಂದ ಶಹ್ರಿಯಾರ್.

ಮಾರನೆಯ ರಾತ್ರಿ ಅವಳು ತನ್ನ ಕತೆ ಮುಂದುವರಿಸಿದಳು. ಅರಸ ಮತ್ತೆ "ಮುಂದೇನಾಯಿತು?" ಎನ್ನುತ್ತಲೇ ಇದ್ದ. ಹೀಗೇ ಒಮ್ಮೆ ಅವನು "ಮುಂದೇನಾಯಿತು?" ಎಂದಾಗ ಅವಳು ಮತ್ತೆ ಕಿಟಕಿಯಾಚೆ ನೋಡುತ್ತ "ಅಗೋ ಸೂರ್ಯೋದಯವಾಯಿತು" ಎಂದಳು. ಹೀಗೆ ಅವಳು ಅರಸನಿಗೆ ಒಂದು ಸಾವಿರದ ಒಂದು ಕತೆ ಹೇಳಿದಳು. ಅಂದರೆ ಕತೆ ಹೇಳುವ ಮೂಲಕ ಅವಳು ಸಾವನ್ನು ಮುಖಾಮುಖಿಯಾಗಿದ್ದಳು. ಈ ಮಧ್ಯೆ ಅರಸ ತನ್ನ ವಂಶದ ಕುಡಿಯನ್ನು ನೀಡಿದ ಆ ಗುಲಾಮ ಹೆಣ್ಣನ್ನು 'ಶಹಜಾದಿ' ಎಂದು ಸ್ವೀಕರಿಸಿದ.

ತನ್ನ ಸೋದರನಿಗೆ ಅವನ ಹೆಂಡತಿ ನಿಷ್ಠಳಾಗಿಲ್ಲವೆಂದು ಕೇಳಿದ ಶಹ್ರಿಯಾರನಿಗೆ ಪಿತ್ಥ ನೆತ್ತಿಗೇರಿದಂತಾಗಿತ್ತು. ಮುಂದೆ ತನ್ನ ರಾಣಿಯೂ ಜಾರಿಣಿಯೆನ್ನುವುದು ಗೊತ್ತಾಗುತ್ತಲೇ ಅವಳನ್ನು ಗಲ್ಲಿಗೇರಿಸಿದ್ದ. ಎಲ್ಲ ಹೆಣ್ಣುಗಳು ಹೀಗೇ ಎಂದು ಭಾವಿಸಿದ ಶಹ್ರಿಯಾರ್ ಸ್ತ್ರೀ ದ್ವೇಷಿಯಾಗಿಬಿಟ್ಟಿದ್ದ. 'ಅರೇಬಿಯನ್ ನೈಟ್ಸ್'ನ ಸಾವಿರದ ಒಂದು ಕತೆಗಳು ಸಾಹಿತ್ಯಕವಾಗಿ ಮುಖ್ಯವಾಗಿರಲಿಲ್ಲವಾದರೂ ಇಂತಹ ಕ್ರೂರಿಯನ್ನು ಮಾನವೀಯಗೊಳಿಸಿದ್ದು ಶಹಜಾದಿಯ ಕತೆ ಹೇಳುವ ಕಲೆ ಎನ್ನುವುದು ಮುಖ್ಯವಾಗುತ್ತದೆ.



ಫಿನ್‌ಲ್ಯಾಂಡ್‌ನ ಗುನ್ನಾರ್ ಮ್ಯಾಟ್ಸನ್ ಎಂಬ ಯುವಕನೊಬ್ಬ ಎರಡನೆಯ ವಿಶ್ವ ಯುದ್ಧದ ಕಾಲಕ್ಕೆ ರಣರಂಗದಿಂದ ಒಂದು ಪ್ರಮುಖ ಪತ್ರಿಕೆಗೆ ವರದಿ ಮಾಡಿ ಹೆಸರುವಾಸಿಯಾಗಿದ್ದ. ಯುದ್ಧ ಕೊನೆಗೊಂಡ ನಂತರ ಅವನು ಸಾಹಿತಿಯಾಗಬೇಕು ಎಂದು ಹಂಬಲಿಸಿದ. ಪತ್ರಕರ್ತ ಸಾಹಿತಿಯಾಗುವುದು ಸುಲಭವಲ್ಲವೆನ್ನುವುದು ಅವನಿಗೆ ಗೊತ್ತಿತ್ತು. ಪ್ರಾಯಶಃ ಅವನಿಗೂ ಶಹಜಾದಿಯಂತೆ ಕತೆ ಹೇಳುವ ಕಲೆ ಕರಗತವಾಗಿತ್ತೇನೋ. ಅವನು ಒಂದು ಕಾದಂಬರಿ ಬರೆದ. ಅವನು ರಾತ್ರೋರಾತ್ರಿ ಮನೆ ಮಾತಾಗಿಬಿಟ್ಟ. ಒಂದು ಕಾದಂಬರಿಯಿಂದ ಅವನು ಅದೆಷ್ಟು ಗಳಿಸಿದ್ದನೆಂದರೆ ಅವನು ಹಲವಾರು ನಡುಗಡ್ಡೆಗಳನ್ನು ಖರೀದಿಸಿದ.

ಕಾದಂಬರಿಯನ್ನು ವಿಮರ್ಶಿಸಿದವರೆಲ್ಲರೂ ಕಾದಂಬರಿಕಾರನ ಕತೆಯ ನಿರೂಪಣೆಯನ್ನು ಮೆಚ್ಚಿಕೊಂಡಿದ್ದರು. ಜೊತೆಗೇ ಒಂದು ಉತ್ಕೃಷ್ಟ ಆತ್ಮಚರಿತ್ರೆಯಾಗಬಹುದಾಗಿದ್ದ ತನ್ನ ಬದುಕನ್ನು ಒಂದು ವಾಸ್ತವವಾದಿ ಕಾದಂಬರಿಯಾಗಿಸುವಲ್ಲಿ ಮ್ಯಾಟ್ಸನ್ ಯಶಸ್ವಿಯಾಗಿದ್ದಾರೆ ಎಂದು ಕೆಲವರು ಸೇರಿಸಿದ್ದರು. ಮ್ಯಾಟ್ಸನ್ ಯುವತಿಯರ ಆರಾಧ್ಯ ದೈವವಾಗಿ ಬಿಟ್ಟಿದ್ದ. ಅವನ ಅಸಂಖ್ಯಾತ ಅಭಿಮಾನಿಗಳಿಂದ ಪತ್ರಗಳ ಮಹಾಪೂರವೇ ಹರಿದು ಬರತೊಡಗಿತು. ಪ್ರತಿಯೊಬ್ಬ ಯುವತಿ "ತಾಯಿಯನ್ನು ಕಳೆದುಕೊಂಡು ತಬ್ಬಲಿಯಾಗಿರುವ ನಿಮ್ಮ ಮಗುವನ್ನು ನಾನು ನನ್ನ ಸ್ವಂತ ಮಗುವೆಂದೇ ಭಾವಿಸುತ್ತೇನೆ. ದಯವಿಟ್ಟು ನೀವು ನನ್ನನ್ನು ಮದುವೆಯಾಗಿರಿ. ತೀರಿಹೋದ ನಿಮ್ಮ ಮಡದಿಯಷ್ಟೇ ನಾನು ನಿಮ್ಮನ್ನು ಪ್ರೀತಿಸುತ್ತೇನೆ" ಎಂದೆಲ್ಲ ಬರೆಯತೊಡಗಿದ್ದರು. ಮ್ಯಾಟ್ಸನ್ ಆ ಪತ್ರಗಳನ್ನೋದಿ ಬಿದ್ದು ಬಿದ್ದು ನಕ್ಕ. ಕಾರಣ ಅವನು ಅವಿವಾಹಿತನಾಗಿದ್ದ.

ಆ ಜನಪ್ರಿಯ ಸಾಹಿತಿ ಎಲ್ಲೇ ಕಂಡರೂ ಅವನ ಮೇಲೆ ಅಭಿಮಾನಿಗಳು ಮುಗಿಬೀಳುತ್ತಿದ್ದರು. ಅವನು ಒಮ್ಮೆ ಸಾಯಂಕಾಲ ಒಂದು ನೈಟ್‌ಕ್ಲಬ್‌ಗೆ ಹೋದ. ಅವನನ್ನು ನೋಡಿದ ಯುವತಿಯರೆಲ್ಲ ಅವನ ಜೊತೆ ಮಾತನಾಡಲು ಚಡಪಡಿಸತೊಡಗಿದರು. ಅವನು ಮಾತ್ರ ಯಾರನ್ನೂ ಕಣ್ಣೆತ್ತಿ ನೋಡಲಿಲ್ಲ. ಒಂದು ಮೂಲೆಯಲ್ಲಿ ಜೋಲು ಮುಖ ಹಾಕಿಕೊಂಡು ಕುಳಿತಿದ್ದ ಒಬ್ಬ ಯುವತಿಯೆದುರು ಹೋಗಿ ಕುಳಿತುಕೊಂಡ. ತನ್ನನ್ನು ಪರಿಚಯಿಸಿಕೊಂಡ. ಅವಳು ಪ್ರತಿಕ್ರಿಯಿಸಲೇ ಇಲ್ಲ. ಅವಳನ್ನು ಮಾತನಾಡಿಸಲೆತ್ನಿಸಿ ಅವನು ವಿಫಲನಾದ. ಕೊನೆಗೆ ಅವನ ಕಾಟ ತಾಳಲಾರದೆ ಆ ಯುವತಿ ಸಟಕ್ಕನೇ ಎದ್ದು ಹೊರಟು ಬಿಟ್ಟಳು. ಮ್ಯಾಟ್ಸನ್ ತನ್ನ ಮನೆಯ ಹಾದಿ ಹಿಡಿದ.

ಮರುದಿನ ಅವನು ನೈಟ್‌ಕ್ಲಬ್‌ನ ಮೊದಲ ಗಿರಾಕಿಯಾಗಿ ಪ್ರವೇಶಿಸಿದ. ಎಷ್ಟೋ ಹೊತ್ತಿನ ನಂತರ ಯುವಕಯುವತಿಯರು ಆಗಮಿಸತೊಡಗಿದರು. ಆದರೆ ಮ್ಯಾಟ್ಸನ್‌ನ ಕಣ್ಣುಗಳು ಅರಸತೊಡಗಿದ್ದ ಯುವತಿಯು ಆಗಮಿಸುತ್ತಲೇ ಅವನು ಕುರ್ಚಿಯಿಂದ ಎದ್ದುಬಿಟ್ಟ. ಆ ಯುವತಿ ಮತ್ತೆ ಅದೇ ಮೂಲೆಯಲ್ಲಿ ಒಂದು ಕುರ್ಚಿಯಲ್ಲಿ ಕುಳಿತುಕೊಂಡಿದ್ದಳು. ಮ್ಯಾಟ್ಸನ್ ತಾನಾಗಿಯೇ ಮಾತಿಗೆ ತೊಡಗಿದ. ಆದರೆ ಯುವತಿ ಮಾತ್ರ ಅವನನ್ನು ಕಣ್ಣೆತ್ತಿಯೂ ನೋಡಲಿಲ್ಲ. ಕಡೆಗೆ ಅವಳು ಬೇಸತ್ತು ಎದ್ದುಹೋದಳು. ಹೀಗೆಯೇ ಎಷ್ಟೋ ದಿನ ಮ್ಯಾಟ್ಸನ್ ಅವಳನ್ನು ಮಾತನಾಡಿಸಲೆತ್ನಿಸಿದ.

ಕಡೆಗೊಮ್ಮೆ ಮ್ಯಾಟ್ಸನ್ ತನ್ನ ಮನಸೂರೆಗೈದಿದ್ದ ಆ ಯುವತಿಯೆದುರು ತನ್ನ ಹೃದಯದ ಆಳಲನ್ನು ತೋಡಿಕೊಂಡ. "ಐ ಲವ್ ಯೂ" ಎಂದ. "ಬಟ್ ಐ ಡೋಂಟ್" ಎಂದಳು ಯುವತಿ. "ಐ ಲವ್ ಯೂ" ಎನ್ನುತ್ತಲೇ ಇದ್ದ ಅವನಿಗೆ ಯುವತಿ "ಬಟ್ ಐ ಡೋಂಟ್" ಎಂದಷ್ಟೇ ಹೇಳುತ್ತಿದ್ದಳು. ಇನ್ನು ಈ ಯುವಕನನ್ನು ಎಂದೂ ಭೇಟಿಯಾಗಬಾರದೆಂದು ಅವಳು ತೀರ್ಮಾನಿಸಿ ಅಲ್ಲಿಂದ ಎದ್ದು ಹೋಗಿಬಿಟ್ಟಳು. ಆ ಜೋಡಿಯ ಮಾತುಗಳನ್ನಾಲಿಸಿದ ಯುವತಿಯರು ಮ್ಯಾಟ್ಸನ್ ಬಳಿ ಬಂದು "ದಯವಿಟ್ಟು ಕ್ಷಮಿಸಬೇಕು. ನೀವು ಆ ಯುವತಿಯಲ್ಲಿ ಅಂತಹದ್ದೇನು ಕಂಡಿದ್ದೀರಿ? ನಾವು ಹೊಟ್ಟೆ ಕಿಚ್ಚಿನಿಂದ ಈ ಮಾತನ್ನು ಹೇಳುತ್ತಿಲ್ಲ. ರಾಂಗ್ ಚಾಯ್ಸ್" ಎಂದರು. "ಮೈಂಡ್ ಯುವರ ಓನ್ ಬಿಜಿನೆಸ್" ಎಂದು ಮ್ಯಾಟ್ಸನ್ ಗುಡುಗಿದ.

ಆದರೆ ಯುವತಿಯರು "ನಾವು ಬರೀ ನಿ... ಅಭಿಮಾನಿಗಳಲ್ಲ, ನೀವು ನಮ್ಮ ದೇಶದ ಆಸ್ತಿ, ... ಯಾವ ಯುವತಿಯ ಬೆನ್ನು ಹತ್ತಿದ್ದೀರೋ ಅವಳು ನಿ... ತಕ್ಕವಳಲ್ಲ" ಎಂದರು. ಮತ್ತೆ ಅವನು "ಮೈಂಡ್ ಯು... ಓನ್ ಬಿಜಿನೆಸ್" ಎಂದಷ್ಟೇ ಹೇಳಿ ರಿಸೆಪ್ಷನಿಸ್ಟ್‌ಳ ... ಹೋದ. ಅವಳಿಂದ ತನ್ನ ಮನದನ್ನೆಯ ವಿ... ಪಡೆದುಕೊಂಡ.

ಮ್ಯಾಟ್ಸನ್ ಮರುದಿನ ನೇರವಾಗಿ ಆ ಯುವ... ಮನೆಗೆ ಹೋದ. ಮನೆಯಲ್ಲಿ ಅವಳ ತಂದೆತಾಯಿಂ... ಅವನನ್ನು ಸ್ವಾಗತಿಸಿದರು. "ನಾನು ಗುನ್ನಾರ್ ಮ್ಯಾಟ್... ಎಂದು ಅವನು ಪರಿಚಯಿಸಿಕೊಂಡ. "ನೀವು ... ದೇಶಕ್ಕೆ ಸುಪರಿಚಿತರು. ಕುಳಿತುಕೊಳ್ಳಿ" ಎಂದರು. ... ಇದೂ ಮಾತನಾಡಿದ ಮೇಲೆ ಮ್ಯಾಟ್ಸನ್ ತಾನು ಬಂದ... ಎನ್ನುವುದನ್ನು ತಿಳಿಸಿದ. ಆ ಮುದಿ ಜೀವಗಳ ... ಕಳಾಹೀನವಾದದ್ದನ್ನು ಗಮನಿಸಿದ ಅವನು "ನಾ... ನಿಜವಾಗಿಯೂ ನಿಮ್ಮ ಮಗಳನ್ನು ಮನಸಾರೆ ಪ್ರೀತಿ... ಅವಳನ್ನು ಮದುವೆಯಾಗ್ತೀನಿ" ಎಂದ. ಯುವತಿಯ ... "ನೋಡಿ ನೀವು ನಮ್ಮ ಮಗಳನ್ನು ಮದುವೆಯಾಗಬೇ... ನಿಮ್ಮನ್ನು ಮದುವೆಯಾಗಬಯಸುವ ಯುವತಿಯರಿ... ಕಮ್ಮಿ? ಒಳ್ಳೆಯ ಹುಡುಗಿಯನ್ನು ನೋಡಿ ಮದುವೆಯ... ನೀವು ನಮ್ಮ ದೇಶದ ಆಸ್ತಿ. ನಿಮ್ಮ ಬಗೆಗಿನ ಕಾಳಜಿಯ... ಈ ಮಾತು ಹೇಳ್ತಾ ಇದ್ದೀನಿ" ಎಂದ ಯುವತಿಯ ತ...

"ನಾನು ನಿಮ್ಮ ಮಗಳನ್ನ ಯಾಕೆ ಮದು...ಯಾಗಬಾರದು?"

"ಅವಳು ಒಂದು ಮಾರಕ ರೋಗದಿಂದ ಬ... ಇದ್ದಾಳೆ."

"ಆದರೇನಂತೆ?"

"ಅವಳನ್ನು ನಾವು ಪ್ರತಿ ದಿನ ಒಬ್ಬೊಬ್ಬ ತಜ್ಞನ... ಕರೆದೊಯ್ಯುತ್ತೇವೆ."

"ನಾನೂ ಅದನ್ನೆಲ್ಲ ಮಾಡ್ತೀನಿ."

"ಅವಳು ಇನ್ನು ಕೆಲವೇ ದಿನ ಬದುಕಲಿದ್ದಾಳೆ..."

"ಅವಳು ಬದುಕಿದ್ದಷ್ಟೂ ದಿನ ಅವಳ ಶುಶ್ರೂ... ಮಾಡ್ತೀನಿ."


ಕಡೆಗೂ ಮ್ಯಾಟ್ಸನ್ ಆ ಯುವತಿ ಶೆಜಾ... ಮದುವೆಯಾದ. ಅವಳು ಹೆಚ್ಚೆಂದರೆ ಒಂದು ... ಬದುಕಬಹುದು ಎಂದು ವೈದ್ಯರು ಹೇಳಿದ್ದರು. ಅ... ರೋಗಿಷ್ಠೆಯೆನ್ನುವುದು ಅವಳ ಗಮನಕ್ಕೆ ಬರದಂತೆ ಮಾ... ನೋಡಿಕೊಂಡ. ಸುಮಾರು ಆರೇಳು ತಿಂಗಳ ನ... ಅವಳಿಗೆ ಚಿಕಿತ್ಸೆ ನೀಡುತ್ತಿದ್ದ ತಜ್ಞರೆಲ್ಲ ಅವಳನ್ನು ... ತಪಾಸಣೆಗೊಳಪಡಿಸಿದರು. ತಪಾಸಣೆ ನಂತರ ಎಲ್ಲ... ವೈದ್ಯರಿಗೆ ದಂಗು ಬಡಿದಂತಾಯಿತು. ಅವರು "ಮ್ಯಾ... ಹ್ಯಾಟ್ಸ್ ಆಫ್ ಟು ಯು. ಯಾವ ರೋಗಕ್ಕೆ ವ... ಚಿಕಿತ್ಸೆ ಇದ್ದಿರಲಿಲ್ಲವೋ ಆ ರೋಗವನ್ನು ನೀವು ಕೆ... ಪ್ರೀತಿಯಿಂದ ಗುಣಪಡಿಸಿದ್ದೀರಿ. ಅಷ್ಟೇ ಅಲ್ಲ ... ತಂದೆಯಾಗಲಿದ್ದೀರಿ" ಎಂದು ಮ್ಯಾಟ್ಸನ್‌ಗೆ... ಅಭಿನಂದಿಸಿದರು.

ಹಾಡ್ಜ್‌ಕಿನ್ಸ್ ರೋಗದಿಂದ ಬಳಲುತ್ತಿದ್ದ ಶೆಜಾ ಗ... ಮಗುವಿಗೆ ಜನ್ಮ ನೀಡಿದಳು. ಮಗು ಹುಟ್ಟಿದಂದಿನಿಂ... "ನನ್ನ ಗೆಳತಿಯರು ಹೆರಿಗೆ ಹೆಣ್ಣಿಗೊಂದು ಪುನರ್ಜನ್ಮವೆ... ಎಂದು ಹೆದರಿ ಮದುವೆಯೇ ಬೇಡವೆನ್ನುವವರಿ... ಆದರೆ ಈ ಹೆರಿಗೆಯ ನೋವಿನ ಸುಖ ಅನನ್ಯವಾ... ಹಾಗಾಗಿ ನಾನು ಪ್ರತಿದಿನ ಒಂದು ಮಗುವಿಗೆ ... ನೀಡಬೇಕೆನಿಸುತ್ತದೆ" ಎಂದು ತನ್ನ ಗಂಡನಿಗೆ ಹೇಳಿ... ಪ್ರಾಯಶಃ ಮ್ಯಾಟ್ಸನ್‌ಗೆ ಅವಳ ಆಳದ ಬಯ... ಅರಿವಿತ್ತೇನೋ. ಮುಂದೆ ಶೆಜಾ ಒಬ್ಬ ನರ್ಸ್ ಆಗಿ ... ಸಲ್ಲಿಸಲು ತೀರ್ಮಾನಿಸಿದಳು. ಮ್ಯಾಟ್ಸನ್ ಆ ಪವಾಡ... ಕಡಿಮೆಯಲ್ಲದ ತನ್ನ ಬದುಕಿನ ಪರ್ವವನ್ನೇ ... ಕಾದಂಬರಿಯನ್ನಾಗಿಸಿದ.

'ದ ಪ್ರಿನ್ಸೆಸ್' ಎನ್ನುವ ಆ ಕಾದಂಬರಿ... ವಿಮರ್ಶಿಸಿದವರು ಕಾದಂಬರಿಕಾರನ ಕಲ್ಪನಾ ಸಾಮ... ಅದ್ಭುತವಾದದ್ದೆಂದು ಉದ್ಗರಿಸಿದರು. ಮ್ಯಾಟ್ಸನ್ ಮತ್ತೆ ಬಿದ್ದು ಬಿದ್ದು ನಕ್ಕ.

• ಹಸನ್ ನಯೀಂ ಸುರಕೋ...

ಮತ್ತೊಂದು ಪಯಣ



ಗಂಜಿ ಕಾಸಿ ಮುಂದಿಟ್ಟ ಅವ್ವ
ಅಂತರಂಗದ ಕನ್ನಡಿಯ ನೋಡುವಂತೆ ಉಲಿದಳು
ಬೆಂಕಿಯಲಿ ಬಿದ್ದ ಹಸಿ ಎಲೆಯಂತೆ ಚಟಪಟನೆ
ಸಿಡಿದು
ಇತ್ತಳೊಂದು ಸಲಹೆ!
ಬಿಟ್ಟುಬಿಡು ತಿರುಗುವುದನ್ನು...
ರಾತ್ರಿಗೆ ಬಾಗಿಲು ಹಾಕುವ
ಓದು.... ಭಾಷಣಗಳನ್ನು
ಸುಖದ ಬಾಳೊಂದು ಕನಸು ಮರಿ
ಇದೆ ನೌಕರಿ ಏರು ಅಂಬಾರಿ
ಚುಕ್ಕಿಗಳ ಸೆರೆಹಿಡಿದು ಕಟ್ಟು ಹೂದಂಡೆ
ಚಂದಿರನ ಒತ್ತು ಬಿರುಕು ಗೋಡೆಗಳಿಗೆ
ಇದು ಟೈಫಾಯಿಡ್ ಅಲ್ಲ ಬಿಡು
ಓದಿ ಓದಿ ಜಡವಾಗಿದೆ ತಲೆ

ನಾನು.....
ಹುಳು ಹುಳು ನೋಡಿದೆ ಅವಳ ಮುಖ
ಬತ್ತಿದ ಕೆರೆಯ ಬಾಯಾರಿಕೆ ಬಿಸಿಗೆ
ಎದ್ದ ಮುಳ್ಳು ಪೊದೆಗಳ ನಡುವೆ ಬಿದ್ದ ಅಸ್ಥಿಪಂಜರ
ಖಾಲಿ ಕೊಡಗಳ ಬಿಸಿಲ ಝಳಕು

ಕಪ್ಪು ಮುಖದೊಳಗೆ ಬರಿ ಕಣ್ಣಾಹರದೆ ನೋವು ನೆರಿಗೆ
ಬೆಳ್ಳುಳ್ಳಿ-ಉಪ್ಪು ಬೆರೆಸಿ ಬಿಸಿರೊಟ್ಟಿ ಮುಟಗಿ ತಿನಿಸಿ
ಲಾಟೀನು ಮುಂದೆ ರಟ್ಟೆ ಹಿಡಿದು ಕೂಡ್ರಿಸಿ
ಪಾಟಿ ಪೆನ್ಸಿಲ್ಲು ಅಂಕಲಿಪಿ ಇಟ್ಟು
ಬೆನ್ನಮೇಲೆ ಬೆರಳಾಡಿಸಿದ ಸ್ತಬ್ಧ ಚಿತ್ರ!

ತುಂಬಿದ ಕಣ್ಣೀರನ್ನು ಇಂಗಿಸಿಕೊಳ್ಳುತ್ತ
ಮತ್ತೊಮ್ಮೆ ತಲೆ ಇಟ್ಟೆ ಸಾಂತ್ವನಕ್ಕೆ
ಸುತ್ತ ಸುಳಿದರು ಬೀದಿ ಹೆಣ-
ವಾಗಿ ಹೋದ ಬಾಳ ಗೆಳತಿಯರು

ಮತ್ತೆ ಅದೇ ಯೋಚನೆ.....
ಏನು ಹೇಳಲಿ ಅವ್ವನಿಗೆ
ಹದಿಮೂರು ವರುಷಕೆ ನನ್ನ ಹೆತ್ತ ಹುಸುಗೂಸಿಗೆ
ಹಸಿಮೈಯಲ್ಲಿ ಹರಕು ಚಾದರ ಹೊದ್ದು
ಕೌದಿರಗಟೆಯಲ್ಲಿ ಕರುಳ ಕಂದ.....
ಹಳ್ಳಿ ದವಾಖಾನೆಯಲಿ ಹಗಲು ಕಳೆದು
ಸರ್ಕಾರಿ ಶಾಲೆಯಲಿ ಸಾವು-ಬದುಕಿನಾಟಕೆ ಉಸಿರು
ಬಿಗಿದು
ರಾತ್ರಿ ಕತ್ತಲು ಕರಗಿದ್ದಕ್ಕೆ ಬೆಳ್ಳಿ ಚಿಕ್ಕಿಗೆ ಕೈ ಮುಗಿದು
ಗೊಂಬೆಗೊಂದು ಗೊಂಬೆಕೊಟ್ಟು ಗೊಂಬೆಯಾಟ
ಆಡಿದ
ನನ್ನವ್ವನಿಗೆ ಹೇಗೆ ಹೇಳಲಿ ನನ್ನ ಅನಾರೋಗ್ಯದ ಗುಟ್ಟು

ಈಗ ಅವ್ವನ ಸರದಿ
ನೋಡಿದಳು ಮಾರಿ ಹುಳುಹುಳು
ಮೆಲ್ಲಗೆ ಸರಿದೆ ನೋಡಲಾಗದೆ ನಾನು
ಮತ್ತೊಂದು ಓದಿಗೆ! ಭಾಷಣಕೆ!!

• ಅನಸೂಯ ಕಾಂಬಳೆ

...ಾಳಿಸುದ್ದಿಯ ಹಿಂದಿರುವ ತರ್ಕಗಳು



ಕಂಡಹಾಗೆ

editorlankesh@gmail.com • ಗೌರಿ ಲಂಕೇಶ್

...ೆರಡು ವಾರಗಳಿಂದ ಎಲ್ಲೆಲ್ಲೂ ಬರೀ ...ಗಳದ್ದೇ ಸುದ್ದಿ. ಅಂತಹ ರೂಮರ್/ ...ದ್ದಿಯನ್ನು ಕೇಳಿ ಭಯಭೀತಗೊಂಡ ಭಾರತದ ... ರಾಜ್ಯಗಳ ಸಾವಿರಾರು ಜನ ನಿನ್ನೆ ...ರನ್ನು ತೊರೆದು ತಮ್ಮ ಊರುಗಳಿಗೆ ...ಿದರು.

...ವ್ವಡೆ ಹಬ್ಬಿದ ಗಾಳಿಸುದ್ದಿಯ ಸಾರಾಂಶ ...ೂರಿನಲ್ಲಿ ಈಶಾನ್ಯ ರಾಜ್ಯದ ಜನರ ಮೇಲೆ ...ಾಗುತ್ತಿವೆ, ಇಂತಹ ದಾಳಿಗಳು ಆಗಸ್ಟ್ ... ನಂತರ ಹೆಚ್ಚಾಗುತ್ತವೆ. ಅದಕ್ಕೂ ಮುನ್ನ ಆ ...ಇಲ್ಲಿಂದ ತಮ್ಮ ಊರುಗಳಿಗೆ ಹೋದರೆ ... ಕ್ಷೇಮ' ಎಂಬುದಾಗಿತ್ತು. ಈ ಗಾಳಿಸುದ್ದಿಯ ...ವ ಎರಡು ತರ್ಕಗಳು ಮೇಲುನೋಟಕ್ಕೆ ...ತ್ತವೆ. ಮೊದಲನೆಯದಾಗಿ ಇತ್ತೀಚೆಗೆ ಈಶಾನ್ಯ ...ಲ್ಲಿ ಒಂದಾದ ಅಸ್ಸಾಮಿನಲ್ಲಿ ಸ್ಥಳೀಯ ...ೂ ಜನರು ಮತ್ತು ಮುಸಲ್ಮಾನರ ನಡುವೆ ...ರುವ ಕೋಮುಗಲಭೆಗಳಿಂದಾಗಿ ಇಲ್ಲಿರುವ ...್ಮಾನರು ಈಶಾನ್ಯ ಜನರ ವಿರುದ್ಧ ...ೊಂಡಿದ್ದಾರೆ ಎಂಬುದು; ಎರಡನೆಯದಾಗಿ ...ಇಪ್ಪತ್ತನೆ ತಾರೀಖು ರಂಜಾನ್ ಹಬ್ಬ ...ದ್ದು ಅದಾದನಂತರ ದಾಳಿಗಳು ...ವಾಗುತ್ತವೆ ಎಂದರೆ ಅದಕ್ಕೆ ಕಾರಣರು ...್ಮಾನರು ಎಂಬುದು...

... ಸುದ್ದಿಗಳಿಗಿಂತ ಗಾಳಿಸುದ್ದಿಗಳು ವೇಗವಾಗಿ ...ತ್ತವೆ. ಉದಾಹರಣೆಗೆ, ಜನಪ್ರಿಯ ನಟ

ಖಾಸಗಿ ಬ್ಲಾಗ್‌ಗಳು ತುಪ್ಪ ಸುರಿಯುವ ಕೆಲಸ ಮಾಡಿದವು.

ಅಂತಹ ಬ್ಲಾಗ್‌ಗಳಲ್ಲಿ ಪ್ರಕಟವಾದ ಫೋಟೋಗಳಲ್ಲಿ ಸಾವಿರಾರು ಹೆಣಗಳ ಮಧ್ಯೆ ನಿಂತಿರುವ ಬೌದ್ಧ ಬಿಕ್ಕುಗಳು, ದೇಹಕ್ಕೆ ಬೆಂಕಿ ಹತ್ತಿ ಓಡುತ್ತಿದ್ದ ಯುವಕ, ಬಂದೂಕು ಹಿಡಿದಿರುವ ಯೋಧರ ಮುಂದೆ ಕೈಕಾಲು ಕಟ್ಟಿ ಬಿದ್ದಿರುವ ಯುವಕರ ಫೋಟೋಗಳೂ ಇದ್ದವು. ಆ ಭೀಕರ ಫೋಟೋಗಳನ್ನು ನೋಡಿದ ಬಹಳಷ್ಟು ಜನ ಬರ್ಮಾದಲ್ಲಿ ನಿಜವಾಗಲೂ ಮುಸಲ್ಮಾನರ ಮಾರಣಹೋಮ ನಡೆಯುತ್ತಿದೆ ಎಂದೇ ನಂಬಿದರು. ಆದರೆ ಇವೆಲ್ಲ ನಿಜವಾಗಲೂ ಬರ್ಮಾ ದೇಶದಲ್ಲಿ ನಡೆಯುತ್ತಿರುವುದಕ್ಕೆ ಸಾಕ್ಷಿಗಳೇ ಎಂದು ಸ್ವಲ್ಪ ಸಂಶೋಧನೆ ಮಾಡಿದ್ದು ಪಾಕಿಸ್ತಾನದ ಓರ್ವ ಪತ್ರಕರ್ತ. ಆಗ ಆತನಿಗೆ ಒಂದು ದೊಡ್ಡ ಶಾಕ್ ಕಾದಿತ್ತು.

ನಿಜವಾಗಲೂ ಏನಾಗಿತ್ತೆಂದರೆ ಸಾವಿರಾರು ಹೆಣಗಳ ಮಧ್ಯೆ ಬೌದ್ಧ ಬಿಕ್ಕುಗಳು ನಿಂತಿದ್ದ ಫೋಟೋ ಬರ್ಮಾ ದೇಶದ್ದೇ ಆಗಿರಲಿಲ್ಲ. ಬದಲಾಗಿ ಹಲವು ವರ್ಷಗಳ ಹಿಂದೆ ಚೀನಾದಲ್ಲಿ ಭೂಕಂಪ ಸಂಭವಿಸಿದಾಗ ಸಂತ್ರಸ್ತರಿಗೆ ಟಿಬೆಟ್‌ನ ಬೌದ್ಧರು ನೆರವು ನೀಡುತ್ತಿರುವ ದೃಶ್ಯ ಅದಾಗಿತ್ತು.

ಹಾಗೆಯೇ ಬಂದೂಕು ಹಿಡಿದಿದ್ದ ಯೋಧರ ಮುಂದೆ ಕೈಕಾಲು ಕಟ್ಟಿ ಬಿದ್ದಿದ್ದ ಯುವಕರ ಫೋಟೋ ಬರ್ಮಾ ದೇಶದ್ದಾಗಿರಲಿಲ್ಲ. ಬದಲಾಗಿ ಅಕ್ರಮವಾಗಿ ಥೈಲ್ಯಾಂಡ್ ದೇಶಕ್ಕೆ ನುಸುಳಲು


ವ್ಯಕ್ತಪಡಿಸುತ್ತದೆ. ಆದರೆ ಬರ್ಮಾದಲ್ಲಿ ಮುಸಲ್ಮಾನರು ಸಾವಿರಾರು ಸಂಖ್ಯೆಯಲ್ಲಿ ಹತರಾಗುತ್ತಿದ್ದರೂ ಸುಮ್ಮನಿರುತ್ತದೆ' ಎಂಬುದು ಒಂದು ಪ್ರಚೋದನಾಕಾರಿ ಸುಳ್ಳಾಗಿತ್ತು. ಹಾಗೆಯೇ 'ಅಸ್ಸಾಮಿನಲ್ಲಿ ನಡೆದ ಗಲಭೆಗಳ ಬಗ್ಗೆ ವರದಿ ಮಾಡಿದ ಮಾಧ್ಯಮಗಳು ಬೇಕಂತಲೇ ಮುಸಲ್ಮಾನರ ವಿರೋಧಿ ನಿಲುವು ತೆಗೆದುಕೊಂಡವು' ಎಂಬುದು ಇನ್ನೊಂದು ಅಪಪ್ರಚಾರವಾಗಿತ್ತು.

ಆದರೆ ಇವೆಲ್ಲ ಸುಳ್ಳು ಎಂದು ನೂರಾರು ಮುಸಲ್ಮಾನ ಪುಂಡರು ಅರ್ಥಮಾಡಿಕೊಳ್ಳಲಿಲ್ಲ. ಅಸ್ಸಾಮ್ ಮತ್ತು ಬರ್ಮಾದಲ್ಲಿ ನಡೆದ ವಿದ್ಯಮಾನಗಳನ್ನು ಪ್ರತಿಭಟಿಸಲು ಮುಂಬೈನಲ್ಲಿ ಕರೆದಿದ್ದ ಸಭೆಗೆ ಬಂದ ಆ ಪುಂಡರು ತಮ್ಮ ಸೇಡು ತೀರಿಸಿಕೊಳ್ಳಲು ಅಲ್ಲಿದ್ದ ಪೊಲೀಸರು ಮತ್ತು ಮಾಧ್ಯಮದವರ ಮೇಲೆ ಮುಗಿಬಿದ್ದರು. ಆನಂತರ ನಡೆದ ಗಲಭೆಯಲ್ಲಿ ಇಬ್ಬರು ಸಾವನ್ನಪ್ಪಿದರು. ಸದ್ಯ ಮುಂಬೈ ಪೊಲೀಸರು ಪರಿಸ್ಥಿತಿಯನ್ನು ಸರಿಯಾಗಿ ಹ್ಯಾಂಡಲ್ ಮಾಡಿದ್ದರಿಂದ ಕೆಲವೇ ಗಂಟೆಗಳಲ್ಲಿ ಗಲಭೆಯನ್ನು ನಿಯಂತ್ರಿಸಲು ಸಾಧ್ಯವಾಯಿತು.


ಮುಂಬೈಯಲ್ಲಿ ನಡೆದ ಗಲಭೆ ಇನ್ನೂ ಜನರ ನೆನಪಿನಲ್ಲಿರುವಾಗಲೇ ಬೆಂಗಳೂರಿನಲ್ಲಿ ಈಶಾನ್ಯ ಜನರ

ಯಾರ ಮೇಲೆ, ಯಾರಿಂದ ಇಂತಹ ದಾಳಿಗಳು ನಡೆದಿವೆ?" ಎಂಬ ಪ್ರಶ್ನೆಗೆ ಈಶಾನ್ಯ ರಾಜ್ಯಗಳ ಜನರಲ್ಲಿ ಉತ್ತರಗಳಿರಲಿಲ್ಲ. ಎಲ್ಲರದ್ದೂ ಊಹಾಪೋಹ. ಆದರೆ ಅವರಲ್ಲಿ ಮನೆ ಮಾಡಿದ್ದ ಭಯ ಮಾತ್ರ ನಿಜ.

ಕುತೂಹಲದ ಸಂಗತಿ ಯಾವುದೆಂದರೆ ಈಶಾನ್ಯ ರಾಜ್ಯಗಳ ಜನರ ಮೇಲೆ ವ್ಯವಸ್ಥಿತ ದಾಳಿಯನ್ನು ಯೋಚಿಸುವಂತಹ ಯಾವುದೇ ಪ್ರಬಲ ಮುಸಲ್ಮಾನರ ಸಂಘಟನೆ ಕರ್ನಾಟಕದಲ್ಲಿ ಇಲ್ಲ. ಅದಕ್ಕಿಂತ ಮುಖ್ಯವಾಗಿ ಅವರನ್ನು ಕೊಚ್ಚಿ ಕೊಂದು ಹಾಕುವಂತಹ ಸೇಡೂ ಇಲ್ಲಿನ ಮುಸಲ್ಮಾನರಲ್ಲಿಲ್ಲ. ಅಷ್ಟೇ ಅಲ್ಲ, ಇಂತಹ ಸುಳ್ಳು ಸುದ್ದಿ ಹಬ್ಬುವುದನ್ನು ತಡೆಯಲು ಮತ್ತು ಈಶಾನ್ಯ ರಾಜ್ಯಗಳ ಜನರಲ್ಲಿನ ಭಯವನ್ನು ಶಮನ ಮಾಡಲು ಮೊದಲು ಮುಂದಾಗಿದ್ದದ್ದು ಬೆಂಗಳೂರಿನ ಹಲವು ಪ್ರಮುಖ ಮುಸಲ್ಮಾನರು ಮತ್ತು ಕೆಲವು ಮುಸಲ್ಮಾನರ ಸಂಘಟನೆಗಳು.



...ಾ ಅಧ್ಯಕ್ಷನ ಭೇಟಿ ವಿರೋಧಿಸಿ ನಡೆದ ಪ್ರತಿಭಟನೆ



ಥೈಲ್ಯಾಂಡ್‌ನಲ್ಲಿ ಅಕ್ರಮ ವಲಸಿಗರ ವಿಚಾರಣೆ



ಚೀನಾದಲ್ಲಿ ಭೂಕಂಪ ಸಂಭವಿಸಿದಾಗ ನೆರವು ನೀಡಿದ ಬೌದ್ಧರು

...ುಮಾರ್ ಅವರು ಬದುಕಿದ್ದಾಗಲೇ ಒಮ್ಮೆ ಸಾವನ್ನಪ್ಪಿದ್ದಾರೆ ಎಂಬ ಸುದ್ದಿ ರಾಜ್ಯಾದ್ಯಂತ ...ನಂತೆ ಹಬ್ಬಿದ್ದು ಎಲ್ಲರಿಗೂ ನೆನಪಿದೆ. ಆಗ ಸ್ವತಃ ...ುಮಾರ್ ಅವರು ಟಿವಿ ಚಾನೆಲ್‌ಗಳ ಮುಂದೆ ...ಾಗಿ ತಮಗೇನೂ ಆಗಿಲ್ಲ ಎಂದು ...ುಪಡಿಸಬೇಕಾಗಿತ್ತು. ರಾಜ್‌ಕುಮಾರ್ ಅವರನ್ನು ... ಗಾಳಿಸುದ್ದಿಯನ್ನು ಶಮನ ಮಾಡಲು ಆಗ ...ದ್ದರು. ಆದರೆ ನಿನ್ನೆ ಹಬ್ಬಿದ ರೂಮರ್‌ಗಳು ...ಾದದ್ದು ಹೇಗೆ, ಅದನ್ನು ಶುರುಮಾಡಿದ್ದು ..., ಅವರ ಉದ್ದೇಶ ಏನು ಎಂಬುದನ್ನು ಅಷ್ಟು ...ವಾಗಿ ಪತ್ತೆ ಮಾಡಲಾಗುವುದಿಲ್ಲ. ಆದರೆ ಅದರ ...ುವ ತರ್ಕಗಳನ್ನು ಇತ್ತೀಚೆಗಿನ ಹಲವು ...ಗಳ ಹಿನ್ನೆಲೆಯಲ್ಲಿ ನೋಡಿದರೆ ಅರ್ಥವಾಗುತ್ತದೆ.

...ಂಗಳೂರಿನಲ್ಲಿ ವಾಸವಾಗಿದ್ದ ಈಶಾನ್ಯ ರಾಜ್ಯಗಳ ... ತಮ್ಮ ಪ್ರಾಣಕ್ಕೆ ಹೆದರಿ ವಲಸೆ ಹೋಗುವ ... ವಿವಿಧ ಕಡೆಗಳಿಂದ ವಿವಿಧ ರೀತಿಯ ಗಾಳಿ ...ಳು ಹಬ್ಬಿದ್ದವು. ಒಂದೆಡೆ, ಅಸ್ಸಾಮಿನಲ್ಲಿ ...್ಮಾನರು ಮತ್ತು ಬೋಡೋಗಳ ನಡುವೆ ...ುಗಲಭೆ ನಡೆಯುತ್ತಿದ್ದು ಎರಡೂ ...ಾಯದವರು ಸಾವುನಷ್ಟಗಳನ್ನು ಕಂಡಿರುವುದು ...ದರೂ ಅದನ್ನು ಮುಸಲ್ಮಾನರ ವ್ಯವಸ್ಥಿತ ...ಣಹೋಮ ಎಂದೇ ಹಲವರು ...ಸಲಾರಂಭಿಸಿದರು. ಸುಮಾರು ಅದೇ ಹೊತ್ತಿಗೆ ...ದ ಬರ್ಮಾ ದೇಶದಲ್ಲಿ ನಡೆಯುತ್ತಿರುವುದರ ...ಇಂತಹದ್ದೇ ಸುದ್ದಿಗಳು ಕೇಳಿಬರಲಾರಂಭಿಸಿದವು. ...ಶದಲ್ಲೂ ಬೌದ್ಧರು ಮತ್ತು ಮುಸಲ್ಮಾನರ ...ೆ ಗಲಭೆಗಳು ಪ್ರಾರಂಭವಾಗಿದ್ದು ಅಲ್ಲೂ ...ರು ಮುಸಲ್ಮಾನರನ್ನು ಮಾರಣಹೋಮ ...ಲಾಗಿದೆ ಎಂಬ ಸುದ್ದಿ ಇಂಟರ್‌ನೆಟ್ ಮೂಲಕ ...ಿ. ಅಂತಹ ಸುದ್ದಿಯು ಹಬ್ಬುವಿಕೆಗೆ ಹಲವಾರು

ಯತ್ನಿಸಿದ್ದ ಜನರನ್ನು ಆ ದೇಶದ ಸೈನಿಕರು ಬಂಧಿಸಿ ಅವರ ವಿಚಾರಣೆಯನ್ನು ನಡೆಸುತ್ತಿದ್ದ ಫೋಟೋ ಅದಾಗಿತ್ತು. ವಿಚಾರಣೆಯನ್ನು ನಡೆಸುತ್ತಿದ್ದಾಗ ಅವರನ್ನೆಲ್ಲ ನೆಲದ ಮೇಲೆ ಮಲಗಿದ್ದರಿಂದ ಅವರಲ್ಲೆ 'ಹೆಣ'ಗಳಂತೆಯೂ, ಅವರನ್ನೆಲ್ಲ ವಿಚಾರಣೆ ನಡೆಸುತ್ತಿದ್ದ ಸೈನಿಕರೇ ಅವರನ್ನು ಕೊಂದುಹಾಕಿದ್ದಂತೆಯೂ ಕಾಣಿಸುತ್ತಿತ್ತು. ಆದರೆ ಸತ್ಯ ಏನೆಂದರೆ ವಿಚಾರಣೆ ನಡೆಸಿದ ನಂತರ ಆ ಅಕ್ರಮ ವಲಸಿಗರನ್ನು ಮತ್ತೆ ಅವರು ಬಂದಿದ್ದ ದೋಣಿಗೆ ಹತ್ತಿಕಳುಹಿಸಲಾಗಿತ್ತು.

ಇನ್ನು ಮೈಮೇಲೆಲ್ಲ ಬೆಂಕಿಯ ಹತ್ತಿಕೊಂಡು ಹೋಗುತ್ತಿದ್ದ ಯುವಕನ ಫೋಟೋ ತೆಗೆದದ್ದು ಬೇರೆ ಯಾವ ದೇಶದಲ್ಲೂ ಅಲ್ಲ, ನಮ್ಮ ದೇಶದಲ್ಲೇ. ಕಳೆದ ವರ್ಷ ಚೀನಾ ದೇಶದ ಅಧ್ಯಕ್ಷ ಹು ಜಿಂಟಾವೋ ಭಾರತಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಅವರ ಭೇಟಿಯನ್ನು ಪ್ರತಿಭಟಿಸಿ ದೆಹಲಿಯ ನಿವಾಸಿ ಆಗಿದ್ದ ಟಿಬೆಟನ್ ಯುವಕನೊಬ್ಬ ತನ್ನ ಮೈಮೇಲೆ ಪೆಟ್ರೋಲ್ ಸುರಿದುಕೊಂಡು ಸಾವನ್ನಪ್ಪಿದ್ದ. ಅವತ್ತು ತೆಗೆದಿದ್ದ ಫೋಟೋವನ್ನೇ ಬರ್ಮಾ ದೇಶದ ಮುಸ್ಲಿಮ್ ಯುವಕನ ಫೋಟೋ ಎಂದು ಸುಳ್ಳು ಹೇಳಲಾಗಿತ್ತು.

ಬರ್ಮಾದಲ್ಲಿ ಕೋಮುಗಲಭೆಗಳು ನಡೆಯುತ್ತಿದ್ದದ್ದು ನಿಜವಾದರೂ ಅಲ್ಲಿ ಬೌದ್ಧರು ವ್ಯವಸ್ಥಿತವಾಗಿ ಮುಸಲ್ಮಾನರ ಮಾರಣಹೋಮದಲ್ಲಿ ತೊಡಗಿರಲಿಲ್ಲ. ಆದರೆ ಇಂಟರ್‌ನೆಟ್ ಮೂಲಕ ಹಬ್ಬಿದ ಇಂತಹ ಸುಳ್ಳುಚಿತ್ರಗಳು ಮತ್ತು ಸುದ್ದಿಗಳು ಕೊನೆಗೆ ಮೊಬೈಲ್ ಫೋನ್‌ಗಳಲ್ಲೂ ಹರಿದಾಡಿದವು. ಜೊತೆಗೆ ಒಂದಿಷ್ಟು ಕತೆಗಳನ್ನು ಕಟ್ಟಲಾಗಿತ್ತು. ಅವುಗಳಲ್ಲಿ ಒಂದು 'ಅಮೆರಿಕಾದಲ್ಲಿ ಹಲವು ಎನ್‌ಆರ್‌ಐ ಸಿಖ್ಖರು ಬಂದೂಕುಧಾರಿಯೊಬ್ಬನಿಗೆ ಬಲಿಯಾದರೆ ಭಾರತದ ಸರ್ಕಾರ ತನ್ನ ದುಃಖವನ್ನು

ಸುರಕ್ಷತೆಯನ್ನು ಕುರಿತು ಗಾಳಿ ಸುದ್ದಿಗಳು ಹಬ್ಬಿದವು. ಬೆಂಗಳೂರಿನಲ್ಲಿ ಇಬ್ಬರು ಮಿಜೋರಾಮ್ ಯುವಕರನ್ನು ಮುಸಲ್ಮಾನ ಯುವಕರು ಕೊಂದು ಹಾಕಿದರು ಎಂಬ ಸುಳ್ಳು ಸುದ್ದಿ ಮೊದಲು ಸುತ್ತಾಡಲಾರಂಭಿಸಿತು. ಇದು ಸತ್ಯವಲ್ಲ ಎಂದು ಗೊತ್ತಾಗುವ ಹೊತ್ತಿಗೆ ಮೈಸೂರಿನಲ್ಲಿ ಓರ್ವ ಟಿಬೆಟನ್ ಯುವಕನಿಗೆ ಯಾರೋ ಚೂರಿ ಹಾಕಿದ್ದಾರೆ ಎಂಬ ಸುದ್ದಿ ಬಂತು. ಇದು ಸತ್ಯ ಎಂದು ಗೊತ್ತಾಗುವ ಹೊತ್ತಿಗೆ ಇಂತಹ ಹತ್ತಾರು ಘಟನೆಗಳು ಬೆಂಗಳೂರಿನಲ್ಲಿ ನಡೆದಿವೆ ಎಂದೂ, ತಮ್ಮ ಪ್ರಾಣವನ್ನು ರಕ್ಷಿಸಿಕೊಳ್ಳಬೇಕೆಂದಿದ್ದರೆ ಇಲ್ಲಿಂದ ಪರಾರಿ ಆಗುವುದೇ ಲೇಸೆಂಬ ಭಾವನೆ ಇಲ್ಲಿ ನೆಲೆಸಿರುವ ಈಶಾನ್ಯ ರಾಜ್ಯಗಳ ಜನರಲ್ಲಿ ಮೂಡಿತು.

ಅವರು ಹೀಗೆ ಭಯ ಬೀಳಲು ಕಾರಣವೂ ಇತ್ತು. ಕಳೆದ ಮೇ ತಿಂಗಳಲ್ಲಿ ಬೆಂಗಳೂರಿನಲ್ಲಿ ಓದುತ್ತಿದ್ದ ಮಣಿಪುರ ರಾಜ್ಯದ ರಿಚಾರ್ಡ್ ಲೋಯಿತಮ್ ಎಂಬ ವಿದ್ಯಾರ್ಥಿ ಸಂಶಯಾಸ್ಪದವಾಗಿ ತೀರಿಕೊಂಡಿದ್ದ. ಆತನ ಸಾವು ಈಶಾನ್ಯ ಜನರ ಬಗ್ಗೆ ನಮ್ಮ ಸಮಾಜದಲ್ಲಿರುವ ಕೀಳು ಧೋರಣೆಯೇ ಕಾರಣ ಎಂದು ತರ್ಕಿಸಲಾಗಿತ್ತು. ಲೋಯಿತಮ್‌ನಂತೆಯೇ ಟೀಕೆಗೆ, ದಾಳಿಗೆ, ಪೂರ್ವಾಗ್ರಹಪೀಡಿತ ನಿಂದನೆಗೆ ಈಶಾನ್ಯ ರಾಜ್ಯಗಳ ಜನರು ಭಾರತದ ವಿವಿಧ ಕಡೆ ಇತ್ತೀಚೆಗೆ ಗುರಿಯಾಗುತ್ತಿದ್ದಾರೆ. 'ಭಾರತೀಯ'ರಂತೆ ಕಾಣಿಸದ ಆ ರಾಜ್ಯಗಳ ಜನರನ್ನು ಗುರುತಿಸುವುದು ಸುಲಭವಾದ್ದರಿಂದ ಅವರು ದಾಳಿಗೆ ಸುಲಭವಾಗಿ ಗುರಿಯಾಗುತ್ತಾರೆ.

ಈ ಎಲ್ಲ ಹಿನ್ನೆಲೆಯಲ್ಲೇ ನಿನ್ನೆಯ ಗಾಳಿ ಸುದ್ದಿಗಳು ತಮ್ಮ ಗುರಿ ಸಾಧಿಸಿತ್ತು. ಆದರೆ ವಿಚಿತ್ರವೆಂದರೆ ಇಪತ್ತಿನ (ಗುರುವಾರ) ಮಧ್ಯಾಹ್ನದ ತನಕ "ಎಲ್ಲಿ,

ಅಷ್ಟೇ ಕುತೂಹಲದ ಮತ್ತೊಂದು ಸಂಗತಿ ಯಾವುದೆಂದರೆ ಇತ್ತ ಮುಸಲ್ಮಾನರು ಈಶಾನ್ಯ ರಾಜ್ಯಗಳ ಜನರೊಂದಿಗೆ ಮಾತುಕತೆ ನಡೆಸಲು ಮುಂದಾಗುತ್ತಿದ್ದಂತೆ ರೈಲು ನಿಲ್ದಾಣದಲ್ಲಿ ಆರೆಸ್ಸೆಸ್ಸಿನ ನೂರಾರು ಜನ ತಮ್ಮ ಚಡ್ಡಿ ಮತ್ತು ಲಾಠಿಗಳೊಂದಿಗೆ ಪ್ರತ್ಯಕ್ಷವಾಗಿದ್ದು. ಅದಕ್ಕೆ ಸರಿಯಾಗಿ ಹಿಂದೂ ಕೋಮುವಾದಿ ಪ್ರಮೋದ್ ಮುತಾಲಿಕ್ ಕೂಡ ರೈಲು ನಿಲ್ದಾಣಕ್ಕೆ ಹೋಗಿ "ನೀವು ಹೆದರಬೇಡಿ. ನಿಮ್ಮನ್ನು ಕೊಲ್ಲಲು ಹಲವು ಮುಸಲ್ಮಾನರು ಸಿದ್ಧತೆ ನಡೆಸುತ್ತಿದ್ದಾರೆ. ಆದರೆ ನಾವು ಅವರನ್ನು ವಿಚಾರಿಸಿಕೊಳ್ಳುತ್ತೇವೆ" ಎಂದು ಭಾಷಣ ಬಿಗಿದಿದ್ದಾನೆ.


ಕರ್ನಾಟಕದಲ್ಲಿ ಬಿಜೆಪಿ ಸರ್ಕಾರ ಭ್ರಷ್ಟಾಚಾರ, ಅವ್ಯವಹಾರ, ಸೆಕ್ಸ್ ಸ್ಕ್ಯಾಂಡಲ್ ಇತ್ಯಾದಿಗಳಲ್ಲಿ ಮುಳುಗಿರುವಾಗಲೇ ಇತ್ತೀಚೆಗೆ ಮಂಗಳೂರಿನ ಹೋಮ್ ಸ್ಟೇ ಒಂದರಲ್ಲಿ ಅಮಾಯಕ ಯುವಕ-ಯುವತಿಯರ ಮೇಲೆ ಹಿಂದೂ ಕೋಮುವಾದಿಗಳು ದಾಳಿ ಮಾಡಿದ್ದು ವಿಶ್ವದಾದ್ಯಂತ ಸುದ್ದಿ ಮಾಡಿದೆ. ಇದೆಲ್ಲದರಿಂದಾಗಿ ರಾಜ್ಯದ ಜನ - ಅದರಲ್ಲೂ ಹಿಂದೂಗಳು - ಬಿಜೆಪಿ ಅಂದರೇನೇ ಹೇಸಿಗೆ ವ್ಯಕ್ತಪಡಿಸುತ್ತಿದ್ದಾರೆ. ಸದ್ಯದಲ್ಲೇ ಚುನಾವಣೆಗಳು ಎದುರಾಗಲಿವೆ. ಬಿಜೆಪಿ ಇಕ್ಕಟ್ಟಿನಲ್ಲಿದೆ...

ಇಂತಹ ಸಂದರ್ಭದಲ್ಲೇ ಒಂದೆಡೆ ಮುಸಲ್ಮಾನರನ್ನು ಗುರಿಯಾಗಿಸುವ, ಇನ್ನೊಂದೆಡೆ ಜನರ ಗಮನವನ್ನು ಇತರೆಡೆ ಸೆಳೆಯುವ, ಸಾವಿರಾರು ಜನರಲ್ಲಿ ಪ್ರಾಣಭಯವನ್ನು ಹುಟ್ಟಿಸುವ ಗಾಳಿ ಸುದ್ದಿ ಹರಡುತ್ತದೆ... ಚಡ್ಡಿಗಳು ಇದ್ದಕ್ಕಿದ್ದಂತೆ ತಮ್ಮ ಪೋಷಕರುಗಳೊಂದಿಗೆ ಪ್ರತ್ಯಕ್ಷವಾಗುತ್ತಾರೆ...

ಚುನಾವಣೆ ಹತ್ತಿರವಾಗುತ್ತಿರುವಾಗಲೇ ಇದೆಲ್ಲಾ ನಡೆಯುತ್ತಿರುವುದು ವಿಚಿತ್ರ ಎನಿಸುವುದಿಲ್ಲವೆ?....

ಭ್ರಷ್ಟರ ಆಸ್ಥಾನದಲ್ಲಿ

ಬಿಳಿಯಾನೆಗಳ ಲೂಟಿ



ಈತನ ಹೆಸರು ಕೆ.ವಿ.ರಾಜು. ಕೇಸರಿ ಕೂಟಕ್ಕೆ ಪರಮಾಪ್ತ. ಹಾಗೆ ನೋಡಿದರೆ ಈತ ಐಎಎಸ್ ದರ್ಜೆಯ ಅಧಿಕಾರಿಯೇನಲ್ಲ; ಬೆಂಗಳೂರಿನಲ್ಲಿರುವ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆ (ISEC) ಯಲ್ಲಿ ಪ್ರೊಫೆಸರ್ ಆಗಿದ್ದವರು. ಕೌಟಿಲ್ಯನ ಅರ್ಥಶಾಸ್ತ್ರವನ್ನು ಅರೆದು ಕುಡಿದಿರುವವರು. ಆದ್ದರಿಂದಲೇ ಯಡಿಯೂರಪ್ಪ ರಾಜ್ಯದ ಮುಖ್ಯಮಂತ್ರಿಯಾಗಿ ಅಧಿಕಾರಕ್ಕೇರುತ್ತಿದ್ದಂತೆ ಈತನನ್ನು ವಿಧಾನಸೌಧದಲ್ಲಿ ಪ್ರತಿಷ್ಠಾಪಿಸಲಾಯಿತು. ಈ ಆಸಾಮಿ 2008ರ ಜೂನ್‌ನಿಂದ ಇದುವರೆಗೂ ಮುಖ್ಯಮಂತ್ರಿಯ ಆರ್ಥಿಕ ಸಲಹೆಗಾರನ ಹುದ್ದೆಯಲ್ಲಿ ವಿರಾಜಮಾನನಾಗಿದ್ದಾರೆ. ಬಿಜೆಪಿ ಕೂಟದ ಸಕ್ರಿಯ ಬೆಂಬಲದಿಂದ ಸಾರ್ವಜನಿಕ ಬೊಕ್ಕಸಕ್ಕೆ ತೂತು ಕೊರೆಯುತ್ತಿರುವ ಈ ಆಧುನಿಕ ಚಾಣಕ್ಯನ ಒಂದು ಸ್ಯಾಂಪಲ್ ಇಲ್ಲಿದೆ ನೋಡಿ.

ರಾಜು ತನ್ನ ಹೆಂಡತಿ ಲಕ್ಷ್ಮಿ ಹೆಸರಿನಲ್ಲಿ ಒಂದು ಐಟಿಪಾರ್ಕ್ ಸ್ಥಾಪಿಸುವ ಉದ್ದೇಶದಿಂದ 'ಯೂ-ಕ್ಯೂಬ್



ಎನ್‌ಫೋಟೆಕ್' ಎಂಬ ಕಂಪನಿ ಪ್ರಾರಂಭಿಸಿದ. ಅದಕ್ಕಾಗಿ ಕನಕಪುರ ರಸ್ತೆಯ ಹಾರೋಹಳ್ಳಿ ಬಳಿಯಲ್ಲಿ 7 ಎಕರೆ 23 ಗುಂಟೆ ಜಮೀನು ಖರೀದಿಸಿದ. ಭೂಮಿ ಖರೀದಿಸುವುದು ಮಾಮೂಲಿ ಬಿಡಿ, ಅದರಲ್ಲಿ ಅಂಥಾ ವಿಶೇಷವೇನಿಲ್ಲ. ಆದರೆ ಇದೇ ಪ್ರದೇಶದಲ್ಲಿ ಕೆಐಎಡಿಬಿ ಕೈಗಾರಿಕಾ ಪ್ರದೇಶವೊಂದನ್ನು ಅಭಿವೃದ್ಧಿಪಡಿಸಿತ್ತು. ಕೇಸರಿಪ್ರಿಯ ರಾಜು ತನ್ನ 7 ಎಕರೆಯನ್ನು ಸರ್ಕಾರ ತನ್ನ ವಶಕ್ಕೆ ತೆಗೆದುಕೊಂಡು ಅದಕ್ಕೆ ಬದಲಾಗಿ ಅಭಿವೃದ್ಧಿಪಡಿಸಿದ ಇಂಡಸ್ಟ್ರಿಯಲ್ ಏರಿಯಾದಲ್ಲಿ ತನಗೆ 10 ಎಕರೆ ಭೂಮಿ ಮಂಜೂರು ಮಾಡಬೇಕೆಂದು ಕೆಐಡಿಬಿಗೆ ಒಂದು ಅರ್ಜಿ ಗುಜರಾಯಿಸಿಬಿಟ್ಟ!

ಸರ್ಕಾರ 7 ಎಕರೆ ಸ್ವಾಧೀನಪಡಿಸಿಕೊಂಡು 10 ಎಕರೆ ವಾಪಸ್ ಕೊಡುವುದನ್ನು ಎಲ್ಲಾದರೂ ಕಂಡಿದ್ದೀರಾ? ಕೇಳಿದ್ದೀರಾ? ಅದೇ ಈ ಆಧುನಿಕ ಚಾಣಕ್ಯನ ಮಸಲತ್ತು.


ಆಗ ಸಮ್ಮಿಶ್ರ ಸರ್ಕಾರದ ಕಾಲ. ಭ್ರಷ್ಟ ಯಡ್ಡಿ ಡೆಪ್ಯೂಟಿ ಸಿಎಂ ಆಗಿದ್ದ ಮತ್ತು ಕಳ್ಳ ಕಟ್ಟಾ ಸುಬ್ರಮಣ್ಯ ನಾಯ್ಡು ಕೈಗಾರಿಕಾ ಮಂತ್ರಿ ಆಗಿದ್ದ. ಆದರೂ ರಾಜುವಿನ ಅರ್ಜಿ ಧೂಳು ಹಿಡಿಯುತ್ತಾ ಕೂತಿತ್ತು. ಸ್ವಲ್ಪ ದಿನಗಳ ನಂತರ ಕೋ-ಜಾ ಸರ್ಕಾರ ಬಿದ್ದು ರಾಷ್ಟ್ರಪತಿ ಆಡಳಿತ ಬಂದ ಸಂದರ್ಭದಲ್ಲಿ ಈ ಭೂಮಿ 'ಎಕ್ಸ್‌ಚೇಂಜ್' ಕಡತ ವಿಲೇವಾರಿಯಾಯಿತು. ಕೆಐಎಡಿಬಿ ರಾಜುವಿನ ಮನವಿಯನ್ನು ಪುರಸ್ಕರಿಸಿ, ನಿಯಮದ ಪ್ರಕಾರ ಅಭಿವೃದ್ಧಿ ಶುಲ್ಕ ಮತ್ತಿತರೆ ಶುಲ್ಕಗಳನ್ನು ಪಾವತಿಸಿ ಭೂಮಿಯನ್ನು ಪಡೆದುಕೊಳ್ಳುವಂತೆ ಸೂಚಿಸಿತು. ಅದರಂತೆ ಅಭಿವೃದ್ಧಿ ಶುಲ್ಕ ಒಂದು ಎಕರೆಗೆ 15.8 ಲಕ್ಷ ದಂತೆ ಹಾಗೂ ಹೆಚ್ಚುವರಿ ಭೂಮಿಗೆ ಎಕರೆಗೆ 60 ಲಕ್ಷದಂತೆ ಒಟ್ಟಾರೆ 2 ಕೋಟಿ 91 ಲಕ್ಷದ 70 ಸಾವಿರದ ಮುನ್ನೂರೈವತ್ತು ರೂಪಾಯಿಗಳ ಬಿಲ್ ಕಳಿಸಿ, ಅದರಲ್ಲಿ 20% ಕೂಡಲೇ ಪಾವತಿಸಿದರೆ ಸ್ಥಳ ಮುಂಜೂರು ಮಾಡುವುದಾಗಿ ತಿಳಿಸಿತು.

ಕೋಟಿಗಟ್ಟಲೆ ಹಣ ಕಟ್ಟಲು ಇಷ್ಟವಿಲ್ಲದ ರಾಜು ಒಳ್ಳೆಯ ಕಾಲ ಬರಲೆಂದು ಕಾಯುತ್ತಿದ್ದ. ಕೆಲದಿನಗಳಲ್ಲೇ ಅಂಥಾ ಒಳ್ಳೇ ಕಾಲ ಬಂದೇಬಿಟ್ಟಿತು. ಚುನಾವಣೆ ನಡೆದು ಯಡ್ಡಿ ಮುಖ್ಯಮಂತ್ರಿಯಾದ; ಅಷ್ಟೇ ಏಕೆ, ಇದೇ ರಾಜು ಮುಖ್ಯಮಂತ್ರಿಯ ಆರ್ಥಿಕ ಸಲಹೆಗಾರನ ಸ್ಥಾನಕ್ಕೇರಿಬಿಟ್ಟ. ಮುಂದೇನು ನಡೆದಿರಬಹುದೆಂಬುದನ್ನು ಸುಲಭವಾಗಿ ಊಹಿಸಬಹುದು. 1.19 ಕೋಟಿ ಮೊತ್ತದ ಅಭಿವೃದ್ಧಿ ಶುಲ್ಕವನ್ನು ಮನ್ನಾ ಮಾಡಿ, ಬದಲಿಗೆ 12.84 ಲಕ್ಷ ಸೇವಾ ಶುಲ್ಕ ಮಾತ್ರ ಪಡೆದುಕೊಳ್ಳುವಂತೆ ಯಡ್ಡಿ ಕಚೇರಿಯಿಂದ ಅಧಿಕೃತ ಪತ್ರವೊಂದು ಕೆಐಡಿಬಿಗೆ ರವಾನೆಯಾಯಿತು.

ಆದರೆ ಕೆಐಎಡಿಬಿ ಮಂಡಳಿ ಹಲವು ಕಾನೂನು ತೊಡಕುಗಳಿದ್ದ ಕಾರಣ ಅದಕ್ಕೆ ಸಮ್ಮತಿಸದೆ ಪೂರ್ತಿ ಹಣ ಪಾವತಿಸುವಂತೆ ಯೂ-ಕ್ಯೂಬ್ ಕಂಪನಿಗೆ ತಿಳಿಸಿತು. ತನ್ನ ಮಾತನ್ನು ಧಿಕ್ಕರಿಸಿದ ಕೆಐಡಿಬಿಯ ವರ್ತನೆಯಿಂದ ಕೆರಳಿದ ಯಡ್ಡಿ ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿಯ ಮೇಲೆ ಒತ್ತಡ ತಂದು 12.84 ಲಕ್ಷ ಹಣ ಕಟ್ಟಿಸಿಕೊಂಡು ಈ ಫೈಲನ್ನು ಕ್ಲೋಸ್ ಮಾಡಬೇಕೆಂದು ನಿರ್ದೇಶನ ನೀಡಿದ. ಈ ಸತ್ಕಾರ್ಯದಲ್ಲಿ ಮುಖ್ಯಮಂತ್ರಿಯ ಕಾರ್ಯದರ್ಶಿ ಸೀನಿಯರ್ ಐಎಎಸ್ ಲಕ್ಷ್ಮಿನಾರಾಯಣನ ಕೈವಾಡವೂ ಇತ್ತು. ಅಂತಿಮವಾಗಿ 2011ರ ಏಪ್ರಿಲ್ 30ರಂದು ರಾಜು ಭೂಮಿ ಮಂಜೂರಾತಿ ಪಡೆದುಕೊಂಡ, ಜೊತೆಗೆ ಸರ್ಕಾರದ ಬೊಕ್ಕಸ ಸೇರಬೇಕಿದ್ದ ಕೋಟ್ಯಾಂತರ ರೂಪಾಯಿಗಳನ್ನು ಲಪಟಾಯಿಸಿಬಿಟ್ಟ.

ಕೈಗಾರಿಕಾ ಪ್ರದೇಶವಾಗಿ ಅಭಿವೃದ್ಧಿಯಾಗಿರುವ ಈ ಹತ್ತು ಎಕರೆ ಜಮೀನಿನಲ್ಲಿರುವ ಕೈಗಾರಿಕಾ ನಿವೇಶನಗಳನ್ನು ಮಾನ್ಯ ಕೆ.ವಿ.ರಾಜುರವರು ನಾನಾ ಐಟಿ ಕಂಪನಿಗಳಿಗೆ ಮಾರಾಟ ಮಾಡಿಕೊಂಡು ನೂರಾರು ಕೋಟಿ ಲಾಭ ಮಾಡಿಕೊಳ್ಳಲಿದ್ದಾರೆ. ಭೂಮಿ ಬಳಕೆಯ ಉದ್ದೇಶದ ಬಗ್ಗೆ ಅವರು ನೀಡಿರುವ ವಿವರಣೆ ಅದನ್ನೇ ಹೇಳುತ್ತದೆ.

ಈ ಬಗ್ಗೆ ಕೆಐಎಡಿಬಿಯ ಅಧಿಕಾರಿಯೊಬ್ಬರು ಆಡಿದ ಮಾತನ್ನೇ ಕೇಳಿ. "ಅಭಿವೃದ್ಧಿ ಶುಲ್ಕವನ್ನು ಮನ್ನಾ ಮಾಡಿ



ಕೇವಲ ಸೇವಾ ಶುಲ್ಕ ಪಡೆದು ಭೂಮಿ ಮಂಜೂರು ಮಾಡಿದ್ದು ಮಂಡಳಿಯ ಇತಿಹಾಸದಲ್ಲಿ ಇದೇ ಮೊದಲ ಬಾರಿ. ಈ ಹಿಂದೆ ಇಂಥಾ ಸಂದರ್ಭಗಳಲ್ಲಿ ನೂರಾರು ಕೋಟಿ ಶುಲ್ಕ ವಸೂಲಿ ಮಾಡಿದ್ದೇವೆ. ರಸ್ತೆ, ವಿದ್ಯುತ್, ಒಳಚರಂಡಿ ವ್ಯವಸ್ಥೆ, ನೀರು ಮುಂತಾದ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಆ ಹಣ ವೆಚ್ಚ ಮಾಡಲಾಗುತ್ತದೆ. ಇದೇರೀತಿ ಪುಕ್ಕಟೆಯಾಗಿ ಭೂಮಿ ಕೊಡಬೇಕೆಂದು ಬೇರೆಯವರು ಒತ್ತಡ ತರುವ ಅವಕಾಶ ಮಾಡಿಕೊಟ್ಟಂತಾಗಿದೆ. ಹೀಗೇ ಆದರೆ ಮಂಡಳಿ ಆರ್ಥಿಕ ಸಂಕಷ್ಟಕ್ಕೆ ಗುರಿಯಾಗುತ್ತದೆ."

ಇದು ಯಡಿಯೂರಪ್ಪ ಮತ್ತು ಆತನ ಬಿಜೆಪಿ ಕೂಟ ಕರ್ನಾಟಕವನ್ನು ಉದ್ಧಾರ ಮಾಡಿದ ಪರಿ. ಅಂದಹಾಗೆ ಬೊಕ್ಕಸಕ್ಕೆ ತಿರುಪತಿ ನಾಮ ಹಾಕಿ ಕೋಟಿಗಟ್ಟಲೆ ನುಂಗಿದ ಖದೀಮ ರಾಜು ಇಂದಿಗೂ ಸರ್ಕಾರದ ಆಧುನಿಕ ಚಾಣಕ್ಯ, ಅರ್ಥಾತ್ ಆರ್ಥಿಕ ಸಲಹೆಗಾರ!

ಈ ಆಧುನಿಕ ಚಾಣಕ್ಯನನ್ನು ಈ ಅವ್ಯವಹ... ಬಗ್ಗೆ ಪ್ರಶ್ನಿಸಿದರೆ "ಈ ಕಂಪನಿಯ ಪರ ನಾನ... ವಕಾಲತ್ತು ವಹಿಸಿಲ್ಲ, ನನಗೂ ಈ ವ್ಯವಹಾ... ಸಂಬಂಧವಿಲ್ಲ" ಎಂದು ಹಸಿ ಹಸಿ ಸುಳ್ಳು ಹೇಳು... ಆದರೆ ವಾಸ್ತವವೇನೆಂದರೆ ಈ ಹಿಂದೆ ವಿ.ಪಿ.ಬಳಿ... ನೇತೃತ್ವದಲ್ಲಿ ನಡೆದ ಲ್ಯಾಂಡ್ ಆಡಿಟ್ ಕಮಿಟಿಯ ಮ... ಸ್ವತಃ ರಾಜು ಹಾಜರಾಗಿ ಈ ಭೂಮಿ ಬಳಕೆಯ ಉ... ಗಳನ್ನು ವಿವರಿಸಿದ್ದ ಎಂಬ ಸತ್ಯವು ಮಾಹಿತಿ ... ಕಾರ್ಯಕರ್ತರೊಬ್ಬರು ಪಡೆದುಕೊಂಡ ದಾಖಲಾತಿಗ... ಬಹಿರಂಗಗೊಂಡಿದೆ.

ಈ ರಾಜು ಎಂಬಾತ ಇಂದು ಸರ್ಕಾರದ ಅತ... ಹುದ್ದೆಗಳಲ್ಲಿ ಪ್ರತಿಷ್ಠಾಪಿಸಲ್ಪಟ್ಟಿದ್ದಾನೆ. ಮೂಲಸೌಕ... ಅಭಿವೃದ್ಧಿ, ನಗರ ಯೋಜನೆ, ನೀರು ಸರಬರಾ... ಗ್ರಾಮೀಣಾಭಿವೃದ್ಧಿ ಮುಂತಾದ ವಿಷಯಗಳಿಗೆ ಸಂಬಂಧಿ... ಉನ್ನತ ಸಮಿತಿಗಳ ಸದಸ್ಯನೂ ಆಗಿದ್ದಾನೆ. ಅ... ಆದಮೇಲೆ ಅದರ ಪ್ರತಿಫಲ ಪಡೆಯದಿದ್ದರೆ ಆಗುತ್ತದ... ಹಾಗಾಗಿ ಸೂಕ್ತ ಪ್ರತಿಫಲವನ್ನೂ ಪಡೆಯುತ್ತಿದ್ದಾನೆ, ...

ಸಾಮಾನ್ಯವಾಗಿ ನಾವು ಭ್ರಷ್ಟ ರಾಜಕಾರಣಿ... ಅವ್ಯವಹಾರ ಹಗಲು ದರೋಡೆಗಳನ್ನು ಕೇಳುತ್ತ... ಇರುತ್ತೇವೆ. ಐದು ವರ್ಷಕ್ಕೊಮ್ಮೆಯಾದರೂ ಜನರ ... ಬಾಗಿಲಿಗೆ ಹೋಗಿ ಕೈಮುಗಿದು ನಿಲ್ಲಬೇಕ... ಅನಿವಾರ್ಯತೆ ರಾಜಕಾರಣಿಗಳಿಗಿದೆ. ಆದರೆ ಸಾವಿರ... ಕೋಟಿ ಸಾರ್ವಜನಿಕ ಹಣವನ್ನು ನುಂಗಿಹಾಕುತ್ತಿರುವ ... ಆಧುನಿಕ ಚಾಣಕ್ಯರಿಗೆ, ಐಎಎಸ್ ದರ್ಜೆಯ ಬಿಳಿಯ... ಗಳಿಗೆ ಅಂತಹ ಯಾವ ಕ್ರಮವೂ ಇಲ್ಲ, ಇವರಿಗೆ ಕ... ವಿರೋಧ ಪಕ್ಷದ ಕಾಟವೂ ಇಲ್ಲ, ಎಲ್ಲ ಪಕ್ಷದವ... ಇವರಿಗೆ ಪರಮಾಪ್ತರೇ. ಹಾಗೆ ನೋಡಿದರೆ ಈ... ವ್ಯವಸ್ಥೆಯಲ್ಲಿ ಇಂಥಾ ಭ್ರಷ್ಟ ಅಧಿಕಾರಿಗಳ ಕೂಟವೇ ಎ... ರಾಜಕೀಯ ಪಕ್ಷಗಳಿಗಿಂತ ಅತ್ಯಂತ ಬಲಾಢ್ಯವಾದು... ಒಂದು ಅರ್ಥದಲ್ಲಿ ರಾಜಕಾರಣಿಗಳ ಜುಟ್ಟು ಇ... ಕೈಯಲ್ಲೇ ಇರುತ್ತದೆ. ಈ ನಮೂನೆಯ ಭ್ರಷ್ಟರನ್ನು ತುತಾ... ತಹಬಂದಿಗೆ ತರದೇ ಹೋದರೆ ಪ್ರಜಾತಂತ... ಉಳಿಗಾಲವಿಲ್ಲ.

● ದೊಡ್ಡಿಪಾಳ್ಯ ನರಸಿಂಹಮೂರ್ತಿ

ಚಾಣಕ್ಯನ ಬಯೋಡಾಟ

ಕೆ.ವಿ.ರಾಜು ಎಂಬ ಈ ಆಧುನಿಕ ಚಾಣಕ್ಯ, ಕ್ಷಮಿಸಿ ಈ ಮಹಾಶಯನನ್ನು ನಾವು ಡಾಕ್ಟರ್ ಕೆ.ವಿ.ರಾಜು ಎಂದು ಮರ್ಯಾದೆಯಿಂದ ಕರೆಯಬೇಕು. ಏಕೆಂದರೆ ಶ್ರೀಯುತರು ಅರ್ಥಶಾಸ್ತ್ರದಲ್ಲಿ ಡಾಕ್ಟರೇಟ್ ಮಾಡಿದ್ದಾರೆ. ಅದೂ ಕರ್ನಾಟಕದಲ್ಲಲ್ಲ; ಕೇಸರಿ ಕೂಟಕ್ಕೆ ಆದರ್ಶಪ್ರಾಯವಾದ ಗುಜರಾತ್‌ನ ಸರ್ದಾರ್ ವಲ್ಲಭಬಾಯಿ ಪಟೇಲ್ ಯೂನಿವರ್ಸಿಟಿಯಲ್ಲಿ. ಇಲ್ಲದಿದ್ದರೆ ಮುಖ್ಯಮಂತ್ರಿಯ ಆರ್ಥಿಕ ಸಲಹೆಗಾರನ ಸ್ಥಾನಕ್ಕೆ ಅರ್ಹತೆ ಪಡೆಯುವುದೆಂದರೆ ಸಾಧಾರಣ ವಿಷಯವೇ?

ಈತನ ಗುಜರಾತ್ ಮಾದರಿ ಅರ್ಥಶಾಸ್ತ್ರದ ಕೆಲವು ಸ್ಯಾಂಪಲ್‌ಗಳನ್ನು ನೋಡೋಣ.

ಕೆಲ ತಿಂಗಳ ಹಿಂದೆ ಸಿಎಂ ಸದಾನಂದಗೌಡ ಬರಗಾಲದ ಹಿನ್ನೆಲೆಯಲ್ಲಿ ತನ್ನ ಸಹೋದ್ಯೋಗಿಗಳಿಗೆ ಹಾಗೂ ಉನ್ನತ ಅಧಿಕಾರಿಗಳಿಗೆ ಫಾರಿನ್ ಟೂರ್ ಬ್ಯಾನ್ ಮಾಡಿ ಪತ್ರಕರ್ತರಿಂದ ಚಪ್ಪಾಳೆ ಗಿಟ್ಟಿಸಿದ ಗಿಮಿಕ್ ನೆನಪಿದೆ ತಾನೇ? ಸರಿಯಾಗಿ ಅದೇ ಸಂದರ್ಭದಲ್ಲಿ ಆಸ್ಥಾನದ ಚಾಣಕ್ಯನಾಗಿದ್ದ ರಾಜು ನಾಯಕತ್ವದಲ್ಲಿ ಅಧಿಕಾರಿಗಳ ತಂಡವೊಂದು ಸ್ಯಾನ್‌ಫ್ರಾನ್ಸಿಸ್ಕೋ ಮತ್ತು ಟೈವಾನ್‌ಗಳಲ್ಲಿ ಎಂಟು ದಿನಗಳ ಕಾಲ ಸುತ್ತಾಡಿ ಬಂದಿತು. ಅದೂ ಸರ್ಕಾರಿ ವೆಚ್ಚದಲ್ಲಿ, ಅಧಿಕೃತ ಕೆಲಸದ ಹೆಸರಿನಲ್ಲಿ. ಇವರು ಅದೇನು ಕಡಿದರು ಎಂಬುದು ಯಾರಿಗೂ ಗೊತ್ತಿಲ್ಲ. ಅಷ್ಟೇ ಅಲ್ಲ, ಈ ಕುರಿತು ಹೆಚ್ಚುವರಿ ಪ್ರಧಾನ ಕಾರ್ಯದರ್ಶಿ ಕೆ.ಜಯರಾಜ್‌ರನ್ನು ವಿಚಾರಿಸಿದಾಗ "ಇವರು ಯಾತಕ್ಕೆ ಟೂರ್ ಹೋಗಿದ್ದಾರೆ, ಎಲ್ಲಿಗೆ ಹೋಗಿದ್ದಾರೆ ಎಂಬುದರ ಬಗ್ಗೆ ನನಗೆ ಯಾವ ಮಾಹಿತಿಯೂ ಇಲ್ಲ" ಎಂದಿದ್ದರು.

ಹಾಗೆ ಸದಾನಂದ ಗೌಡರು ಹತ್ತಾರು ಖಾತೆಗಳನ್ನು ತನ್ನಲ್ಲೇ ಇಟ್ಟುಕೊಂಡಿದ್ದಾಗ ಅವುಗಳನ್ನು ನಿಭಾಯಿಸಲು ಹತ್ತಾರು ಅಧಿಕಾರಿಗಳನ್ನು, ಹಲವಾರು ಸಿಬ್ಬಂದಿಗಳನ್ನು ನೇಮಿಸಿಕೊಂಡಿದ್ದರು. ಅವರಿಗಾಗಿ ತಿಂಗಳಿಗೆ 70 ಲಕ್ಷ ರೂಪಾಯಿ ಬೊಕ್ಕಸದಿಂದ ಸಂದಾಯವಾಗುತ್ತಿತ್ತು, ಅದರಲ್ಲಿ ಆರ್ಥಿಕ ಸಲಹೆಗಾರ ರಾಜುವಿನ ಪಾಲು ತಿಂಗಳಿಗೆ 1,10,852 ರೂಪಾಯಿ. ಇದರ ಜೊತೆಗೆ ಈ ಆಸಾಮಿಗೆ ವಾಹನ ಭತ್ಯೆ, ಜೊತೆಗೆ ಆಳುಕಾಳು ಇತ್ಯಾದಿ ಸರ್ಕಾರಿ ಭತ್ಯೆಗಳಿಗಾಗಿ ಮತ್ತಷ್ಟು ಲಕ್ಷಗಳು. ಅಂದಹಾಗೆ ಈ ಮಹಾನುಭಾವ ಮಿತವ್ಯಯದ ಬಗ್ಗೆ ಸರ್ಕಾರಿ ಆದಾಯವನ್ನು ಹೆಚ್ಚಿಸುವ ಬಗ್ಗೆ ಹೋದಲೆಲ್ಲಾ ಭರ್ಜರಿ ಭಾಷಣ ಬಿಗಿಯುತ್ತಿದ್ದ. ಆತನನ್ನು ನೇಮಿಸಿಕೊಂಡಿದ್ದೂ ಅದೇ ಕೆಲಸ... ಅನ್ನಿ.

ಈ ಅರ್ಥಶಾಸ್ತ್ರ ಪಂಡಿತ ಬಿಜೆಪಿ ಸರ್ಕಾರದಲ್ಲಿ ಎಷ್ಟೊಂ... ಪ್ರಭಾವಶಾಲಿಯಾಗಿದ್ದಾನೆಂದರೆ ಎಲ್ಲಾ ಪ್ರಮುಖ ತೀರ್ಮಾನಗಳಲ್ಲೂ, ಪ್ರಮ... ಘಟನಾವಳಿಗಳಲ್ಲೂ ಈತನ ಕೈವಾಡ ಇದ್ದೇ ಇರುತ್ತದೆ. ಉದಾಹರಣೆಗೆ ಜಿ... ಸಮಾವೇಶದಲ್ಲಿ ಈತ ಪ್ರಮುಖ ಪಾತ್ರಧಾರಿ ಆಗಿದ್ದ. ಒಳ್ಳೇ ಸೂಟು ಬೂಟು ತೊ... ಸಮಾವೇಶದಲ್ಲಿ ಓಡಾಡಿದ್ದೇ ಓಡಾಡಿದ್ದು.


2012ರ ಮೇ 14ನೇ ತಾರೀಕು ಬೆಂಗಳೂರಿನ ತಾಜ್ ವೆಸ್ಟ್ ಎಂಡ್ ಹೋಟೆಲ್... ಅಮೆರಿಕನ್ ಚೇಂಬರ್ ಆಫ್ ಕಾಮರ್ಸ್ ಇನ್ ಇಂಡಿಯದ ಸಭೆ ನಡೆಯಿ... ಅಮೆರಿಕದ ಕಂಪನಿಗಳಿಗೆ ಸಂಬಂಧಿಸಿದ ಫೈಲುಗಳನ್ನು ಶೀಘ್ರವಾಗಿ ವಿಲೇವಾರಿ ಮಾಡ... ಬಗ್ಗೆ ಸರ್ಕಾರಿ ಪ್ರತಿನಿಧಿಗಳೊಂದಿಗೆ ಚರ್ಚಿಸುವುದೇ ಆ ಸಭೆಯ ಅಜೆಂಡಾ. ... ಮೀಟಿಂಗ್‌ನಲ್ಲಿ ಸರ್ಕಾರದ ಪ್ರತಿನಿಧಿಯಾಗಿ ಭಾಗವಹಿಸಿದ್ದವರು ಬೇರಾರೂ ಅ... ಇದೇ ಕೆ.ವಿ.ರಾಜು.

ಈತ ಸರ್ಕಾರದ ಹಲವು ಸಮಿತಿಗಳಲ್ಲಿ ಪ್ರಮುಖ ಪಾತ್ರಧಾರಿ. ಪ್ರಾದೇ... ಅಸಮಾನತೆಯನ್ನು ಸರಿಪಡಿಸಲು ಪ್ರೊ. ನಂಜುಂಡಪ್ಪ ಸಮಿತಿ ಶಿಫಾರಸ್ಸುಗಳ ಅನುಷ್ಠಾನ... ಒಂದು ಹೈಪವರ್ ಕಮಿಟಿ ರಚಿಸಲಾಗಿದೆ ನೋಡಿ. ಅದರಲ್ಲೂ ಈತ ಸದಸ್ಯ.

ಬೆಂಗಳೂರಿನಲ್ಲಿ ಬೇರು ಬಿಟ್ಟಿರುವ ಉದ್ಯಮಿಗಳು ಒಮ್ಮೆ ಮೂಲಭೂತ ಸೌಕಯ... ಕೊರತೆಯ ಬಗ್ಗೆ ಒಂದು ಎಸ್‌ಎಂಎಸ್ ಕಳಿಸಿ ತಮ್ಮ ಅಸಮಾಧಾನ ವ್ಯಕ್ತಪಡಿಸಿದ... ಸರ್ಕಾರಿ ಪ್ರತಿನಿಧಿಯಾಗಿ ಈತ ಕೂಡಲೇ ಸ್ಪಂದಿಸಿ "ಈ ಬಾರಿಯ ಬಜೆಟ್ ತಯಾ... ಮಾಡುವ ಮುನ್ನ ಉದ್ಯಮಿಗಳ ಜೊತೆ ಚರ್ಚಿಸಲಾಗುವುದು" ಎಂದು ಆಶ್ವಾ... ನೀಡಿದ.

ಅದೇ ರೀತಿಯ ಆಶ್ವಾಸನೆಗಳನ್ನು ಹಿಂದುಳಿದ ಹೈದರಾಬಾದ್ ಕರ್ನಾಟಕದ ಜನ... ಕೊಡಬಲ್ಲನೆ? ಎಂದಿಗೂ ಸಾಧ್ಯವಿಲ್ಲ, ಯಾಕೆಂದರೆ ಆತನ ನಿಷ್ಠೆ ಏನಿದ್ದರೂ ಆಸ್ಥಾ... ಮತ್ತು ಆಸ್ಥಾನಕ್ಕೆ ಹತ್ತಿರವಾಗಿರುವ ಉದ್ಯಮಪತಿಗಳಿಗೆ ಮಾತ್ರ. ಆತ ಅರೆದುಕುಡಿದಿರ... ಅರ್ಥಶಾಸ್ತ್ರದ ತಿರುಳೇ ಅಂಥಾದ್ದು.

ಭೂವಂಚಕನಿಗೆ ಆರೆಸ್ಸೆಸ್ ಕಟಾಕ್ಷ


ವಂಚಕ ಆರೆಸ್ಸೆಸ್ಸಿಗ ಶಂಕರ್‌ನಾಯಕ್

...ವನೊಬ್ಬ ಮಹಾ ವಂಚಕ. ಅಕ್ರಮ ಲ್ಯಾಂಡ್ ...ನಲ್ಲಿರುವ ಅಷ್ಟೂ ಬೋಗಸ್ ಕಲೆಗಳನ್ನು ಕರಗತ ...ಕೊಂಡಿರುವ ಈತ ನಕಲಿ ದಾಖಲೆ ಸೃಷ್ಟಿಸಿ ಸರ್ಕಾರಿ ...ನ್ನೂ ಮಾರಿಬಿಡುವ, ಒಂದೇ ಜಮೀನಿಗೆ ಎರಡೆರಡು ...ಮೆಂಟ್ ಮಾಡಿ ಯಾಮಾರಿಸುವ ಬಲು ಖಾಟಿ ...ಕ. ಹೆಸರು ಶಂಕರ್ ನಾಯಕ್. ಪಕ್ಕಾ ಆರೆಸ್ಸೆಸ್ ...ಹಾಗಂತ ಸ್ವತಃ ತಾನೇ ಹೇಳಿಕೊಂಡು ತಿರುಗುತ್ತಾನೆ, ...ದ ಮೇಲೆ ಇವನಿಗೆ ಬೆಂಬಲ ನೀಡುವ ಮೂಲಕ ...ಪೂ ಇದನ್ನು ಸಾಬೀತುಪಡಿಸುತ್ತಾರೆ. ಸಂಘಪರಿವಾರದ ...ರ್ಜ ತಗುಲಿಸಿಕೊಂಡು ಈತ ಮಾಡಿರುವ ಮೋಸದ ...ಗಳಿಗಂತು ಲೆಕ್ಕವೇ ಇಲ್ಲ. ಈತನ ಬಹುಪಾಲು ...ವಹಾರಗಳು ಕುದುರುವುದೇ ಬಿಜೆಪಿ ಆಫೀಸಿನಲ್ಲಿ ... ಈತ ಜೈಲುಪಾಲಾದ ಅರ್ಧಗಂಟೆಗೇ ಖುದ್ದು ...ಜಗದೀಶ್ ಶೆಟ್ಟರ್ ಕಚೇರಿ ಹಾಗೂ ಕೇಶವಕೃಪಾ ... ಪೊಲೀಸ್ ಸ್ಟೇಷನ್‌ಗೆ ಫೋನ್ ದೌಡಾಯಿಸು...ರೆ ಈ ಕೇಸರಿ ಕುಮಾರನ ಪ್ರತಾಪ ಅದಿನ್ನೆಂಥ ...ಡ.

...ನ್ನದೊಂದು ಪ್ರಿಂಟಿಂಗ್ ಪ್ರೆಸ್ ಇದೆಯಾದರು ಅಲ್ಲಿ ... 'ಸಾಹಿತ್ಯ'ದ ಹೊರತಾಗಿ ಮತ್ತೇನೂ ಮುದ್ರಣ ...ವುದಿಲ್ಲ. ಇನ್ನುಳಿದಂತೆ ತಾನೊಬ್ಬ ಪ್ರಭಾವಿ ವ್ಯಕ್ತಿ ... ಸರ್ಕಾರದ ಘಟಾನುಘಟಿ ನಾಯ ಕರುಗಳೇ ತನ್ನ ...ಲ್ಲಿದ್ದಾರೆ, ಆರೆಸ್ಸೆಸ್ ಕೃಪಾಪೋಷಿತ ಬೆಂಗಳೂರಿನ ...ವಾ ವಿದ್ಯಾಕೇಂದ್ರದ ಸಂಸ್ಥಾಪಕರಲ್ಲಿ ತಾನೂ ಒಬ್ಬ ...ತ್ಯಾದಿ ಫರಾಕು ಉದುರಿಸಿಕೊಳ್ಳುತ್ತ ...ದೋ ಜಮೀನಿಗೆ ಮತ್ತಾರದೋ ...ಲ್ಲಿ ಬೇಲಿ ಸುತ್ತುವುದೇ ಇವನ ... ಕಾಯಕ. ಅಮಾಯಕರನ್ನು ..., ಬೆದರಿಸಿ ನೂರಾರು ಕೋಟಿ ... ಆಸ್ತಿ ಸಂಪಾದಿಸಿ ರುವ ಈತ ...ಘಟ್ಟ ಮುಖ್ಯರಸ್ತೆ ಯಲ್ಲಿರುವ ...ಮಯ ಬಿಲ್ಡರ್ಸ್ ಸಂಸ್ಥೆಯೊಂದಕ್ಕೆ ...ಹಾಯಿಸಿ ರೋದೆ ಬರೋಬ್ಬರಿ ... ಲಕ್ಷಗಳು ಅರ್ಥಾತ್ 1.39 ...!

ಬಿಗ್ ಬಜೆಟ್....


...ಟಿ.ಪಿ.ಗಂಗಾಧರ್, ಎ.ಟಿ. ಕೃಷ್ಣಪ್ಪ ಮತ್ತು ರಂಗಸ್ವಾಮಿ ... ಮೂರು ಜನರ ಪಾಲುದಾರಿಕೆಯಲ್ಲಿ ನಡೆಯುತ್ತಿದ್ದ ...ಮಯ ಬಿಲ್ಡರ್ಸ್ ಸಂಸ್ಥೆ 2008ರಲ್ಲಿ ಲೇಔಟ್ ...ಸಲು ಸುಮಾರು 200 ಎಕರೆಯ ಸೂಕ್ತವಾದ ...ದು ಜಮೀನಿನ ತಲಾಷಿನಲ್ಲಿದ್ದಾಗ ಈ ಶಂಕರ್ ...ಕ್ ಪರಿಚಯವಾಗಿದ್ದ. ತನ್ನ ಆರೆಸ್ಸೆಸ್ ಪ್ರಭಾವಿತನದ ...ನ ಮೂಲಕ ಅವರ ವಿಶ್ವಾಸ ಗಿಟ್ಟಿಸಿಕೊಂಡ ಈತ ...ಮತ್ತು ತನ್ನ ಹೆಂಡತಿ ಶೈಲಜಾ ನಾಯಕ್ ಹೆಸರಿನಲ್ಲಿ ...ರು 250 ಎಕರೆ ಜಾಗವಿದ್ದು ಅದನ್ನು ನಿಮಗೆ ...ಲು ತಯಾರಿರುವುದಾಗಿ ತಿಳಿಸಿದ.

...ಒಂದೇ ಕಡೆ ಅಷ್ಟು ಜಮೀನು ಸಿಗುವುದಾದರೆ ತಮಗೆ ...ಕೂಲವೆಂದು ಭಾವಿಸಿದ ಅವರು ಜಮೀನನ್ನು ...ರಿಸುವಂತೆ ಕೇಳಿದಾಗ ಶಂಕರ್ ನಾಯಕ್ ಕರೆತಂದು ...ದ್ದು ತಾವರೆಕೆರೆ ಬಳಿಯ 300 ಎಕರೆ ಖಾಲಿ ...ವೊಂದಕ್ಕೆ. ರೈತರು ಉಳುಮೆ ಮಾಡದೆ ಬೀಳು ...ರುವ ಈ ಜಾಗವನ್ನು ತಾನು ಈಗಷ್ಟೆ ಖರೀದಿಸುತ್ತಿದ್ದು ...ಲೇ ಅಗ್ರಿಮೆಂಟ್ ಮುಗಿದು ಮುಕ್ಕಾಲುಭಾಗ ...ವನ್ನೂ ರೈತರಿಗೆ ಪಾವತಿಸಿಯಾಗಿದೆ, ಬಾಕಿ ಸ್ವಲ್ಪ ...ಮೌಂಟಿನ ಸೆಟ್ಲ್‌ಮೆಂಟ್ ಆದ ಕೂಡಲೇ ರಿಜಿಸ್ಟ್ರೇಷನ್‌ಗೆ ...ರೂ ತಯಾರಿದ್ದಾರೆ ಎಂದು ಒಂದಷ್ಟು ಬೋಗಸ್ ...ದಲೆಗಳನ್ನು ಬಿಲ್ಡರ್ಸ್ ಪಾರ್ಟ್ನರ್‌ಗಳ ಮುಂದಿರಿಸಿದ್ದ. ...ದಾಗ ರೈತರ ಜಮೀನಿನ ನಡುವೆ ಸುಮಾರು 30 ...ರೆಯಷ್ಟು ಸರ್ಕಾರಿ ಜಾಗವೂ ಇತ್ತು, ಅದಕ್ಕೂ ನಕಲಿ ...ಲೆ ಸೃಷ್ಟಿಸಿ ಬಿಲ್ಡರ್‌ಗಳ ದಾರಿ ತಪ್ಪಿಸಿದ್ದ.

... ಅದೆಷ್ಟು ಅಚ್ಚುಕಟ್ಟಾಗಿ ಆತ ದಾಖಲೆಗಳನ್ನು ಮ್ಯಾನು...ಲೇಟ್ ಮಾಡಿದ್ದನೆಂದರೆ ಅಡ್ವೋಕೇಟ್‌ಗಳಿಗೂ ಅವು ನಕಲಿ ಎಂದು ಗುರುತಿಸಲಾಗಿರಲಿಲ್ಲ. ಬಿಲ್ಡರ್ಸ್ ಸಂಸ್ಥೆಯವರು ಖರೀದಿಸುವ ಮುನ್ನ ತಾವು ಇಡೀ ಜಮೀನನ್ನು ಸರ್ವೇ ಮಾಡಿ ನೋಡುತ್ತೇವೆ ಎನ್ನುವ ವರಾತ ತೆಗೆಯುತ್ತಿದ್ದಂತೆ 'ತನ್ನ ಮತ್ತು ರೈತರ ನಡುವಿನ ವ್ಯವಹಾರವಿನ್ನು ಅಂತಿಮವಾಗಿಲ್ಲ, ಅದಕ್ಕೂ ಮುನ್ನವೇ ನೀವು ಮೂರನೇ ಪಾರ್ಟಿಯಾಗಿ ಜಮೀನಿನಲ್ಲಿ ಸರ್ವೇ ಕಾರ್ಯಕ್ಕೆ ಮುಂದಾದರೆ ರೈತರು ತಕರಾರು ತೆಗೆದು ಭೂಮಿಯ ರೇಟನ್ನು ಮತ್ತಷ್ಟೂ ಹೆಚ್ಚಿಸ ಬಹುದು, ಅದಕ್ಕೆ ನೀವೇ ಜವಾಬ್ದಾರರು' ಎಂಬು ದಾಗಿ ಎಚ್ಚರಿಸಿ ಅವರನ್ನು ಸರ್ವೇ ಆಲೋಚನೆ ಯಿಂದಲೇ ಹಿಂದೆ ಸರಿಸಿದ್ದ. ಕಣ್ಣೆದುರಿಗಿದ್ದ ದಾಖಲೆ ಗಳನ್ನೇ ಅಸಲಿ ಎಂದು ನಂಬಿಕೊಂಡು ವ್ಯವಹಾರಕ್ಕೆ ಕುಳಿತಿವರು ಎಕರೆಗೆ 43 ಲಕ್ಷದ ಡೀಲ್ ಕುದುರುತ್ತಿದ್ದಂತೆ ಐದು ಲಕ್ಷ ಅಡ್ವಾನ್ಸನ್ನೂ ನೀಡಿ ಕರಾರುಪತ್ರ ಮಾಡಿಸಿ ಕೊಂಡಿದ್ದರು.


ಇಡಿಯಾಗಿ 200 ಎಕರೆಗೆ ಒಮ್ಮೆಲೇ ಅಗ್ರಿಮೆಂಟ್ ಸಾಧ್ಯವಿಲ್ಲದ್ದರಿಂದ ಹಂತಹಂತವಾಗಿ ಇಷ್ಟಿಷ್ಟೇ ಭೂಮಿಯನ್ನು ಅಗ್ರಿಮೆಂಟ್ ಮಾಡಿಸಿಕೊಳ್ಳಲು ಮುಂದಾದ ಬಿಲ್ಡರ್ಸ್ ಸಂಸ್ಥೆಯವರು ಮೊದಲ ಹಂತವಾಗಿ 10 ಎಕರೆ ಜಾಗಕ್ಕೆ ಜಮೀನಿನ ಅಸಲೀ ಮಾಲೀಕರಾದ ರೈತರ ಸಮ್ಮುಖದಲ್ಲೇ ಅಗ್ರಿಮೆಂಟ್ ಮಾಡಿಸಿಕೊಡುವಂತೆ ಶಂಕರ್ ನಾಯಕನನ್ನು ಕೇಳಿದ್ದರು. ಆದರೆ ಈಗಾಗಲೇ ತಾನು ಇದೇ ಜಮೀನಿಗೆ ಇನ್ವೆಸ್ಟ್ ಮಾಡಿರುವುದರಿಂದ ತನ್ನ ಹಣ ವಾಪಸ್ಸು ಬರುವವರೆಗೆ ತನ್ನ ಹೆಸರಿನ ಮಧ್ಯಸ್ಥಿಕೆಯಲ್ಲೇ ಅಗ್ರಿಮೆಂಟ್ ನಡೆಯಬೇಕೆಂದು ಪಟ್ಟುಹಿಡಿದ ನಾಯಕ್ ಬಿಲ್ಡರ್ಸ್‌ಗಳನ್ನು ಅದಕ್ಕೆ ಒಪ್ಪಿಸುವಲ್ಲಿ ಯಶಸ್ವಿಯಾಗಿದ್ದ.

ಈ 10 ಎಕರೆಯಲ್ಲಿ ಎಂ.ಕೃಷ್ಣ ಎಂಬುವವರಿಗೆ ಸೇರಿದ 8 ಎಕರೆ 23 ಗುಂಟೆ ಜಮೀನಿಗೆ 1 ಕೋಟಿ 40


ಶಂಕರ್‌ನಾಯಕ್ ವಂಚನೆಗೆ ತೋರಿಸಿದ ತಾವರೆಕೆರೆ ಬಳಿಯ ಜಮೀನು

ಲಕ್ಷವನ್ನೂ ಮತ್ತು ಶಿವಮ್ಮ ಎಂಬುವವರಿಗೆ ಸೇರಿದ 2 ಎಕರೆ 1 ಗುಂಟೆ ಜಮೀನಿಗೆ 25 ಲಕ್ಷ ಅಡ್ವಾನ್ಸನ್ನು ಶಂಕರ್ ನಾಯಕ್‌ಗೆ ನೀಡಿ ಆತ ಮಧ್ಯವರ್ತಿಯಾಗಿರುವಂತೆ ಬಿಲ್ಡರ್ಸ್ ಸಂಸ್ಥೆ ಮತ್ತು ರೈತರ ನಡುವೆ ಅಗ್ರಿಮೆಂಟ್ ಮಾಡಿಸಿಕೊಳ್ಳಲಾಗಿತ್ತು. ಇಲ್ಲೂ ತನ್ನ ಗೋಲ್‌ಮಾಲ್ ಬುದ್ಧಿ ತೋರಿಸಿದ ನಾಯಕ್ ಇಬ್ಬರಿಗೂ ಗೊತ್ತಿಲ್ಲದಂತೆ ಎರಡೆರಡು ಅಗ್ರಿಮೆಂಟ್ ಮಾಡಿಸಿ ಯಾಮಾರಿ ಸಿದ್ದ. ಈ ಮೇಲಿನ ಮೊತ್ತದಂತೆ ಬಿಲ್ಡರ್ಸ್ ಸಂಸ್ಥೆಗೆ ಅಗ್ರಿಮೆಂಟ್ ಮಾಡಿಸಿಕೊಟ್ಟಿದ್ದರೆ, ರೈತರಿಗೆ ಕಡಿಮೆ ಮೊತ್ತದ ಅಗ್ರಿಮೆಂಟ್ ಮಾಡಿಕೊಟ್ಟಿದ್ದ. ಬಿಲ್ಡರ್ಸ್‌ನ ಅಗ್ರಿಮೆಂಟ್ ಪ್ರಕಾರ ಕೃಷ್ಣ ಎನ್ನುವವರಿಗೆ ಕೊಟ್ಟಿದ್ದ 1 ಕೋಟಿ 40 ಲಕ್ಷದಲ್ಲಿ ಆತನಿಗೆ ತಲುಪಿದ್ದು ಕೇವಲ 65 ಲಕ್ಷ ಮಾತ್ರ, ಇನ್ನುಳಿದ 75 ಲಕ್ಷ ಶಂಕರ್ ನಾಯಕ್‌ನ ಪರ್ಸನಲ್ ಅಕೌಂಟ್ ತುಂಬಿಕೊಂಡಿತ್ತು.

ಇನ್ನು ಅನಕ್ಷರಸ್ಥೆ ಶಿವಮ್ಮನಂತೂ ಚೆನ್ನಾಗಿಯೇ ಯಾಮಾರಿಸಿದ್ದ. ಶಿವಮ್ಮನಿಗೆ ಕೊಡಬೇಕಾಗಿದ್ದ 25 ಲಕ್ಷ ಅಡ್ವಾನ್ಸನ್ನು 15 ಲಕ್ಷ ನಗದು ಮತ್ತು 10 ಲಕ್ಷದ ಚೆಕ್ ಮೂಲಕ ಬಿಲ್ಡರ್ಸ್‌ಗಳು ಶಂಕರ್ ನಾಯಕ್‌ಗೆ ನೀಡಿದ್ದರು. ಆದರೆ ಆಕೆಗೆ 9 ಲಕ್ಷವನ್ನಷ್ಟೇ ನೀಡಿದ್ದ, ಇನ್ನು ಚೆಕ್ ಎಂದರೇನೆಂಬುದೇ ಅರಿಯದ ಆಕೆಯನ್ನು ಬ್ಯಾಂಕ್‌ಗೆ ಕರೆದೊಯ್ದು ಬೇಕಾದ ಕಡೆ ಹೆಬ್ಬೆಟ್ಟು ಹೊತ್ತಿಸಿ 10 ಲಕ್ಷವನ್ನೂ ಡ್ರಾ ಮಾಡಿಕೊಂಡು ಅದರಲ್ಲಿ 1 ಲಕ್ಷವನ್ನಷ್ಟೇ ಆಕೆಗೆ ನೀಡಿದ್ದ, ಒಟ್ಟು 25 ಲಕ್ಷದಲ್ಲಿ ಆಕೆಯ ಕೈ ಸೇರಿದ್ದು ಕೇವಲ 10 ಲಕ್ಷ ಮಾತ್ರ. ಇತ್ತ ಬಿಲ್ಡರ್ಸ್ ಸಂಸ್ಥೆಯವರು ಜಾಗವನ್ನು ಸರ್ವೇ ಮಾಡಿಸಿ ಕೊಡಬೇಕೆಂದು ದುಂಬಾಲು ಬೀಳುತ್ತಿದ್ದಂತೆ ಏನೇನೋ ನೆಪಹೇಳಿಕೊಂಡು ನಾಪತ್ತೆಯಾಗಿಬಿಡುತ್ತಿದ್ದ. ಬೇಸತ್ತ ಸಂಸ್ಥೆಯವರು ತಾವೇ ಸರ್ವೇಯವರನ್ನು ಕರೆತಂದು ಅಳೆಯಲು ನಿಂತಾಗಲೇ ಆ 10 ಎಕರೆ ಭೂಮಿ ತಾವು


ವಂಚನೆಗೊಳಗಾದ ಬಿಲ್ಡರ್‌ಗಳಾದ ಟಿ.ಪಿ.ಗಂಗಾಧರ್, ರಂಗಸ್ವಾಮಿ, ಎ.ಟಿ.ಕೃಷ್ಣಪ್ಪ

ಅಂದುಕೊಂಡಂತೆ ಒಂದೇ ಕಡೆ ಇರದೆ ಅಲ್ಲಷ್ಟು ಇಲ್ಲಷ್ಟು ಚದುರಿಹೋಗಿರುವ ವಿಷಯ ಗೊತ್ತಾದದ್ದು. ಇದು ಅಗ್ರಿಮೆಂಟ್‌ಗೆ ತುಂಬಾ ತೊಂದರೆಯಾಗುತ್ತಿತ್ತು. ಹಾಗಾಗಿ ಶಂಕರ್ ನಾಯಕ್‌ನನ್ನು ತರಾಟೆಗೆ ತೆಗೆದುಕೊಂಡಿದ್ದರು. ಅದಕ್ಕಾತ 'ಹೇಗಿದ್ದರು 200 ಎಕರೆಯನ್ನೂ ನೀವೇ ಕೊಂಡುಕೊಳ್ಳಲಿದ್ದೀರಿ, ಚದುರಿಹೋಗಿರುವ ಭೂಮಿಯ ನಡುವೆ ಇರುವ ಜಾಗವನ್ನೂ ನಿಮಗೆ ಅಗ್ರಿಮೆಂಟ್ ಮಾಡಿಸಿಕೊಡುತ್ತೇನೆ ಬಿಡಿ' ಎಂದು ತಣ್ಣಗೆ ಪ್ರತಿಕ್ರಿಯಿಸಿದ್ದ. ಅದೂ ಸರಿ ಎನ್ನಿಸಿ ಮತ್ತೊಂದು ಕಂತಿನ ವಂಚನೆಗೆ ಬಿಲ್ಡರ್ಸ್ ಸಂಸ್ಥೆ ಅಣಿಯಾಗಿತ್ತು. ಆದರೆ ಅದಕ್ಕಿಂತಲೂ ಆಘಾತಕಾರಿ ವಿಷಯವೆಂದರೆ ಆ 10 ಎಕರೆಯ ಭೂಮಿಯ ನಡುವೆ ಸುಮಾರು 7 ಎಕರೆ 10 ಗುಂಟೆ ಜಾಗ ಸರ್ಕಾರಕ್ಕೆ ಸೇರಿದ್ದಾಗಿತ್ತು, ಆದರದನ್ನು ಸರ್ವೇಯವರಾಗಲಿ ಅಥವಾ ಶಂಕರ್‌ನಾಯಕ್ ಆಗಲಿ ಬಿಲ್ಡರ್ಸ್ ಸಂಸ್ಥೆಗೆ ತಿಳಿಸಿರಲೇ ಇಲ್ಲ.

ಸರ್ಕಾರಿ ಜಾಗಕ್ಕೂ ಸಂಚಕಾರ

ಶಂಕರ್ ನಾಯಕ್ ಈ ಬಾರಿ ಸರ್ಕಾರಿ ಜಾಗಕ್ಕೇ ಬೋಗಸ್ ಭೂಮಾಲೀಕರನ್ನು ಸೃಷ್ಟಿಸಲು ಮುಂದಾಗಿದ್ದ ಅದಕ್ಕಾತ ಆಯ್ದುಕೊಂಡದ್ದು ಗೋಪಾಲ, ಲಕ್ಷ್ಮಮ್ಮ ಮತ್ತು ಭದ್ರಕಾಳಮ್ಮ ಎಂಬ ಮತ್ತೊಂದು ಅಮಾಯಕರ ತಂಡವನ್ನು. ಇವರ್ಯಾರಿಗೂ ತಾವರೆಕೆರೆ ಆಸುಪಾಸಿನಲ್ಲಿ ಗೇಣಿನಷ್ಟೂ ಜಮೀನಿರಲಿಲ್ಲ. ಆದರೆ ತನ್ನ ನಂಬುಗೆಯ ಭಂಟರಾದ ತಾವರೆಕೆರೆ ಬ್ಲಾಕ್ ಬಿ.ಜೆ.ಪಿ ಅಧ್ಯಕ್ಷ ಗುನ್ನ ಕೃಷ್ಣಪ್ಪ ಮತ್ತು ಗಂಗರಾಜು ಎಂಬಿಬ್ಬರು ಆಸಾಮಿಗಳ ಮೂಲಕ ಆ ಮೂವರನ್ನೂ ಸಂಪರ್ಕಿಸಿ ಒಂದು ಅಗ್ರಿಮೆಂಟ್‌ಗೆ ಸಹಿ ಮಾಡಿದರೆ ಸಾಕು ನಿಮ್ಮ ಹೆಸರಿಗೆ ಆ ಜಮೀನನ್ನು ಮಾಡಿಕೊಡುವುದು ಮಾತ್ರವಲ್ಲ, ಸಹಿ ಮಾಡಿದ್ದಕ್ಕೆ ಹಣವನ್ನೂ ನೀಡುತ್ತೇವೆಂದು ಆಮಿಷ ಒಡ್ಡಿದ್ದರು. ಮೊದಮೊದಲು ಹಿಂದೇಟು ಹಾಕಿದ ಅವರಿಗೆ 'ಶ್ರೀಮಾನ್' ಶಂಕರ್‌ನಾಯಕ್‌ರ ಪ್ರಭಾವಳಿಯ ಪುಂಗಿಊದಿ ಒಪ್ಪಿಸಿದ್ದರು. ಪುಕ್ಕಟೆ ಜಮೀನು, ಕೈಗೆ ಒಂದಷ್ಟು ಕಾಸೂ ಸಿಗುತ್ತದೆಂಬ ಆಸೆಯಿಂದ ಅವರು ತೋರಿಸಿದ ಅಗ್ರಿಮೆಂಟ್‌ಗಳಿಗೆ ಸಹಿ ಹಾಕಿದ್ದರು. ಆ ಅಗ್ರಿಮೆಂಟ್‌ನಲ್ಲಿ ಸರ್ಕಾರಿ ಜಮೀನಿಗೆ ಈ ಮೂವರೂ ಒಡೆಯರಾಗಿದ್ದು ಅದನ್ನು ಶಂಕರ್ ನಾಯಕ್‌ಗೆ ಮಾರಲು ಒಪ್ಪಿರುವುದಾಗಿ ದಾಖಲಾಗಿತ್ತು, ಅವುಗಳನ್ನೇ ಬಳಸಿಕೊಂಡ ನಾಯಕ್ ಈ ಮೂರು ಮಾಲೀಕರ ಜಮೀನಿನ ಅಡ್ವಾನ್ಸಾಗಿ ಬಿಲ್ಡರ್ಸ್ ಸಂಸ್ಥೆಯಿಂದ 38 ಲಕ್ಷಗಳನ್ನು ವಸೂಲಿ ಮಾಡಿದ್ದ. ಹೀಗೆ ಅವರಿಂದ ಆತ ಒಟ್ಟು 1.39 ಕೋಟಿಯನ್ನು ವಂಚಿಸಿ ಲಪಟಾಯಿಸಿದ್ದ. ಸಹಿ ಮಾಡಿದವರಲ್ಲಿ ಗೋಪಾಲ್ ಮತ್ತು ಭದ್ರಕಾಳಮ್ಮನಿಗೆ ತಲಾ ಒಂದು ಲಕ್ಷ, ಲಕ್ಷ್ಮಮ್ಮನಿಗೆ 75 ಸಾವಿರ ನೀಡಿ ತತ್ಕಾಲಕ್ಕೆ ಸುಮ್ಮನಾಗಿಸಿದ್ದ. ಅಷ್ಟಕ್ಕೂ ಆ ಹಣವನ್ನೇನು ಆತ ಸುಮ್ಮನೇ ಬಿಟ್ಟಿರಲಿಲ್ಲ, ಒಂದೆರಡು ತಿಂಗಳ ನಂತರ ಆ ಮೂವರು ನಕಲಿ ಮಾಲೀಕರ ಬಳಿ ಹೋಗಿ 'ಸರ್ಕಾರಿ ಜಮೀನು ತಮ್ಮದೆನ್ನುವ ಸುಳ್ಳು ದಾಖಲೆಗೆ ಸಹಿ ಮಾಡಿದ್ದೀರಿ, ನಾವು ಕೊಟ್ಟ ಹಣವನ್ನು ಬಡ್ಡಿಸಮೇತ ವಾಪಸ್ಸು ಮಾಡದಿದ್ದರೆ ಕಂಬಿ ಎಣಿಸುವಂತೆ ಮಾಡುತ್ತೇವೆ' ಎಂದೆಲ್ಲ ಬೆದರಿಸಿ ಕೊಟ್ಟದ್ದಕ್ಕಿಂತ ದುಪ್ಪಟ್ಟು ಹಣ ವಸೂಲಿ ಮಾಡಿಕೊಂಡಿದ್ದ.

ಅಗ್ರಿಮೆಂಟ್ ಆಗಿ ವರ್ಷಗಳು ಕಳೆದರೂ ರಿಜಿಸ್ಟ್ರೇಷನ್ ಮಾತೆತ್ತಿದರೆ 'ನಾಟ್ ರೀಚಬಲ್' ಆಗಿ ಬಿಡುತ್ತಿದ್ದ ಶಂಕರ್ ನಾಯಕ್‌ನ ಮೇಲೆ ಅನುಮಾನ ಬಂದು ಬಿಲ್ಡರ್ಸ್ ಸಂಸ್ಥೆಯವರು ನೇರವಾಗಿ ರೈತರನ್ನು ಸಂಪರ್ಕಿಸಿದಾಗಲೇ ಆತನ ಡಬಲ್ ಗೇಮ್ ಬಯಲಿಗೆ ಬಂದದ್ದು. ತಾವು ಮೋಸ ಹೋಗಿರು ವುದು ಖಾತ್ರಿಯಾಗು ತ್ತಿದ್ದಂತೆಯೇ ಹಣ ವಾಪಸ್ಸು ಮಾಡುವಂತೆ ಕೇಳಿದ ಬಿಲ್ಡರ್ಸ್ ಪಾರ್ಟ್ನರ್‌ಗಳಿಗೆ ತನ್ನ ಅಸಲೀ ಕೇಸರೀ ರೂಪವನ್ನು ಪ್ರದರ್ಶಿಸಲು ಮುಂದಾದ.

ಕಿಡ್ನಾಪ್ ನಾಟಕವೂ, ಕೇಸರಿ ಸಪೋರ್ಟೂ

ಹಣ ಕೇಳಲು ನಿಂತ ಬಿಲ್ಡರ್ಸ್‌ಗಳಿಗೆ ಬೆದರಿಕೆ ಕರೆ ಮಾಡಿಸುವುದು, ಪತ್ರ ಬರೆಯುವುದು ಇತ್ಯಾದಿತ್ಯಾದಿ ಥರ್ಡ್ ಕ್ಲಾಸ್ ಪ್ರಯೋಗ ನಡೆಸಿದ ನಂತರ ಆತ ಬಳಸಿಕೊಂಡದ್ದು ಮುತ್ತಪ್ಪ ರೈ ಹೆಸರನ್ನು. ಈ ವ್ಯವಹಾರವನ್ನು ರೈ ಅಸೋಸಿಯೇಟ್ಸ್‌ಗೆ ವಹಿಸಿದ್ದು ಅಲ್ಲೇ ಬಗೆಹರಿಸಿಕೊಳ್ಳುವಂತೆ ನೋಟಿಸ್ ಕಳುಹಿಸಿದ್ದ. ಅಲ್ಲಿಗೂ ಎಡತಾಕ ಬಂದ ಬಿಲ್ಡರ್ಸ್ ಗಳು ತನಗಿನ್ನು ಬಗ್ಗುವುದಿಲ್ಲ ಎಂಬುದನ್ನರಿತು ತನ್ನದೇ ನಿರ್ದೇಶನ ಕಮ್ ಅಭಿನಯದಲ್ಲಿ ಅದ್ದೂರಿ ಕಿಡ್ನಾಪ್ ಡ್ರಾಮಾವೊಂದನ್ನು ರೂಪಿಸಿದ್ದ.


ಚನ್ನಮ್ಮನಕೆರೆ ಅಚ್ಚುಕಟ್ಟು ಪೊಲೀಸ್ ಠಾಣೆಯಲ್ಲಿ ತನ್ನ ಡ್ರೈವರ್ ಮೂಲಕ ತಮ್ಮ ಬಾಸ್ ಶಂಕರ್ ನಾಯಕ್ ರನ್ನು ಶ್ರೀಮಯ ಬಿಲ್ಡರ್ಸ್‌ನ ಪಾಲುದಾರರು ಅಪಹರಿಸಿ ದ್ದಾರೆಂಬ ಸುಳ್ಳು ದೂರು ನೀಡುವಂತೆ ಮಾಡಿ, ಅವರೆಲ್ಲರನ್ನೂ ಅರೆಸ್ಟ್ ಮಾಡಿಸಿದ್ದ. ನಾಯಕ್‌ನ ಅಟ್ಟಹಾಸ ಮಿತಿಮೀರು ತ್ತಿದ್ದಂತೆಯೆ ಬಿಲ್ಡರ್‌ಗಳು ಆಗಿನ ಪೊಲೀಸ್ ಕಮೀಷನರಾಗಿದ್ದ ಶಂಕರ್ ಬಿದರಿಯವರಿಗೆ ಪತ್ರ ಬರೆದಿದ್ದರು. ನಂತರ ತನಿಖೆಯನ್ನು ಈ ಪ್ರಕರಣವನ್ನು ಸಿಸಿಬಿಗೆ ವಹಿಸಲಾಗಿತ್ತು. ಪ್ರಕರಣದ ಎ ಟು ಝೆಡ್ ವೃತ್ತಾಂತದ ವಿಚಾರಣೆ ನಡೆಸಿದ ಎ.ಸಿ.ಪಿ ಹಾದಿಮನಿ ಶಂಕರ್ ನಾಯಕ್‌ನ ದಗಲುಬಾಜಿ ಯನ್ನು ಸಾಕಷ್ಟು ಸಾಕ್ಷಿಸಮೇತ ಸಾಬೀತು ಮಾಡಿ ಬಿ ರಿಪೋರ್ಟ್ ಗೀಚಿದ್ದರು.

ಈ ನಡುವೆ ವಿಷಯ ಸಿಸಿಬಿ ಮೆಟ್ಟಿಲು ಹತ್ತುತ್ತಿದ್ದಂತೆ ಅಕ್ರಮ ಕ್ರಿಮಿಯನ್ನು ರಕ್ಷಿಸಲು ಕೇಸರಿ ಕಸರತ್ತೂ ಆರಂಭವಾಗಿತ್ತು. ಮೊದಮೊದಲು ಅದಕ್ಕೆ ವೇದಿಕೆ ಆದದ್ದೇ ಮಲ್ಲೇಶ್ವರಂನಲ್ಲಿರುವ ಬಿಜೆಪಿ ಪಾರ್ಟಿ ಆಫೀಸು. ಬೆಂಗಳೂರು ನಗರ ಜಿಲ್ಲಾ ಬಿಜೆಪಿ ಅಧ್ಯಕ್ಷ ಸುಬ್ಬಣ್ಣ ಬಿಲ್ಡರ್ಸ್‌ಗಳನ್ನು ಕರೆಸಿ ರಾಜಿ ಪಂಚಾಯ್ತಿ ಮಾಡಲು ಮುಂದಾಗಿದ್ದರು. ವಂಚಕನೊಬ್ಬನನ್ನು ಬಚಾವು ಮಾಡುವ ಸಾಹಸಕ್ಕೆ ಕೈ ಹಾಕುವ ಮೂಲಕ ಭ್ರಷ್ಟಾಚಾರಕ್ಕೆ ತನ್ನದೆಂತಹ ಭಾರೀ ಬೆಂಬಲವಿದೆ ಎನ್ನುವುದನ್ನು ಬಿಜೆಪಿ ಸಾಕ್ಷೀಕರಿಸಿತ್ತು. ಅಷ್ಟರಲ್ಲಾಗಲೇ ಸಿಸಿಬಿ ರಿಪೋರ್ಟ್ ಬಂದಿದ್ದರಿಂದ ಪೀಣ್ಯಾ ಪೊಲೀಸ್ ಠಾಣೆಯಲ್ಲಿ ವಂಚನೆಯ ದೂರು ನೀಡಿದ ಬಿಲ್ಡರ್ ಸಂಸ್ಥೆಯವರು ಆತನನ್ನು ಕೂಡಲೇ ಬಂಧಿಸುವಂತೆ ಒತ್ತಾಯಿಸಿದ್ದರು.

ಸಿಸಿಬಿ ರಿಪೋರ್ಟ್ ಸ್ಪಷ್ಟವಾಗಿತ್ತಾದ್ದರಿಂದ ಬಂಧಿಸುವ ಅನಿವಾರ್ಯತೆ ಪೊಲೀಸರಿಗಿತ್ತು, ಹಾಗಾಗಿ ಇದೇ ಆಗಸ್ಟ್ 4 ರಂದು ಶಂಕರ್ ನಾಯಕ್‌ನನ್ನು ಅರೆಸ್ಟ್ ಮಾಡಿದ್ದರು. ಆದರೆ ನೆಟ್ಟಗೆ ಅರ್ಧ ದಿನವೂ ಆತ ಜೈಲಿನಲ್ಲಿರಲಿಲ್ಲ, ಈ ಪರಿ ಸಾಕ್ಷಿ ಪುರಾವೆ ಸಹಿತ ರೆಡ್ ಹ್ಯಾಂಡಾಗಿ ತಗುಲಿಕೊಂಡಿದ್ದ ಆತ ಜೈಲು ಸೇರುತ್ತಿದ್ದಂತೆಯೇ ಸಿಎಂ ಆಫೀಸು, ಆರೆಸ್ಸೆಸ್ ಕಚೇರಿ, ಕಮೀಷನರ್ ಆಫೀಸಿನಿಂದ ಪೀಣ್ಯಾ ಠಾಣೆಗೆ ಫೋನ್ ಕರೆಗಳು ಅವಸರಿಸಿ ಬಂದಿದ್ದವು. ದೂರುದಾರರ ಮುಂದೆ ಈ ಸಂಗತಿಯನ್ನು ಖುದ್ದು ಸರ್ಕಲ್ ಇನ್ಸ್‌ಪೆಕ್ಟರೇ ಹೇಳಿಕೊಂಡು ಅಸಹಾಯಕರಂತೆ ಆತನನ್ನು ಬಿಡುಗಡೆಮಾಡಿ ಕಳುಹಿಸಿದ್ದರು. ಅಲ್ಲಿಗೆ ಬಿಜೆಪಿ ದುರಾಡಳಿತದಲ್ಲಿ ಕೇವಲ ಅಧಿಕಾರ ಇರುವವರಿಗೆ ಮಾತ್ರವಲ್ಲ ಪ್ರತಿ ಕೇಸರಿ ಕುಮಾರನಿಗೂ ಅವ್ಯವಹಾರದಲ್ಲಿ ಮಿಂದೇಳಲು ಅದ್ಭುತ ಅವಕಾಶವಿದೆಯೆನ್ನುವುದು ಖಾತ್ರಿಯಾದಂತಾಗಿದೆ. ಒಟ್ಟಿನಲ್ಲಿ ಬಿಜೆಪಿ ಗದ್ದುಗೆಯಲ್ಲಿರುವವರೆಗೆ ಇಂತಹ ವಂಚಕರ ಕಮಾಯಿಗೆ ಯಾವ ಅಡ್ಡಿಯೂ ಇದ್ದಂತಿಲ್ಲ.

● ಗಿರೀಶ್ ತಾಳಿಕಟ್ಟೆ

ಶಂಕರ್‌ನಾಯಕ್ ವಿರುದ್ಧ ಸಿಸಿಬಿ ಹಾಕಿರುವ ಬಿ-ರಿಪೋರ್ಟ್ ಪ್ರತಿ




ಪಾನ ಸಂಯಮ ಮಂಡಳಿ ಪೀಠದಲ್ಲೊಬ್ಬ 'ಮತೋನ್ಮತ್ತ'!!

ಕರ್ನಾಟಕದಲ್ಲಿ ಪಾನ ಸಂಯಮ ಮಂಡಳಿ ಎಂಬುದೇನಾದರೂ ಇದೆಯಾ? ಅದರಿಂದ ಜನರಿಗೇನಾದರೂ ಪ್ರಯೋಜನ ಆಗುತ್ತಿದೆಯಾ? ಯಾರಿರಬಹುದು ಅದರ ಅಧ್ಯಕ್ಷ ಮಹಾಶಯ? ಆತ ಪಾನ ಸಂಯಮದ ಕೆಲಸ-ಕಾರ್ಯವೇನಾದರೂ ಮಾಡುತ್ತಿದ್ದಾನಾ? ಅಥವಾ ಮಂಡಳಿಯ ಸುಖ-ಸೌಲಭ್ಯ ತಿಂದುಂಡು ಸ್ವ-ಜೀರ್ಣೋದ್ಧಾರ ಮಾಡಿಕೊಳ್ಳುತ್ತಿದ್ದಾನಾ?

ಅಂಥ ಅನುಮಾನಗಳೀಗ ರಾಜ್ಯದ ಜನರನ್ನು ಕಾಡುತ್ತಿದೆ. ಈ ಸಂಶಯಕ್ಕೆ ಕಾರಣ-ಸಂಯಮ- ಸಂಸ್ಕೃತಿ ಇಲ್ಲದ ಮಾತಾಡುವ ಮೂಲಕ ಜನರ ನಜರಿಗೆ ಬರುತ್ತಿರುವ ಸದ್ರಿ ಮಂಡಳಿಯ ಆಡ್ನಾಡಿ ಅಧ್ಯಕ್ಷ ಸಚ್ಚಿದಾನಂದ ಹೆಗಡೆಯಾನೆ ಸಚ್ಚಿಗ್ಗೆ ಎಂಬ ಪಕ್ಕಾ ಮನುವಾದಿ ಬ್ರಾಹ್ಮಣನೇ! ಈ ಸಚ್ಚಿಗ್ಗೆ ಪರ್ಫೆಕ್ಟ್ ಚೆಡ್ಡಿ ಕೇಡರ್; ಆರೆಸ್ಸೆಸ್ ಅಡ್ಡೆಯ ಪಳಗಿದಾತ; ಸಂಘಪರಿವಾರದ ಚಿಂತನ ಚಲುಮೆಯ ಚಮತ್ಕಾರಿಗಳಲ್ಲೊಬ್ಬ.

ಸಚ್ಚಿಗ್ಗೆಗೆ ಬಿಜೆಪಿಯ ಅಧಿಕಾರಸ್ಥ ಬ್ರಾಹ್ಮಣ ಬಳಗ ಮತ್ತು "ಕೇಶವಕೃಪ"ದಲ್ಲಿ ಹಾರ್ಡ್‌ಕೋರ್ ಆಶ್ರಯದಾತರಿದ್ದಾರೆ. ಹಾಗಂತ ಒಳಗೊಳಗೇ ಬತ್ತಿಯಿಡುವ ಕಾರ್ಯಾಚರಣೆಯ ಈ ಚೆಡ್ಡಿ ಮತ ಪ್ರಸಾರಕ ಸಾರ್ವಜನಿಕವಾಗಿ ಕಾಣಿಸಿಕೊಂಡವನಲ್ಲ. ಯಾವಾಗ ಪಾನಸಂಯಮ ಮಂಡಳಿ ಗೂಟದ ಕಾರೇರಿದನೋ ಆಗಲೇ ಸಚ್ಚಿಗ್ಗೆ ಎಂಬ ಸೋಗಲಾಡಿ ಸಂಘಪರಿವಾರಿ ಒಬ್ಬನಿದ್ದಾನೆಂದು ಬಿಜೆಪಿ-ಆರೆಸ್ಸೆಸ್ ಪಡೆಗೆ ಗೊತ್ತಾಗಿದ್ದು!



ಶಿರಸಿ ಮೂಲದ ಸಚ್ಚಿಗ್ಗೆಯಿಂದ ಬಿಜೆಪಿಗೆ ಹಿಂದೆಂದೂ ನಯಾಪೈಸೆ ಪ್ರಯೋಜನ ಆಗಿಲ್ಲ; ಇಂದೂ ಆಗುತ್ತಿಲ್ಲ; ಮುಂದೂ ಈತ ದಂಡಪಿಂಡವೇ. ಹಾಗೆಂಬುದು ಬಿಜೆಪಿಯ ಹಿರಿ-ಮರಿ ಮಂದಿಯ ಒಕ್ಕೊರಲ ಅಳಲು. ಸಚ್ಚಿಗ್ಗೆ ತಲೆ ಕಂಡರೆ ಆತನದೇ ಊರಿನ, ಆತನದೇ ಹವ್ಯಕ ಜಾತಿಯ ಮಂತ್ರಿ ಕಾಗೇರಿ ಮಾಣಿಗೆ ಆಗದು. ಹೀಗಾಗಿ ಈ ಆರೆಸ್ಸೆಸ್ ತಂತ್ರಗಾರ ಕಾಗೇರಿ ಎದುರಾಳಿ ಸಂಸದ ಅನಂತ್ಕುಮಾರ್ ಹೆಗಡೆಯನ್ನು ಬೆಂಬಲಿಸುತ್ತಾನೆ. ಹೋಮ್ ಸ್ಟೇ ದಾಳಿಯಂಥ ಹಿಂದೂತ್ವದ ಕ್ರೌರ್ಯ-ಕಾಮೋನ್ಮಾದಗಳನ್ನು ಪರೋಕ್ಷವಾಗಿ ಬೆಂಬಲಿಸುವ ಅನಾಹುತಕಾರಿ ಅನಂತ್ಕುಮಾರ್ ಒಬ್ಬನ ಬಿಟ್ಟರೆ ಬಿಜೆಪಿಯಲ್ಲಿ ಎಲ್ಲರೂ ಸಚ್ಚಿಗ್ಗೆಯನ್ನು ಪಾನ ಸಂಯಮ ಮಂಡಳಿಯ ಕುರ್ಚಿಯಿಂದ ಎಳೆದು ಹಾಕಲು ಹವಣಿಸುತ್ತಿದ್ದಾರೆ.

ತನ್ನ ಅಡಚಣೆ-ನಿರಾಶ್ರಿತ ಪರಿಸ್ಥಿತಿಗೆ ಪುನರ್ವಸತಿ ಕಲ್ಪಿಸಿದ್ದ ಮಂಡಳಿ "ದಂಧೆ" ಬಿಡಲು ಸಚ್ಚಿಗ್ಗೆಗೆ ಮನಸ್ಸಿಲ್ಲ. ವೈರಿಗಳ ಕಿರಿಕಿರಿಯಿಂದ ಆತನಿಗೀಗ ತನ್ನ ಅಸ್ತಿತ್ವ ತೋರಿಸಿಕೊಳ್ಳುವ-ತಾನೆಷ್ಟು ಬಿಜೆಪಿಗೆ ಹೆಲ್ಪ್‌ಫುಲ್ ಎಂದು ಬಿಂಬಿಸುವ ದರ್ದು ಎದುರಾಗಿದೆ, ಪಾಪ! ಹಾಗಾಗಿ ಸಚ್ಚಿಗ್ಗೆ ಬಹಿರಂಗವಾಗೇ ಆರೆಸ್ಸೆಸ್ ವಿದ್ಯೆಗಳನ್ನೆಲ್ಲ ಪ್ರದರ್ಶಿಸಲು ಶುರು ಮಾಡಿದ್ದಾನೆ. ಕೆಲದಿನಗಳ ಹಿಂದೆ ಶಿರಸಿಯಲ್ಲಿ ಒಂದಿಷ್ಟು ಅಮಾಯಕ ಹವ್ಯಕರನ್ನು ಸೇರಿಸಿ "ಪ್ರತಿಭಟನಾ" ಸಭೆ ನಡೆಸಿದ್ದ. ಶಿರಸಿ ಸೀಮೆಯ ಹವ್ಯಕ ಹುಡುಗಿಯರು ಮಡಿ-ಮೈಲಿಗೆಯ ಹೊಸಿಲು ದಾಟಿ ಸಂಗಾತಿ ಅರಸುತ್ತ ಶೂದ್ರರ ಪಾಲಾಗುತ್ತಿರುವ ಬ್ರಾಹ್ಮಣಿಕೆ ಇಶ್ಯೂ ಸಚ್ಚಿಗ್ಗೆಗೆ ತನ್ನ ಸಂಘಪರಿವಾರ-ಬಿಜೆಪಿ ಸೇವೆ ಜಾಹೀರು ಮಾಡಲು ನೆಪವಾಗಿ ಸಿಕ್ಕಿತ್ತು.

ಅಂತೂ-ಇಂತೂ ತೆರೆಮರೆಯಲ್ಲೇ ನಿಂತು ಹುಡುಗಿಯರ ಪಲಾಯನದಿಂದ ಗೊಂದಲಗೊಂಡಿದ್ದ ಹವ್ಯಕರನ್ನು ಸಂಘಟಿಸಿ ಬೀದಿಗಿಳಿಸಿದ ಸಚ್ಚಿಗ್ಗೆ ಅವರೆದುರು ವೀರಾವೇಷದಿಂದ ಹಿಂದೂತ್ವ ಭಾಷಣ ಬಿಗಿದೇಬಿಟ್ಟರು! "ನಮ್ಮ ಜಾತಿ ಹುಡುಗೀರು ಕಾಣೆಯಾಗಲು ಸಾಬಿಗಳ 'ಲವ್ ಜಿಹಾದ್' ಕಾರಣ. ಬೇಕಂತಲೇ ಸಾಬರ ಮಕ್ಕಳು ಹವ್ಯಕ ಹುಡುಗೀರನ್ನು ಟಾರ್ಗೆಟ್ ಮಾಡಿಕೊಂಡು ಆಟ ಆಡುತ್ತಿದ್ದಾರೆ. ಇಸ್ಲಾಮ್‌ಗೆ ಮತಾಂತರ ಮಾಡೋದೇ ಈ ಸಾಬರ ಮಕ್ಕಳ ಉದ್ದೇಶ. ಶಿರಸಿ ಸೀಮೆಯಿಂದ ನಾಪತ್ತೆಯಾಗಿರುವ ಹವ್ಯಕ ಹುಡುಗೀರಲ್ಲಿ ಹೆಚ್ಚಿನವರು ಸಾಬರ ಹುಡುಗರನ್ನು ಮದುವೆ ಆಗಿದ್ದಾರೆ... ಅಕಟಕಟಾ ಇದು ಬ್ರಾಹ್ಮಣ ಕುಲಕ್ಕೇ ಅವಮಾನ.... ಇನ್ನಾದರೂ ಹೆಣ್ಣು ಹೆತ್ತ ಹವ್ಯಕರು ಎಚ್ಚರದಿಂದಿರಬೇಕು... ಎಚ್ಚರಾ... ಕಟ್ಟೆಚ್ಚರಾ..." ಎಂಬ ಭಜರಂಗಿ ಶೈಲಿಯ ಮಾತುಗಾರಿಕೆ ಸಚ್ಚಿಗ್ಗೆ ಪ್ರದರ್ಶಿಸಿದ್ದರು ಸ್ವಜಾತಿ ಮಂದಿ ಮುಂದೆ!!

ಜನಿವಾರಿಕೆಯ ಮೇಲರಿಮೆ ಮತ್ತು ಸಾಬಿಗಳು-ಶೂದ್ರರ ಬಗೆಗಿನ ಕೀಳು ಭಾವನೆಯಿಂದ ಅಲ್ಲಿ ಸೇರಿದ್ದ ಬಹುತೇಕರಿಗೆ ಸಚ್ಚಿಗ್ಗೆಯ 'ಲವ್ ಜೆಹಾದ್' ಬಡಬಡಿಕೆ ತನ್ನ ಕುರ್ಚಿ ಉಳಿಸಿಕೊಳ್ಳುವ ಹಿಕಮತ್ತೆಂದು ಗೊತ್ತಾಗಲೇ ಇಲ್ಲ, ಪಾಪ! ಇದು ಸ್ಥಳೀಯ ಮಟ್ಟದ ಡ್ಯಾಮೇಜು ಕಂಟ್ರೋಲಿಕೆ ಕುತಂತ್ರವಾಗಿತ್ತು. ಹಾಗೆಯೇ ರಾಜ್ಯಮಟ್ಟದ ಬಿಜೆಪಿ ಮತ್ತು ಆರೆಸ್ಸೆಸ್ ಹಿರೇಮಣಿಗಳನ್ನು ಒಲಿಸಿಕೊಳ್ಳಲು ಮೊನ್ನೆ ಸಚ್ಚಿಗ್ಗೆ ಬೆಂಗಳೂರಲ್ಲಿ ಮತ್ತೊಂದು ಮಸಲತ್ತು ಮಾಡಿದರು. ಪಾನ ಸಂಯಮ ಮಂಡಳಿ ವತಿಯಿಂದ ಅದರ ಈ "ಅಧ್ಯಕ್ಷ" ಸಚ್ಚಿಗ್ಗೆ ಒಂದು "ವಿಕಾರ ಸಂಕಿರಣ" ಹಮ್ಮಿಕೊಂಡಿದ್ದ. ಅದರ ಸಬ್‌ಜೆಕ್ಟ್ ಹೊರನೋಟಕ್ಕೆ ತಮಾಷೆಯಾಗಿ ಕಂಡರೂ ಆಳದಲ್ಲಿ ಹಿಂದೂತ್ವದ ಅಪಾಯ ತುಂಬಿಕೊಂಡಿತ್ತು. "ಮಂಗಳೂರು ಹೋಮ್ ಸ್ಟೇ: ಮದ್ಯ ಹಾಗೂ ಮಾದಕ ವಸ್ತು ಪಾತ್ರ" ಎಂಬುದು ಚರ್ಚೆ ವಸ್ತುವಾಗಿತ್ತು. ಇಲ್ಲಿ ಅಮಾಯಕರ ಮೇಲಾದ ದಾಳಿ-ಮಾನಹರಣ ಬೇಕಂತಲೇ ಮರೆಮಾಚಲಾಗಿತ್ತು. ಹಾಗಾಗಿ ಅಲ್ಲಿ "ದಾಳಿ" ಎಂಬ ಶಬ್ದ ತುಂಬ ವ್ಯವಸ್ಥಿತವಾಗಿ ಬಳಸಿರಲಿಲ್ಲ.

ಸಂಘಪರಿವಾರದ ಸುಳ್ಳನ್ನು ಪದೇಪದೇ ಹೇಳಿ ಸತ್ಯವಾಗಿಸುವ, ಬೇಡದ್ದಕ್ಕೆ ಬಾಯಿ ಬಡಿದುಕೊಂಡು ಜನರನ್ನು ದಿಕ್ಕೆಡಿಸುವ ನೀತಿಯ ಈ "ಸಂಕೀರ್ಣ"ದಲ್ಲಿ ಚೆಡ್ಡಿ ಚಿಂತಕರಾದ "ಸಾಯ್ತಿ" ಚಿದಾನಂದಮೂರ್ತಿ, ಬಾಯಿಬಡುಕಿ ಪ್ರಮೀಳಾ ನೇಸರ್ಗಿಯಂಥವರು ಮಿಂಚಿದ್ದೇ ಮಿಂಚಿದ್ದು. ಅಂಥವರ ದಿವ್ಯ ಸಾನಿಧ್ಯದಲ್ಲಿ ತನ್ನ "ವಿಕಾರ" ಮಂಡನೆ ಮಾಡಿದ ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷ ಸಚ್ಚಿಗ್ಗೆ ಮಂಗಳೂರು ಹೋಮ್ ಸ್ಟೇ ದಾಳಿ ಬಗ್ಗೆ ಲೋಕಕ್ಕೆ ಗೊತ್ತಿರುವ ಸತ್ಯ ತಿರುಚಲು ತುಂಡುಗುಪ್ಪಳ ಹೊಡೆದರು. "ಆ ಹೋಮ್ ಸ್ಟೇನಲ್ಲಿ ನಡೆದಿದ್ದು ರೇವ್ ಪಾರ್ಟಿ.... ಅದು ಬರ್ತ್ ಡೇ ಪಾರ್ಟಿ ಅಲ್ಲವೇ ಅಲ್ಲ..." ಎಂದು ಅಸಲೀ ಅವತಾರ ಅನಾವರಣ ಮಾಡಿಕೊಂಡರು.

ಅಷ್ಟಕ್ಕೇ ಆತನ ಕುತರ್ಕ ನಿಲ್ಲಲಿಲ್ಲ. "ಆ ಪಾರ್ಟಿಯಲ್ಲಿ ಪೊಲೀಸ್ ಅಧಿಕಾರಿಯೊಬ್ಬರ ಮಗಳು ಭಾಗವಹಿಸಿದ್ದರಿಂದ ಬರ್ತ್ ಡೇ ಸಮಾರಂಭವೆಂದು ಬಿಂಬಿಸಲಾಗಿದೆ. ಅಲ್ಲಿ ಮಾದಕ ವಸ್ತು ಸಿಕ್ಕಿತ್ತಾ? ಮಾದಕ ವಸ್ತುವಿದ್ದರೂ ಪೊಲೀಸರು ಪರಿಗಣಿಸಲಿಲ್ಲವಾ?" ಎಂದು ಹಿಡನ್ ಹಿಂದೂತ್ವದ ಅಜೆಂಡಾ ತೆರೆದಿಟ್ಟರು. ಹೋಮ್ ಸ್ಟೇ ದಾಳಿ ನಡೆದಾಗ ಮಂಗಳೂರಿಗೆ ಹೋಗಿದ್ದ ಎಡಿಜಿಪಿ ಬಿಪಿನ್ ಗೋಪಾಲಕೃಷ್ಣರೇ "ಆ ಪಾರ್ಟಿ ಪ್ರದೇಶದಲ್ಲಿ ಬಿಯರ್-ಊಟದ ಪೊಟ್ಟಣ ಬಿಟ್ಟರೆ ಇನ್ನೇನೂ ಇರಲಿಲ್ಲ; ಮಾದಕ ಪದಾರ್ಥ ಯಾವುದೂ ಅಲ್ಲಿರಲಿಲ್ಲ..." ಎಂದು ಸಾರಿಸಾರಿ ಹೇಳಿದ್ದರು. ಬಿಜೆಪಿ ಸರ್ಕಾರದ ನಿಯಂತ್ರಣದಲ್ಲಿರುವ



ಸಚ್ಚಿಗ್ಗೆ

ಹಿರಿಯ ಪೊಲೀಸ್ ಅಧಿಕಾರಿಯೇ ಅದು ರೇವ್ ಪಾರ್ಟಿಯಲ್ಲ ಎಂದ್ಹೇಳಿರುವಾಗ ಈ ಸೋಗಲಾಡಿ ಸಚ್ಚಿಗ್ಗೆ ತನ್ನ ಗೂಟದ ಕಾರು, ಪುಕ್ಕಟೆ ಸಂಬಳ-ಸವಲತ್ತುಗಳ ಹುದ್ದೆ ಕಾಪಾಡಿಕೊಳ್ಳಲು ಬಾಯಿಗೆ ಬಂದಂತೆ ಸುಳ್ಳು ಬೊಗಳಿದ್ದಾನೆಂಬುದು ಎಂಥವರಿಗೂ ಅರ್ಥವಾಗುತ್ತದೆ.

ಸಚ್ಚಿಗ್ಗೆಯ ಮಟ್ಟವೇ ಅಂಥದ್ದು! ಆತನಿಗೆ ಹೆಂಗಸರ ಮಾನ-ಮರ್ಯಾದೆ-ಹಕ್ಕು-ಸ್ವಾತಂತ್ರ್ಯದ ಬಗ್ಗೆ ಎಳ್ಳಷ್ಟೂ ಗೌರವವಿಲ್ಲ. ಸ್ವಂತ ಹೆಂಡತಿಗೇ ಹೊಡೆದು-ಬಡಿದು-ಕೂಡಿಹಾಕಿ-ಮನು ಸಂಹಿತೆ ಕಲಿಸುವ ಈತನ ಧರ್ಮ-ಕರ್ಮ ಶಿರಸಿ ಸೀಮೆಯಲ್ಲಿ ಚಿರಪರಿಚಿತ! ಹಾಗಂತ ಈ "ಬೃಹಸ್ಪತಿ" ಹೇಳೋದು ವೇದಾಂತವಾದರೂ ಹಾಕೋದು ಮಾತ್ರ ಕೊಚ್ಚೆಯಲ್ಲೇ ಗಾಳ. ಒಂದು ಕಾಲದಲ್ಲಿ ಇಂಡಿಯನ್ ಎಕ್ಸ್‌ಪ್ರೆಸ್‌ನ ವರದಿಗಾರನಾಗಿದ್ದ ಈ ಚೆಡ್ಡಿಚತುರ ಆ ನಂತರ ಜನಸಂಘದಲ್ಲಿ ಲೀನವಾಗಿದ್ದ ಜನತಾಪಕ್ಷ ಕಚೇರಿ ಕಾರ್ಯದರ್ಶಿ ಆಗಿದ್ದನಂತೆ. ಅಲ್ಲೇನೂ ಗಿಟ್ಟದಿದ್ದಾಗ ಒಂಥರಾ ತಿರುಬೋಕಿಯಂತಾದ ಈ ವಿಪ್ರೋತ್ತಮ ಎಲ್ಲ ಕಡೆ ಸುತ್ತಾಕಿ ತವರೂರು ಶಿರಸಿಗೇ ಬಂದು ಲ್ಯಾಂಡ್ ಆಗಿದ್ದ. ಅಲ್ಲಿ ಚೆಡ್ಡಿ ಚಿಂತನೆಯ "ಧ್ಯೇಯ ನಿಷ್ಠ ಪತ್ರಕರ್ತ" ಎಂಬ ಚಿತ್ರವಿಚಿತ್ರ ಹೆಸರಿನ ದಿನಪತ್ರಿಕೆ ಪ್ರಾರಂಭಿಸಿದ್ದ. ಶಿರಸಿಯ ಕೆಪಿಸಿಸಿ ಬ್ಯಾಂಕಿನಲ್ಲಿ ಮಾಡಿದ ಸಾಲ ವಿಪರೀತ ಹೊರತು ಪತ್ರಿಕೆ ಬರ್ಕತ್ತಾಗಲಿಲ್ಲ. ಈತನ ಚೆಡ್ಡಿ ತರಲೆ-ತಂತ್ರ ಕಂಡು ಜನ ಆ ಪತ್ರಿಕೆ ಮುಟ್ಟಲಿಕ್ಕೂ ಹೇಸುವಂತಾಗಿತ್ತು. ಆ ಬಳಿಕ ವಾರ ಪತ್ರಿಕೆಯಾಗಿತ್ತು ಆತನ ಸಂಘ ಪರಿವಾರದ ಮುಖವಾಣಿ. ಆಗಲೂ ಅಷ್ಟೇ. ಜನ ಅದನ್ನು ಕೊಂಡು ಓದಲಿಲ್ಲ. ಇತ್ತ ಶಿರಸಿಯ ಹೈಗರ ಕೈಯ್ಯಲ್ಲಿದ್ದ ಕೆಡಿಸಿಸಿ ಬ್ಯಾಂಕಿನಲ್ಲಿ ಮಾಡಿದ್ದ ಸಾಲ ಹೆಚ್ಚುಕಮ್ಮಿ ಮುಕ್ಕಾಲು ಕೋಟಿಗೆ ತಲುಪಿತ್ತು!

ಕೆಡಿಸಿಸಿ ಬ್ಯಾಂಕಿನವರು ಸಾಲ ರಿಕವರಿಗೆ ಬಂದಾಗೆಲ್ಲ ಪೆನ್ನನ್ನೇ ಖಡ್ಗ ಮಾಡಿ ಈ ಪತ್ರಕರ್ತ ಬೆದರಿಸುತ್ತಿದ್ದ "ಆ ಆರ್.ಎನ್. ಶೆಟ್ಟಿ, ಶಿವರಾಮ ಹೆಬ್ಬಾರ, ಯಾವ್ಯಾವುದೋ ಸಕ್ಕರೆ ಫ್ಯಾಕ್ಟರಿಗೆ ಕೋಟಿ-ಕೋಟಿ ವಸೂಲಾಗದ ಸಾಲ ಕೊಟ್ಟದ್ದೀರಿ... ಮೊದಲು ಅದು ತುಂಬಿಸಿಕೊಳ್ಳಿ... ಕಡೇಗೆ ನನ್ನತ್ರ ಬರ್‍ರಿ...." ಎಂದು ಈ ಭೂಪ ರೋಫು ಹಾಕುತ್ತಿದ್ದ. ಕೆಡಿಸಿಸಿ ಬ್ಯಾಂಕಿನ ಅವ್ಯವಹಾರಿ ಆಡಳಿತಗಾರರು ಬಾಲ ಮುದುಡಿಕೊಂಡು ಸುಮ್ಮನಿರುತ್ತಿದ್ದರು. ಇದು ಹೀಗೇ ಹಲವು ವರ್ಷ ವಾಡಿಕೆಯಂತೆ ನಡೆದುಬಂತು. ಆದರೂ ಸಚ್ಚಿಗ್ಗೆಯ ಆರ್ಥಿಕ ಅಡಚಣೆ ನೀಗಲೇ ಇಲ್ಲ. ಹಾಗಾಗಿ ಶಿರಸಿಯ ಪ್ರತಿಷ್ಠಿತ ಎಂಇಎಸ್ ಕಾಲೇಜಿನಲ್ಲಿ ಅಡ್ಡದಾರಿ ಯಿಂದ ಜರ್ನಲಿಸಂ ಉಪನ್ಯಾಸಕನಾಗಿ ನುಸುಳಿಕೊಂಡ. ತನ್ನ ಪತ್ರಕರ್ತಗಿರಿ ಭೀತಿ, ಕಾಲೇಜಿನ ಆಡಳಿತಗಾರರ ದೌರ್ಬಲ್ಯ ಬಳಸಿಕೊಂಡು ಉಪನ್ಯಾಸಕನಾಗಿದ್ದ ಈತನಿಗೆ ಪತ್ರಿಕೋದ್ಯಮ ಕಲಿಸಲು ಬೇಕಾದ ಕನಿಷ್ಠ ಅರ್ಹತೆಯೇ ಇರಲಿಲ್ಲ.

ಈತ ಕಲಿತದ್ದು ಬಿಕಾಂ. ಆದರೆ ತಾನೊಬ್ಬ ಪತ್ರಿಕೋದ್ಯಮದ ಸ್ನಾತಕೋತ್ತರ ಪದವೀಧರನೆಂದು ಈತ ಬಂಡಲ್ ಬಿಟ್ಟಿದ್ದ. ಖೋಟ ಡಿಗ್ರಿ ಸರ್ಟಿಫಿಕೇಟ್ ಕೊಟ್ಟಿದ್ದ. ಶಿರಸಿ ಸೀಮೆಯಲ್ಲಿ ಮಹಾನ್ ಪಂಡಿತನಂತೆ ಪೋಸು ಕೊಟ್ಟುಕೊಂಡೇ ಬಂದಿದ್ದ ಸಚ್ಚಿಗ್ಗೆ ಪೊಕ್ಕು ಪ್ರವೃತ್ತಿಯಾಗಿದ್ದ. ಒಂದು ಶುಭದಿನ ಈತನ ಬಂಡವಾಳ ಬಯಲಾಯ್ತು. ಜರ್ನಲಿಸಂನಲ್ಲಿ ಸ್ನಾತಕೋತ್ತರ ಪದವಿ ಮಾಡಿಕೊಂಡು ಅದೇ ಕಾಲೇಜಿನಲ್ಲಿ ಉಪನ್ಯಾಸಕನಾಗಿದ್ದ ಕನ್ನೇಶ್ ಎಂಬ ಸಮಾಜವಾದಿ ಸಿದ್ಧಾಂತ ಹುಡುಗ ಈತನ ಬಾಸಿಸಮ್ ತಾಳಲಾಗದೇ ತಿರುಗಿಬಿದ್ದಿದ್ದ. ಒಂದು ವಾರ ಪತ್ರಿಕೆಯೂ ನಡೆಸುತ್ತಿದ್ದ ಆ ಹುಡುಗ ಸಚ್ಚಿಗ್ಗೆಯ ಬ್ರಾಹ್ಮಣಿಕೆ ಬಂಡವಾಳ ಮತ್ತು ಆತನ ಪತ್ರಿಕೋದ್ಯಮ ಪದವಿಯ ಅಸಲಿಯತ್ತನ್ನು ಬಹಿರಂಗಪಡಿಸಿಬಿಟ್ಟ. ಅಂದಿನ ಬಿಜೆಪಿ ಶಾಸಕನಾಗಿದ್ದ ವಿವೇಕಾನಂದ ವೈದ್ಯರೂ ಈತನ ಯೋಗ್ಯತೆ ಬಗ್ಗೆ ಕರ್ನಾಟಕ ವಿಶ್ವವಿದ್ಯಾಲಯದಿಂದ ಮಾಹಿತಿ ಕೇಳಿದ್ದರು. ಇದೆಲ್ಲದರಿಂದ ಸಚ್ಚಿಗ್ಗೆಯನ್ನು ಕಾಲೇಜು ಮಂಡಳಿ ಮನೆಗೆ ಕಳಿಸಬೇಕಾಗಿ ಬಂತು.


ಸಚ್ಚಿಗ್ಗೆಯ ಆರ್ಥಿಕ ದಿವಾಳಿಗಿಂತಲೂ ನೈತಿಕ ದಿವಾಳಿಕೋರತನ ಘೋರವಾಗಿತ್ತು! ಯಾವಾಗ ರಾಜ್ಯದಲ್ಲಿ

ಈತ ಕಲಿತದ್ದು ಬಿಕಾಂ. ಆದ...
ತಾನೊಬ್ಬ ಪತ್ರಿಕೋದ್ಯಮದ ಸ್ನಾತಕೋ...
ಪದವೀಧರನೆಂದು ಈತ ಬಂಡ...
ಬಿಟ್ಟಿದ್ದ. ಖೋಟ ಡಿಗ್ರಿ ಸರ್ಟಿಫಿಕೇ...
ಕೊಟ್ಟಿದ್ದ. ಶಿರಸಿ ಸೀಮೆಯಲ್ಲಿ ಮಹಾ...
ಪಂಡಿತನಂತೆ ಪೋಸು ಕೊಟ್ಟುಕೊಂ...
ಬಂದಿದ್ದ ಸಚ್ಚಿಗ್ಗೆ ಪೊಕ್ಕು ಪ್ರವೃತ್ತಿಯಾಗಿ...
ಒಂದು ಶುಭದಿನ ಈತನ ಬಂಡವಾ...
ಬಯಲಾಯ್ತು. ಜರ್ನಲಿಸಂನ...
ಸ್ನಾತಕೋತ್ತರ ಪದವಿ ಮಾಡಿಕೊಂ...
ಅದೇ ಕಾಲೇಜಿನಲ್ಲಿ ಉಪನ್ಯಾಸಕನಾಗಿ...
ಕನ್ನೇಶ್ ಎಂಬ ಸಮಾಜವಾದಿ ಸಿದ್ಧಾಂ...
ಹುಡುಗ ಈತನ ಬಾಸಿಸಮ್...
ತಾಳಲಾಗದೇ ತಿರುಗಿಬಿದ್ದಿದ್ದ. ಒಂ...
ವಾರ ಪತ್ರಿಕೆಯೂ ನಡೆಸುತ್ತಿದ್ದ ಆ ಹುಡು...
ಸಚ್ಚಿಗ್ಗೆಯ ಬ್ರಾಹ್ಮಣಿಕೆ ಬಂಡವಾಳ ಮ...
ಆತನ ಪತ್ರಿಕೋದ್ಯಮ ಪದವಿ...
ಅಸಲಿಯತ್ತನ್ನು ಬಹಿರಂಗಪಡಿಸಿಬಿಟ್ಟ

ಬಿಜೆಪಿ ಅಧಿಕಾರಕ್ಕೆ ಬಂತೋ, ಆಗ ಸಚ್ಚಿಗ್ಗೆಗೆ ಹೋ... ಜೀವ ಮರಳಿ ಬಂತು. ಬಿಜೆಪಿಯಲ್ಲಿ ಮತ್ತು ಆರೆಸ್ಸೆಸ್‌ನ... ಹೈಲೆವೆಲ್ ಕಾಂಟೆಕ್ಟ್‌ಗಳನ್ನು ಬಳಸಿ ಕೊಂಡು ... ಒಂದಿಷ್ಟು ಹಣ ಸಂಗ್ರಹಿಸಿ ಮತ್ತೆ ಚೆಡ್ಡಿ ಚಿಂತನ... ಪೇಪರ್ ಪ್ರಾರಂಭಿಸಿಕೊಂಡ; ನೋಡು ನೋಡುತ್ತಿದ್ದಂತೆ... ಪಾನ ಸಂಯಮ ಮಂಡಳಿಯಲ್ಲಿ ಪುನರ್ವಸತಿಯ... ಕಂಡುಕೊಂಡ. ಪತ್ರಿಕೆ ತಮ್ಮನಿಗೆ ವಹಿಸಿ ತಾನು ಗೂ... ಕಾರಲ್ಲಿ ಓಡಾಡುತ್ತ ಸೆಮಿನಾರು-ಸಂಕಿರಣ ಎನ್ನುತ್ತ ... ಡಿಎ ಕ್ಲೇಮು ಮಾಡಿಕೊಂಡು "ನೆಮ್ಮದಿ" ಕಂಡುಕೊ...

ತಮಾಷೆಯೆಂದರೆ, ತನ್ನ ಕಾಲಿನ ಬುಡದಲ್ಲಿ ... ಕೊಳೆಯುತ್ತಿದ್ದರೂ ಯಾರದೋ ಮನೆಯಲ್ಲಿ ನ... ಹಾರುತ್ತಿರುವ ಬಗ್ಗೆ ಈ ಸಚ್ಚಿಗ್ಗೆ ಪ್ರವಚನ ಬಿಗಿಯುತ್ತ... ತನ್ನ ಜಿಲ್ಲೆಯ ಅಂಕೋಲೆಯಲ್ಲಿ ಗೋವಾದ ಕಳ್ಳ ಹೆಂ... ಹಾವಳಿಯಿಂದ ಜನ ಸಾಯುತ್ತಿದ್ದಾರೆ; ಸಂಸಾರಗಳು ಬ... ಪಾಲಾಗುತ್ತಿವೆ. ಇದನ್ನು ಪಾನಸಂಯಮ ಮಂ... ಅಧ್ಯಕ್ಷನಾಗಿ ತಡೆಗಟ್ಟಬೇಕಿದ್ದ ಸಚ್ಚಿಗ್ಗೆ ಮಂಗಳೂರಿನ ಹೋ... ಸ್ಟೇ ಬರ್ತ್‌ಡೇ ಪಾರ್ಟಿಯನ್ನು ರೇವ್ ಪಾರ್ಟಿಯೆಂ... ಕುಚೋದ್ಯ ನಡೆಸುತ್ತಿದ್ದಾನೆ. ಅತ್ತ ಅಂಕೋಲೆಯ ಜನ... ಅಬಕಾರಿ-ಪೊಲೀಸ್-ಕೊಂಕಣ ರೈಲ್ವೆ ಅಧಿಕಾರಿ... ಸಹಭಾಗಿತ್ವದಲ್ಲೇ ಅಂಕೋಲೆಗೆ ಬರುತ್ತಿರುವ ಗೋವಾ... ಕಳ್ಳ ಹೆಂಡಕ್ಕೆ ಕಡಿವಾಣ ಹಾಕಿ ಎಂದು ಬೀದಿಗಿಳಿ... ಬೊಬ್ಬೆ ಹೊಡೆಯುತ್ತಿದ್ದಾರೆ. ಹೊಣೆಗೇಡಿ ಸಚ್ಚಿಗ್ಗೆ ಇದ್ಯಾವು... ಖಬರ್ ಇಲ್ಲದೆ ಕೋಮು ಕಿತಾಪತಿ ಮಾಡುತ್ತಿದ್ದಾನೆ...

ಇದು ಕುರ್ಚಿ ಉಳಿಸಿಕೊಳ್ಳುವ ಕರಾಮತ್ತಿನಲ್ಲಿ ನಿರ... ಗಿರುವ ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷ ಮಹಾ...




ಭಾವರಿಗೆ ಕೇಳಿಸುತ್ತಿಲ್ಲ. ಅಂಕೋಲೆಯ ಅಮಾಯಕ... ಕಳ್ಳ ಹೆಂಡದ ವಿರುದ್ಧ ಬೊಬ್ಬೆ ಹೊಡೆದರೆ ಸಚ್ಚಿ... ತೊಂದರೆಯೇನಿಲ್ಲ; ಬಿಜೆಪಿಯ ಮಂದಿಯೇ ಈ ಸಚ... ನಮ್ಮ ಪಕ್ಷದ ಕಾರ್ಯಕರ್ತನೇ ಅಲ್ಲ; ಅವನನ್ನು ಗೂಟ... ಕಾರಿಂದ ಇಳಿಸಿ ನಿಷ್ಠಾವಂತರಿಗೆ ಆ ಮಂಡಳಿ ಭಾ... ಕೊಡಿ ಎಂದು ಕೂಗಾಡಿದರೆ ಸಚ್ಚಿಗ್ಗೆಗೆ ನಡುಕ ಶು... ವಾಗುತ್ತದೆ. ವೃತ್ತಿವಂತ ಬಿಜೆಪಿ ಕಾರ್ಯಕರ್ತರ ಬಾ... ಮುಚ್ಚಿಸಲು ಸಚ್ಚಿಗ್ಗೆ ಈಗ ತರಹೇವಾರಿ ಹಿಂದೂತ್ವ... ಆಟ ಆರಂಭಿಸಿದ್ದಾನೆ.

ಈತ ಮದ್ಯಪಾನ ಸಂಯಮ ಮಂಡಳಿಯಿಂ... ತೊಲಗಿದರೆ ಬೊಕ್ಕಸಕ್ಕಾಗುತ್ತಿರುವ ದಂಡವಾದರೂ ತಪ್ಪುತ್ತಿ... ಆದರೆ ಆರೆಸ್ಸೆಸ್ ಸೂತ್ರಧಾರರ ಸಪೋರ್ಟ್‌ನಿಂದ ಕುರ್ಚಿ... ಫೆವಿಕಾಲ್ ಹಾಕಿ ಕುಳಿತಿರುವ ಸಚ್ಚಿಗ್ಗೆ ಅಷ್ಟು ಸುಲಭ... ಅಧಿಕಾರ ಬಿಡುವುದುಂಟಾ? ಕಷ್ಟಕಷ್ಟ.

● ಶುದ್ಧೋದ...



ಅಮೃತಮಹಲ್ ರಾಸುಗಳು ಮೇವಿಲ್ಲದೆ ಅರೆಹೊಟ್ಟೆಯಲ್ಲಿರುವುದು



ಮೂರು ಕಾಲಿನ ಹಸು



ರಾಸುಗಳಿಗೆ ಕುಡಿಯುವ ನೀರಿನ ಟ್ಯಾಂಕ್ ಇದೆ ಆದರೆ ಅದರಲ್ಲಿ ನೀರಿಲ್ಲ

...ಾವಿಗೀಡಾಗುತ್ತಿರುವ ಅಮೃತಮಹಲ್ ರಾಸುಗಳು

...ತಿಹಾಸ ಪ್ರಸಿದ್ಧ ಅಮೃತಮಹಲ್ ತಳಿ ರಾಸುಗಳು ...ಗೆ ಮೇವಿಲ್ಲದೆ ಒಂದೊಂದೇ ನಿಧಾನಗತಿಯಲ್ಲಿ ...ತ್ತಿರುವ ಹೃದಯವಿದ್ರಾವಕ ಪ್ರಕರಣ ಅಜ್ಜಂಪುರದ ...ಮಹಲ್ ತಳಿ ಸಂವರ್ಧನಾ ಕ್ಷೇತ್ರದಲ್ಲಿ ನಡೆಯುತ್ತಿದೆ. ...ನುಷ್ಯ ಒಂದು ಹೊತ್ತಿನ ಊಟ ಸಿಗದಿದ್ದರೆ ಜೀವ ...ಗುವಂತೆ ಚಡಪಡಿಸುತ್ತಾನೆ. ಆದರೆ ಇಲ್ಲಿರುವ ...ಪ್ರಾಣಿಗಳು ವರ್ಷದ 365 ದಿವಸವೂ ಅರೆ ...ಯಲ್ಲಿ ಜೀವ ಹಿಡಿದುಕೊಂಡು ಬದುಕಬೇಕಾದ ...ತಿ ಎದುರಿಸುತ್ತಿವೆ. ಇದಕ್ಕೆಲ್ಲ ನೇರ ಹೊಣೆ ಇಲ್ಲಿನ ...ರಿವರ್ಗ ಎಂದು ಜನ ಬೊಟ್ಟುಮಾಡಿ ...ಸುತ್ತಿದ್ದಾರೆ.

...ಕಾಳಜಿ ಇಲ್ಲದ ಅಧಿಕಾರಿಗಳು

...ಜ್ಜಂಪುರದ ಅಮೃತ್‌ಮಹಲ್ ತಳಿ ಸಂವರ್ಧನಾ ...ದ ಉಪನಿರ್ದೇಶಕ ಡಾ. ಜಿ.ಎಂ.ಸುರೇಶ್ ಮೂಲತಃ ...ದ್ಯರು. ಅವರು ಇಲ್ಲಿಗೆ ಬರುವ ಮೊದಲು ತರೀಕೆರೆ ...ಕು ಪಂಚಾಯತಿಯಲ್ಲಿ ಕಾರ್ಯನಿರ್ವಹಣಾಧಿಕಾರಿ ... ಸೇವೆ ಸಲ್ಲಿಸಿದ್ದರು. ರಜಾದಿನಗಳನ್ನು ಹೊರತುಪಡಿಸಿ, ...ನ ಚಿಕ್ಕಮಗಳೂರಿನಿಂದ ಅಜ್ಜಂಪುರಕ್ಕೆ ಓಡಾಡುವ ...ನ್ನು ಕೇಂದ್ರಕ್ಕೆ ಕರೆದುಕೊಂಡು ಬರಲು ಮತ್ತೆ ಮನೆಗೆ ...ಸಲು ಬೀರೂರಿಗೆ ಸರ್ಕಾರಿ ಜೀಪ್ ಬರಲೇಬೇಕು. ...ಗಿ ಪ್ರತಿನಿತ್ಯ 10 ಲೀಟರ್ ಡೀಸೆಲ್ ಬೇಕು. ...ಹ್ನ ಬಂದರೆ ಬೇಗ ಹೊರಟುಹೋಗುತ್ತಾರೆ.

...ಈ ಕೇಂದ್ರದಲ್ಲಿರುವ ಸಹಾಯಕ ನಿರ್ದೇಶಕ ಡಾ. ...ಾಥ್ ಕೂಡ ಪ್ರತಿದಿನ ಶಿವಮೊಗ್ಗದಿಂದ ತರೀಕೆರೆಗೆ ...ಲ್ಲಿ ಬಂದು, ಅಲ್ಲಿಂದ ಅಜ್ಜಂಪುರಕ್ಕೆ ಬಂದು ಹಲವು ... ಡ್ಯೂಟಿ ಮಾಡಿದರೆ ಸಾಕು, ಮತ್ತೆ ಶಿವಮೊಗ್ಗಕ್ಕೆ ...ು ಆತುರಾತುರವಾಗಿ ಓಡುತ್ತಾರೆ.

...ವರಿಬ್ಬರಿಗೂ ಕಾರ್ಯಕ್ಷೇತ್ರವಾದ ಅಜ್ಜಂಪುರದಲ್ಲಿ ... ಎಲ್ಲಾ ಅನುಕೂಲವಿದ್ದರೂ ಅವರು ಇಲ್ಲಿ ವಾಸಿಸದೆ ...ನ ಬೇರೆ ಕಡೆಯಿಂದ ಓಡಾಡುವುದು ...ತ್‌ಮಹಲ್ ತಳಿ ಸಂವರ್ಧನಾ ಕ್ಷೇತ್ರದ ಬಗ್ಗೆ ಅವರಿಗೆ ...ಷ್ಟು ಕಾಳಜಿ ಇಲ್ಲ ಎಂಬುದನ್ನು ತೋರುತ್ತದೆ.

...ರ್ಕಾರದಿಂದ ಯಥೇಚ್ಛವಾಗಿ ಅಮೃತಮಹಲ್ ...ಗೆ ಹಣ ಹರಿದುಬರುತ್ತಿದ್ದರೂ ಯಾವೊಂದು ...ವೂ ಆಗುತ್ತಿಲ್ಲ. ವಸತಿನಿಲಯದ ರಿಪೇರಿಗೆಂದು, ...ರ್ ಟ್ಯಾಂಕ್ ನಿರ್ಮಾಣಕ್ಕೆಂದು ಹಣ ಬಂದಿದ್ದರೂ ಕೆಲಸಗಳು ಸರಿಯಾಗಿ ನಡೆದಿಲ್ಲ. ಅಧಿಕಾರಿಗಳ ನೂತನ ವಸತಿಗೃಹ ಈಗಾಗಲೇ ಸೋರುತ್ತಿರುವುದು ಇಲ್ಲಿ ನಡೆದಿರುವ ಕಳಪೆ ಕಾಮಗಾರಿಗೆ ಹಿಡಿದ ಕೈಗನ್ನಡಿಯಾಗಿದೆ.

ಅಜ್ಜಂಪುರ ಅಮೃತ್‌ಮಹಲ್ ಕಾಂಪೌಂಡ್ ದುರಸ್ತಿಗೆ ಸರ್ಕಾರದಿಂದ 12 ಲಕ್ಷ ರೂ. ಅನುದಾನ ಬಂದಿದೆ. ಆದರೆ ಇಲ್ಲಿನ ಅಧಿಕಾರಿಗಳು ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕಾಂಪೌಂಡ್ ಮಾಡಿಸುತ್ತೇವೆ ಎಂದು ಸರ್ಕಾರಕ್ಕೆ ತಿಳಿಸಿ, ಆ ಹಣವನ್ನು ಅರಸೀಕೆರೆ ತಾಲೂಕಿನ ರಾಯಸಂದ್ರ ಅಮೃತ್‌ಮಹಲ್ ಕಾವಲಿನ ನೆಲಹಾಸಿಗೆಗೆ ಉಪಯೋಗಿಸಿದ್ದಾರೆ.

ಟೆಂಡರುದಾರರ ಅವ್ಯವಹಾರ

ಪ್ರತಿವರ್ಷ ಟ್ರಾಕ್ಟರ್ ಉಳುಮೆ ಮಾಡಲು, ಸಗಣಿ ತೆಗೆಯಲು, ರಾಸುಗಳನ್ನು ಕಾಯಲು ಪೈಪೋಟಿಯಲ್ಲಿ ಬೆಂಗಳೂರಿನ ಟೆಂಡರ್‌ದಾರರು ಭಾಗವಹಿಸುತ್ತಾರೆ. ಆದರೆ ಟೆಂಡರ್ ಪಡೆದನಂತರ 10 ಜನ ನಿರ್ವಹಿಸುವ ಕೆಲಸವನ್ನು ಕೇವಲ ಎರಡು ಮಂದಿಗೆ ವಹಿಸಿ ಅವರು ಕಾಟಾಚಾರಕ್ಕೆಂಬಂತೆ ತಮ್ಮ ಕೆಲಸವನ್ನು ನಿರ್ವಹಿಸುತ್ತಾರೆ. ಉಳಿದ ಹಣವನ್ನು ಇಲ್ಲಿನ ಅಧಿಕಾರ ವರ್ಗ ಗುಳುಂ ಮಾಡುತ್ತದೆ. ಇದು ಅಧಿಕಾರಿ-ಟೆಂಡರ್‌ದಾರರ ಒಳಒಪ್ಪಂದ ಎಂಬುದು ಯಾರಿಗಾದರೂ ಸುಲಭವಾಗಿ ಅರ್ಥವಾಗುತ್ತದೆ.

ಅಜ್ಜಂಪುರದ ಅಮೃತ್‌ಮಹಲ್ ಕಾವಲಿಗೆ ರಾತ್ರಿ ಪಾಳಯದಲ್ಲಿ ಕೆಲಸ ನಿರ್ವಹಿಸಲು 90 ವರ್ಷದ ವಯೋವೃದ್ಧ ರಾಜಗೋಪಾಲ್ ಎಂಬುವವರನ್ನು ನೇಮಿಸಲಾಗಿದೆ. ಪಾಪ, ರಾಜಗೋಪಾಲ್ ಅವರ ಕಣ್ಣು-ಕಿವಿ ಎರಡೂ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಅವರಿಗೆ ವೇತನವಾಗಿ ಕೊಡುವ ನಾಲ್ಕು ಸಾವಿರ ರೂಪಾಯಿಗಳಲ್ಲಿ ಅವರು ಎರಡು ಸಾವಿರ ಇಟ್ಟುಕೊಂಡು, ಉಳಿದ ಎರಡು ಸಾವಿರ ರೂಪಾಯಿಗಳನ್ನು ಅಧಿಕಾರಿಗಳಿಗೆ ನೀಡುತ್ತಾರಂತೆ. ಅವರಿಗೆ ರಾತ್ರಿ ಮಲಗಲು ಕಚೇರಿಯ ಎರಡು ಟೇಬಲ್‌ಗಳು ಸಾಕು.

ಪರಿಣಾಮವಾಗಿ ಕೇಂದ್ರದ ಬಂದೋಬಸ್ತಿಗಾಗಿ ಸುತ್ತ ಹಾಕಿದ್ದ ತಂತಿ ಬೇಲಿಯನ್ನು ಕಳ್ಳರು ಅಪಹರಿಸಿ ಗುಜರಿಗೆ ಹಾಕಿ ಅದೆಷ್ಟೋ ದಿನಗಳಾಗಿವೆ. ಉಳಿದಿರುವ ಕಂಬಗಳೂ ಪ್ರತಿ ದಿನಕ್ಕೊಂದರಂತೆ ನಾಪತ್ತೆಯಾಗುತ್ತಿವೆ.

ಅತಿಕ್ರಮವಾದ ಭೂಮಿ

ಅಮೃತ್‌ಮಹಲ್ ತಳಿ ರಕ್ಷಣಾ ಕೇಂದ್ರಕ್ಕೆಂದೇ ಬಿಟ್ಟಿರುವ ಕಾವಲಿನ ಭೂಮಿಯನ್ನು ಕೆಲವು ಸ್ಥಳೀಯರು ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿದ್ದಾರೆ. ಮಾತ್ರವಲ್ಲ, ಸುತ್ತ-ಮುತ್ತಲ ರೈತರು ಅಲ್ಲಿ ಬೆಳೆಗಳನ್ನು ಬೆಳೆಯುವುದಲ್ಲದೆ ತಮ್ಮ ರಾಸುಗಳನ್ನು ಇಲ್ಲೇ ನಿರಾತಂಕವಾಗಿ ಮೇಯಿಸುತ್ತಾರೆ. ಆ ಕಾರಣಕ್ಕಾಗಿ ಕೇಂದ್ರದಲ್ಲಿರುವ ರಾಸುಗಳಿಗೆ ಮೇವು ಇಲ್ಲದಂತಾಗಿದೆ.

ಸುತ್ತ-ಮುತ್ತಲ ಹಳ್ಳಿಯ ರೈತರ ರಾಸುಗಳು ಅಮೃತ್‌ಮಹಲ್ ಕಾವಲಿನಲ್ಲಿ ಮೇಯಲು ಬಂದರೆ ಒಂದು ರಾಸಿಗೆ ಒಂದು ದಿವಸಕ್ಕೆ 50 ರೂಪಾಯಿ ದಂಡ ವಿಧಿಸಲು ಅವಕಾಶವಿದೆ. ಆದರೆ ಪ್ರತಿದಿನ ಹೊರಗಿನಿಂದ ಬಂದ ನೂರಾರು ರಾಸುಗಳು ಫಾರಂನಲ್ಲಿ ಮೇಯುತ್ತವೆ. ಆ ರಾಸುಗಳ ಮಾಲೀಕರಿಗೆ ದಂಡ ವಿಧಿಸುವುದಿರಲಿ, ಅವರನ್ನು ಯಾರೂ ಪ್ರಶ್ನಿಸುತ್ತಲೂ ಇಲ್ಲ.

ಅಮೃತ್‌ಮಹಲ್ ಕಾವಲುದಾರರಿಗೆ ಅವರ ನಾಲ್ಕು ರಾಸುಗಳನ್ನು ಮೇಯಿಸಲು ಒಂದಷ್ಟು ಜಾಗ, ಬಿತ್ತನೆ ಬೆಳೆಯಲು ಸ್ವಲ್ಪ ಜಮೀನು ಕೊಡುವುದು ಪದ್ಧತಿ. ಆದರೆ ಕಾವಲುದಾರರಲ್ಲದ ರಾಜಕೀಯ ವ್ಯಕ್ತಿಗಳಿಗೆ ಸಂತೆದಿಬ್ಬ ಫಾರಂನಲ್ಲಿ 15 ಎಕರೆ ಮೆಕ್ಕೆ ಜೋಳ ಹಾಕಿಕೊಳ್ಳಲು ಅವಕಾಶ ನೀಡಲಾಗಿದೆ.

ಪ್ರತಿ ಕಾವಲುದಾರರಿಗೆ ಎರಡರಿಂದ ಆರು ಎಕರೆ ರಾಸುಗಳ ನಿರ್ವಹಣೆಗೆ ಕಾನೂನುಪ್ರಕಾರ ಜಮೀನು ನೀಡಿದರೆ, ಕಾವಲುದಾರರು ಅಕ್ರಮವಾಗಿ 10ರಿಂದ 15 ಎಕರೆ ಉಳುಮೆ ಮಾಡುತ್ತಿದ್ದಾರೆ. ವಾಸ್ತವವಾಗಿ ಹೀಗೆ ಭೂಮಿ ಪಡೆದರು ಕೇಂದ್ರದಲ್ಲಿರುವ ರಾಸುಗಳ ಮೇವಿಗೆ ಬೆಳೆಯನ್ನು ಬೆಳೆಯಬೇಕು. ಆದರೆ ಇವರೆಲ್ಲ ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಿದ್ದಾರೆ.

ಚಿಕ್ಕಜಾಜೂರು ಸಮೀಪ ಕಡೂರುಗಡ್ಡ ಅಮೃತ್‌ಮಹಲ್ ಕಾವಲ್‌ನಲ್ಲಿ ಡೈನಮೇಟ್ ಸಿಡಿಸಿ ಅಕ್ರಮ ಕಲ್ಲು ಗಣಿಗಾರಿಕೆ ಮಾಡಲಾಗುತ್ತಿದೆ. ಚೌಳಹಿರಿಯೂರು ಸಮೀಪ ಯಗಟಿ ತೊರೆಯಲ್ಲಿ ಅಕ್ರಮ ಮರಳು ದಂಧೆಯನ್ನು ಕಾವಲುದಾರರು ಮಾಡುತ್ತಿದ್ದಾರೆ.

ಹಾಗೆಯೇ ಕೇಂದ್ರದ ದಾಖಲೆಗಳಲ್ಲಿ "ಕೇಂದ್ರಕ್ಕೆ ಸೇರಿದ 59 ಕಾವಲಿನ ಸಾವಿರಾರು ಎಕರೆ ಪ್ರದೇಶದಲ್ಲಿ ಉಳುಮೆ ಮಾಡಿ, ಬಿತ್ತನೆ ಬೀಜ ಬಿತ್ತಿದ್ದೇವೆ, ಅಲ್ಲಲ್ಲ ಬೆಳೆ ಬಂದಿದೆ" ಎಂದು ನಮೂದಾಗಿದ್ದರೂ ವಾಸ್ತವವಾಗಿ ಒಂದು ಎಕರೆಯಷ್ಟು ಪ್ರದೇಶದಲ್ಲೂ ಬೆಳೆಯನ್ನು ಬೆಳೆದಿರುವುದಿಲ್ಲ. ಬಾಸೂರು ಅಮೃತ್‌ಮಹಲ್ ಫಾರಂನಲ್ಲಿ 45 ಎಕರೆ ಬಿತ್ತನೆ ಬೀಜ ಬಿತ್ತಿರುವುದಾಗಿ ದಾಖಲೆಯಲ್ಲಿ ನಮೂದಾಗಿದ್ದರೂ, ಕೇವಲ 10 ಎಕರೆಯಲ್ಲಿ ಬಿತ್ತನೆ ಬೀಜ ಹಾಕಿದ್ದಾರೆ. ಆದ್ದರಿಂದ ಈ ಪ್ರದೇಶದಲ್ಲಿ ಸಹಜವಾಗಿ ಬೆಳೆಯುವ ಹುಲ್ಲನ್ನು ಅಮೃತಮಹಲ್ ರಾಸುಗಳು ತಿಂದು ಬದುಕುವ ಪರಿಸ್ಥಿತಿ ಎದುರಾಗಿದೆ.

ಇತ್ತೀಚೆಗೆ ಅಮೃತ್‌ಮಹಲ್‌ನಲ್ಲಿನ ರಾಸುಗಳಿಗೆ ನೀರು ಮತ್ತು ಮೇವಿನ ಕೊರತೆ ಉಂಟಾದಾಗ ರಾಸುಗಳಿಗೆ ಮೊದಲೇ ಸಿದ್ಧಪಡಿಸಿದ್ದ ಆಹಾರವನ್ನು ತಂದು ಕೊಡಲಾಗಿತ್ತು. ಆದರೆ ಆ ಆಹಾರಕ್ಕೆ ಫಂಗಸ್ ಬಂದಿದ್ದರಿಂದ ಅದನ್ನು ತಿಂದ ರಾಸುಗಳು ಅನಾರೋಗ್ಯದಿಂದ ಒಂದೊಂದಾಗಿ ಸಾಯುತ್ತಿವೆ.

ಆದಾಯ ತರುವ ರಾಸುಗಳು

ಇಷ್ಟೆಲ್ಲಾ ಅವ್ಯವಹಾರಗಳು ಇದ್ದರೂ, ವರ್ಷಕ್ಕೊಮ್ಮೆ ರಾಸುಗಳು ಹರಾಜಿನಲ್ಲಿ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿ ಲಾಭ ಬರುತ್ತಿದೆ. ಸದ್ಯ ಅಮೃತ್‌ಮಹಲ್‌ನಲ್ಲಿ 350 ರಾಸುಗಳಿದ್ದು ಇವುಗಳಲ್ಲಿ 40 ಗಂಡು ರಾಸುಗಳಿವೆ. ಇತ್ತೀಚೆಗೆ ನಡೆದ ರಾಸುಗಳ ಹರಾಜಿನಲ್ಲಿ ಎರಡು ವರ್ಷದ ಒಂದು ಅಮೃತ್‌ಮಹಲ್ ಹೋರಿ ಕರು 1.38 ಲಕ್ಷ ರೂಪಾಯಿಗೆ ಮಾರಾಟವಾಗಿದೆ. ಅರಸೀಕೆರೆ ತಾಲೂಕಿನ ಕಾಡಯ್ಯನ ಕೊಪ್ಪಲು ನಂಜುಂಡೇಗೌಡ ಎಂಬುವವರು ಒಂದು ಜೊತೆ ರಾಸುಗಳನ್ನು 1,37,715 ರೂ.ಗೆ ಹರಾಜಿನಲ್ಲಿ ಕೊಂಡುಕೊಂಡಿದ್ದರು.

ಇಂತಹ ಆದಾಯ ತರುವ ಮತ್ತು ಇತಿಹಾಸ ಪ್ರಸಿದ್ಧ ತಳಿಗಳನ್ನು ರಕ್ಷಿಸಲು ಈ ಕೇಂದ್ರಕ್ಕೆ ಓರ್ವ ದಕ್ಷ, ಅನುಭವಿ ಮತ್ತು ನಿಸ್ವಾರ್ಥ ಅಧಿಕಾರಿಯ ಅಗತ್ಯವಿದೆ. ಅಂತಹವರೊಬ್ಬರು ಬಂದರೆ ಅಮೃತ್‌ಮಹಲ್ ನಿರ್ವಹಣೆ ಮಾಡುತ್ತಿರುವ ಟೆಂಡರ್‌ದಾರರನ್ನು ಹದ್ದುಬಸ್ತಿನಲ್ಲಿಟ್ಟು, ಕೇಂದ್ರಕ್ಕೆ ಸೇರಿದ ಭೂಮಿಯನ್ನು ಅತಿಕ್ರಮಣ ಮಾಡಿಕೊಂಡಿರುವವರನ್ನು ಎಚ್ಚರಿಸಿ ಕೇಂದ್ರಕ್ಕೆ ನೆರವಾಗುವಂತೆ ಮಾಡುತ್ತಾರೆ. ಆಗ ಈ ಕೇಂದ್ರ ನೆಟ್ಟಗಾಗುತ್ತದೆ ಎಂಬುದರ ಬಗ್ಗೆ ಯಾವುದೇ ಅನುಮಾನವಿಲ್ಲ.

ಪಶು ಸಂಗೋಪನಾ ಸಚಿವರು, ಶಾಸಕ ಡಿ.ಎಸ್.ಸುರೇಶ್ ಮತ್ತು 'ಅಮೃತ್‌ಮಹಲ್ ಕಾವಲು ಉಳಿಸಿ ಹೋರಾಟ ಸಮಿತಿ'ಯವರು ಇತ್ತಕಡೆ ಗಮನಹರಿಸಬೇಕಿದೆ.

● ವರದಿಗಾರ

'ನೆಮ್ಮದಿ'ಗೆ ಜೀವ ಬಲಿ



...ಕೆಡು ಭ್ರಷ್ಟ ಬಿಜೆಪಿ ಸರಕಾರ ಜಾರಿಗೆ ತರುತ್ತಿರುವ ...ಜನೆಗಳು ಜನರ ನೆಮ್ಮದಿಯನ್ನೇ ಬಲಿ ತೆಗೆದು ...ತ್ತಿವೆ. ತಲೆ ಇಲ್ಲದವರ ಮಾತು ಕೇಳಿ ಬಿಡ್ಡಿ ಸರ್ಕಾರ ...ಚಾಲ್ತಿಗೆ ತಂದಿರುವ ಯೋಜನೆಗಳು ಸಾಮಾನ್ಯ ಜನರಿಗೆ ...ನಾಗುವ ಬದಲು ಮಾರಕವಾಗಿದೆ. ಇದಕ್ಕೆ ಉದಾಹರಣೆ ...ನ್ನೆ ಆಗಸ್ಟ್ 6ರಂದು ಸರ್ಕಾರದ 'ನೆಮ್ಮದಿ' ಎಂಬ ...ಯೋಜನೆಯಿಂದಾಗಿ ಒಂದು ಜೀವ ನೆಮ್ಮದಿ ಪಡೆಯುವ ...ಬದಲು ತನ್ನ ಜೀವವನ್ನೇ ಕಳೆದುಕೊಂಡಿರುವುದು.

... ಆಡಳಿತದಲ್ಲಿ ಭಾರೀ ಬದಲಾವಣೆ ತರುತ್ತೇನೆಂದು ...ತ್ತಿದ್ದ ಯಡಿಯೂರಪ್ಪ ಅಧಿಕಾರದಲ್ಲಿದ್ದಾಗ ಕಂದಾಯ ...ಇಲಾಖೆಯು ಜನರಿಗೆ ನೀಡುವ ಸುಮಾರು 32 ...ದಾಖಲೆಗಳನ್ನು ವಿತರಿಸಲು 'ನೆಮ್ಮದಿ' ಎಂಬ ...ಯೋಜನೆಯನ್ನು ಜಾರಿಗೆ ತರಲಾಗಿತ್ತು. ಈ ಯೋಜನೆಯನ್ನು ...ಸರ್ಕಾರ ವಹಿಸಿಕೊಳ್ಳದೆ ಮೈಸೂರ್ ಐಟಿ ಸೆಲ್ಯೂಷನ್ಸ್ ...ಎಂಬ ಖಾಸಗಿ ಕಂಪನಿಗೆ ವಹಿಸಲಾಗಿತ್ತು.

ಸರ್ಕಾರ ಮತ್ತು ಮೈಸೂರ್ ಕಂಪನಿಯ ನಡುವಿನ ಕರಾರಿನಂತೆ ಆ ಖಾಸಗಿ ಕಂಪನಿಯು ಹೋಬಳಿಗೊಂದರಂತೆ ಅಂದರೆ ಕಂದಾಯ ವೃತ್ತಕ್ಕೊಂದರಂತೆ 'ನೆಮ್ಮದಿ' ಕೇಂದ್ರಗಳನ್ನು ತೆರೆಯಬೇಕು. ಪ್ರತಿ ಕಂದಾಯ ವೃತ್ತದಲ್ಲೂ 25 ರಿಂದ 30 ಊರುಗಳು ಬರುತ್ತವೆ. ಅಂದರೆ ಅಷ್ಟೂ ಊರಿನ ಜನರು ವಿವಿಧ ರೀತಿಯ ದಾಖಲೆ ಪ್ರಮಾಣಪತ್ರಗಳನ್ನು ಪಡೆಯಲು ಈ ಕೇಂದ್ರಗಳಿಗೆ ಹೋಗಬೇಕು. ಪ್ರತಿ ದಾಖಲೆಗೆ ಜನ 15 ರೂಪಾಯಿಗಳನ್ನು ನೀಡಿದರೆ ಅದರಲ್ಲಿ ಬರೋಬ್ಬರಿ ಹನ್ನೆರಡು ರೂಪಾಯಿಗಳು ಮೈಸೂರ್ ಕಂಪನಿಯ ಮಾಲೀಕರ ಜೇಬು ಸೇರುತ್ತಿದೆ.

ಮೈಸೂರ್ ಕಂಪನಿಯು ಮೊದಮೊದಲು ಎಲ್ಲ ಕೇಂದ್ರಗಳಲ್ಲಿ ಹೆಚ್ಚಿನ ಸಿಬ್ಬಂದಿ ಮತ್ತು ಕಂಪ್ಯೂಟರ್‌ಗಳ ವ್ಯವಸ್ಥೆಯನ್ನು ಮಾಡಿತ್ತಾದರೂ ಆನಂತರ ಹೆಚ್ಚಿನ ಲಾಭಗಳಿಕೆಯ ಉದ್ದೇಶದಿಂದ ಪ್ರತಿ ಕೇಂದ್ರದಲ್ಲಿ ಒಂದೇ ಕಂಪ್ಯೂಟರ್ ಹಾಗೂ ಒಬ್ಬಿಬ್ಬರು ಸಿಬ್ಬಂದಿಯನ್ನು ಮಾತ್ರ ಉಳಿಸಿಕೊಂಡಿದೆ. ಇದರಿಂದಾಗಿ ಪ್ರತಿ ಕೇಂದ್ರದ ಮುಂದೆ ನೂರಾರು ಜನ ದಿನಗಟ್ಟಲೇ ಸರದಿಯಲ್ಲಿ ನಿಂತು ಕಾಯುವುದು ಸಾಮಾನ್ಯವಾಗಿದೆ. ಪರಿಣಾಮವಾಗಿ 'ನೆಮ್ಮದಿ' ಹೆಸರಿನ ಈ ಯೋಜನೆ ಈಗ ಅದ್ಯಾವ ಪರಿ ಜನರ ನೆಮ್ಮದಿಯನ್ನು ನುಂಗಿ ಹಾಕಿದೆ ಎಂದರೆ 'ನೆಮ್ಮದಿ'ಯ ಹೆಸರು ಕೇಳಿದರೆ ಸಾಕು ಹಳ್ಳಿಯ ಮುಗ್ಧರು, ನಗರದ ಸಾಮಾನ್ಯ ಜನರು ಬೆಚ್ಚಿ ಬೀಳುತ್ತಿದ್ದಾರೆ.

ಕಳೆದ ಆಗಸ್ಟ್ 6ರಂದು ಆದಾಯ ಪ್ರಮಾಣಪತ್ರ ಪಡೆಯಲು ಜಮುಖಂಡಿಯ 'ನೆಮ್ಮದಿ' ಕೇಂದ್ರದ ಮುಂದೆ ಹೀಗೆ ಸರದಿಯಲ್ಲಿ ನಿಂತಿದ್ದ ಗಂಗೂಬಾಯಿ ಸಿದ್ದು ಚವ್ಹಾಣ ಎಂಬ ಮಹಿಳೆಯೊಬ್ಬರು ಸ್ಥಳದಲ್ಲೇ ಕುಸಿದು ಬಿದ್ದು ತಮ್ಮ ಪ್ರಾಣವನ್ನೇ ಕಳೆದುಕೊಂಡರು.

ರೇಷನ್‌ಕಾರ್ಡ್ ಸುತ್ತ ಸರ್ಕಾರ ಎಬ್ಬಿಸಿರುವ ಗೊಂದಲದಿಂದಾಗಿ ತನಗೆ ಪಡಿತರ ಚೀಟಿಯಿಂದ ಸಿಗುವ ತುತ್ತು ಕೂಳು ಕೂಡ ಕೈತಪ್ಪಿ ಹೋದೀತೆಂಬ ಭಯದಿಂದ ಗಂಗೂಬಾಯಿ ಅವರು ಬೆಳಗಿನ ಜಾವ ನಾಲ್ಕು ಗಂಟೆಗೇ ಆ ಕೇಂದ್ರದ ಮುಂದೆ ಹಾಜರಾಗಿದ್ದರು. ಆದರೆ ಆಕೆಗಿಂತ ಮುನ್ನ ನೂರಾರು ಜನರು ಆಗಲೇ ಸಾಲುಗಟ್ಟಿ ನಿಂತಿದ್ದರು. ಬೆಳಕು ಮೂಡುವ ಮುನ್ನ ಗಂಗೂಬಾಯಿ ಬಂದಿದ್ದರೂ ಆಕೆಯ ಸರದಿ ಬಂದದ್ದು 11.30ಕ್ಕೆ ಅಂದರೆ ಈ 'ನೆಮ್ಮದಿ' ಕೇಂದ್ರಗಳ ಮುಂದೆ ಇರುವ ಭಯಾನಕ ಸ್ಥಿತಿ ಅರ್ಥವಾದೀತು. ಸುಮಾರು 11 ಗಂಟೆವರೆಗೂ ಸಾಲಿನಲ್ಲಿ ನಿಂತಿದ್ದ 60 ರ ಬಡವಿ ಗಂಗೂಬಾಯಿಗೆ ಆಗಲೇ ಒಂದೆರಡು ಬಾರಿ ತಲೆಸುತ್ತು ಬಂದು ಆಕೆ ಅಲ್ಲೇ ಕುಸಿದು ಬಿದ್ದಿದ್ದರು. ಸಾಲಿನಲ್ಲಿ ನಿಲ್ಲಬೇಡಿ, ಮನೆಗೆ ವಾಪಸ್ ಹೋಗಿ ಎಂದು ಅಲ್ಲಿದ್ದ ಜನ ಎಷ್ಟೇ ಒತ್ತಾಯಿಸಿದರೂ ಅದಕ್ಕೆ ಒಪ್ಪದ ಗಂಗೂಬಾಯಿ "ಮತ್ತೆ ಪಾಳೀ ಬರಬೇಕಂದ್ರ ವಾರಗಟ್ಟಲೇ ಬಂದು ನಿಲ್ಲಬೇಕಾಗತೈತಿ. ಈಗ ಪಾಳೀ ಬಂದೈತಿ, ತಗೊಂಡ ಹೋಗ್ತನ" ಎಂದು ಅಲ್ಲೇ ನಿಂತರು. ಕೊನೆಗೂ ಆಕೆ ನಿಲ್ಲಲಾರದೆ ಕುಸಿದು ಬಿದ್ದರು. ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವಷ್ಟರಲ್ಲಿ ಅವರ ಪ್ರಾಣಪಕ್ಷಿ ಹಾರಿಹೋಗಿತ್ತು.

ಹಾಗೇ ನೋಡಿದರೆ ಈ ಕುಟುಂಬಕ್ಕೆ ದುರಂತಗಳು ಹೊಸದೇನೂ ಅಲ್ಲ. ಈ ಗಂಗೂಬಾಯಿಯ ಗಂಡ ತೀರಿಕೊಂಡು ಹಲವು ವರ್ಷಗಳು ಕಳೆದಿವೆ. ಗಂಡ ತೀರಿಕೊಂಡ ನಂತರ ಇದ್ದೊಬ್ಬ ಮಗ ಸಂಜು ಮತ್ತು ಸೊಸೆ ಜಯಶ್ರೀ ಜೊತೆ ಗಂಗೂಬಾಯಿ ಕೂಲಿನಾಲಿ ಮಾಡಿ ಬದುಕುತ್ತಿದ್ದರು. ಆದರೆ ವಿಧಿ ಆಟ ಬೇರೆಯೇ ಇತ್ತು. 2004ರಲ್ಲಿ 32 ರ ಮಗ ಸಂಜು ಅನಾರೋಗ್ಯದಿಂದ ಹಾಸಿಗೆ ಹಿಡಿದ. ಆಗ ತನ್ನ ಮಗನನ್ನು ಉಳಿಸಿಕೊಳ್ಳಲು ಗಂಗೂಬಾಯಿ ಮಾಡಿದ ಎಲ್ಲಾ ಹೋರಾಟಗಳು ವಿಫಲವಾಗಿ ಸಂಜು ಕೂಡ ಇಲ್ಲವಾದ.

2004ರಿಂದ ಸೊಸೆ ಹಾಗೂ ಮೊಮ್ಮಕ್ಕಳನ್ನು ಕಟ್ಟಿಕೊಂಡು ಕೂಲಿನಾಲಿ ಮಾಡಿ ಬದುಕು ಸಾಗಿಸುತ್ತಿದ್ದ ಗಂಗೂಬಾಯಿ ಕೂಡಾ ಈಗ ಸರಕಾರದ 'ನೆಮ್ಮದಿ'ಗೆ ಬಲಿಯಾಗಿ ಹೋಗಿದ್ದಾಳೆ.

'ನೆಮ್ಮದಿ' ಕೇಂದ್ರದಿಂದಾಗಿ ಗಂಗೂಬಾಯಿ ತನ್ನ ಪ್ರಾಣವನ್ನೇ ಕಳೆದುಕೊಂಡಿದ್ದರೂ ಇಲ್ಲಿನ ಶಾಸಕ ಶ್ರೀಕಾಂತ ಕುಲಕರ್ಣಿಯಾಗಲಿ, ಅವರ ಸರಕಾರದ ಯಾವ ಅಧಿಕಾರಗಳಾಗಲಿ ಗಂಗೂಬಾಯಿಯ ಮನೆಗೆ ಭೇಟಿ ನೀಡಿ ಸಾಂತ್ವನ ಹೇಳುವ ಗೋಜಿಗೆ ಹೋಗಿಲ್ಲ. ಇದು ಬಿಜೆಪಿ ಸರ್ಕಾರ ಹಾಗು ಅದರ ಶಾಸಕರು ಅದೆಷ್ಟು 'ಬಡವರ ಪರ' ಎಂಬುದನ್ನು ಮತ್ತೊಮ್ಮೆ ರುಜುವಾತುಪಡಿಸಿದೆ.


ಬಿಜೆಪಿ ಸರ್ಕಾರ ಜಾರಿಗೆ ತಂದ 'ನೆಮ್ಮದಿ' ಯೋಜನೆಯಿಂದಾಗಿ ಗಂಗೂಬಾಯಿ ಸಾವನ್ನಪ್ಪಿದ್ದಾರೆ. ಅವರ ಸೊಸೆ ಜಯಶ್ರೀ ಹಾಗೂ ಮೊಮ್ಮಕ್ಕಳು ಅನಾಥರಾಗಿದ್ದಾರೆ. ಭವಿಷ್ಯದ ಬಗ್ಗೆ ಆತಂಕಗೊಂಡಿದ್ದಾರೆ.

ಕಡು ಭ್ರಷ್ಟ, ಬಡಜನ ವಿರೋಧಿ ಬಿಜೆಪಿ ಸರಕಾರಕ್ಕೆ ಇನ್ನೆಷ್ಟು ಜನ ಯಾವ ಯಾವ ರೀತಿಯಲ್ಲಿ ಬಲಿಯಾಗಬೇಕಿದೆಯೊ?

● ಮಹಾಲಿಂಗಪ್ಪ ಆಲಬಾಳ

ನಾಡಹಬ್ಬಕ್ಕೆ ಫ್ಯಾಸಿಸ್ಟರ ಪೌರೋಹಿತ್ಯವೇ?

ಈ ವರ್ಷದ ಮೈಸೂರು ದಸರಾ ಉತ್ಸವದ ಉದ್ಘಾಟನೆಗೆ ಎಸ್.ಎಲ್.ಭೈರಪ್ಪ ಅವರನ್ನು ಆಹ್ವಾನಿಸಲು ರಾಜ್ಯ ಸರಕಾರ ನಿರ್ಧರಿಸಿರುವುದು, ರಾಜ್ಯದ ಮುಸ್ಲಿಮರು, ಕ್ರೈಸ್ತರು, ಮಹಿಳೆಯರು ಹಾಗೂ ದಲಿತರಿಗೆ ಮಾತ್ರವಲ್ಲ ಸಮಾನತೆ, ಸಹಬಾಳ್ವೆ ಮತ್ತು ಪ್ರಜಾಪ್ರಭುತ್ವಗಳಲ್ಲಿ ನಂಬಿಕೆ ಇರಿಸಿದ ಎಲ್ಲ ಪ್ರಜೆಗಳಿಗೂ ಮಾಡಿದ ಅವಮಾನ.



ದಸರಾ ಹಬ್ಬದ ಸಾರ್ವಜನಿಕ ಆಚರಣೆಯೇ ಮೈಸೂರಿನ ಅರಮನೆ ಸಂಸ್ಕೃತಿಯ ಒಂದು ಪಳೆಯುಳಿಕೆ. ನಾಟಕ ಸಿನಿಮಾಗಳಲ್ಲಿ ಮಾತ್ರ ನೋಡ ಸಿಗುವ ರೇಷ್ಮೆ ಕಿಂಕಾಪಿನ ಪೋಷಾಕು ಧರಿಸಿ ಅರಸರು ಆನೆಯ ಮೇಲೆ ಅಂಬಾರಿಯಲ್ಲಿ ಕೂತು ಜಂಬೂ ಸವಾರಿ ಮಾಡುವ ಈ ಹಬ್ಬ ಅರಸರ ಕಾಲದಲ್ಲೇ ಹಾಸ್ಯಪ್ರಜ್ಞೆ ಇದ್ದವರಿಗೆ ಹಾಸ್ಯಾಸ್ಪದವಾಗಿಯೂ, ಸಮಾನತೆಯನ್ನು ಎತ್ತಿ ಹಿಡಿಯುವವರಿಗೆ ಪಾಳೆಯಗಾರೀ ಸಂಸ್ಕೃತಿಯ ವೈಭವೀಕರಣದಂತೆಯೂ ಕಂಡಿತ್ತು. ಮೈಸೂರಿನ ಸಮಾಜವಾದಿಗಳಿಗಂತೂ ಇದನ್ನು ಪ್ರತಿಭಟಿಸಿ ಪೋಲೀಸರಿಂದ ಏಟು ತಿನ್ನುವುದು ಅಭ್ಯಾಸವೇ ಆಗಿಹೋಗಿತ್ತು. ಈಗ ದಸರಾ ಉತ್ಸವದ ಉಸ್ತುವಾರಿಯನ್ನು ಅರಸರಿಂದ ಸರಕಾರವೇ ಕೈಗೆತ್ತಿಕೊಂಡಿದೆ. ಜನರಿಗೆ ಬದುಕಿನ ಕನಿಷ್ಠ ಅಗತ್ಯಗಳನ್ನು ಪೂರೈಸುವ ತನ್ನ ಜವಾಬ್ದಾರಿಯಿಂದ ಸಹ ಕಳಚಿಕೊಂಡಿರುವ ಸರಕಾರ ದಸರಾ ಉತ್ಸವದಂತಹ ಕಾರ್ಯಕ್ರಮಗಳನ್ನು ನಿರ್ವಹಿಸುವುದು ತನ್ನ ಕರ್ತವ್ಯ ಎಂದು ಭಾವಿಸಿರುವುದೇ ಒಂದು ವಿಪರ್ಯಾಸ. ಅಧಿಕಾರಿಗಳಿಗೆ ದುಡ್ಡು ಹೊಡೆಯಲು ಇದೂ ಒಂದು ಅವಕಾಶ ಎಂಬುದನ್ನು ಹೊರತುಪಡಿಸಿ ಬೇರೆ ಯಾವ ಕಾರಣವೂ ಈ ನಿರ್ಧಾರದ ಹಿಂದೆ ಇರಲು ಸಾಧ್ಯವಿಲ್ಲ. ರಾಜ್ಯ ಸರಕಾರವೇ ಈ ಉತ್ಸವ ನಡೆಸತೊಡಗಿದ ಮೇಲೆ ಆಗಿರುವ ಒಂದೇ ಒಂದು ಬದಲಾವಣೆ ಎಂದರೆ ಜಂಬೂ ಸವಾರಿಯಲ್ಲಿ ಆನೆಯ ಮೇಲೆ ಅರಸರ ಬದಲು ಚಾಮುಂಡೇಶ್ವರಿ ವಿಗ್ರಹವನ್ನು ಒಯ್ಯಲಾಗುತ್ತದೆ. ಚಾಮುಂಡೇಶ್ವರಿ ಈ ರಾಜ್ಯದ ಎಲ್ಲಾ ಪ್ರಜೆಗಳ ಆರಾಧ್ಯದೈವವಲ್ಲವಾದರೂ ಪ್ರತಿಷ್ಠಿತ ವರ್ಗಗಳ ಸಾಂಸ್ಕೃತಿಕ ಯಜಮಾನಿಕೆಯ ಒಂದು ವರಸೆಯಾಗಿ ದಸರಾ ಹಬ್ಬಕ್ಕೆ 'ನಾಡಹಬ್ಬ' ಎಂಬ ನಾಮಕರಣವೂ ನಡೆದಿದೆ. ನಾಡಹಬ್ಬ ಎಂಬ ಶಬ್ದ ಸೂಚಿಸುವ ಎಲ್ಲ ಜಾತಿಮತಗಳವರ ಒಳಗೊಳ್ಳುವಿಕೆ ದಸರಾದಲ್ಲಿ ಯಾವತ್ತೂ ಇರಲಿಲ್ಲ. ಅದು ಹಾಲೀ ಸರಕಾರದ ಕಾರ್ಯ ವಿಧಾನವೂ ಅಲ್ಲ; ಆದರ್ಶವೂ ಅಲ್ಲ. ಈಗ ಈ ಹಬ್ಬದ ಉದ್ಘಾಟನೆಗೆ ಭೈರಪ್ಪನವರನ್ನು ಕರೆದು ಸರಕಾರ ಮೊದಲೇ ಸೋಗಲಾಡಿಯಾಗಿದ್ದ ಆ ಹೆಸರಿಗೆ ಮಸಿಯನ್ನೂ ಬಳಿದಿದೆ.

ಈ ಸಂದರ್ಭದಲ್ಲಿ ತಮ್ಮ ಬರವಣಿಗೆ ಮುಖಾಂತರ ಹಿಂದುತ್ವದ ಫ್ಯಾಸಿಸ್ಟ್ ಸಿದ್ಧಾಂತದ ಪ್ರಚಾರಕ್ಕೆ ಭೈರಪ್ಪ ಸಲ್ಲಿಸಿದ ಸೇವೆಯ ಪ್ರವರ ಅಷ್ಟೂ ಹೇಳಬೇಕಾದ ಅವಶ್ಯಕತೆ ಇಲ್ಲ; ಅದು ಸ್ವಲ್ಪದರಲ್ಲಿ ಹೇಳಿಮುಗಿಸುವಂತಹದ್ದೂ ಅಲ್ಲ. ಸಾಹಿತ್ಯದ ದಿರುಸು ತೊಟ್ಟ, ಅವರ ಕೋಮುದ್ವೇಷದ ಅಪಪ್ರಚಾರಕ್ಕೆ 'ಆವರಣ' ಎಂಬ ಕಾದಂಬರಿಯ ಒಂದು ಉದಾಹರಣೆಯೇ ಧಾರಾಳ ಸಾಕು. 2007ರಲ್ಲಿ ಪ್ರಕಟವಾದ ಈ ಕಾದಂಬರಿಯಲ್ಲಿ ಭೈರಪ್ಪ ಈ ದೇಶದ ಮುಸ್ಲಿಮ್ ಸಮುದಾಯವೇ ಸಾರಾಸಗಟಾಗಿ ವಿದ್ರೋಹಿ ಮಾತ್ರವಲ್ಲ, ವಿಕೃತಕಾಮಿ ಮತ್ತು ಹಿಂಸಾವಿನೋದಿ ಎಂಬಂತೆ ಚಿತ್ರಿಸಿದ್ದರು. ಆ ಕಾದಂಬರಿ ಜನಪ್ರಿಯವಾಯಿತು; ಆದರೆ ಹಿಂದೂಗಳಲ್ಲೇ ದೊಡ್ಡ ಸಂಖ್ಯೆಯ ಓದುಗರು ಕಾದಂಬರಿಯನ್ನು ತೀವ್ರವಾಗಿ ವಿರೋಧಿಸಿದರು. ಭೈರಪ್ಪ ಆ ಕಾದಂಬರಿ ಬರೆಯುವುದಕ್ಕಿಂತ ಬಹಳ ಮೊದಲೇ ಬಾಬರಿ ಮಸೀದಿ ಧ್ವಂಸಗೊಂಡಿತ್ತು. ಕಾದಂಬರಿಯಲ್ಲಿ ಆ ಘಟನೆಯೂ ಒಂದು ಎಳೆಯಾಗಿ ಸೇರಿಕೊಂಡಿದೆ. ಬಾಬರಿ ಮಸೀದಿ ಧ್ವಂಸಕ್ಕೆ, ಪೂರ್ವಭಾವಿಯಾಗಿ ನಡೆದ ರಾಮಜನ್ಮಭೂಮಿ ಚಳವಳಿ ಮತ್ತು ಅದ್ವಾನಿ ರಥಯಾತ್ರೆಗಳ ಸಂದರ್ಭದಲ್ಲಿ ದೇಶಾದ್ಯಂತ ಮುಸ್ಲಿಮರ ಮೇಲೆ ನಡೆದ ಹಿಂಸಾಚಾರದಲ್ಲಿ ಸಾವಿರಾರು ಜನ ಪ್ರಾಣ ಕಳೆದುಕೊಂಡಿದ್ದರು. ಆ ಸಂಬಂಧವಾಗಿಯೇ 1992 ಡಿಸೆಂಬರ್ ಮತ್ತು 1993 ಜನವರಿ ತಿಂಗಳುಗಳಲ್ಲಿ ಮುಂಬಯಿ ನಗರದಲ್ಲಿ ಸತತವಾಗಿ ನಡೆದ ಹಿಂಸೆಯ[ಲ್ಲಿ] ಹತ್ತಿರಹತ್ತಿರ 800 ಮುಸ್ಲಿಮರು ಕೊಲೆಯಾಗಿದ್ದರು. ಭೈರ[ಪ್ಪ] ತನ್ನ ಕಾದಂಬರಿಗೆ ಪೂರ್ವಸಿದ್ಧತೆ ನಡೆಸುತ್ತಿದ್ದ ದಿನಗಳಲ್[ಲಿ] ಗುಜರಾತ್ -2002 ಸಂಭವಿಸಿತ್ತು. ಆದರೆ ಅವ[ರ] ಕಾದಂಬರಿ ಈ ನರಹತ್ಯೆಯಲ್ಲಿ ಸಂಘ ಪರಿವಾರ[ದ] ಭಾಗೀದಾರಿಕೆಯ ಒಂದು ಸಣ್ಣ ಪ್ರಸ್ತಾಪವನ್ನೂ ಮಾಡದ[ೆ] ಮುಸ್ಲಿಮರನ್ನೇ ಅಪರಾಧಿಗಳ ಹಾಗೆ ಚಿತ್ರಿಸಿತ್ತು. ಭೈರಪ್ಪನವ[ರ] ಕುರುಡು ಕೋಮುದ್ವೇಷದ ಬರವಣಿಗೆಗೆ ತುತ್ತಾದವರ[ು] ಮುಸ್ಲಿಮರು ಮಾತ್ರವೇ ಅಲ್ಲ. 2008ರಲ್ಲಿ ಒರಿಸ್ಸಾ[ದ] ಕಂಧಮಾಲ್ ಜಿಲ್ಲೆಯಲ್ಲಿ ಕ್ರೈಸ್ತ ಸಮುದಾಯದವರ ಮೇ[ಲೆ] ಸಂಘಪರಿವಾರ ನಡೆಸಿದ ಹಿಂಸಾಚಾರ ತನ್ನ ವ್ಯಾಪಕ[ತೆ] ಮತ್ತು ಭೀಕರತೆಗಳಲ್ಲಿ ಗುಜರಾತ್-2002ನ್ನು ನೆನಪಿಸು[ವಂತ]ಹಾಗಿತ್ತು. ಅದೇ ವರ್ಷ ಅಕ್ಟೋಬರ್ ತಿಂಗಳಲ್ಲಿ ಕರ್ನಾಟಕ[ದ] ಹಲವೆಡೆ ಏಕಕಾಲದಲ್ಲಿ ಚರ್ಚುಗಳ ಮೇಲೆ ಸಂಘಟಿ[ತ]



ದಸರಾ ನಾಡಹಬ್ಬವೇ? ವಿಜಯದ ಸಂಕೇತವೇ?

ದಸರಾ ಗತ ವೈಭವಕ್ಕೆ ಹಿಡಿದ ಕನ್ನಡಿಯೇ? ವಿಜಯದಶಮಿ ವಿಜಯದ ಸಂಕೇತವೇ? ಯಾವ ವಿಜಯದ ಸಂಕೇತ? ವಿಜಯನಗರ ಸಾಮ್ರಾಟರು ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸುತ್ತಾ ಹೋದಂತೆ ಮೆರೆದ ವಿಜಯದ ಸಂಕೇತ. ಕೃಷ್ಣದೇವರಾಯನ ಕಾಲದಲ್ಲಿ ಮಹಾನವಮಿ ದಿಬ್ಬವನ್ನು ಕಟ್ಟಲಾಗಿತ್ತು. ಕೃಷ್ಣದೇವರಾಯನಿಂದ ಸೋತ ರಾಜರು ಅಥವಾ ಅವನ ಪ್ರಭುತ್ವವನ್ನು ಒಪ್ಪಿಕೊಂಡ ಪಾಳೇಗಾರರು ಬಂದು ತಮ್ಮ ಕಪ್ಪ ಕಾಣಿಕೆಯನ್ನು ಸಲ್ಲಿಸುತ್ತಿದ್ದರು. ನಾಯಕರು, ಅಮರನಾಯಕರು, ನಾಡಗೌಡರು ಹೀಗೆ ತಮ್ಮ ಅಂತಸ್ತುಗಳನ್ನು ರಾಜಕೀಯ ಸಂಬಂಧಗಳನ್ನು ಪ್ರದರ್ಶಿಸುತ್ತಿದ್ದರು. ದೂರದಿಂದ ಗಾಡಿಗಳನ್ನು ಕಟ್ಟಿಕೊಂಡು ಬಂದು ಈ







ರಾಜವೈಭವವನ್ನು ನೋಡಿ ಮರಳುತ್ತಿದ್ದರು. ಆ ಶ್ರೀಮಂತಿಕೆಯಲ್ಲಿ ತಮ್ಮ ಬಡತನವನ್ನು ಅರೆಗಳಿಗೆ ಮರೆಯುತ್ತಿದ್ದರು. ಇಂತಹ ಹಬ್ಬಗಳು ಪರೋಕ್ಷವಾಗಿ ಕೆಲವರಿಗೆ ಲಾಭವನ್ನು, ಕೆಲಸವನ್ನು, ಅವಕಾಶಗಳನ್ನು ಕಲ್ಪಿಸುತ್ತಿದ್ದದ್ದು ನಿಜವಾದರೂ ರಾಜ್ಯ ತನ್ನ ಬೊಕ್ಕಸದಿಂದ ಸಾಕಷ್ಟು ಖರ್ಚು ಮಾಡುತ್ತಿತ್ತು.

ವಿಜಯನಗರ ಸಾಮ್ರಾಜ್ಯದ ಕಾಲಕ್ಕೆ ಹುಟ್ಟಿ ಬೆಳೆದ ಮೈಸೂರು ಸಂಸ್ಥಾನ ವಿಜಯನಗರದ ಸಂಸ್ಕೃತಿಯ ಹಲವು ಅಂಶಗಳನ್ನು ಅಲ್ಲಿಂದ ಎರವಲು ಪಡೆಯಿತು. ಹಾಗೆ ಹರಿದುಬಂದ ವಿಚಾರಗಳಲ್ಲಿ ದಸರಾ ಮಹೋತ್ಸವವೂ ಒಂದು. ಅದಕ್ಕೆ ವಿಸ್ತಾರವಾದ ಮನ್ನಣೆ ಮತ್ತು ಪ್ರಚಾರ ಬಂದುದ್ದು ಬ್ರಿಟಿಷರ ಕಾಲಕ್ಕೆ. ಅದರಲ್ಲೂ ಟಿಪ್ಪುವಿನ ಮರಣಾನಂತರ ರಾಜ್ಯವನ್ನು ಹಿಂದಕ್ಕೆ ಪಡೆದ ಮೈಸೂರು ಒಡೆಯರ ವಿಶೇಷ ಸಾಂಸ್ಕೃತಿಕ ಹಬ್ಬವಾಗಿ ಬೆಳೆದುಬಂತು.

ದಸರಾ ಹಬ್ಬ ಈ ಹಿಂದೆ ಚರ್ಚಿಸಿದಂತೆ ರಾಜ್ಯ ತನ್ನ ಸಾಮರ್ಥ್ಯವನ್ನು ತೋರ್ಪಡಿಸುವ ಒಂದು ಮಹೋತ್ಸವ. ಅದರಲ್ಲೂ ದಸರಾ ಹಬ್ಬದ ಕಡೆಯ ದಿನ ವಿಜಯದಶಮಿಯ ಆಚರಣೆಯನ್ನು ಮಾಡುವ ಆ ಹೊತ್ತಿಗೆ ಕೊಂಬು ಕಹಳೆ, ನಗಾರಿ, ಶಸ್ತ್ರಾಸ್ತ್ರಗಳು, ಸೈನ್ಯ- ಈ ಎಲ್ಲವೂ ಮೆರವಣಿಗೆಯಲ್ಲಿ ಸಾಗುತ್ತವೆ. ರಾಜ, ಅಂಬಾರಿ ಇವೆಲ್ಲವೂ ಒಟ್ಟಾರೆಯಾಗಿ ಯುದ್ಧದ ಸಂಕೇತಗಳೇ ಆಗಿರುತ್ತವೆ.

ಟಿಪ್ಪು ಸುಲ್ತಾನ್ 1798ರಲ್ಲಿ ಬ್ರಿಟಿಷರಿಂದ ಹತನಾದ ನಂತರ ಮೈಸೂರು ಸಂಸ್ಥಾನ ಬ್ರಿಟಿಷರ ಪರೋಕ್ಷ ಆಳ್ವಿಕೆಗೆ ಒಳಪಟ್ಟಿತು. ಸಹಾಯಕ ಸೈನ್ಯ ಪದ್ಧತಿಗೆ ಸಹಿ ಹಾಕಿದ ಮೈಸೂರು ಸಂಸ್ಥಾನ ಬ್ರಿಟಿಷರಿಗೆ ವಾರ್ಷಿಕ ಪೊಗದಿಯನ್ನು ಸಲ್ಲಿಸುತ್ತಾ ಬಂದಿತು. ಟಿಪ್ಪುವಿನ ನಂತರ ಮೈಸೂರಿನಲ್ಲಿ ಮತ್ತೆ ಯಾವ ಯುದ್ಧಗಳೂ ಘಟಿಸಲಿಲ್ಲ. ಮೈಸೂರು ಒಡೆಯರನ್ನು ಮೂಲೆಗುಂಪಾಗಿಸಿ ಅವರ ದೌರ್ಬಲ್ಯವನ್ನು ಬಳಸಿಕೊಂಡು ಅಧಿಕಾರಕ್ಕೆ ಬಂದ ಹೈದರ್ ರಾಜ್ಯ ವಿಸ್ತರಣೆಗೆ ತೊಡಗಿದನು. ಆಂಗ್ಲೋ ಕರ್ನಾಟಿಕ್ ಯುದ್ಧದಲ್ಲೂ ಪಾಲ್ಗೊಂಡಿದ್ದ ಹೈದರ್. ಅನಂತರ ನಾಲ್ಕು ಬಾರಿ ಬೃಹತ್ ಹೋರಾಟಗಳನ್ನು ಟಿಪ್ಪು ಬ್ರಿಟಿಷರ ವಿರುದ್ಧ ಎಸಗಬೇಕಾಯಿತು. ಆ ಕಾಲಕ್ಕೆ ಯುದ್ಧ ಕಲೆಯಲ್ಲಿ ಮೈಸೂರು ಹೊಸ ಪ್ರಯೋಗಗಳನ್ನೇ ನಡೆಸಿತು. ಅದರಲ್ಲೂ ಟಿಪ್ಪು ಬಳಸಿದ ರಾಕೆಟ್ ಜಗತ್ತಿನ ರಾಕೆಟ್ ಉಡಾವಣೆಯ ಚರಿತ್ರೆಯಲ್ಲಿ ಮೈಲುಗಲ್ಲಾಗಿದೆ. ನಿರಂತರವಾಗಿ ಯುದ್ಧದಲ್ಲಿ ತೊಡಗಿದ್ದ ಟಿಪ್ಪು ಅಮೃತ್ ಮಹಲ್ ತಳಿಯ ದನಗಳನ್ನು ಯುದ್ಧಕ್ಕಾಗಿಯೇ ಒಗ್ಗಿಸಿಕೊಂಡಿದ್ದನು. ಅದಕ್ಕಾಗಿ ಬೆಳೆದ ತಳಿ ವಿಜ್ಞಾನ ಇಂದಿಗೂ ಮಾದರಿಯಾಗಿದೆ. ಫ್ರಾನ್ಸಿನ ನೆಪೋಲಿಯನ್‌ನ ಸಂಪರ್ಕ ಹಾಗೂ ಆದರ್ಶಗಳು ಟಿಪ್ಪುವಿನ ಆಡಳಿತದ ಮೇಲೆ ದೊಡ್ಡ ಪರಿಣಾಮವನ್ನು ಬೀರಿದ್ದವು. ಟಿಪ್ಪುವಿನ ಮರಣಾನಂತರ ಮೈಸೂರು ಸಂಸ್ಥಾನ ವಿಜಯದಶಮಿಯನ್ನು ಆಚರಿಸುತ್ತಾ ಬಂದಿದೆ. ಹಾಗಾಗಿ ನಾವಿಂದು ಪ್ರಶ್ನಿಸಿಕೊಳ್ಳಬೇಕಾಗಿರುವುದು ಇದು ಯಾವ ವಿಜಯದ ಸಂಕೇತ?

ಭಾರತ 1857ರ ಸಂಗ್ರಾಮದಲ್ಲಿ ತನ್ನ ದೇಶೀಯವಾದ ಯುದ್ಧದ ನಗಾರಿಗಳನ್ನು ಬಾರಿಸುತ್ತಾ, ಕಹಳೆಗಳನ್ನು ಊದುತ್ತಾ, ಯುದ್ಧದ ಉಡುಗೆಯನ್ನು ತೊಟ್ಟು ಹೋರಾಡಿತು. ಅಲ್ಲಿಂದ ಮುಂದೆ ಬ್ರಿಟಿಷರ ವಿರುದ್ಧ ಶಸ್ತ್ರಸಜ್ಜಿತ ಹೋರಾಟ ನಡೆಸಲಿಲ್ಲ. ಹಾಗಾಗಿ ಭಾರತೀಯರ ಸಾಂಪ್ರದಾಯಿಕವಾದ ಯುದ್ಧದ ಕಲೆಯನ್ನು ನಿಧಾನವಾಗಿ ಮರೆಯುತ್ತಾ ಕಳೆದುಕೊಳ್ಳುತ್ತಾ ಬಂದಿತು. ನನಗಿಲ್ಲಿ ಹೇಳಬೇಕಾಗಿರುವುದು ಭಾರತದ ಪ್ರಾಚೀನ ಯುದ್ಧ ಕಲೆ ಶ್ರೇಷ್ಠವೆಂದೇನೂ ಅಲ್ಲ. ಆದರೆ ಬ್ರಿಟಿಷರು ಭಾರತವನ್ನು ಆಳಲು ತೊಡಗಿದ ನಂತರ ಭಾರತದ ರಣಭೇರಿ ಅಥವಾ ಯುದ್ಧ ಮಾಡುವಾಗ ಉತ್ತೇಜನಕಾರಿಯಾಗಿ ನುಡಿಸುತ್ತಿದ್ದ ಯುದ್ಧ ಸಂಗೀತ ಮತ್ತೆ ಮೊಳಗಲಿಲ್ಲ. ಅಲ್ಲಿಂದ ಮುಂದೆ ಬ್ರಿಟಿಷರ ವಾದ್ಯ (ಬ್ಯಾಂಡ್) ಅದನ್ನು ಆಲಿಸುತ್ತಾ ಆ ದನಿಗೆ ಮಾರ್ಚ್‌ಫಾಸ್ಟ್ ಮಾಡುತ್ತಾ ಬಂದಿದ್ದೇವೆ. ಇನ್ನು ಮೈಸೂರಿನ ಚರಿತ್ರೆಯಲ್ಲಿ ಭಾರತೀಯವಾದ ರಣಕಹಳೆ 1800ಕ್ಕೆ ಮುಗಿದುಹೋಯಿತು. ಅನಂತರ ವಿಜಯದಶಮಿಯಲ್ಲಿ ಮೆರವಣಿಗೆಯಲ್ಲಿ ಹೊತ್ತು ಸಾಗಿದ್ದು ಹಳೆಯ ನೆನಪುಗಳನ್ನು ಮಾತ್ರ. ಆದರೆ ಅದು ವಿಜಯದ ಸಂಕೇತಗಳೇ ಎಂದು ಹೇಳಿಕೊಳ್ಳುವುದು ವಿಪರ್ಯಾಸ.

ಮೈಸೂರು ಸಂಸ್ಥಾನ ಬ್ರಿಟಿಷರ ಪರೋಕ್ಷ ಆಳ್ವಿಕೆಗೆ ಒಳಪಟ್ಟ ನಂತರ ಮೈಸೂರು ಒಡೆಯರಿಗೆ ಬ್ರಿಟಿಷರನ್ನು ಮೆಚ್ಚಿಸಬೇಕಾದ ಅನಿವಾರ್ಯತೆ ಒದಗಿಬಂತು. ಬ್ರಿಟಿಷ್ ಅಧಿಕಾರಿಗಳ ಆತಿಥ್ಯಕ್ಕಾಗಿ, ಮೋಜಿಗಾಗಿ ಖೆಡ್ಡಾ ಆಚರಣೆ, ಕಾಡಿನಲ್ಲಿ ಆನೆಗಳನ್ನು ಹಿಡಿದು ರಂಜಿಸುವುದು, ಶಿಕಾರಿಯ ನೆಪದಲ್ಲಿ ಹುಲಿ, ಚಿರತೆ, ಕಾಡೆಮ್ಮೆಗಳನ್ನು ಹೊಡೆಯುವುದು ವಿಶೇಷ ಆಕರ್ಷಣೆಯೂ ಆಗಿತ್ತು. ಹಾಗೆ ದಸರಾಕ್ಕೆ ಬ್ರಿಟಿಷ್ ಅಧಿಕಾರಿಗಳು, ಗೌವರ್ನರ್ ಜನರಲ್‌ಗಳು ವಿಶೇಷ ಅತಿಥಿಗಳಾಗಿ ಆಗಮಿಸುತ್ತಿದ್ದರು. ಈ ಹೊತ್ತಿಗೆ ಮೈಸೂರು ಸಂಸ್ಥಾನದಲ್ಲಿ ಸಂಗೀತ ಸಾಹಿತ್ಯ ಇತರ ಸಾಂಸ್ಕೃತಿಕ ಚಟುವಟಿಕೆಗಳ ಕಡೆಗೆ ಗಮನವನ್ನು ಹರಿಸತೊಡಗಿದರು. ಹಾಗೆಯೇ ಮೈಸೂರಿನಲ್ಲಿ ಬ್ರಿಟಿಷ್ ಸಂಗೀತವನ್ನು ತರಬೇತಿ ನೀಡಿ ವಾದ್ಯಪಡೆಯನ್ನು ಸಜ್ಜುಗೊಳಿಸಲಾಯಿತು. ಬ್ರಿಟಿಷರಿಂದ ಕಲಿತ ಕವಾಯತು ಮೆರವಣಿಗೆಯ ಆಕರ್ಷಣೆಗಳಲ್ಲಿ ಒಂದು.

ಈ ಹಬ್ಬದ ಮತ್ತೊಂದು ಮುಖ ಚಾಮುಂಡೇಶ್ವರಿಯ ಮೆರವಣಿಗೆ. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಗ್ರಾಮದೇವತೆ[ಗೆ] ನಡೆಸುವ ಜಾತ್ರೆ ಮಹೋತ್ಸವದ ವಿಸ್ತೃತ ರೂಪವ[ನ್ನು] ಇಲ್ಲಿ ಕಾಣಬರುತ್ತದೆ. ಇದು ಚಾಮುಂಡಿಯ ಹಬ್ಬವ[ು] ಹೌದು. ಚಾಮುಂಡಿಯ ಕಥೆ ಅಥವಾ ಮಹಿಷಾಸುರ[ನ] ದುರಂತ ಕಥಾನಕ ನಾಡಹಬ್ಬವಾಗಬಲ್ಲದೇ ಎಂದ[ು] ಮತ್ತೊಮ್ಮೆ ಕೇಳಿಕೊಳ್ಳಬೇಕಾಗಿದೆ. ಮೈಸೂರಿಗೆ ಹೆಸ[ರು] ಬಂದಿರುವುದೇ ಮಹಿಷಮಂಡಲ ಎಂಬ ಪ್ರಾಚೀನವಾ[ದ] ಉಲ್ಲೇಖದಿಂದ. ಇಲ್ಲಿ ಮಹಿಷಾಸುರ ಎನ್ನುವ ಅಸು[ರ]ನಿದ್ದನೆಂದು ಕಥೆ ನಿರೂಪಿಸುತ್ತದೆ ಎಂದರೆ ಪರೋಕ್ಷವಾ[ಗಿ] ಕೋಣ ಅಥವಾ ಇದು ಎಮ್ಮೆಯ ನಾಡಾಗಿತ್ತೆಂದು ಸೂಚಿಸು[]ತ್ತದೆ. ಅಶೋಕನ ಶಾಸನದಲ್ಲಿ ಈ ಪ್ರದೇಶವನ್ನು ಎಮ್ಮೆ[] ಎಂದು ಕರೆಯಲಾಗಿದೆ. ಎಮ್ಮೆ ಎಂದರೆ ಎಮ್ಮೆಯ ನಾಡಾಗಿತ್ತೆಂದು ಅರ್ಥ. ಮಹಿಷಾಸುರ ಮರ್ಧಿನಿ ಎಂದ[ು] ಕರೆಸಿಕೊಳ್ಳುವ ಚಾಮುಂಡೇಶ್ವರಿ ಈ ನಾಡನ[್ನು] ಆಳಿರಬಹುದಾದ ವ್ಯಕ್ತಿಯನ್ನು ಸಂಹರಿಸಿದ ಕಥೆಯೇ ಆಗಿ[ದೆ]. ಹೀಗೆ ಈ ನಾಡಿನ ಚರಿತ್ರೆಯನ್ನು ಅಗೆಯುತ್ತಾ ಹೋದಂ[ತೆ] "ನಾಡಹಬ್ಬ" ಅರ್ಥವನ್ನು ಕಳೆದುಕೊಳ್ಳುತ್ತದೆ.

ಮೈಸೂರನ್ನು ಕೈಗಾರಿಕೀಕರಣಗೊಳಿಸುವ ಪ್ರಯ[ತ್ನ] ಮಾಡಿದ ಹೆಗ್ಗಳಿಕೆ ನಾಲ್ವಡಿ ಕೃಷ್ಣರಾಜ ಒಡೆಯರ್, ಸರ್ ಎಂ.ವಿಶ್ವೇಶ್ವರಯ್ಯ ಮತ್ತು ದಿವಾನ್ ಮಿರ್ಜಾ ಇಸ್ಮಾಯಿಲ್ ಅವರಿಗೆ ಸಲ್ಲುತ್ತದೆ. ಆ ಹೊತ್ತಿನಲ್ಲಿ ದಸರಾವನ್ನು ಆರ್ಥಿ[ಕ] ಹಿನ್ನೆಲೆಯಲ್ಲಿ ಪರಿಶೀಲಿಸುವ ಪ್ರಯತ್ನವನ್ನು ಮಾಡಲಾಗಿ[ತ್ತು]. ಸ್ವಾತಂತ್ರ ಬಂದ ನಂತರ ದಸರಾ ಮೆರವಣಿಗೆಯ ಹಿನ್ನೆಲೆಯ[ಲ್ಲಿ] ಎರಡು ಪ್ರಶ್ನೆಗಳು ಮುಖ್ಯವಾಗಿ ನಮ್ಮನ್ನು ಕಾಡಿಸಿ[ದ]ವು. ನಾಡಿನ ಉಳಿದೆಡೆಯಲ್ಲಿ ಕ್ಷಾಮ ಬರ ಇದ್ದು ಕಾಡಿಸು[ತ್ತಿದ್ದ] ಹೊತ್ತಿಗೆ ದಸರಾದಂತಹ ರಂಜನೆಯನ್ನು ವಿರೋಧಿಸಲಾಗಿ[]

...ನಡೆಯಿತು. ಮಾನವೀಯ ಸ್ಪಂದನೆಯ ಲೇಖಕನಾಗಿ ... ಈ ಹಿಂಸೆಯನ್ನು ಖಂಡಿಸಬೇಕಿತ್ತು, ಆದರೆ ಅದಕ್ಕೆ ...ಾಗಿ ಅವರು ನಾಡಿನ ಪ್ರಮುಖ ಪತ್ರಿಕೆಯೊಂದರಲ್ಲಿ ...ಕ್ಷ ಲೇಖನ ಪ್ರಕಟಿಸಿ, ದೇಶದ ಕ್ರೈಸ್ತ ಸಮುದಾಯದ ... ಇದಿಯಾಗಿ ಬಲಾತ್ಕಾರದ ಮತಾಂತರದ ಸುಳ್ಳು ...ಪ ಹೊರಿಸಿದರು. ಆಗಲೂ ಅವರು ಅನುಸರಿಸಿದ್ದು ...ತಿಂದವರನ್ನೇ ಅಪರಾಧಿಗಳು ಎಂಬಂತೆ ಪ್ರಚಾರ ...ುವ ಅದೇ ಹಳೆಯ ಫ್ಯಾಸಿಸ್ಟ್ ತಂತ್ರವನ್ನು.

...ಳಗೆ ರಾಜ್ಯದ ಎರಡು ಪ್ರಮುಖ ಅಲ್ಪಸಂಖ್ಯಾತ ...ದಾಯಗಳನ್ನು ವಿನಾಕಾರಣ ಪರಿಪರಿಯಾಗಿ ನಿಂದಿಸಿದ ...ಪ್ಪ ತನ್ನ ಬರವಣಿಗೆಯಲ್ಲಿ ಬಹುಸಂಖ್ಯಾತ ...ೂಗಳಿಗಾದರೂ ನ್ಯಾಯ ಒದಗಿಸಿದ್ದಾರೆಯೆ? ಹಿಂದೂ ...ತಿಯ ಹೆಸರಿನಲ್ಲಿ ಭೈರಪ್ಪನವರು 'ವಂಶವೃಕ್ಷ'ದಿಂದ ...ು ಇತ್ತೀಚೆಗಿನ 'ಕವಲು'ವರೆಗೆ ಎಲ್ಲ ಕಾದಂಬರಿ ...ಲ್ಲಿ ಎತ್ತಿ ಹಿಡಿದಿರುವುದು ವೈದಿಕ ಬ್ರಾಹ್ಮಣ ಮತ್ತು ...ಪ ಪ್ರಧಾನ ಸಂಸ್ಕೃತಿಯ ಮೌಲ್ಯಗಳನ್ನು. ವರ್ಗ ...ನತೆ, ಜಾತಿ ಸಮಾನತೆ ಮತ್ತು ಲಿಂಗ ಸಮಾನತೆಯ ...ೀಚನೆಯ ಮೌಲ್ಯಗಳಲ್ಲಿ ಅವರಿಗೂ ಯಾವತ್ತೂ ನಿಷ್ಠೆ ...ಲ್ಲ.

...ೈರಪ್ಪನವರ ಬಗ್ಗೆ ಹೇಳಬಹುದಾದ ಒಂದೇ ಒಂದು ...ು ಮಾತೆಂದರೆ ಅವರು ಎಂದೂ ತಮ್ಮ ಸಾಂಸ್ಕೃತಿಕ ...ನೆಯನ್ನು ಮುಚ್ಚಿಟ್ಟುಕೊಂಡು ಬಡಿವಾರ ಮಾಡಿದ ... ಹೀಗೆ ತನ್ನ ನಂಬಿಕೆ ಮತ್ತು ಬರಹ ಎರಡರಲ್ಲೂ ...ಷ್ಟರಾಗಿರುವ ಮತ್ತು ಆ ಬಗ್ಗೆ ಮುಚ್ಚುಮರೆ ಕೂಡ ...ದ ಭೈರಪ್ಪ ನಾಡಹಬ್ಬದ ಉದ್ಘಾಟನೆಗೆ ಸೂಕ್ತ ವ್ಯಕ್ತಿ ... ಈ ಹಿಂದೆ ದಸರಾ ಉದ್ಘಾಟನೆಗೆ ಪೇಜಾವರ ...ಳನ್ನು ಆಹ್ವಾನಿಸಿದಾಗಲೇ ಅದು ಸಂಸ್ಕೃತಿಯ ...ೀಗತಿಯ ಸೂಚನೆ ಎಂದೇ ನಾವು ಭಾವಿಸಿದ್ದೆವು. ... ಈಗ ಭೈರಪ್ಪನವರ ಆಯ್ಕೆಯಿಂದಾಗಿ ಅದು ...ಳವನ್ನೇ ತಲುಪಿದೆ. ನಾಡಿನ ಎಲ್ಲಾ ಪ್ರಜಾಪ್ರಭುತ್ವವಾದಿ ... ಸರಕಾರದ ಈ ನಿರ್ಧಾರವನ್ನು ಪ್ರತಿಭಟಿಸಬೇಕು.

● ಜಿ. ರಾಜಶೇಖರ

...ನೆಯದಾಗಿ ಅದು ಎಷ್ಟರಮಟ್ಟಿಗೆ ಜನಪರವಾದುದು? ... ಹಬ್ಬವನ್ನು, ಅದರಲ್ಲೂ ಮೆರವಣಿಗೆಯಲ್ಲಿ ಹೊತ್ತು ...ವ ರಾಜರನ್ನು ಪ್ರಶ್ನಿಸಿದವರು ಕೆಂಗಲ್ ಹನುಮಂತಯ್ಯ ...ರು ಕರ್ನಾಟಕದ ಮುಖ್ಯಮಂತ್ರಿಗಳಾದಾಗ ...ತಿನಿಧಿಯಾಗಿ ತಾವು ಮೆರವಣಿಗೆಯಲ್ಲಿ ಸಾಗಬೇಕೆಂದು ...ರಿಸಿದರು. ಇದು ರಾಜಮನೆತನಕ್ಕೆ ಮತ್ತು ಅವರನ್ನು ...ಸುವವರಿಗೆ ಪ್ರಿಯವಾದ ವಿಚಾರವೇನೂ ಆಗಿರಲಿಲ್ಲ.

...ಜನಸಾಮಾನ್ಯರ ಮನಸ್ಸಿನಲ್ಲಿ ರಾಜಮನೆತನದ ಬಗ್ಗೆ ...ಗೌರವ ಉಳಿದಿರುವುದು ನಾಲ್ವಡಿ ಕೃಷ್ಣದೇವರಾಯ ...ುರ್ ಅಂತಹ ಪ್ರಗತಿಪರ ಆಡಳಿತಗಾರರಿಂದಾಗಿ. ...ದ ಎಲ್ಲಾ ಟೀಕೆ ಟಿಪ್ಪಣಿಗಳಾಚೆಗೂ ಮೈಸೂರು ...ು ಮಾದರಿ ರಾಜ್ಯ ಎನಿಸಿಕೊಂಡದ್ದು ಮುಖ್ಯವಾದ ...ವಾಗಿದೆ. ಹೈದರಾಬಾದ್-ಕರ್ನಾಟಕದಂತೆ ನಿಜಾಮನ ...ಯಲ್ಲಾಗಲಿ, ಮುಂಬೈ ಪ್ರಾಂತ್ಯದಂತೆ ನೇರವಾದ ...ಷ್ ಆಳ್ವಿಕೆಯ ಕಹಿ ನೆನಪುಗಳು ಮೈಸೂರಿನ ...ಗಳಲ್ಲಿ ಕಾಣಬರುವುದಿಲ್ಲ. ಆದ್ದರಿಂದ ದಸರಾ ...ೋತ್ಸವ ಅದರ ಚಾರಿತ್ರಿಕ ವಾಸ್ತವತೆಯ ಆಚೆಗೂ ...ದುಬರಲು ಕಾರಣವಾಗಿದೆ. ಪ್ರಜಾಪ್ರಭುತ್ವದ ಪ್ರಬಲ ...ಗಳಾಗಿ ವ್ಯಕ್ತಿ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯುವ ...ಂತಿಕ ಬದ್ಧತೆಗಳು ನಮ್ಮಲ್ಲಿ ಕಾಣಬರುವುದಿಲ್ಲ. ಜಾತಿ, ..., ಸಂಪ್ರದಾಯ ಹೀಗೆ ಹತ್ತು ಹಲವು ವಿಚಾರಗಳನ್ನು ...ನ್ನು ಪರಿಪೂರ್ಣವಾದ ಸ್ವಾತಂತ್ರ್ಯ ಪ್ರಜಾಪ್ರಭುತ್ವ ...ಗಳನ್ನು ಅನುಭವಿಸದಂತೆ ಮಾಡಿದೆ. ಆದ್ದರಿಂದಲೇ ...ವ ವರ್ಗ ಸುಲಭವಾಗಿ ದೇವರು, ಆಚರಣೆ, ಮೌಲ್ಯ ... ಹೆಸರುಗಳಲ್ಲಿ ಮಂಕುಬೂದಿಯನ್ನು ಎರಚಲು ...ವಾಗಿದೆ. ನಮ್ಮ ದಾರಿದ್ರ್ಯ ಸಣ್ಣ ಆಮಿಷಗಳಿಗೆ ತೃಪ್ತಿ ...ವಣೆ ಮಾಡುತ್ತದೆ. ದಿನನಿತ್ಯದ ಬದುಕಿನ ಸಂಕಷ್ಟಗಳು ...ಂತಿಕ ಪ್ರಶ್ನೆಗಳನ್ನು ಚರ್ಚಿಸುವ ಶಕ್ತಿಯನ್ನೇ ಕಿತ್ತು ...ುತ್ತದೆ. ಹಾಗಾಗಿ ದಸರಾ ಹಬ್ಬದಂತಹ ದೊಡ್ಡ ಆಚರಣೆ, ...ಾಗಿ ಮಾಡುವ ಅಪಾರ ಖರ್ಚು, ಅಲ್ಲಿನ ಅವಕಾಶಕ್ಕಾಗಿ ...ಬ್ಬುವ ಭ್ರಷ್ಟತೆ, ಇವು ಮುಖ್ಯವಾಗದೇ ಹೋಗುತ್ತವೆ.


... ಈ ಬಾರಿಯ ದಸರಾ ಉದ್ಘಾಟನೆಗೆ ಸರ್ಕಾರ ...ಎಲ್.ಭೈರಪ್ಪನವರನ್ನು ಸೂಚಿಸಿದಾಗ ಪ್ರತಿಕ್ರಿಯೆಗಳು ... ಹೆಚ್ಚಾಗಿವೆ. ಭೈರಪ್ಪನವರು ಒಳ್ಳೆಯ ಕಾದಂಬರಿಕಾರರಾಗಿ ... ಅವೈಚಾರಿಕ ವಿಚಾರಗಳನ್ನು ಹೇಳುತ್ತಾ ಬಂದರೂ ...ಗವು ಮುಖ್ಯವಾದ ಪ್ರಶ್ನೆಗಳಾಗಿಲ್ಲ. ಮಹಿಳೆಯನ್ನು ...ರದಿಂದ ಕಂಡಾಗ ಅಥವಾ ಬಹಳ ಸೂಕ್ಷ್ಮವಾಗಿ ...ಮವಾದವನ್ನೇ ನೆಲೆಗಟ್ಟಾಗಿಸಿಕೊಂಡು ಕೃತಿಗಳನ್ನು ...ಸುತ್ತಾ ಬಂದರೂ ಅವರು ಮಾತ್ರ ನಿರಂತರ ಗೌರವಕ್ಕೆ ...ಗಿದ್ದಾರೆ. ಪ್ರಶ್ನಿಸಲಾರದ ಸ್ಥಿತಿಯಲ್ಲಿ ಮೌನವಾಗಿ ...ದುಹೋಗುವ ಮತ್ತೊಂದು ಘಟನೆ ದಸರಾ ...ತ್ಸವವನ್ನು ಯಾರೂ ಮಾಡಬಹುದಾಗುತ್ತದೆ.


● ಡಾ. ವಸು ಎಂ.ವಿ.

ಬಳ್ಳಾರಿ: ಅರುಣಾಲಕ್ಷ್ಮಿಯ ಕೈಗೆ ರೆಡ್ಡಿ ರಾಜಕೀಯ?

ಬಳ್ಳಾರಿಯಲ್ಲಿ ಗಾಲಿ ರೆಡ್ಡಿಗಳ ರಾಜಕೀಯ ಅಂತಿಮ ಹಂತಕ್ಕೆ ಬಂದು ನಿಂತಿದೆ. ಜನಾರ್ದನ ರೆಡ್ಡಿ ಜೈಲು ಸೇರಿದ ನಂತರ ವಿಚಿತ್ರ ತಿರುವುಗಳು ಪಡೆಯುತ್ತಾ ಹೋಗಿರುವ ಇಲ್ಲಿಯ ರಾಜಕಾರಣ ಇವತ್ತು ನ್ಯಾಯಾಧೀಶರೊಬ್ಬರನ್ನೂ ತನ್ನ ಪಾಪಿಕೃತ್ಯದಲ್ಲಿ ಭಾಗಿಯಾಗಿಸಿದೆ. ಜೈಲಿನಿಂದಲೇ ಬಳ್ಳಾರಿ ರಾಜಕಾರಣವನ್ನು ಮತ್ತು ಗಣಿ ಮಾಫಿಯಾವನ್ನು ನಿಯಂತ್ರಿಸಲು ಸಾಧ್ಯವಿಲ್ಲ ಎಂಬುದು ಖಾತ್ರಿ ಆಗುತ್ತಿದ್ದಂತೆ ಜನಾರ್ದನ ರೆಡ್ಡಿ ಜಾಮೀನಿನ ಮೇಲೆ ಹೊರಬರಲು ಯತ್ನಿಸಿ ಇನ್ನಷ್ಟು ದಿನ ಜೈಲಿನಲ್ಲಿರುವಂತೆ ಮಾಡಿಕೊಂಡಿದ್ದಾನೆ.

ಈ ಬೇಲ್ ಡೀಲ್ ಪ್ರಕರಣ ಬಯಲಾಗಿ ಯಾವತ್ತು ನ್ಯಾಯಾಧೀಶ ಪಟ್ಟಾಭಿರಾಮರಾವ್ ಜೈಲು ಸೇರಿದನೋ ಅವತ್ತಿನಿಂದ ಗಣಿ ಮಾಫಿಯಾ ಗ್ಯಾಂಗಿಗೆ ಹಣೆಬರಹವೇ ಕೆಟ್ಟಿರುವಂತಿದೆ. ತಲೆ ಮರೆಸಿಕೊಂಡಿದ್ದ ಜನಾರ್ದನ ರೆಡ್ಡಿಯ ಆರ್ಥಿಕ ಸಹಾಯಕ ಮತ್ತು ಆಪ್ತ ಮಿತ್ರ ಖಾನ್ ಸಿಬಿಐ ಅಧಿಕಾರಿಗಳ ಎದುರು ಕೊನೆಗೂ ಹಾಜರಾಗಿ ರೆಡ್ಡಿ ಗ್ಯಾಂಗಿನ ಗಣಿ ಮಾಫಿಯಾ ಮತ್ತು ಆರ್ಥಿಕ ಪಾತಕದ ಪ್ರಪಂಚವನ್ನೇ ತೆರೆದಿಟ್ಟಿದ್ದಾನೆ. ಖಾನ್ ನಂತರ ಜನಾರ್ದನ ರೆಡ್ಡಿಯ 'ಮಾನಸಿಕ ಪುತ್ರ' ಕಂಪ್ಲಿ ಶಾಸಕ ಸುರೇಶ್ ಬಾಬು ಕೂಡ ಅರೆಸ್ಟ್ ಆದ. ಮೊನ್ನೆಮೊನ್ನೆ ಅದೇ ಜನಾರ್ದನ ರೆಡ್ಡಿಯ ಸಹೋದರ ಮತ್ತು ವಿಕೃತ ಮನಸ್ಸಿನ ಸೋಮಶೇಖರ ರೆಡ್ಡಿ ಕೂಡ ಜೈಲುಪಾಲಾಗಿದ್ದಾನೆ. ಈಗ ಜೈಲು ಸೇರುವ ಸಾಲಿನಲ್ಲಿ ಜನಾರ್ದನ ರೆಡ್ಡಿಯ ಆಪ್ತ ಮಿತ್ರ ಶ್ರೀರಾಮುಲು ನಿಂತಿದ್ದಾನೆ.







ಶ್ರೀರಾಮುಲು ಜೈಲುಪಾಲಾದರೆ ಆತ ಹುಟ್ಟುಹಾಕಿರುವ ಬಿಎಸ್‌ಆರ್ ಕಾಂಗ್ರೆಸ್ ಪಕ್ಷದ ಗತಿ ಹರೋಹರ!

ರೆಡ್ಡಿ ಗ್ಯಾಂಗಿನ ಒಂದೊಂದೇ ತಲೆಗಳು ಜೈಲುಪಾಲಾಗುತ್ತಿದ್ದಂತೆ ಅವರ ವಿರೋಧಿ ರಾಜಕಾರಣಿಗಳು ಈ ಜಿಲ್ಲೆಯಲ್ಲಿ ತಮ್ಮ ರಾಜಕಾರಣದ ಬೇರುಗಳನ್ನು ಬಿಡಲು ಪ್ರಯತ್ನಿಸುತ್ತಿದ್ದಾರೆ. ರೆಡ್ಡಿ ಗ್ಯಾಂಗಿನ ಉಪಟಳದಿಂದ ಮೆತ್ತಗಾಗಿದ್ದ ಕಾಂಗ್ರೆಸ್ ಪಕ್ಷದ ದಿವಾಕರ ಬಾಬುವಿನ ಪಾತಕ ರಾಜಕಾರಣಕ್ಕೆ ಮರು ಜೀವ ಸಿಗುವ ಸಾಧ್ಯತೆಗಳು ಕಾಣಿಸುತ್ತಿವೆ.







ಇದನ್ನು ಅರಿತೇ ಜ.ರೆಡ್ಡಿಯ ಧರ್ಮಪತ್ನಿ ಅರುಣಲಕ್ಷ್ಮಿ ದಿಢೀರನೆ ರಾಜಕೀಯ ಕ್ಷೇತ್ರಕ್ಕೆ ಎಂಟ್ರಿ ಕೊಟ್ಟಿದ್ದಾಳೆ. ತನ್ನ ಗಂಡ ಜೈಲುಪಾಲಾಗಿದ್ದರೂ ಬಳ್ಳಾರಿ ರಾಜಕಾರಣ ಗಾಲಿ ಕುಟುಂಬದ ಕೈಯಿಂದ ಕದಲಬಾರದೆಂದೇ ಆಕೆ ಮೊನ್ನೆ ಕಂಪ್ಲಿಯ ಸಭೆಯಲ್ಲಿ ಭಾಗವಹಿಸಿ ರಾಜಕಾರಣಿಯ ತರಹ ಮಾತನಾಡಿದ್ದಾಳೆ. ಇದಾದನಂತರ ಶ್ರೀರಾಮುಲು "ಅರುಣಾಲಕ್ಷ್ಮಿ ರಾಜಕೀಯಕ್ಕೆ ಬರುವುದಿಲ್ಲ" ಎಂದು ಹೇಳಿಕೆ ನೀಡಿದ್ದರೂ ಆಕೆ ಆಕಸ್ಮಿಕವಾಗಿ ಹಾಜರಾಗಿಲ್ಲ ಎಂಬುದಂತೂ ಸ್ಪಷ್ಟ. ರೆಡ್ಡಿ ಲೂಟಿಯಲ್ಲಿ ಸಕ್ರಿಯವಾಗಿದ್ದ ಅರುಣಲಕ್ಷ್ಮಿ ತನ್ನ ಗಂಡನ ರಾಜಕೀಯ ಅಸ್ತಿತ್ವವನ್ನು ಪುನರ್ ಸ್ಥಾಪಿಸಲು ಆಕೆ ತಯಾರಿ ನಡೆಸಿರುವುದಂತೂ ಗ್ಯಾರಂಟಿ.

ಜನಾರ್ದನ ರೆಡ್ಡಿ ಜೈಲು ಸೇರಿದ ನಂತರ ಶ್ರೀರಾಮುಲು ವಿಚಿತ್ರ ವರಸೆಯ ರಾಜಕಾರಣವನ್ನು ಪ್ರಾರಂಭಿಸಿದ್ದಾನೆ. ಬಿಜೆಪಿಯಿಂದ ಹೊರಬಂದು ಬಿಎಸ್‌ಆರ್ ಕಾಂಗ್ರೆಸ್ ಎಂಬ ಪ್ರಾದೇಶಿಕ ಪಾರ್ಟಿ ಕಟ್ಟಿರುವ ಶ್ರೀರಾಮುಲು ಆ ಪಕ್ಷದ ವತಿಯಿಂದ ತರಹೇವಾರಿ ಕಾರ್ಯಕ್ರಮಗಳನ್ನು ನಡೆಸುತ್ತಿದ್ದಾನೆ. ಆ ಮೂಲಕ ರೆಡ್ಡಿ ಗ್ಯಾಂಗಿನ ರಾಜಕಾರಣದ ಅಸ್ತಿತ್ವವನ್ನು ಜೀವಂತವಾಗಿಡುವ ಪ್ರಯತ್ನವನ್ನು ಮಾಡುತ್ತಿದ್ದಾನೆ.

ಬಳ್ಳಾರಿಯಿಂದ ಕೇಳಿಬಂದಿರುವ ಒಂದು ವರ್ತಮಾನದ ಪ್ರಕಾರ ಜ.ರೆಡ್ಡಿಯ ಆಪ್ತಸಹಾಯಕನಾಗಿದ್ದ ಪ್ರಕಾಶ ಎನ್ನುವವನಿಗೆ ಸಿಬಿಐ ನೋಟಿಸು ಜಾರಿ ಮಾಡಿದೆ. ಈ ಪ್ರಕಾಶ ಮತ್ತು ಸುರೇಶ್ ಬಾಬುವೇ 45 ಕೋಟಿ ರೂಪಾಯಿಗಳನ್ನು ಹೈದರಾಬಾದಿಗೆ ತಂದು ನ್ಯಾಯಾಧೀಶ ಪಟ್ಟಾಭಿರಾಮ ರಾವ್‌ಗೆ ತಲುಪಿಸಿದ್ದೆಂದು ಬಾಯಿಬಿಟ್ಟಿದ್ದಾರೆ. ಅಷ್ಟೇ ಅಲ್ಲ, ಈಗ ಜೈಲುಪಾಲಾಗಿರುವ ಸೋಮಶೇಖರ ರೆಡ್ಡಿ ಕೂಡ ಎಸಿಬಿ ಪೊಲೀಸರಿಗೆ ಈ ಬೇಲು ಡೀಲನ್ನು ಕುದುರಿಸಿದ್ದೇ ಶ್ರೀರಾಮುಲು ಎಂದು ಹೇಳಿದ್ದಾನಂತೆ. ಇವೆಲ್ಲ ಶ್ರೀರಾಮುಲು ಜೈಲು ದಾರಿಯಲ್ಲಿ ನಿಂತಿರುವುದನ್ನು ಸ್ಪಷ್ಟಪಡಿಸುತ್ತಿವೆ.

ಆಂಧ್ರದಲ್ಲಿ ವೈಎಸ್‌ಆರ್ ಪುತ್ರ ಜಗನ್ ರೆಡ್ಡಿ ಜೈಲಿನಲ್ಲಿದ್ದರೂ ಆತನ ತಾಯಿ ವಿಜಯಮ್ಮ ಮತ್ತು ಪತ್ನಿ ಭಾರತಿ ಹೇಗೆ ಅಲ್ಲಿನ ಮಧ್ಯಂತರ ಚುನಾವಣೆಯಲ್ಲಿ ವೈಎಸ್‌ಆರ್ ಕಾಂಗ್ರೆಸ್‌ಗೆ ಗೆಲುವು ತಂದುಕೊಟ್ಟರೋ ಹಾಗೆಯೇ ಇಲ್ಲಿಯೂ ಅರುಣಾಲಕ್ಷ್ಮಿಯಿಂದಾಗಿ ಬಿಎಸ್‌ಆರ್ ಕಾಂಗ್ರೆಸ್‌ಗೆ ಮತದಾರರ ಸಿಂಪತಿ ಹರಿದುಬರುತ್ತದೆ, ಕನಿಷ್ಟಪಕ್ಷ ಇಪ್ಪತ್ತು ಜನರನ್ನು ಗೆಲ್ಲಿಸಲು ಆಕೆಯ ಕಣ್ಣೀರು ನೆರವಾಗುತ್ತದೆ ಎಂಬ ತರ್ಕ ಇದರ ಹಿಂದಿರುವಂತಿದೆ.

ತಮ್ಮ ಪಾರ್ಟಿಯಿಂದ ಬಳ್ಳಾರಿ, ಕಂಪ್ಲಿ, ರಾಯಚೂರು, ಚಿತ್ರದುರ್ಗ, ಗದಗ ಸೇರಿದಂತೆ ಇತರೆ ಹೈದರಾಬಾದು ಕರ್ನಾಟಕ ಪ್ರದೇಶದಿಂದ ಕನಿಷ್ಟ 20ರಿಂದ 25 ಗೆಲ್ಲಿಸುವ ಕನಸು ಶ್ರೀರಾಮುಲು ಗ್ಯಾಂಗಿನದ್ದಾಗಿದೆ. ಹಾಗೊಂದು ಅವರ ಕನಸು ನನಸಾದರೆ ಮುಂದಿನ ಸಮ್ಮಿಶ್ರ ಸರ್ಕಾರದಲ್ಲಿ ತಾವೇ ಕಿಂಗ್‌ಮೇಕರ್ ಎಂಬ ಭ್ರಮೆಯನ್ನು ಹಲವು ಬುದ್ಧಿಜೀವಿಗಳು ಶ್ರೀರಾಮುಲು ಮೆದುಳಿನಲ್ಲಿ ಹುಟ್ಟಿಸಿದ್ದಾರೆ. ಸ್ವಲ್ಪ ದಿನಗಳಲ್ಲೇ ಸೋಮಶೇಖರ ರೆಡ್ಡಿಯ ಧರ್ಮಪತ್ನಿಯೂ ರಾಜಕೀಯ ರಂಗಕ್ಕೆ ಎಂಟ್ರಿ ಕೊಟ್ಟರೆ ಅಚ್ಚರಿಪಡುವ ಆಗತ್ಯವೇನಿಲ್ಲ.

ಮತ್ತೊಂದು ವರ್ತಮಾನದ ಪ್ರಕಾರ ಈಗಾಗಲೆ ಜೈಲು ದಾರಿಯಲ್ಲಿರುವ ಶ್ರೀರಾಮುಲುವನ್ನು ಸಿಬಿಐ ಬಂಧಿಸಿದರೆ ಬಿಎಸ್‌ಆರ್ ಕಾಂಗ್ರೆಸ್ ಪಕ್ಷದ ಧಣಿ ಯಾರಾಗಬೇಕು ಎನ್ನುವ ಸಮಾಲೋಚನೆಯೂ ಶುರುವಾಗಿದೆ. ಹಾಗೊಂದುವೇಳೆ ಶ್ರೀರಾಮುಲು ಜೈಲಿಗೆ ಹೊರಟುನಿಂತರೆ ಎಂದೇ ಅರುಣಾಲಕ್ಷ್ಮಿಗೆ ಕಂಪ್ಲಿ ಸಭೆಯಿಂದ ರಾಜಕೀಯ ತರಬೇತಿ ಶುರುಮಾಡಲಾಗಿದೆ ಎಂಬ ಮಾತು ಕೇಳಿಬರುತ್ತಿದೆ.

ಒಟ್ಟಾರೆಯಾಗಿ, ರೆಡ್ಡಿ ಗ್ಯಾಂಗಿನ ಸದಸ್ಯರು ಒಬ್ಬೊಬ್ಬರಾಗಿ ಜೈಲು ಸೇರುತ್ತಿರುವಾಗ ಬಳ್ಳಾರಿಯಲ್ಲಿ ರೆಡ್ಡಿ ರಾಜಕಾರಣದ ಭದ್ರಕೋಟೆ ಪ್ರಪಾತಕ್ಕೆ ಕುಸಿಯುತ್ತಿದೆ ಎಂಬುದಂತೂ ಗ್ಯಾರಂಟಿ. ಆದರೂ ಇಂತಹ ಅನುಕೂಲ ಪರಿಸ್ಥಿತಿಯನ್ನು ಕಾಂಗ್ರೆಸಿಗರು ಬಳಸಿಕೊಳ್ಳುವ ಮುನ್ಸೂಚನೆಗಳು ಕಂಡುಬರುತ್ತಿಲ್ಲ. ಇಲ್ಲಿರುವ ಕೊಂಡಯ್ಯ, ಅಲ್ಲಂ ವೀರಭದ್ರಪ್ಪ ದಿವಾಕರ ಬಾಬು ತರಹದ ಕಾಂಗ್ರೆಸ್ ನಾಯಕರು ದನಿ ಕಳೆದುಕೊಂಡವರಂತೆ ಆಗಿದ್ದಾರೆ. ಹಾಗೆ ನೋಡಿದರೆ ಲಾಡ್ ಸಹೋದರರೇ ಕೊಂಚ ದನಿ ಎತ್ತಿ ಮಾತನಾಡುತ್ತಿದ್ದಾರೆ.

ರೆಡ್ಡಿ ಗ್ಯಾಂಗಿನ ರಾಜಕೀಯದ ಸಮಾಧಿಯ ಮೇಲೆ ನಡೆಯುವ ಲಾಡ್ ಮತ್ತು ದಿವಾಕರ ಬಾಬು ಅವರುಗಳ ರಾಜಕೀಯ ಕದನವನ್ನು ನಿರ್ಲಕ್ಷಿಸುವಂತಿಲ್ಲ. ಆಗ ಕಾಂಗ್ರೆಸ್ ಮನೆಯಲ್ಲೂ ರಾಜಕೀಯ ನಾಯಕತ್ವಕ್ಕೆ ಮತ್ತೊಂದು ಹಂತದ ಕದನ ಕುತೂಹಲ ಪ್ರಾರಂಭವಾಗುತ್ತದೆ.

ಸದ್ಯ ಬಳ್ಳಾರಿ ರಾಜಕಾರಣವೇ ಕುದಿಯುವ ಕುಲುಮೆಯಂತಿದೆ. ರೆಡ್ಡಿ ಗ್ಯಾಂಗಿನ ರಾಜಕೀಯ ಅಧಃಪತನದ ಅಂಚಿನಲ್ಲಿರುವಾಗಲೇ ಕಾಂಗ್ರೆಸ್‌ನ ಕದನವೂ ಚಿಗುರಿಕೊಳ್ಳುವುದು ಬಳ್ಳಾರಿಗೆ ಹೊಸದೊಂದು ರಾಜಕೀಯ ಕಂಟಕ ಎಂಟ್ರಿ ಕೊಟ್ಟಂತಾಗುವುದು ಗ್ಯಾರಂಟಿ.

● ಟಿ.ಎನ್.ಷಣ್ಮುಖ




ನಿಗಮದ ಗೋದೌನಿಗೆ ಬಂದ ಹುಳುಬಿದ್ದ ಅಕ್ಕಿ



ಮಂತ್ರಿ ಜೀವರಾಜ್ ಇಲಾಖೆಯಲ್ಲಿ ಅಕ್ಕಿ ಖರೀದಿ ಹಗರಣ


ಬಡವರೇ ಎಚ್ಚರಿಕೆ! ಬರಲಿದೆ ಕೊಳೆತ ಅಕ್ಕಿ!



ನಾಡಿನ ಅಸಂಖ್ಯಾತ ಬಡಬಗ್ಗರು, ಕೂಲಿಗಳು, ರೈತಾಪಿ, ಜನಸಾಮಾನ್ಯರ ಹೊಟ್ಟೆಗೆ ಕನ್ನ ಹಾಕುವ ಬಿಜೆಪಿಯ ದುರುಳತನಕ್ಕೆ ಈಗ ಪಡಿತರ ವಿತರಣೆಯ ಪ್ರಾರಬ್ಧ ಕರ್ಮವೂ ಕೈಜೋಡಿಸುತ್ತಿದೆ. ಡಿ.ಎನ್. ಜೀವರಾಜ್ ಎಂಬ ಗೋಮುಖ ನಾಯಕನನ್ನು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಗೆ ಮಂತ್ರಿ ಮಾಡಿ ಹರೀಶ್ ಗೌಡರಂಥ ನಿಷ್ಠುರ ಅಧಿಕಾರಿಯನ್ನು ಇಲಾಖಾ ಮುಖ್ಯಸ್ಥರನ್ನಾಗಿ ಮಾಡಿಯೂ ಬಡವರ ಹೊಟ್ಟೆಗೆ ಕನ್ನ ಹಾಕುವ ಬಿಜೆಪಿ ಭ್ರಷ್ಟಾಚಾರ ಮಾತ್ರ ತಗ್ಗುತ್ತಿಲ್ಲ-ಕುಗ್ಗುತ್ತಿಲ್ಲ.

ನಿನ್ನೆಮೊನ್ನೆಯ ತನಕ ಶೋಭಾ ಕರಂದ್ಲಾಜೆಯ ಕೈಯಲ್ಲಿದ್ದ ಆಹಾರ ಮತ್ತು ನಾಗರಿಕ ಸರಬರಾಜು ಖಾತೆಯಲ್ಲೀಗ ಹೆಗ್ಗಣಗಳದ್ದೇ ಕಾರುಬಾರು. ಇಂಧನ ಖಾತೆಯ ಜೊತೆ ಯಡ್ಡಿ ಜೈಲು ಯಾತ್ರೆ, ಖಾಸಗಿ ಆಸ್ತಿಪಾಸ್ತಿಗಳ ಮೇಜುವಾನಿಕೆ ಮತ್ತು ವ್ಯರ್ಥ ರಾಜಕೀಯ ತಾಪತ್ರಯದಲ್ಲೇ ಕಾಲ ಕಳೆದ ಕರಂದ್ಲಾಜೆಗೆ ನಾಡಿನ ಕೋಟ್ಯಂತರ ಜನಸಾಮಾನ್ಯರ ಹೊಟ್ಟೆ ಪಾಡಾದ ಪಡಿತರ ವ್ಯವಸ್ಥೆಯ ಬಗ್ಗೆ ತಲೆಕೆಡಿಸಿಕೊಳ್ಳಲು ಟೈಮಾದರೂ ಎಲ್ಲಿತ್ತು? ಇಂಥ ಅವ್ಯವಸ್ಥೆ, ಅರಾಜಕ, ಅತಂತ್ರ ಪರಿಸ್ಥಿತಿಯ ಲಾಭ ಪಡೆದು ಸರಿಸುಮಾರು ಸಾವಿರ ಕೋಟಿ ರೂಪಾಯಿಗಳ ಪಡಿತರ ಲೂಟಿಯೊಂದು ಸದ್ದಿಲ್ಲದೆ ನಡೆದಿದೆ. ಗಣಿಲೂಟಿ, ಬರಗಾಲ, ಬಿಜೆಪಿಯ ಅಂತಃಕಲಹ, ಧರ್ಮಾಂಧರ ಅಟ್ಟಹಾಸಗಳ ಮಧ್ಯೆ ನಾಡಿನ ಬಡಬಗ್ಗರು, ಜನಸಾಮಾನ್ಯರ ಹೊಟ್ಟೆಗೇ ಹೊಡೆಯುವ ಭಾರೀ ಅಕ್ಕಿ ಖರೀದಿ ಕರ್ಮಕಾಂಡವೊಂದನ್ನು ಪತ್ರಿಕೆ ಈ ಮೂಲಕ ಬಯಲಿಗೆಳೆಯುತ್ತಿದೆ.

ಸದ್ಯ ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ಅಧ್ಯಕ್ಷನಾಗಿರುವುದು ಚನ್ನಪಟ್ಟಣದ ಮಾಜಿ ಶಾಸಕ ಎಂ.ಸಿ. ಅಶ್ವಥ್. ಲಾಭ ಮತ್ತು ರೊಕ್ಕ ಹುಟ್ಟುತ್ತದೆಯೆಂದರೆ ಪಕ್ಷ, ಮತದಾರರು, ಸಂಬಂಧ, ಸ್ನೇಹ, ಋಣ ಯಾವುದನ್ನೂ ಲೆಕ್ಕಿಸದೇ ಯಾವ ಹೊಲಸು ಗುಂಡಿಗೆ ಬೇಕಾದರೂ ನೆಗೆಯಬಲ್ಲ ಈ ಅಶ್ವಥನೇ ಸಾವಿರ ಕೋಟಿಯ ಅಕ್ಕಿ ಖರೀದಿ ಹಗರಣದ ಮೂಲ ಪುರುಷ. ಈತನಿಗೆ ಲೂಟಿಯ ಟೆಕ್ನಿಕ್ಕು ಹೇಳಿಕೊಟ್ಟವನು ಇದೇ ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ಜನರಲ್ ಮ್ಯಾನೇಜರ್ ಅರ್ಥಾತ್ ಪ್ರಧಾನ ವ್ಯವಸ್ಥಾಪಕ ಎಂ.ಕುಮಾರ್!





ಆಹಾರ ಮತ್ತು ನಾಗರಿಕ ಸರಬರಾಜು ನಿಗಮ

ಪ್ರತಿವರ್ಷ ನಾಡಿನ ಸಹಸ್ರಾರು ನ್ಯಾಯಬೆಲೆ ಅಂಗಡಿಗಳ ಮೂಲಕ ಸರಿಸುಮಾರು ಸಾವಿರ ಕೋಟಿ ರೂಪಾಯಿ ಬೆಲೆಬಾಳುವ ಅಕ್ಕಿಯನ್ನು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ವಿತರಿಸುತ್ತದೆ. ಬಿಪಿಎಲ್ ಕಾರ್ಡುದಾರರಿಗೆ ಕೆ.ಜಿ.ಗೆ 3 ರೂ. ನಂತೆ ಮತ್ತು ಎಪಿಎಲ್ ಕಾರ್ಡುದಾರರಿಗೆ 10 ರೂ.ನಂತೆ ರಾಜ್ಯದ ಕೋಟ್ಯಾಂತರ ರೈತಾಪಿ, ಜನಸಾಮಾನ್ಯರು ಬಳಸುವುದು ಇದೇ ಅಕ್ಕಿಯನ್ನು. ಈ ಹಿಂದೆ ಕೆಲವು ಸರ್ಕಾರದ ಸೆಂಟ್ರಲ್ ವೇರ್‌ಹೌಸ್‌ನಿಂದಲೇ ಇದಕ್ಕೆಂದು ಸರ್ಕಾರ ಅಕ್ಕಿ ಖರೀದಿಸುತ್ತಿದ್ದದ್ದು ಕಳೆದ ಕೆಲ ವರ್ಷಗಳಿಂದ ಕರ್ನಾಟಕದ ಬೇರೆ ಬೇರೆ ಜಿಲ್ಲೆಗಳ ರೈತರಿಂದ ಖರೀದಿಸಲಾರಂಭಿಸಿದೆ. ಕ್ವಿಂಟಾಲಿಗೆ 1300 ಅಥವಾ 1500 ರಂತೆ ರಾಜ್ಯದ ಬೇರೆ ಬೇರೆ ಭಾಗಗಳಿಂದ ಖರೀದಿಸಲ್ಪಡುವ ಇಂಥ ಅಕ್ಕಿಯನ್ನು ಸರಬರಾಜು ಮಾಡಲೆಂದೇ ರಾಜ್ಯಾದ್ಯಂತ ಏಜೆಂಟರು, ಅಕ್ಕಿಗಿರಣಿಗಳು, ನಿಗಮದ ಅಧಿಕಾರಿಗಳು ಕಾರ್ಯ ನಿರ್ವಹಿಸುತ್ತಿರುತ್ತಾರೆ. ವರ್ಷವೊಂದಕ್ಕೆ ಇದೇ ಸಾವಿರ ಕೋಟಿಗೂ ಮೀರಿದ ವ್ಯವಹಾರವಾಗುತ್ತದೆ. ನಿಗಮದ ಪ್ರಧಾನ ವ್ಯವಸ್ಥಾಪಕ ಎಂ. ಕುಮಾರ್ ಬಿಡುಗಡೆ ಮಾಡಿದ ಹೇಳಿಕೆಯ ಪ್ರಕಾರವೇ ಈ ವರ್ಷ ಶಿಕಾರಿಪುರ, ಶಿರಾಳಕೊಪ್ಪ ಇತ್ಯಾದಿ ಊರುಗಳಿಗೆ ಶಿವಮೊಗ್ಗ ಜಿಲ್ಲೆಯೊಂದರಿಂದಲೇ 152 ಕೋಟಿ ರೂಪಾಯಿ ಮೊತ್ತದ ಅಕ್ಕಿಯನ್ನು ಖರೀದಿಸಲಾಗಿದೆ. ಇನ್ನು ಉತ್ತರಕನ್ನಡ, ಹಾವೇರಿ, ದಾವಣಗೆರೆ, ಮೈಸೂರು, ಬಳ್ಳಾರಿ, ಧಾರವಾಡ ಜಿಲ್ಲೆಗಳಿಂದ ಕನಿಷ್ಠ 50 ಕೋಟಿ ಯಿಂದ 100 ಕೋಟಿಯಷ್ಟು ಮೊತ್ತದ ಲಕ್ಷಾಂತರ ಕ್ವಿಂಟಾಲುಗಳಷ್ಟು ಅಕ್ಕಿಯನ್ನು ಖರೀದಿಸಲಾಗಿದೆ.

ಹೀಗೆ 1000 ಕೋಟಿಗೂ ಅಧಿಕ ಮೊತ್ತದ ಭತ್ತವನ್ನು ಖರೀದಿಸಿ ಅದನ್ನು ಗಿರಣಿಗಳ ಮೂಲಕ ಅಕ್ಕಿ ಮಾಡಿಸಿ ಅದನ್ನೇ ನಾಡಿನ ನ್ಯಾಯಬೆಲೆ ಅಂಗಡಿಗಳಿಗೆ ವಿತರಿಸಿದರೆ ಅಕ್ಕಿಯ ತಾಜಾತನಕ್ಕಾಗಲಿ, ಗುಣಮಟ್ಟದಲ್ಲಾಗಲಿ ಯಾವುದೇ ವ್ಯತ್ಯಾಸವಾಗುವುದಿಲ್ಲ. ಕನಿಷ್ಠ ಕಳೆದ ವರ್ಷದ ಅಕ್ಕಿಯಾದರೂ ಅದು ಕೊಳೆಯಲು, ಹುಳಹಿಡಿಯಲು ಅಥವಾ ಮುಗ್ಗಲು ಅಕ್ಕಿಯಾಗಲು ಸಾಧ್ಯವಿಲ್ಲ.

ಆದರೆ ಈಗ ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ಯಶವಂತಪುರದ ಎರಡು ಗೋಡೌನುಗಳಿಗೆ ಇಲ್ಲಿಗೆ ವಾರದ ಹಿಂದೆ ಬಂದ ಎರಡು ಲಕ್ಷ ಕ್ವಿಂಟಾಲ್ ಅಕ್ಕಿಯನ್ನು ನೋಡಿಬಿಟ್ಟರೆ ಅದರ ದುರ್ನಾತಕ್ಕೇ ತಲೆಸುತ್ತು ಬಂದು ಬೀಳಬೇಕು. ವಿಜಯನಗರದ ಉಗ್ರಾಣಕ್ಕೆ ಬಂದ 12 ಲೋಡು ಲಾರಿಗಳ ತುಂಬ ಇದ್ದದ್ದು ಹುಳಬಿದ್ದ ಮುಗ್ಗಲು ಅಕ್ಕಿಯೆ. ಇದೇ ರೀತಿ ರಾಮನಗರದ ಗೋಡೌನಿಗೆ, ಹಾಸನದ ಉಗ್ರಾಣಕ್ಕೆ, ಹಾವೇರಿ, ಹುಬ್ಬಳ್ಳಿ, ರಾಯಚೂರು, ಕೊಪ್ಪಳ ಇತ್ಯಾದಿ ಜಿಲ್ಲೆಗಳ ನಿಗಮದ ಗೋಡೌನುಗಳಿಗೆ ಬಂದ ಲಕ್ಷಗಟ್ಟಲೇ ಕ್ವಿಂಟಾಲುಗಳಷ್ಟು ಅಕ್ಕಿಯು ಮನುಷ್ಯ ಸೇವನೆಗೆ ಯೋಗ್ಯವಾಗಿಲ್ಲ. ಈಗಾಗಲೇ ಹುಳಹಿಡಿದು ದುರ್ನಾತ ಬೀರುತ್ತಿದೆ. ಕಾನೂನು ಪ್ರಕಾರ ಇದನ್ನು ಜನರಿಗೆ ವಿತರಿಸುವುದೇ ಅಪರಾಧ; ಇತ್ಯಾದಿ ಕಾರಣಗಳನ್ನೊಡ್ಡಿ ಅಲ್ಲಿನ ಗೋಡೌನ್ ಮ್ಯಾನೇಜರ್‌ಗಳು, ನಿಗಮದ ಜಿಲ್ಲಾ ವ್ಯವಸ್ಥಾಪಕರುಗಳು ಅಕ್ಕಿಯನ್ನು ತಿರಸ್ಕರಿಸಿದ್ದಾರೆ ಮತ್ತು ಕೇಂದ್ರ ಕಚೇರಿಗೆ ಅಧಿಕೃತವಾಗಿ ದೂರು ಸಲ್ಲಿಸಿದ್ದಾರೆ.

ವಿಪರ್ಯಾಸವೆಂದರೆ ಇಂಥ ಮುಗ್ಗಲು, ದುರ್ನಾತದ ಅಕ್ಕಿಯನ್ನೇ ನ್ಯಾಯಬೆಲೆ ಅಂಗಡಿಗಳಿಗೆ ವಿತರಿಸಿ ಕೈತೊಳೆದುಕೊಳ್ಳುವಂತೆ ಆಯಾ ಗೋಡೌನುಗಳ ಮ್ಯಾನೇಜರುಗಳಿಗೆ ನಿಗಮದ ಪ್ರಧಾನ ವ್ಯವಸ್ಥಾಪಕ ಕುಮಾರ್ ದಬಾಯಿಸುತ್ತಿದ್ದಾನೆ. ಅಕ್ಕಿ ಚೆನ್ನಾಗಿರಲಿ, ಬಿಡಲಿ ಅದನ್ನು ನೀವ್ಯಾರ್ರೀ ನಿರ್ಧರಿಸೋಕೆ? ಬಾಯಿ ಮುಚ್ಚಿಕೊಂಡು ಡೌನ್ ಲೋಡ್ ಮಾಡಿಕೊಳ್ರೀ...? ಎಂದು ಆಯಾ ಜಿಲ್ಲೆಯ ಗೋದಾಮುಗಳ ಸಿಬ್ಬಂದಿಯನ್ನು ಬೆದರಿಸುತ್ತಿರುವ ಜನರಲ್ ಮ್ಯಾನೇಜರ್ ಕುಮಾರ್ ಹೇಳಿಕೇಳಿ ನಿಗಮದ ಅಧ್ಯಕ್ಷ ಅಶ್ವಥನ ಚೇಲಾ.



ಅಧ್ಯಕ್ಷ ಎಂ.ಸಿ. ಅಶ್ವಥ್

ಇಡೀ ಅಕ್ಕಿ ಖರೀದಿ ಕರ್ಮಕಾಂಡಕ್ಕೆ ಈತನೇ ರೂವಾರಿ. ಈತ ನಿಗಮಕ್ಕೆ ಕಾಲಿಟ್ಟು ಇವತ್ತಿಗೆ ಮೂರು ವರ್ಷಗಳಾಗಿವೆ. ಯಾರ್ಯಾರು ಪ್ರಾಮಾಣಿಕರಿದ್ದರೋ, ವಿವಿಧ ಗೋಡೌನುಗಳಲ್ಲಿ ನಿಯತ್ತಾಗಿ ದುಡಿಯುತ್ತಿದ್ದರೋ ಅಂಥವರನ್ನೆಲ್ಲ ನೀರು ನೆರಳಿಲ್ಲದ ಜಾಗಕ್ಕೆ ಎತ್ತಂಗಡಿ ಮಾಡಿ ಪ್ರತಿ ಗೋಡೌನಿಗೂ ತನ್ನ ಚೇಲಾಗಳನ್ನೇ ಎರವಲು ಸೇವೆಯ ಮೇ[illegible] ನೇಮಿಸಿಕೊಂಡು ಭಾರೀ ಲೂಟಿಯೊಂದಕ್ಕೆ ಕಳೆದೊಂದ[illegible] ವರ್ಷದಿಂದ ಈತ ಮಾಡಿಕೊಂಡ ತಯಾರಿಯೇ ಸದ್ಯ[illegible] ಅಕ್ಕಿ ಖರೀದಿ ಹಗರಣದ ಮೂಲಕಾರಣ. ಇಂಥ ಹಗರಣ[illegible] ಮತ್ತೊಬ್ಬ ಮೂಲಪುರುಷನೇ ಶಿವಮೊಗ್ಗದ ಕುಖ್ಯಾ[illegible] ಅಕ್ಕಿ ಸ್ಮಗ್ಲರ್ ಸುರಕ್ಷಾ ನಾಗರಾಜ್!

ಶಿಕಾರಿಪುರ, ಶಿವಮೊಗ್ಗ, ಸಾಗರ, ಭದ್ರಾವತಿ ಇತ್ಯಾ[illegible] ಊರುಗಳಲ್ಲಿ ಬರೋಬ್ಬರಿ ಒಂದು ಡಜನ್ ಅ[illegible] ಗೋಡೌನುಗಳನ್ನು ಹೊಂದಿರುವ ಸುರಕ್ಷಾ ನಾಗರಾಜನಿ[illegible] ಶಿವಮೊಗ್ಗ ಜಿಲ್ಲೆಯಲ್ಲಿ ಬೇಕಾಬಿಟ್ಟಿ ಅಕ್ಕಿ ಗಿರಣಿಗಳಿವ[illegible] ಹೇಳಿಕೇಳಿ ಯಡಿಯೂರಪ್ಪ ಮತ್ತು ಉಪಮುಖ್ಯಮಂ[illegible] ಈಶ್ವರಪ್ಪಗೆ ಈತ ಪರಮಾಪ್ತ. ಆ ಕಾಲದಿಂದಲೂ ಪ್ರ[illegible] ಚುನಾವಣೆಯಲ್ಲಿ ಯಡ್ಡಿ, ಈಶ್ವರಪ್ಪ, ಯಡ್ಡಿ ಮಗ ರಾಘ[illegible] ಮುಂತಾದವರಿಗೆಲ್ಲಾ ಲಕ್ಷಗಟ್ಟಲೇ ಫಂಡು ಕೊಡುತ್ತಾನೆ[illegible] ಈತನಿಗೆ ತಮಿಳುನಾಡಿನ ಅಕ್ಕಿ ಸ್ಮಗ್ಲರುಗಳ ಜೊತೆಗೂ[illegible] ನಂಟಿದೆ. ರಾಜ್ಯದ ಬೇರೆ ಬೇರೆ ಭಾಗಗಳಲ್ಲಿನ ರೈಸ್‌ಮಿಲ್[illegible] ಧಣಿಗಳು ಕಳೆದ ಐದಾರು ವರ್ಷಗಳಿಂದ ಒಳ್ಳೇ ರೇಟು[illegible] ಬರುತ್ತದೆಯೆಂದು ಸಂಗ್ರಹಿಸಿ ಇಟ್ಟುಕೊಂಡಿದ್ದ ಅಕ್ಕಿ[illegible] ಹುಳಬಿದ್ದು ಮುಗ್ಗಲಾಗಿ ದುರ್ನಾತ ಬೀರುತ್ತಿತ್ತಲ್ಲ; ಕಸದ[illegible] ತಿಪ್ಪೆಗೋ, ಗೊಬ್ಬರಕ್ಕೋ ಬಳಸಬೇಕಿದ್ದ ಇಂಥ ಅಕ್ಕಿಯನ್ನೆ[illegible] ಸುರಕ್ಷಾ ನಾಗರಾಜ್ ಕಳೆದೆರಡು ವರ್ಷಗಳಿಂದ ಖರೀದಿಸತೊಡಗಿದ್ದ.

ಹೀಗೆ ಸುರಕ್ಷಾ ನಾಗರಾಜ್ ಕಲೆಹಾಕಿದ್ದ ಸರಿಸುಮಾರು ಏಳುಲಕ್ಷ ಕ್ವಿಂಟಾಲ್‌ಗಳಷ್ಟು ಅಕ್ಕಿಯನ್ನು ಉಪಾಯವಾಗಿ ಪಡಿತರ ವ್ಯವಸ್ಥೆಯೊಳಕ್ಕೆ ತೂರಿಸುವ ಷಡ್ಯಂತ್ರವೊಂದನ್ನು ರೂಪಿಸಿಯೇ ನಾಗರಾಜ್ ನಿಗಮದ ಜನರಲ್ ಮ್ಯಾನೇಜರ್ ಕುಮಾರ್ ಮತ್ತು ಅಧ್ಯಕ್ಷ ಎಂ.ಸಿ.ಅಶ್ವಥನ ಜೊತೆ ಡೀಲು ಕುದುರಿಸಿದ್ದಾನೆ. ಆ ಪ್ರಕಾರ ಕೆ.ಜಿ. ಮುಗ್ಗಲು ಅಕ್ಕಿಗೆ ಕನಿಷ್ಠ 10 ರೂ. ನಂತೆ ಲಾಭವಾದರೂ ಏಳು ಲಕ್ಷ ಕ್ವಿಂಟಾಲಿಗೆ ಅದೇ 70 ಕೋಟಿಯಾಗುತ್ತದೆ. ಮಿಕ್ಕಂತೆ ತಮಿಳುನಾಡಿನ ಪಡಿತರ ಲೂಟಿಯ ಕಳಪೆ ಅಕ್ಕಿ ಮತ್ತು ರಾಜ್ಯದ ಬೇರೆ ಬೇರೆ ರೈಸ್‌ಮಿಲ್ಲುಗಳಲ್ಲಿ ಕೊಳೆಯುತ್ತಿರುವ ಕಳಪೆ ಅಕ್ಕಿಯನ್ನು ಪಡಿತರ ವಿತರಣೆಯ ಹೊಸ ಅಕ್ಕಿಯ ಜೊತೆ ಅರ್ಧಕ್ಕರ್ಧ ಪ್ರಮಾಣದಲ್ಲಿ ಬೆರೆಸುವುದು ಮತ್ತು ಸರಿಸುಮಾರು ಐದು ಲಕ್ಷ ಕ್ವಿಂಟಾಲುಗಳಷ್ಟು ನುಚ್ಚನ್ನು ಉತ್ತಮದರ್ಜೆಯ ಅಕ್ಕಿಯ ಜೊತೆ ಮಿಶ್ರಣ ಮಾಡುವ ಎರಡನೇ ಹಂತದ ಲೂಟಿಯ ಏರ್ಪಾಡೂ ಆಗಿದೆ.

ಈ ಎಲ್ಲ ಕಾರಸ್ಥಾನ ಯಶಸ್ವಿಯಾಗಿ ಮುಗಿಯಿತೆಂದರೆ ಅದು ಕನಿಷ್ಠ 150 ಕೋಟಿ ರೂಪಾಯಿಗಳ ಲಾಭ ತರುತ್ತದೆ ಮತ್ತು ಸಾವಿರ ಕೋಟಿ ರೂಪಾಯಿಗಳ ಅಕ್ಕಿ ಖರೀದಿಯ ಮಧ್ಯೆ ಅದರಲ್ಲಿ ಅರ್ಧಕ್ಕರ್ಧ ಮುಗ್ಗಲು ಅಕ್ಕಿ ಬೆರೆತಿರುವುದು ಯಾರ ಗಮನಕ್ಕೂ ಬರುವುದಿಲ್ಲ ಎಂದೇ ಇವರ ಲೆಕ್ಕಾಚಾರವಾಗಿತ್ತು.



ಸಮೇತ ವ್ಯವಸ್ಥಾಪಕ ನಿರ್ದೇಶಕ ನಿಗಮದ ಜಗದೀಶ್ ಪತ್ತೆ ಹಚ್ಚಿದ್ದರು. ಇನ್ನೇನು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖಾ ಕಾರ್ಯದರ್ಶಿ ಹರೀಶ್‌ಗೌಡರಿಗೆ ಈ ಬಗ್ಗೆ ವರದಿ ನೀಡಬೇಕೆನ್ನುವಷ್ಟರಲ್ಲಿ ಎಲ್ಲಿ ಜೈಲು ಪಾಲಾಗಬೇಕಾಗುತ್ತೋ ಎಂದು ಜಿ.ಎಮ್. ಕುಮಾರ್ ಭೀತಿಗೆ ಬಿದ್ದ. ಅಧ್ಯಕ್ಷ ಅಶ್ವಥನ ತಲೆ ತಿಂದವನೇ ನಿಗಮದ ಮ್ಯಾನೇಜಿಂಗ್ ಡೈರೆಕ್ಟರ್ ಜಗದೀಶ್ ರನ್ನು ಎತ್ತಂಗಡಿ ಮಾಡಿಸಿಬಿಟ್ಟ.

ಇಲ್ಲಿ ಅಧ್ಯಕ್ಷ ಅಶ್ವಥ್ ಮತ್ತು ಜಿಎಮ್ ಕುಮಾರ್‌ಗೆ ಎಂ.ಡಿ.ಯಾಗಿದ್ದ ಜಗದೀಶ್‌ರನ್ನು ಎತ್ತಂಗಡಿ ಮಾಡಿಸಲು ನೆರವಾದವನು ಶಿವಮೊಗ್ಗದ ಅಕ್ಕಿಕಳ್ಳ ಸುರಕ್ಷಾ ನಾಗರಾಜು. ಉಪಮುಖ್ಯಮಂತ್ರಿ ಈಶ್ವರಪ್ಪನನ್ನು ಭೂ ಬಿಟ್ಟೇ ನಾಗರಾಜ್ ಬಂದ ಅದೇ ತಿಂಗಳಲ್ಲಿ ದಲಿತ ಅಧಿಕಾರಿ ಜಗದೀಶ್ ರನ್ನು ಎತ್ತಂಗಡಿ ಮಾಡಿಸಿದ್ದ. ಇಲ್ಲಿಗೆ ವಾರದ ಹಿಂದೆ ಕಣ್ಣೀರಿಟ್ಟುಕೊಂಡೇ ನಿಗಮಕ್ಕೆ ವಿದಾಯ ಹೇಳಿದ ಜಗದೀಶ್ ಜಾಗಕ್ಕೆ ಈಗ ಕಡುಭ್ರಷ್ಟ ಐಎಎಸ್ ಗೋವಿಂದರಾಜುವನ್ನು ತರಲಾಗಿದೆ. ಕರ್ನಾಟಕದ ಬಹುತೇಕ ಗೋಡೌನುಗಳಲ್ಲಿ ಸದ್ಯ ಮುಗ್ಗಲು ಅಕ್ಕಿ ಕೊಳೆಯುತ್ತಿದೆ. ಇಂಥ ಕಳಪೆ ಅಕ್ಕಿಯನ್ನು ವಿತರಿಸಲು ಒಪ್ಪದ ಮತ್ತು ಇಳಿಸಿಕೊಳ್ಳದ ಡಿಪೋ ಮ್ಯಾನೇಜರ್‌ಗಳನ್ನು ರಾತ್ರೋರಾತ್ರಿ ಎತ್ತಂಗಡಿ ಮಾಡುತ್ತಿದ್ದಾರೆ. ಅರ್ಧ ಅಕ್ಕಿ ಈಗಾಗಲೇ ನ್ಯಾಯಬೆಲೆ ಅಂಗಡಿಗಳ ಮೂಲಕ ಬಡಬಗ್ಗರ ಹೊಟ್ಟೆ ಸೇರಿಬಿಟ್ಟಿದೆ.

ಸಾವಿರ ಕೋಟಿ ರೂಪಾಯಿಗಳ, ನಾಡಿನ ಕೋಟ್ಯಂತರ ಬಡಬಗ್ಗರ ಹೊಟ್ಟೆಯ ಪ್ರಶ್ನೆಯಾದ, ಬಿಜೆಪಿ ಸರ್ಕಾರದ ನಿರ್ಲಜ್ಜ ಹಗಲು ದರೋಡೆಯ ಈ ಹಗರಣದ ವಿರುದ್ಧ ಕನಿಷ್ಠ ವಿರೋಧ ಪಕ್ಷಗಳೂ ದನಿಯೆತ್ತದೆ ಹೋದರೆ ಜನಸಾಮಾನ್ಯರ ಪಾಲಿಗಿನ್ನು ಹುಳಬಿದ್ದ ಅಕ್ಕಿಯೇ ಗತಿ!

ಹಾರ 2012ರ ಫೆಬ್ರವರಿಯಿಂದ ಇವತ್ತಿನವರೆಗೆ ತ ಅಕ್ಕಿ ಖರೀದಿಸಿದ, ಭತ್ತವನ್ನು ಗಿರಣಿಗಳಿಗೆ ಕಪಟ ನಾಟಕ ಸಾಂಗವಾಗಿಯೇ ನಡೆಯಿತು. ಸೂಕ್ಷ್ಮವಾಗಿ ಪತ್ತೆ ಹಚ್ಚಿದ್ದು ನಿಗಮದ ವ್ಯವಸ್ಥಾಪಕ ಕರಾಗಿದ್ದ ನಿಷ್ಠಾವಂತ ಐಎಎಸ್ ಅಧಿಕಾರಿ . ಶಿರಾಳಕೊಪ್ಪದ ರೈತನೊಬ್ಬನಿಗೆ ಕೊಟ್ಟಿದ್ದ 30 ರೂಪಾಯಿಗಳ ನಿಗಮದ ಚೆಕ್ ಅನ್ನು 3 ಲಕ್ಷ ಗಳಿಗೆ ತಿದ್ದಿದ್ದ ಜನರಲ್ ಮ್ಯಾನೇಜರ್ ಕುಮಾರ್ ಪದಿಯಲ್ಲೇ ನೂರಾರು ಕೋಟಿಯ ಗೋಲ್‌ಮಾಲ್


ತ್ತಿಗೆ ಆಪ್ತನಾಗಿದ್ದ ಅರಣ್ಯಾಧಿಕಾರಿಯೊಬ್ಬನನ್ನು ಗ್ಗದ ಆಹಾರ ನಿಗಮದ ಜಿಲ್ಲಾ ವ್ಯವಸ್ಥಾಪಕನನ್ನಾಗಿ ಸೇವೆಯ ಮೇಲೆ ತಂದು ಈ ಪಾಟಿ ಕಳಪೆ ತೂರಿಸಲಾಗಿತ್ತು. ಇದೆಲ್ಲವನ್ನು ಸಾಕ್ಷ್ಯಾಧಾರ

● ರಾ.ಸೋಮನಾಥ್

...ಂತ್ರಿ ಜೀವರಾಜ್‌ಗಿದು ಎಚ್ಚರಿಕೆ ಗಂಟೆ

[illegible]

ಹಾರ ಮತ್ತು ನಾಗರಿಕ ಸರಬರಾಜು ನಿಗಮದಂಥ ಸಾಮಾನ್ಯರ ಅನ್ನ ಪಾತ್ರೆಗೆ ಹುಟ್ಟಾ ಕಳ್ಳನಂತೆ ವಕ್ಕರಿಸಿದವನು ಜನರಲ್ ಮ್ಯಾನೇಜರ್ ಕುಮಾರ್. ಕರ್ನಾಟಕಾದ್ಯಂತ ಸರಿಸುಮಾರು 210 ಉಗ್ರಾಣಗಳಿದ್ದು ಪ್ರತಿ ಜಿಲ್ಲೆಗೆ ಎರಡು ಗೋಡೌನುಗಳು ಬರುತ್ತವೆ. ಹಿಂದೆ ಯಾವತ್ತಿಗೂ ನಿಗಮ ಈ ಪಾಟಿ ಕುಲಗೆಟ್ಟಿರಲಿಲ್ಲ. ಕುಮಾರ್ ಪ್ರತಿ ಜಿಲ್ಲೆಯಿಂದ ಆಯಾ ಜಿಲ್ಲಾ ಮ್ಯಾನೇಜರ್‌ಗಳು ತಿಂಗಳಾಂಪ್ರತಿ ಕನಿಷ್ಠ 50 ಸಾವಿರ ರೂ.ಗಳ ಲಂಚ ಬೇಕೆಂದು ಫರ್ಮಾನು ಹೊರಡಿಸಿದ್ದಾನೆ. ಯಾರೋ ಕೇಳಿದ್ದಕ್ಕೆ 'ಏನ್ರೀ ಮಾಡೋದು, ಮಿನಿಸ್ಟರ್ ಜೀವರಾಜ್ ಸಾಹೇಬರಿಗೆ ಮುಂದಿನ ಎಲೆಕ್ಷನ್ನಿಗೆ ಬೇಕು. ಹಾಗೇ ಅಧ್ಯಕ್ಷ ಅಶ್ವಥ್‌ರಿಗೂ ತಿಂಗಳಿಗಿಷ್ಟೆಂದು ಕೊಡಲೇಬೇಕು. ನಾನೆಲ್ಲಿಂದ ತರ್‍ಲಿ. ಪ್ರತಿ ಜಿಲ್ಲೆಯಿಂದ ಮಂತ್ಲಿ ಕೊಡಲೇಬೇಕು...!' ಎಂದು ಆಯಾ ಜಿಲ್ಲಾ ಮ್ಯಾನೇಜರುಗಳಿಗೆ ಧಮಕಿ ಹಾಕಿದ್ದಾನೆ.




ಕುಮಾರ್

ಇನ್ನು ಜಿಲ್ಲಾ ಮ್ಯಾನೇಜರುಗಳು ತಾನೇ ಏನು ಮಾಡಲು ಸಾಧ್ಯ? ಪ್ರತಿ ಗೋಡೌನಿನವರೂ ತಿಂಗಳಿಗೆ ಕನಿಷ್ಠ 20 ಸಾವಿರ ಕಕ್ಕಲೇಬೇಕೆಂದು ವಸೂಲಿಗೆ ನಿಂತಿದ್ದಾರೆ. ಲಂಚ ಹುಟ್ಟಬೇಕೆಂದರೆ ಆಯಾ ಗೋಡೌನುಗಳವರು ನ್ಯಾಯಬೆಲೆ ಅಂಗಡಿಗಳಿಂದ ಸರ್ಕಾರಿ ಅಕ್ಕಿಯನ್ನು ಹೊಟೇಲು, ಅಂಗಡಿಗಳಿಗೆ ಕದ್ದು ಮಾರಿಕೊಂಡು ದೋಚಲೇಬೇಕು. ಇದಲ್ಲದೆ ಅಧ್ಯಕ್ಷ ಅಶ್ವಥನೇ ತನ್ನ ಡ್ರೈವರ್ ಗೌರಿಶಂಕರನನ್ನು ಬಿಟ್ಟು ರಾಜ್ಯಾದ್ಯಂತ ಪ್ರತಿ ...ನಿನಿಂದಲೂ ಕನಿಷ್ಠ 2 ರಿಂದ 3 ಲಕ್ಷ ಎತ್ತುವಳಿಗೆ ಕೈಯಿಟ್ಟಿದ್ದಾನೆ. ಇದು ಸಾರಾಸಗಟು ಎತ್ತುವಳಿಯಾದರೆ ...ರ್ ಕುಮಾರ್ ಮತ್ತು ಆಡಳಿತ ವ್ಯವಸ್ಥಾಪಕ ಗಿರಿಧರ್ ಕಾನಡೆ ಸೇರಿಕೊಂಡು ನಿಷ್ಠಾವಂತ ಕಾರ್ಯಾಧ್ಯಕ್ಷ ...ಲ್ಲ ಆಯಕಟ್ಟಿನ ಹುದ್ದೆಗಳಿಂದ ಎತ್ತಂಗಡಿ ಮಾಡಿ ಅಲ್ಲಿಗೆ ಖದೀಮರನ್ನು ನೇಮಿಸುವ ಫಾರ್ಟ್‌ಟೈಂ ...ಗಿಳಿದಿದ್ದಾರೆ. ಮಾಗಡಿ ಗೋಡೌನಿಗೆ ಓಕಳಿಪುರದಲ್ಲಿ ರೇಷನ್ ಕದಿಯುತ್ತಿದ್ದ ಜಯಹನುಮಯ್ಯ ಎಂಬ ...ತಕನನ್ನು ಮ್ಯಾನೇಜರಾಗಿ ನೇಮಿಸಿದ್ದು ವಸೂಲಿಯ ಕಾರಣಕ್ಕೇ ಹೊರತು ಬೇರೆ ಉದ್ದೇಶವಿಲ್ಲ. ಯಶವಂತಪುರದ ...ಜಿ ಗೋಡೌನಿಗೆ ಜಗದೀಶ್ ಎಂಬ ಕಿಲಾಡಿ ಅಕ್ಕಿ ನುಂಗಣ್ಣನನ್ನು, ಟಿಎಸ್‌ಜಿ ಗೋಡೌನಿಗೆ ಕೇಂದ್ರ ...ದಲ್ಲಿ ಉತ್ಪತ್ತಿಯಲ್ಲದೆ ನೊಣ ಹೊಡೆಯುತ್ತಿದ್ದ ಲೀಲಮ್ಮನನ್ನೂ, ಮಾಗಡಿ ರಸ್ತೆಯ ಪೆಟ್ರೋಲ್ ಬಂಕನ್ನೇ ...ಮೋಚಿದ ಶ್ರೀಧರನನ್ನು ಕೆ.ಜಿ.ಹಳ್ಳಿ ಗೋಡೌನಿಗೂ ತಂದಿರುವುದೇ ಲೂಟಿಯ ಉದ್ದೇಶದಿಂದ. ...ಹಿಂದೆ ಉಗ್ರಾಣ ಶುಗರ್ಸ್ ಧಣಿಗಳ ಹೊಲಸು ತಿಂದು ಕಳಪೆ ಸಕ್ಕರೆ ಹಗರಣಕ್ಕೆ ಕಾರಣನಾದ ಎಂ.ಸಿ.ಶ್ರೀನಿವಾಸ್ 20 ವರ್ಷಗಳಿಂದ ವಿಜಯನಗರದ ಗೋಡೌನ್‌ನನ್ನು ದೋಚುತ್ತಿದ್ದಾನೆ. ಕಳಪೆ ಸಕ್ಕರೆ ಕೇಸಲ್ಲಿ ರೆಡ್‌ಹ್ಯಾಂಡ್ ...ಬಿದ್ದು ಸಸ್ಪೆಂಡಾಗಿದ್ದ ಈತನಿಂದ 5 ಲಕ್ಷ ತಿಂದ ಕುಮಾರ್ ಮತ್ತೆ ವಿಜಯನಗರ ಗೋಡೌನಿಗೆ ಈತನನ್ನು ...ಸುತ್ತಾನೆಂದರೆ, ನಿಗಮದ ನೌಕರರಲ್ಲಿ ಯಾವ ನಿಷ್ಠೆ ನಿಯತ್ತು ಸಾಧ್ಯ?

...ನಾಲ್ಕು ಜಿಲ್ಲೆಗಳ ಮ್ಯಾನೇಜರಿಕೆಯನ್ನು ಹೆಚ್ಚುವರಿಯಾಗಿ ತಾನೇ ವಹಿಸಿಕೊಂಡಿರುವ ಕುಮಾರ್ ತನ್ನ ...ನ್ನೇ ಬಹುತೇಕ ಗೋಡೌನುಗಳಿಗೆ ನೇಮಿಸಿದ್ದಾನೆ. ಇಂಥ ಗೋಡೌನುಗಳು ಪಡಿತರ ವಿತರಣೆಗೆಂದು ...ಅರ್ಧ ರೇಟಿನ ಅಕ್ಕಿ ಸಕ್ಕರೆಯನ್ನು ಬಿಸ್ಕೆಟ್ ಫ್ಯಾಕ್ಟರಿಗಳು, ಬೇಕರಿ, ಹೊಟೇಲುಗಳಿಗೆ ಮಾರಿಕೊಳ್ಳುವ ...ಲ್ಲಿ ಮುಳುಗಿವೆ. ಇಷ್ಟೆಲ್ಲ ದೋಚಲು ಅನುವಾಗಬೇಕಲ್ಲ; ಅದಕ್ಕೆ ಅಧ್ಯಕ್ಷ ಅಶ್ವತ್ಥನನ್ನೇ ಕುಮಾರ್ ಹಳ್ಳಕ್ಕೆ ...ದ್ದಾನೆ. ಅಧ್ಯಕ್ಷನಿಗೆಂದು ನಿಗಮವೇ ಕಾರುಕೊಟ್ಟ ಮೇಲೆ ಅದಕ್ಕೆ ಪ್ರತ್ಯೇಕವಾಗಿ ಪೆಟ್ರೋಲ್ ದುಡ್ಡನ್ನು ...ಡು ಮಾಡುವಂತಿಲ್ಲ. ಏಕೆಂದರೆ ನಿಗಮದ ಬಂಕುಗಳಿಂದಲೇ ಪೆಟ್ರೋಲ್ ಹಾಕಿರುತ್ತಾರೆ. ಹೀಗಿದ್ದೂ ...ಕಾರಿನ ಪೆಟ್ರೋಲಿಗೆಂದು ಕುಮಾರ್ 8 ಲಕ್ಷದ ಬಿಲ್ ಬರೆದಿದ್ದಾನೆ. ಅಷ್ಟೂ ಮೊತ್ತ ಅಧ್ಯಕ್ಷ ಜೇಬು ...ದೆ. ಇದನ್ನು ಪತ್ತೆ ಹಚ್ಚಿದ ಆಡಿಟರ್ ಜನರಲ್ ಪೆಟ್ರೋಲ್ ಹೆಸರಲ್ಲಿ ದೋಚಿದ ದುಡ್ಡನ್ನು ಜಪ್ತಿ ...ಬೇಕೆಂದು ಆದೇಶಿಸಿದ್ದಾರೆ. ಇದಲ್ಲದೆ ಪ್ರತಿಸಿತ್ಯ ಅಧ್ಯಕ್ಷ ಅಶ್ವಥ್‌ನ ಚೇಲಾಗಳು, ಬೆಂಬಲಿಗರು, ನೆಂಟಸ್ಥರಿಗೆಂದೇ ...ಗರದ ತಾಜ್ ಹೋಟೆಲಿನಿಂದ ಬಿರಿಯಾನಿ, ಚಿಕನ್ ಕುರ್ಮಾ ಖರೀದಿಸಿ ನಿಗಮಕ್ಕೆ ನಷ್ಟ ಮಾಡಿದ್ದರ ...ನಿಗಮದ ನೌಕರರೇ ದೂರು ಕೊಟ್ಟಿದ್ದಾರೆ. ಬೇಕಾಬಿಟ್ಟಿ ವರ್ಗಾವರ್ಗಿ, ನೌಕರರನ್ನೇ ಸುಲಿಗೆ ಮಾಡುವ ...ದ್ದಕ್ಕೆ ಜನಸಾಮಾನ್ಯರ ಪಡಿತರವನ್ನೇ ಕಳ್ಳ ಸಾಗಾಣಿಕೆ ಮಾಡುವ ದುರಾಚಾರ ಇತ್ಯಾದಿಗಳ ವಿರುದ್ಧ ಈಗ ...ನೌಕರರೆಲ್ಲ ಸಾರಾಸಗಟಾಗಿ ಅಧ್ಯಕ್ಷ ಅಶ್ವತ್ಥ ಮತ್ತು ಜಿ.ಎಂ. ಕುಮಾರನ ವಿರುದ್ಧ ತಿರುಗಿ ಬಿದ್ದಿದ್ದಾರೆ. ಮಂತ್ರಿ ...ಗಿದು ಎಚ್ಚರಿಕೆಯ ಗಂಟೆ. ತಮ್ಮ ಇಲಾಖೆಗೆ ಸರ್ಜರಿ ಮಾಡದೆ ಹೋದರೆ ರೇಷನ್ ಡಿಪೋಗಳೆದುರು ...ಜನಸಾಮಾನ್ಯರೇ ದೊಣ್ಣೆ ಕೈಗೆತ್ತಿಕೊಳ್ಳುತ್ತಾರೆ.

ರಥಯಾತ್ರೆಗೆ ಯಡ್ಡಿ ಸಜ್ಜು



ತಾನೇ ಮುಖ್ಯಮಂತ್ರಿಯ ಕುರ್ಚಿಯಲ್ಲಿ ಕೂರಿಸಿದ್ದ ಸದಾನಂದ ಗೌಡರನ್ನು ಮತ್ತೆ ತಾನೇ ಪದಚ್ಯುತಗೊಳಿಸಿ ಜಗದೀಶ್ ಶೆಟ್ಟರನ್ನು ಮುಖ್ಯಮಂತ್ರಿಯನ್ನಾಗಿ ಮಾಡಿದ ಹುಮ್ಮಸ್ಸಿನಲ್ಲಿರುವ ಯಡಿಯೂರಪ್ಪ ಈಗ ಬಂಡಾಯದ ಮೂರನೇ ಇನ್ನಿಂಗ್ಸ್‌ನ್ನು ಆರಂಭಿಸಿದ್ದಾರೆ.

ಬರುವ 20 ರಿಂದ ಯಡಿಯೂರಪ್ಪ ರಾಜ್ಯಾದ್ಯಂತ ಪ್ರವಾಸ ಕೈಗೊಳ್ಳುವುದು ಬಹುತೇಕ ಖಚಿತವಾಗಿದೆ. ಈ ಬಗ್ಗೆ ಅವರೇ ಅಧಿಕೃತವಾಗಿ 17ರಂದು ಅಂದರೆ ಶ್ರಾವಣ ಅಮಾವಾಸ್ಯೆಯಂದು ಘೋಷಣೆ ಮಾಡಿದ್ದಾರೆ. ಯಡಿ ಪಕ್ಷದ ರಾಜ್ಯಾಧ್ಯಕ್ಷರಲ್ಲದಿದ್ದರೂ, ಪಕ್ಷದ ಯಾವುದೇ ಮಹತ್ತರ ಹುದ್ದೆಯಲ್ಲಿಲ್ಲದಿದ್ದರೂ ಯಡ್ಡಿ ರಾಜ್ಯಾದ್ಯಂತ ಪ್ರವಾಸ ಹೊರಟಿರುವುದು ಪಕ್ಷದವರಿಗೇ ನಡುಕ ಹುಟ್ಟಿಸಿದೆ.

ಯಡಿಯೂರಪ್ಪನ ಈ ಪ್ರವಾಸ ಯೋಜನೆಯನ್ನು ನೋಡಿದರೆ ಅವರು ಬಿಜೆಪಿ ಪಕ್ಷದ ನಾಯಕರೋ ಅಥವಾ ಬಂಡಾಯ ನಾಯಕರೋ ಎಂಬುದು ಅರ್ಥವಾಗುತ್ತಿಲ್ಲ. ಕೆಲವೊಮ್ಮೆ ಬಿಜೆಪಿಯ ನಾಯಕನಂತೆ ವರ್ತಿಸುವ ಯಡ್ಡಿ ಅವಕಾಶ ಸಿಕ್ಕಾಗಲೆಲ್ಲ ಭಿನ್ನಮತೀಯ ನಾಯಕನಂತೆ ಚೀರಾಡುವುದು ಈಗ ಸಾಮಾನ್ಯವಾಗಿದೆ.

ವಾಸ್ತವವಾಗಿ ರಾಜ್ಯಾದ್ಯಂತ ಪ್ರವಾಸ ಹೊರಡಲು ಯಡ್ಡಿ ಬಹಳ ಹಿಂದೆಯೇ ಸಜ್ಜಾಗಿದ್ದರು. ಅದಕ್ಕಾಗಿ ಒಂದು ವಿಶೇಷವಾದ 'ರಥ'ವನ್ನೂ ತಯಾರು ಮಾಡಿಸಿದ್ದರು. ಆದರೆ ಮೈತುಂಬ ಭ್ರಷ್ಟಾಚಾರದ ಆರೋಪಗಳನ್ನು ಹೊತ್ತಿರುವ ಯಡ್ಡಿ ರಾಜ್ಯಾದ್ಯಂತ ಪ್ರವಾಸ ಹೊರಡುವುದು ಸರಿಯಲ್ಲ ಎಂದು ದೆಹಲಿಯಲ್ಲಿರುವ ಚೆಡ್ಡಿ ನಾಯಕರು ಎರಡು-ಮೂರು ಬಾರಿ ಯಡ್ಡಿಯ ಉದ್ದೇಶಿತ ಪ್ರವಾಸಕ್ಕೆ ಬ್ರೇಕ್ ಹಾಕಿದ್ದರು.

ಆದರೆ ಈಗ ಶೆಟ್ಟರ್ ಅವರನ್ನು ಡ್ರೈವರ್ ಸೀಟಿನಲ್ಲಿ ಕೂರಿಸಿ ತಾನು ಬ್ಯಾಕ್ ಸೀಟ್ ಡ್ರೈವಿಂಗ್ ಮಾಡುತ್ತಿರುವ ಯಡ್ಡಿ ತಾನು ಬಿಜೆಪಿಯ ಹೈಕಮಾಂಡ್‌ಗಿಂತಲೂ ಶಕ್ತಿಶಾಲಿ ಎಂದು ತೋರಿಸಿಕೊಟ್ಟಿದ್ದಾರಲ್ಲ, ಅವರು ಚೆಡ್ಡಿ ನಾಯಕರ ಮಾತನ್ನು ಕೇಳುವ ಸ್ಥಿತಿಯಲ್ಲಿಲ್ಲ. "ನಾನು ರಾಜ್ಯಾದ್ಯಂತ ಪ್ರವಾಸ ಮಾಡುವುದು ಪಕ್ಷವನ್ನು ಸಂಘಟಿಸುವುದಕ್ಕೋಸ್ಕರ, ಪಕ್ಷದ ಋಣವನ್ನು ತೀರಿಸುವುದಕ್ಕೋಸ್ಕರ" ಎಂಬ ಹೊಸ ರಾಗವನ್ನು ಹಾಡುತ್ತಿರುವ ಯಡ್ಡಿ ಮತ್ತೊಮ್ಮೆ ಬಿಜೆಪಿಯ ಹೈಕಮಾಂಡ್ ವಿರುದ್ಧ ಬಂಡಾಯವೆದ್ದಿದ್ದಾರೆ.

ಈ ಪ್ರವಾಸ ಯಶಸ್ವಿಯಾದರೆ - ಅಂದರೆ ರಾಜ್ಯಾದ್ಯಂತ ಯಡ್ಡಿಯ ಸಭೆಗಳಿಗೆ ಲಕ್ಷಾಂತರ ಜನ ಸೇರಿದರೆ- ಖಂಡಿತವಾಗಿಯೂ ಯಡಿಯೂರಪ್ಪನವರಿಗೆ ರಾಜ್ಯದ ಅಧ್ಯಕ್ಷ ಪದವಿ ನೀಡಬೇಕೆಂಬ ಬೇಡಿಕೆಗೆ ಶಕ್ತಿ ಸಿಕ್ಕಂತಾಗುತ್ತದೆ. ಇದೇ ಅವರ ಪ್ರವಾಸದ ಮೂಲ ಉದ್ದೇಶ. ಈ ಪ್ರವಾಸದ ಹಿಂದೆ ಅನೇಕ ರಾಜಕೀಯ ಲೆಕ್ಕಾಚಾರಗಳೂ ಅಡಗಿವೆ. ಈತನಕ 60-65 ಶಾಸಕರನ್ನು ತನ್ನ ಹಿಡಿತದಲ್ಲಿಟ್ಟುಕೊಂಡಿದ್ದ ಯಡ್ಡಿ ಈಗ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ "ಬರೀ ಶಾಸಕರು ಮಾತ್ರವಲ್ಲ, ಮತದಾರರೂ ನನ್ನ ಜೊತೆಗಿದ್ದಾರೆ. ನಾನು ಯಾವುದೇ ಹುದ್ದೆಯಲ್ಲಿಲ್ಲದಿದ್ದರೂ ಕೂಡ ಇಷ್ಟೊಂದು ಜನ ನನ್ನ ಬೆನ್ನ ಹಿಂದೆ ಇದ್ದಾರೆ" ಎಂಬ ಸಂದೇಶವನ್ನು ಹೈಕಮಾಂಡ್‌ಗೆ ತಲುಪಿಸುವುದೇ ಯಡ್ಡಿಯ ಮುಖ್ಯ ಕಾರ್ಯತಂತ್ರ.

ಅಂದರೆ ಪರೋಕ್ಷವಾಗಿ ಪಕ್ಷದ ರಾಜ್ಯಾಧ್ಯಕ್ಷ ಹುದ್ದೆಯನ್ನು ತನಗೇ ನೀಡಬೇಕು ಎಂಬ ಅವರ ಬಹುದಿನಗಳ ಬೇಡಿಕೆಯನ್ನು ಯಡ್ಡಿ ಈಗ ಪ್ರವಾಸದ ಮೂಲಕ ಹೇಳಲು ಹೊರಟಿದ್ದಾರೆ. ಅಷ್ಟೇ ಅಲ್ಲ, ಈ ಪ್ರವಾಸದ ಸಮಯದಲ್ಲಿ ಪ್ರತಿ ಕ್ಷೇತ್ರದ ಶಾಸಕರು ಮತ್ತು ಬಿಜೆಪಿ ನಾಯಕರ ಜೊತೆ ತಮ್ಮ ಸಂಬಂಧವನ್ನು ಗಟ್ಟಿ ಮಾಡಿಕೊಳ್ಳುವುದು, ಇನ್ನೂ ಕೆಲವೆಡೆ ತನ್ನ ಅನುಯಾಯಿಗಳನ್ನು ಪ್ರೋತ್ಸಾಹಿಸುವುದು ಯಡ್ಡಿಯ ಗುರಿ. ಅಷ್ಟೇ ಅಲ್ಲದೆ, ಬಿಜೆಪಿಯ ಮತ್ತು ವಿರೋಧ ಪಕ್ಷಗಳ ನಾಯಕರಿಗೆ ತನ್ನ ಶಕ್ತಿಯನ್ನು, ಪ್ರಸ್ತುತತೆಯನ್ನು ತೋರಿಸುವ ಇಚ್ಛೆ ಯಡ್ಡಿಯದ್ದು. ಆದ್ದರಿಂದ ಮೇಲ್ನೋಟಕ್ಕೆ ಇದೊಂದು ಪ್ರವಾಸದಂತೆ ಕಂಡರೂ ಅದರ ಅಸಲಿಯತ್ತು ಭಿನ್ನಮತೀಯ ಚಟುವಟಿಕೆಯೇ ಆಗಿದೆ.

ಬರುವ ಕೆಲವೇ ತಿಂಗಳುಗಳಲ್ಲಿ ಚುನಾವಣೆ ನಡೆಯುವುದರಲ್ಲಿ ಸಂಶಯವೇ ಇಲ್ಲ ಎಂಬ ಮನಸ್ಥಿತಿಯಲ್ಲಿ ಬಿಜೆಪಿಯ ಶಾಸಕರಿದ್ದಾರೆ. ಇಂತಹ ಸಂದರ್ಭದಲ್ಲಿ ಯಡಿಯೂರಪ್ಪ ಅಸೆಂಬ್ಲಿ ಕ್ಷೇತ್ರಗಳಿಗೆ ಭೇಟಿ ನೀಡಿದರೆ ಸಹಜವಾಗಿಯೇ ಸ್ಥಳೀಯ ಬಿಜೆಪಿ ಶಾಸಕರು ಮತ್ತು ನಾಯಕರು ಯಡ್ಡಿಯನ್ನು ಸ್ವಾಗತಿಸುತ್ತಾರೆ ಮತ್ತು ಅವರ ಜೊತೆ ವೇದಿಕೆಯನ್ನು ಏರುತ್ತಾರೆ. ಅದೆಲ್ಲ ಯಡ್ಡಿಗೆ ಬೆಂಬಲ ಎಂದೇ ಬಿಂಬಿತವಾಗುತ್ತದೆ.



ಬಿಜೆಪಿ ಪಕ್ಷದಲ್ಲಿ ಸದ್ಯಕ್ಕೆ ಫುಲ್‌ಟೈಮ್ ರಾಜ್ಯಾಧ್ಯಕ್ಷರಾಗಿ ಯಾರೂ ಕಾರ್ಯ ನಿರ್ವಹಿಸುತ್ತಿಲ್ಲ. ಈಶ್ವರಪ್ಪ ಉಪ ಮುಖ್ಯಮಂತ್ರಿಯಾದ ನಂತರ ಆ ಜವಾಬ್ದಾರಿಯ ಜೊತೆಗೆ ರಾಜ್ಯಾಧ್ಯಕ್ಷ ಹುದ್ದೆಯ ಕಾರ್ಯವನ್ನೂ ನಿಭಾಯಿಸುತ್ತಿದ್ದರೂ ಅವರು ಉಪಮುಖ್ಯಮಂತ್ರಿ ಕೆಲಸಕ್ಕೆ ಹೆಚ್ಚು ಮಹತ್ವ ನೀಡುತ್ತಿರುವುದು ಎಲ್ಲರಿಗೂ ಗೊತ್ತಿದೆ. ಯಡಿಯೂರಪ್ಪ ಪ್ರವಾಸ ಹೊರಟರೆಂಬ ಏಕೈಕ ಕಾರಣಕ್ಕೆ ಈಗ ಈಶ್ವರಪ್ಪನವರು ಪ್ರವಾಸ ಹೊರಡಲು ಸಾಧ್ಯವಿಲ್ಲ ಅಥವಾ ಮೊನ್ನೆ ಮೊನ್ನೆಯಷ್ಟೇ ಮುಖ್ಯಮಂತ್ರಿ ಪದವಿಯಿಂದ ಪದಚ್ಯುತಗೊಂಡಿರುವ ಸದಾನಂದ ಗೌಡರೂ ಪ್ರವಾಸ ಕೈಗೊಳ್ಳಲಾರರು. ಏಕೆಂದರೆ ಸದಾನಂದ ಗೌಡರು ಪ್ರವಾಸ ಹೊರಟರೆ ಅವರ ಹಿಂದೆ ಜನಸಾಗರ ಹರಿದುಬರುವ ಸಾಧ್ಯತೆ ಬಹಳ ಕಡಿಮೆ. ಈ ಎಲ್ಲ ಕಾರಣಗಳಿಗಾಗಿ ಬಿಜೆಪಿಯ ಶಾಸಕರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಯಡ್ಡಿಯನ್ನು ಅದ್ದೂರಿಯಾಗಿ ಸ್ವಾಗತಿಸಲು ನಿರ್ಣಯಿಸಿದ್ದಾರೆ.

ಯಡ್ಡಿಯ ಪರಮಾಪ್ತರು ಈ ಪ್ರವಾಸದ ಬಗ್ಗೆ ಹೇಳುತ್ತಿರುವ ತರ್ಕ ಕುತೂಹಲಕಾರಿಯಾಗಿದೆ. ಅದೇನೆಂದರೆ ಯಡ್ಡಿ ಈ ರಾಜ್ಯ ಪ್ರವಾಸದ ಮುಖಾಂತರ ಒಂದೇ ಕಲ್ಲೇಟಿನಿಂದ ಎರಡು ಹಣ್ಣುಗಳನ್ನು ಹೊಡೆಯಲು ಹೊರಟಿದ್ದಾರಂತೆ. ಒಂದೆಡೆ ಬಿಜೆಪಿಯ ರಾಷ್ಟ್ರದ ನಾಯಕರಿಗೆ ತನ್ನ ಶಕ್ತಿ ಪ್ರದರ್ಶಿಸಿ ರಾಜ್ಯಾಧ್ಯಕ್ಷ ಸ್ಥಾನವನ್ನು ಗಿಟ್ಟಿಸುವುದು, ಇನ್ನೊಂದೆಡೆ ಬಿಜೆಪಿಯ ಅದು ಸಿಗದಿದ್ದರೆ ಬಿಜೆಪಿಯನ್ನೇ ತೊರೆಯುವ ಮೂಲಕ ಚೆಡ್ಡಿ ಪಕ್ಷಕ್ಕೇ ಮುಳ್ಳಾಗುವುದು. ಒಂದು ವೇಳೆ ಬಿಜೆಪಿಯ ದೆಹಲಿ ನಾಯಕರು ಯಡಿಯೂರಪ್ಪನವರಿಗೆ ರಾಜ್ಯಾಧ್ಯಕ್ಷ ಪದವಿಯನ್ನು ನೀಡದಿದ್ದರೆ ಚುನಾವಣೆಯ ಸಂದರ್ಭದಲ್ಲಿ ಯಡ್ಡಿ ಬಿಜೆಪಿ ಪಕ್ಷಕ್ಕೆ ಗುಡ್‌ಬೈ ಹೇಳುವುದು ಬಹುತೇಕ ಖಚಿತವೆಂಬುದು ಯಡ್ಡಿಯ ಶಿಷ್ಯಂದಿರ ಮಾತು. ಆದರೆ ಬಿಜೆಪಿಗೆ ಗುಡ್‌ಬೈ ಹೇಳಿದ ನಂತರ ಯಡ್ಡಿ ಹೊಸ ಪಕ್ಷವನ್ನು ಕಟ್ಟುತ್ತಾರೋ ಅಥವಾ ಬೇರೆ ಯಾವುದೋ ಪಕ್ಷವನ್ನು ಸೇರುತ್ತಾರೋ ಎಂಬುದು ಈಗಲೇ ಹೇಳುವುದು ಕಷ್ಟವಾದರೂ ಆ ಸಂದರ್ಭದಲ್ಲಿ ಯಡ್ಡಿ ತನಗೆ ಅನುಕೂಲವಾಗುವ ... ಇಲ್ಲ. ನಿರ್ಧಾರ ಕೈಗೊಳ್ಳುತ್ತಾರೆ ಎಂಬುದರ ಬಗ್ಗೆ ಯಾವ ಅನುಮಾನಗಳೂ

ಸದ್ಯಕ್ಕೆ ಬಿಜೆಪಿಯ ಕೇಂದ್ರ ನಾಯಕರು ಯಾವುದೇ ಕಾರಣಕ್ಕೂ ಯಡ್ಡಿಗೆ ಮತ್ತೆ ಅಧ್ಯಕ್ಷ ಪದವಿಯನ್ನು ನೀಡಲೇಬಾರದೆಂಬ ತೀರ್ಮಾನಕ್ಕೆ ಬಂದಂತಿದೆ. ಈಗಾಗಲೇ ಒಮ್ಮೆ ಸದಾನಂದ ಗೌಡರನ್ನು ಮುಖ್ಯಮಂತ್ರಿ ಮಾಡುವಾಗ ಆನಂತರ ಅವರನ್ನು ಕಿತ್ತೆಸೆದು ಜಗದೀಶ್ ಶೆಟ್ಟರ್‌ರನ್ನು ಆ ಕುರ್ಚಿಯಲ್ಲಿ ಪ್ರತಿಷ್ಠಾಪಿಸಿದಾಗ ಯಡ್ಡಿಯಿಂದಾಗಿ ಬಿಜೆಪಿಯ ರಾಷ್ಟ್ರೀಯ ನಾಯಕರಿಗೆ ಮುಖಭಂಗವಾಗಿದ್ದನ್ನು ಅವರಿನ್ನೂ ಮರೆತಿಲ್ಲ. ಆದ್ದರಿಂದ ಅವರು ಮೂರನೇ ಬಾರಿಗೆ ಯಡ್ಡಿಯಿಂದು ಮುಖಭಂಗ ಅನುಭವಿಸಲು ತಯಾರಿಲ್ಲ. ಆದ್ದರಿಂದ ಅವರು ತಮ್ಮದೇ ಆದ ತಂತ್ರಗಾರಿಕೆಯಲ್ಲಿ ಮುಳುಗಿದ್ದಾರೆ. ಯಡಿಯೂರಪ್ಪ ಪಕ್ಷ ಬಿಟ್ಟು ಹೋದರೆ ಪಕ್ಷದಲ್ಲಿ ಒಂದು ರೀತಿಯ ಶಿಸ್ತು ಮತ್ತೆ ಮರುಕಳಿಸಿದಂತಾಗುತ್ತದೆ ಎಂಬುದು ಅವರ ವಾದ. ಆದರೆ ತಾನೇ ಪಕ್ಷದ ರಾಜ್ಯಾಧ್ಯಕ್ಷನಾಗಬೇಕೆಂಬ ವಾದವನ್ನು ಸಡಿಲಿಸಲು ಯಡ್ಡಿ ತಯಾರಿಲ್ಲ.

ಯಡ್ಡಿ ಮತ್ತು ಬಿಜೆಪಿ ಹೈಕಮಾಂಡಿನ ನಡುವಿನ ಈ ಹಗ್ಗಜಗ್ಗಾಟದಲ್ಲಿ ಬಡಪಾಯಿ ಕನ್ನಡಿಗರು ಇನ್ನೂ ಹಲವು ತಿಂಗಳ ಕಾಲ ಕಳೆಯಬೇಕಾಗಿರುವುದು ನಮ್ಮ ದುರಂತ.

● [illegible]

ಜಗಳೂರು:ಪಕ್ಷಾಂತರಿ ರಾಮಚಂದ್ರನ ಹಾದಿ ಸುಗಮವ


ಜಗಳೂರು ಎಂದಾಕ್ಷಣ ನೆನಪಾಗುವುದೇ ಬೆಂಗಾಡು, ಬರಗಾಲದಲ್ಲಿ ಗುಳೆ ಹೊರಡುವವರ ಹಿಂಡು. ಇಂಥಾ ಜಗಳೂರು ತಾಲ್ಲೂಕು ಕೇಂದ್ರ, ವಿಧಾನ ಸಭಾ ಕ್ಷೇತ್ರ ಎಂಬುದೇ ಅಚ್ಚರಿ ಮೂಡಿಸುತ್ತದೆ. ಹಾಗೆ ನೋಡಿದರೆ ಈ ಕ್ಷೇತ್ರ 1952ರಿಂದಲೂ ಕಾಂಗ್ರೆಸಿನ ಭದ್ರಕೋಟೆ. ಒಮ್ಮೆ ಮಾತ್ರ ಗುರುಸಿದ್ಧನ ಗೌಡ ಎಂಬ ಗುಳ್ಳೇನರಿ ಬಿಜೆಪಿಯಿಂದ ಗೆದ್ದು ಬಂದಿದ್ದರು ಎಂಬುದನ್ನು ಬಿಟ್ಟರೆ ಅವತ್ತಿನಿಂದ ಜಗಳೂರಿನಲ್ಲಿ ಬದಲಾವಣೆಯ ಗಾಳಿ ಎಂಬುದೇ ಬೀಸಿರಲಿಲ್ಲ.

ಜಗಳೂರು ದಾವಣಗೆರೆ ಜಿಲ್ಲೆಯಲ್ಲಿ ಅತೀ ಹಿಂದುಳಿದಿರುವ, ಬಡತನ-ಅನಕ್ಷರತೆ ಹೆಚ್ಚಾಗಿರುವ ಕ್ಷೇತ್ರ. ಇಲ್ಲಿ ನಾಯಕ ಸಮುದಾಯವೇ ಪ್ರಬಲ. ಈ ಬಹುಸಂಖ್ಯಾತ ನಾಯಕ ಸಮುದಾಯದ ಮತಗಳು ಐದು ವರ್ಷಗಳಿಗೊಮ್ಮೆ ಬಳಕೆಯಾಗುವುದು ಬಿಟ್ಟರೆ ಉಳಿದಂತೆ ಅದೇ ಮತದಾರರು ನಿರ್ಲಕ್ಷಕ್ಕೊಳಗಾಗುತ್ತಾ ಬಂದಿರುವುದು ನಮ್ಮ ಪ್ರಜಾಪ್ರಭುತ್ವದ ವ್ಯಂಗ್ಯ.

ಜಗಳೂರು ವಿಧಾನಸಭಾ ಕ್ಷೇತ್ರದಿಂದ ಬಡಿಗಾಸಿದ್ದವರು ಯಾರು ಬೇಕಾದರೂ ಚುನಾವಣೆಯಲ್ಲಿ ಗೆದ್ದು ಬರಬಹುದೆನ್ನುವ ತಂತ್ರ ಶುರುವಾದದ್ದೇ ಅಶ್ವಥ್ ರೆಡ್ಡಿಯಿಂದ. ಈತ ನಾಲ್ಕು ಬಾರಿ ಶಾಸಕರಾಗಿ ಗೆದ್ದು ಪ್ರತಿಬಾರಿ ಮಂತ್ರಿಯಾಗಿದ್ದರೂ ಜಗಳೂರಿನಲ್ಲಿ ಗರೀಬಿ ಹಟಾವೋ ಎಂಬ ಕಾಂಗ್ರೆಸ್ ಪಕ್ಷದ ಘೋಷಣೆ ಚಾಲ್ತಿಗೆ ಬರಲೇ ಇಲ್ಲ. ಹಿಂದುಳಿದ ನಾಯಕ ಸಮುದಾಯದ ಬಡತನವನ್ನೇ ಬಂಡವಾಳ ಮಾಡಿಕೊಂಡು ಪ್ರತಿ ಓಟಿಗೆ ಐದರಿಂದ ಇಪ್ಪತ್ತು ರೂಪಾಯಿಯ ನೋಟುಗಳನ್ನು ಹಂಚುತ್ತಾ ಅಶ್ವಥ್ ರೆಡ್ಡಿ ಚುನಾವಣಾ ರಾಜಕೀಯ ಮಾಡಿಕೊಂಡು ಬಂದವನು.

ಆದರೆ ಜಗಳೂರು ವಿಧಾನಸಭಾ ಕ್ಷೇತ್ರ ಪರಿಶಿಷ್ಟ ವರ್ಗಕ್ಕೆ ಮೀಸಲು ಆದ ನಂತರ ಇಲ್ಲಿ ಒಂದಷ್ಟು ಬದಲಾವಣೆಗಳು ಕಂಡುಬಂದಿವೆ. ಅದಕ್ಕೆ ತಿರುವು ನೀಡಿದ್ದು 2008ರ ಚುನಾವಣೆ.

ಆಗಿನ ಚುನಾವಣೆಯಲ್ಲಿ ಎಸ್.ವಿ.ರಾಮಚಂದ್ರ ಕಾಂಗ್ರೆಸ್‌ನಿಂದ ನಿಂತರೆ, ಬಿಜೆಪಿಯಿಂದ ರಾಜೇಶ ಸ್ಪರ್ಧಿಸಿದ್ದ. ಅವರಿಬ್ಬರ ನಡುವೆ ಜಿದ್ದಾಜಿದ್ದಿನ ಕದನ ನಡೆದಿತ್ತು. ಹಾಗೆ ನೋಡಿದರೆ ರಾಮಚಂದ್ರ ಆರ್ಥಿಕವಾಗಿ ಸಬಲನಾಗಿರಲಿಲ್ಲ. ಆದರೆ ಆತನಿಗೆ ಜಗಳೂರಿನಲ್ಲಿ ಅಡ್ಡ ಮಲಗಿರುವ ತನ್ನದೇ ಸಮುದಾಯದ ದಟ್ಟ ಬಡತನದ ಬಗ್ಗೆ ಗೊತ್ತಿತ್ತು. ಯಾಕೆಂದರೆ ಆತ ಕೂಡ ಹರಪನಹಳ್ಳಿ ಮತ್ತು ಜಗಳೂರು



ಗಡಿಯ ಕ್ಯಾಸನಹಳ್ಳಿಯ ಬಡ ಕುಟುಂಬದಿಂದ ಬಂದವನಾಗಿದ್ದು ಕಷ್ಟಗಳನ್ನು ಎದುರಿಸಿದ್ದವನು. ಆದರೆ ಬದುಕು ರಾಮಚಂದ್ರನನ್ನು ದಾವಣಗೆರೆಗೆ ಕರೆದುಕೊಂಡು ಹೋಗಿತ್ತು. ರಾಮಚಂದ್ರ ಈ ಹಿಂದೆ ಜಗಳೂರು ಕ್ಷೇತ್ರದಲ್ಲಿ ಜಿಲ್ಲಾ ಪಂಚಾಯತಿ ಚುನಾವಣೆಯಲ್ಲಿ ಸೋತುಹೋಗಿದ್ದ. ಆರ್ಥಿಕವಾಗಿಯೂ ಹಿಂದುಳಿದಿದ್ದ. ಆದರೂ ರಾಮಚಂದ್ರ ಜಗಳೂರಿನೊಂದಿಗಿನ ತನ್ನ ಸಂಬಂಧವನ್ನು ಕಡಿದು ಕೊಂಡಿರಲಿಲ್ಲ.

ರಾಜೇಶ ಬಿಜೆಪಿಯಿಂದ ಸ್ಪರ್ಧೆಗಿಳಿದದ್ದು ಬಳ್ಳಾರಿಯ ರೆಡ್ಡಿ ಗ್ಯಾಂಗಿನ ಪ್ರಭಾವದಿಂದ. ಶ್ರೀರಾಮುಲು ಈ ರಾಜೇಶನಿಗೆ ಹತ್ತಿರದ ಸಂಬಂಧಿಯೂ ಹೌದು. ರಾಜೇಶ ಶ್ರೀಮಂತ. ಈತನ ಮಾವ ಅರಣ್ಯ ಇಲಾಖೆಯ ಆಯಕಟ್ಟಿನ ಜಾಗದಲ್ಲಿರುವ ಅಧಿಕಾರಿ ಮುತ್ತಯ್ಯ. ಈ ಮುತ್ತಯ್ಯ ಬಳ್ಳಾರಿ ರೆಡ್ಡಿ ಗ್ಯಾಂಗಿನ ಕೀಲಿಯಂತಿದ್ದ. ಬಳ್ಳಾರಿಯಲ್ಲಿ ಅರಣ್ಯ ಪ್ರದೇಶವನ್ನೇ ತನ್ನ ಸ್ವಂತ ಆಸ್ತಿಯಂತೆ ಬಿಟ್ಟಿಯಾಗಿ ರೆಡ್ಡಿ ಗ್ಯಾಂಗಿಗೆ ದಾನ ಮಾಡುವ ಮೂಲಕ ಅಕ್ರಮ ಗಣಿಗಾರಿಕೆಗೆ ಸಾತ್ ನೀಡಿ ಸುಖತ್ ಶ್ರೀಮಂತನಾದವನು ಈ ಮುತ್ತಯ್ಯ, ಇಂಥಾ ಮಾವನ ಹಣ ಮತ್ತು ಬಳ್ಳಾರಿ ರೆಡ್ಡಿ ಗ್ಯಾಂಗಿನ ಕೃಪಾಶೀರ್ವಾದ ರಾಜೇಶನ ರಾಜಕಾರಣಕ್ಕೆ ಬುನಾದಿ ಹಾಕಿದ್ದವು.

ರಾಜೇಶ ತನ್ನ ಶ್ರೀಮಂತಿಕೆಯನ್ನೇ ಜಗಳೂರಿನಲ್ಲಿ ಹರಡಿಕೊಂಡು ಚುನಾವಣೆ ಪ್ರಚಾರ ಮಾಡಿದರೂ ರಾಮಚಂದ್ರ ಬಿರಳೆಣಿಕೆಯ ಮಾತುಗಳ ಅಂತರದಿಂದ ಗೆದ್ದು ಬಂದಿದ್ದ. ಅವಾಗಲೇ ರೆಡ್ಡಿ ಗ್ಯಾಂಗಿಗೆ ಜಗಳೂರಿನಲ್ಲಿ ಮೊದಲ ಬಾರಿಗೆ ಮುಖಭಂಗವಾದದ್ದು. ರಾಜೇಶ ಜಗಳೂರಿನ ನಿವಾಸಿಯಾದರೂ ಅನಿವಾಸಿ ರಾಮಚಂದ್ರನನ್ನು ಮತದಾರ ಕೈಹಿಡಿದಿದ್ದ.

ಹಾಗೆ ನೋಡಿದರೆ ರಾಮಚಂದ್ರ ಕಾಂಗ್ರೆಸ್ ಪಕ್ಷದ ಹಿರಿಯ ನಾಯಕ ಶಾಮನೂರು ಶಿವಶಂಕರಪ್ಪನವರ ರಾಜಕೀಯ ಗರಡಿಯಲ್ಲಿ ಪಳಗಿದವನು. ಆದರೂ ಈತ ಗೆದ್ದ ನಂತರ ಕಾಂಗ್ರೆಸ್‌ನಿಂದ ಬಿಜೆಪಿಯ ಕಡೆ ಮಗ್ಗಲು ಬದಲಾಯಿಸಿಬಿಟ್ಟ. 'ಆಪರೇಷನ್ ಕಮಲ' ರಾಮಚಂದ್ರನನ್ನು ನುಂಗಿಹಾಕಿ ಬಿಟ್ಟಿತು.

ರಾಮಚಂದ್ರ ಯಾವಾಗ ಪಕ್ಷಾಂತರಿಯಾದನೋ ಆವಾಗಲೇ ಜಗಳೂರು ವಿಧಾನಸಭಾಕ್ಷೇತ್ರದಲ್ಲಿ ಕೊಂಚಮಟ್ಟಿನ ಪ್ರಗತಿಯ ಗಾಳಿ ಬೀಸಿತು. ಕಾಂಗ್ರೆಸ್ ಶಾಸಕತ್ವಕ್ಕೆ ರಾಜೀನಾಮೆ ನೀಡಿ ಬಿಜೆಪಿ ಸೇರಿದ ರಾಮಚಂದ್ರ ಮರುಚುನಾವಣೆಯಲ್ಲಿ ಬಿಜೆಪಿಯಿಂದಲೆ ಕಣಕ್ಕಿಳಿದ. 2008ರಲ್ಲಿ ಬಿಜೆಪಿಯಿಂದ ರಾಮಚಂದ್ರನ ಎದುರು ಸ್ಪರ್ಧಿಸಿ ಸೋತಿದ್ದ ರೆಡ್ಡಿ ಗ್ಯಾಂಗಿನ ರಾಜೇಶ ಪಕ್ಷೇತರನಾಗಿ ಸ್ಪರ್ಧೆಗಿಳಿದ. ಅಷ್ಟೇ ಅಲ್ಲದೆ, ಬಿಜೆಪಿ ಸರ್ಕಾರದಲ್ಲಿ ಮಂತ್ರಿ ಆಗಿದ್ದ ಜಾರಕಿಹೊಳಿಯ ಬೀಗ ಅರಸಿಕೆರೆಯ ದೇವೇಂದ್ರಪ್ಪ ಕಾಂಗ್ರೆಸ್ ನಿಂದ ಕಣಕ್ಕಿಳಿದ. ದೇವೇಂದ್ರಪ್ಪನಿಗೆ ಸಿದ್ದರಾಮಯ್ಯನವರ ಕೃಪಾಶೀರ್ವಾದವಿದ್ದರೂ ದೇವೇಂದ್ರಪ್ಪನ ಫ್ಯೂಡಲ್ ವ್ಯಕ್ತಿತ್ವದ ವಿರುದ್ಧ ಜಗಳೂರು ಕ್ಷೇತ್ರದ ನಾಯಕ ಸಮುದಾಯವೇ ತಿರುಗಿ ಬಿದ್ದಿತು. ಹಾಗೆಯೇ ರಾಜೇಶನ ಸೋಲಿಗೆ ಆತನ ಕಡುಭ್ರಷ್ಟ ಮಾವ ಮುತ್ತಯ್ಯ ಖಜಾನೆಯೂ ಕಾರಣವಾಯಿತು. ರಾಮಚಂದ್ರನ ಬೆಂಬಲಕ್ಕೆ ಯಡ್ಡಿ ಮತ್ತು ಆತನ ಸರ್ಕಾರ ಇದ್ದುದ್ದರಿಂದ ಆತ ಮರು ಚುನಾವಣೆಯಲ್ಲಿ ವಿಜಯ ಸಾಧಿಸಿದ.

ಮರುಚುನಾವಣೆಯಲ್ಲಿ ರಾಮಚಂದ್ರ ಗೆದ್ದ ನಂತರ ಜಗಳೂರು ತಾಲ್ಲೂಕು ಕೊಂಚ ಅಭಿವೃದ್ಧಿ ಕಂಡಿದೆ. ತಾಲ್ಲೂಕು ಕೇಂದ್ರ ಜಗಳೂರಿನ ಮೂಲಸ್ವರೂಪವೇ ಬದಲಾಗಿದೆ. ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ, ಬಸ್ ಡಿಪೋಗಳು ಬಂದಿವೆ. ಹೈಮಾಸ್ಟ್ ದೀಪಗಳು ಬೆಳಕು ಚೆಲ್ಲುತ್ತಿವೆ. ಕ್ಷೇತ್ರದಲ್ಲಿ ಹದಿನಾರು ಸಾವಿರ ಮನೆಗಳು ವಿವಿಧ ಯೋಜನೆಯಡಿ ಮಂಜೂರಾಗಿವೆ. ಜಗಳೂರು ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಸಿಮೆಂಟ್ ರಸ್ತೆಗಳು ಮೈಚಾಚಿಕೊಂಡಿವೆ. ಸರೋವರ ಯೋಜನೆಯಲ್ಲಿ ಜಗಳೂರಿನ ಕೆರೆಗಳಿಗೆ ಕಾಯಕಲ್ಪ ಸಿಕ್ಕಿದೆ. ಬರಗಾ... ತತ್ತರಿಸುವ ಈ ಕ್ಷೇತ್ರಕ್ಕೆ ನೀರಾವರಿ ಯೋಜನೆ ತರಬೇ... ಬಹು ವರ್ಷಗಳಿಂದ ಜನ ಹೋರಾಟ ನಡೆಸಿದ್ದರು... ಈ ಪ್ರದೇಶದ 18,533 ಎಕರೆಗಳನ್ನು ಭದ್ರಾ ಮೇ... ಯೋಜನೆಯಲ್ಲಿ ಸೇರ್ಪಡಿಸಲು ಸರ್ಕಾರ ಒಪ್ಪಿಕೊ...

ಈ ಎಲ್ಲಾ ಯೋಜನೆಗಳು ಕಾರ್ಯರೂಪಕ್ಕೆ ... ಸಾಧ್ಯವಾಗಿದ್ದು ತಾನು ಕಾಂಗ್ರೆಸ್ ತೊರೆದು ಬಿಜೆಪಿ ... ಎಂಬುದು ಶಾಸಕ ರಾಮಚಂದ್ರನ ಪ್ರತಿಪಾದನೆ. ... ಬಿಜೆಪಿ ಸೇರುವ ಮೊದಲು ಈ ಎಲ್ಲಾ ಬೇಡಿ... ಈಡೇರಿಸಬೇಕು ಎಂಬ ಭರವಸೆ ಪಡೆದೇ ... ಎಂಬ ಆತನ ಮಾತು ನಿಜವಿದ್ದರೂ ಇದೇ ಅವ... ರಾಮಚಂದ್ರನ ಆರ್ಥಿಕ ಪರಿಸ್ಥಿತಿಯೂ ಸುಧಾರಿಸಿದೆ...

ಬಿಜೆಪಿ ಸೇರಿದ ಮೇಲೆ ರಾಮಚಂದ್ರ ಹಟ್ಟಿ... ಗಣಿಯ ಅಧ್ಯಕ್ಷನಾಗಿದ್ದಾನೆ. ಅದರಿಂದ ಅ... ಲಾಭವಾಗಿರುವುದು ನಿಜ. ಕಡು ಭ್ರಷ್ಟನಲ್ಲದಿ... ರಾಮಚಂದ್ರ ಭ್ರಷ್ಟನೆಂಬುದನ್ನು ತಳ್ಳಿಹಾಕುವಂತಿಲ್ಲ. ... ನೋಡಿದರೆ ಅಧಿಕಾರದಲ್ಲಿದ್ದ ಪಕ್ಷದವರೇ ಇ... ಶಾಸಕರಾಗಿದ್ದರೂ ಅವರ್‍ಯಾರೂ ಇದುವರೆಗೆ ಮಾಡಲಾ... ಪಕ್ಷಾಂತರಿ ರಾಮಚಂದ್ರ ಮಾಡಿದ್ದಾನೆ ಎಂಬ ಮ... ತಳ್ಳಿಹಾಕುವಂತಿಲ್ಲ.

ಮುಂದಿನ ಚುನಾವಣೆಯ ಬಿಸಿ ಈಗಾ... ಶುರುವಾಗಿದೆ. ಬಿಜೆಪಿಯಿಂದ ಕಾಂಗ್ರೆಸ್‌ಗೆ ನೆಗೆದಿ... ರಾಜೇಶ ಕಾಂಗ್ರೆಸ್‌ನಿಂದ ಸ್ಪರ್ಧಿಸಲು ಸಕಲ ... ನಡೆಸುತ್ತಿದ್ದಾನೆ. ಈ ಬಾರಿ ಶ್ರೀರಾಮುಲುವಿನ ಬಿಎಸ್... ಪಾರ್ಟಿ ಜಗಳೂರಿನ ನಾಯಕ ಸಮುದಾಯದ ವ... ನಿಗಾ ಇಟ್ಟಿರುವುದರಿಂದ ಅದೂ ತನ್ನ ಅಭ್ಯರ್ಥಿಯ... ಚುನಾವಣಾ ಕಣಕ್ಕಿಳಿಸಬಹುದು. ಬಿಜೆಪಿಯಲ್ಲೂ ಆಂ... ತಳಮಳವಿರುವುದರಿಂದ ರಾಮಚಂದ್ರ ಬಿಜೆಪಿಯಿ... ಸ್ಪರ್ಧೆಗಿಳಿದರೂ ಗೆಲುವು ಸುಲಭವಲ್ಲ.

ಎರಡು ಬಾರಿ ಸೋತಿರುವ ರಾಜೇಶನ ... ಮತದಾರರಿಗೆ ಸಿಂಪಥಿ ಇದ್ದರೂ ಶಾಸಕನಾಗಿ ... ಮಾಡಿರುವ ರಾಮಚಂದ್ರನ ಬಗ್ಗೆಯೂ ಮತದಾ... ಒಲವಿದೆ.

ಅದೇನೇ ಇದ್ದರೂ, ಮುಂದಿನ ಚುನಾವಣೆಯ... ಜಗಳೂರು ಕ್ಷೇತ್ರದ ಉದ್ದಗಲಕ್ಕೆ ಹೆಂಡ-ರೊಕ್ಕದ ಹೊ... ಹರಿಯಲಿರುವುದು ವಿಕೃತ ಸಂಗತಿ.

● ಟಿ.ಎನ್.ಷಣ್ಮು...

ಲಿಂಗಣ್ಣ ಸಾವು: ಪೊಲೀಸರ ನಿಗೂಢ ನಡವಳಿಕೆ



ಲಿಂಗಣ್ಣ ಸತ್ಯಂಪೇಟೆಯವರ ನಿಗೂಢ ಹತ್ಯೆಯ ಹಿಂದಿನ ಬಲಾಢ್ಯ ಕೈಗಳಿಗೆ ಕೋಳ ತೊಡಿಸ ಬೇಕೆಂದು ನಾಡಿನಾದ್ಯಂತ ಪ್ರತಿಭಟನೆಗಳ ಧ್ವನಿ ಕೇಳಿಬರುತ್ತಿದೆ. ಆದರೆ ತನಿಖೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆ ನೀಡಬೇಕಿದ್ದ ಗುಲ್ಬರ್ಗ ಪೊಲೀಸರು ಮತ್ತು ಸರ್ಕಾರ ಮಾತ್ರ ಇದಾವುದಕ್ಕೂ ಸೊಪ್ಪು ಹಾಕುತ್ತಿಲ್ಲ. ತಾವು ಈಗಾಗಲೇ ನಡೆಯುತ್ತಿರುವ ಹಾದಿಯಲ್ಲೇ ಮುನ್ನಡೆದು ತನಿಖೆಯನ್ನು ಹಳ್ಳ ಹಿಡಿಸುವ ಎಲ್ಲಾ ಲಕ್ಷಣಗಳು ಸ್ಪಷ್ಟವಾಗಿ ಗೋಚರಿಸುತ್ತಿವೆ. ಈ ನಿಗೂಢ ಸಾವಿನ ಬೆನ್ನುಹತ್ತಿರುವ ನಮ್ಮ ಪತ್ರಿಕೆಗೆ ದೊರೆತಿರುವ ಸುಳಿವುಗಳನ್ನು ಓದುಗರ ಮುಂದಿಡುವುದು ನಮ್ಮ ಕರ್ತವ್ಯ.

ಕಳೆದ ಮೇ 15ರಂದು ಲಿಂಗಣ್ಣನವರಿಗೆ ಒಂದು ಅನುಮಾನಾಸ್ಪದ ಫೋನ್ ಕರೆ ಬಂದಿತ್ತು. 9886626145 ಮೊಬೈಲ್ ನಂಬರಿನಿಂದ ಮಾತಾಡಿದ್ದ ವ್ಯಕ್ತಿ ಅಡ್ಡಾದಿಡ್ಡಿ ಮಾತಾಡಿ, ಲಿಂಗಣ್ಣನವರಿಗೆ ಬೆದರಿಕೆ ಹಾಕಿದ್ದ. ಲಿಂಗಣ್ಣರ ದುರಂತ ಸಾವಿನ ನಂತರ, ಕಾರಣಗಳ ಹುಡುಕಾಟದಲ್ಲಿದ್ದ ಕುಟುಂಬದವರಿಗೆ ಈ ಹಿಂದಿನ ಫೋನ್ ಕರೆಯ ನೆನಪಾಯಿತು. ಆ ಫೋನ್ ಯಾರದೆಂದು ಪತ್ತೆ ಹಚ್ಚಲು ಹೊರಟಾಗ ಕಂಡುಬಂದ ಸತ್ಯ ಮಾತ್ರಷ್ಟು ಕುತೂಹಲಕರವಾಗಿದೆ. ಅದು ಒಬ್ಬ ಮಠಾಧೀಶನದಾಗಿತ್ತು. ಆತನೇ ಬೆಳಗಾವಿಯ ಕುಂದರಗಿ ಮಠ ಅಲಿಯಾಸ್ ಕಾಡಸಿದ್ದೇಶ್ವರ ಮಠದ ಸ್ವಾಮಿಯಾಗಿರುವ ಅಮರೇಶ್ವರ ದೇವರು!


ಇದು ರಾಯಚೂರು ಜಿಲ್ಲೆಯ ಅಂಕಲಗಿ ಮಠದ ಶಾಖಾಮಠ. ಈ ಅಂಕಲಗಿ ಮಠದ ಸ್ವಾಮಿ ವೀರಭದ್ರಯ್ಯ ಎಂಬಾತ ಭಾರಿ ಖತರ್‌ನಾಕ್ ಆಸಾಮಿಯ ಬಗ್ಗೆ 2007ರ ನವೆಂಬರ್‌ನಲ್ಲಿ ನಮ್ಮ ಪತ್ರಿಕೆಯಲ್ಲಿ ವರದಿಯೊಂದು ಪ್ರಕಟವಾಗಿತ್ತು. ಅದನ್ನು ಬರೆದವರು ಲಿಂಗಣ್ಣನವರ ಮಗನಾದ ವಿಶ್ವಾರಾಧ್ಯ ಸತ್ಯಂಪೇಟೆ. ಅಲ್ಲದೆ ಇತ್ತೀಚೆಗೆ ವಿಶ್ವಾರಾಧ್ಯ ಅವರು ಮಠಾಧಿಪತಿಗಳ ಹಲ್ಕಟ್ ದಂಧೆಯ ಬಗ್ಗೆ "ಮಠದೊಳಗಣ ಬಾವುಗಗಳು" ಎಂಬ ಕೃತಿಯೊಂದನ್ನು ಪ್ರಕಟಿಸಿದ್ದು ಅದರಲ್ಲಿ ಈ ಮೇಲ್ಕಂಡ ಸ್ವಾಮಿಯನ್ನೂ ಒಳಗೊಂಡಂತೆ ಇಂಥಾ ಅನೇಕ ಖದೀಮ ಕಾವಿಧಾರಿಗಳ ನಿಜಬಣ್ಣವನ್ನು ಬಿಚ್ಚಿಟ್ಟಿದ್ದಾರೆ. ಆದರೆ ಈ ಕಳ್ಳ ಮಠಾಧೀಶರ ಬಗ್ಗೆ ಯಾವುದೇ ಕೃತಿ, ಲೇಖನ ಪ್ರಕಟವಾದರೂ ಅದನ್ನು ಸ್ವತಃ ಲಿಂಗಣ್ಣನವರೇ ಬರೆದು ತಮ್ಮ ಮಕ್ಕಳ ಹೆಸರಿನಲ್ಲಿ ಪ್ರಕಟಿಸುತ್ತಾರೆ ಎಂದು ಉತ್ತರ ಕರ್ನಾಟಕದಲ್ಲಿ ಜನಜನಿತ ನಂಬಿಕೆ. ಮಠ-ಮಾನ್ಯಗಳ ಅಕ್ರಮಗಳನ್ನು ನಿರಂತರವಾಗಿ ಬಯಲುಗೆಳೆಯುತ್ತಾ ಬಂದ ಲಿಂಗಣ್ಣನವರ ಖ್ಯಾತಿಯೇ ಇದಕ್ಕೆ ಕಾರಣ ಹೊರತು ಬೇರೇನಿಲ್ಲ.

ಅದು ಹಾಗಿರಲಿ, ಈ ಅಂಕಲಗಿ ಮಠದ ಸ್ವಾಮಿ ವೀರಭದ್ರಯ್ಯ ಮಾಮೂಲಿ ಸ್ವಾಮಿಯಲ್ಲ. ಬಿಳಿ ಧೋತಿ, ಬಿಳಿ ಜುಬ್ಬಾ ತೊಟ್ಟು ಪಕ್ಕಾ ರಾಜಕಾರಣಿಗಳ ಗೆಟಪ್ಪಿನಲ್ಲಿರುವ ಈತನ ತಲೆಗೆ ಒಂದು ಹಸಿರು ರುಮಾಲಷ್ಟೆ ಎಕ್ಸ್‌ಟ್ರಾ ಫಿಟಿಂಗ್. ನೋಡಲಿಕ್ಕೆ ಸಿನಿಮಾ ನಟ ಪ್ರಕಾಶ್ ರೈಯನ್ನು ಹೋಲುವ ಈತ ಭಾರೀ ಖತರ್‌ನಾಕ್ ಆಸಾಮಿಯೆಂದು ನೊಂದ ಭಕ್ತಾದಿಗಳೇ ಹೇಳುತ್ತಾರೆ. ಹಲವಾರು ಲಾಭದಾಯಕ ದಂಧೆಗಳಲ್ಲಿ ತೊಡಗಿಸಿಕೊಂಡಿರುವ ಈ ಸ್ವಾಮಿಗೆ ನಾನಾ ಪಕ್ಷಗಳ ರಾಜಕಾರಣಿಗಳ ಜೊತೆ ಹತ್ತಿರದ ಒಡನಾಟವಿದೆ. ಈತನ ಖಾಸಾ ಸೋದರನೊಬ್ಬ ಗುಲ್ಬರ್ಗ ನಗರದಲ್ಲಿ ಕಾಯಂ ಆಗಿ ವಾಸಿಸುತ್ತಿದ್ದಾನೆ. ಈತನ ವಿರುದ್ಧ ತಿರುಗಿಬಿದ್ದಿದ್ದ ವ್ಯಕ್ತಿಯೊಬ್ಬ ಗೋಡೆಗಳ ಕೆಳಗೆ ನಿಗೂಢವಾಗಿ ಹತ್ಯೆಯಾಗಿ ಹೋದ. ಈ ಬಗ್ಗೆ ಸೂಕ್ತ ತನಿಖೆಯೂ ಇಲ್ಲದೆ ಪ್ರಕರಣ ಮುಚ್ಚಿಹೋದ ಬಗ್ಗೆ ನೊಂದ ಜನತೆ ದೂರುತ್ತಿದ್ದಾರೆ.

ಲಿಂಗಣ್ಣ ಸಾವಿನಲ್ಲೂ ಇಂಥಾ ಹೀನಸುಳಿಗಳು ಇರುವ ಶಂಕೆಯಿಂದ. ಈ ಬೆದರಿಕೆ ಕರೆಯ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಿ ಆ ನಂಬರಿನ ವ್ಯಕ್ತಿಯ ಬಗ್ಗೆ ತನಿಖೆ ನಡೆಸುವಂತೆ ಕುಟುಂಬದವರು ಕೋರಿದರು. ಆದರೆ ಪೊಲೀಸರು ಮಾಡಿದ ಘನಕಾರ್ಯ ಏನು ಗೊತ್ತೆ? ಆ ನಂಬರ್ ರಾಯಚೂರು ಜಿಲ್ಲೆಯ ಯಾವುದೋ ಪಾನ್‌ಶಾಪಿನವನದೆಂದು, ಆತ ಅಮಾಯಕನೆಂದು ಹೇಳಿ ಕೈ ತೊಳೆದುಕೊಂಡಿದ್ದಾರೆ. ಹಾಗಾದರೆ ಪಾನ್‌ಶಾಪಿನವನು ಲಿಂಗಣ್ಣನಿಗೆ ಬೆದರಿಕೆ ಹಾಕಲು ಕಾರಣವೇನು ಎಂದು ಪ್ರಶ್ನಿಸಿದರೆ ಪೊಲೀಸರು ಉತ್ತರಿಸಲಾರದೆ ತಡಬಡಾಯಿಸುತ್ತಾರೆ.

ಮತ್ತೊಂದು ಕಡೆ ದುರ್ಘಟನೆ ನಡೆದು 2-3 ವಾರಗಳಾದರೂ ಇನ್ನೂ ಪೋಸ್ಟ್‌ಮಾರ್ಟಂ ವರದಿ ಬಂದಿಲ್ಲ. ದುಃಖತಪ್ತ ಕುಟುಂಬದವರು ತನಿಖೆಯ ಸ್ಥಿತಿಗತಿ ಬಗ್ಗೆ ವಿಚಾರಿಸಲು ನಾಲ್ಕಾರು ಬಾರಿ ಐಜಿಪಿ ವಜೀರ್ ಅಹಮದ್ ಅವರನ್ನು ಭೇಟಿಯಾಗಿದ್ದಾರೆ. ಐಜಿಪಿಯವರು ಎಸ್‌ಪಿ ಪವಾರ್‌ರನ್ನು ಭೆಟ್ಟಿ ಮಾಡಲು ಹೇಳುತ್ತಾರೆ. ಎಸ್‌ಪಿ ಬಳಿ ಹೋದರೆ ತನಿಖಾಧಿಕಾರಿ ಚಂದ್ರಶೇಖರ್‌ರನ್ನು ಭೇಟಿ ಮಾಡಲು ಹೇಳುತ್ತಾರೆ. ಅವರ ಬಳಿ ಹೋದರೆ "ಈ ಘಟನೆ ನಡೆದದ್ದು ಬ್ರಹ್ಮಪುರ ಠಾಣಾ ವ್ಯಾಪ್ತಿಯಾದ್ದರಿಂದ ನೀವು ಅಲ್ಲಿಗೇ ಹೋಗಿ ವಿಚಾರಿಸಿ" ಎಂದು ಕೈ ತೊಳೆದುಕೊಳ್ಳುತ್ತಾರೆ. ಈ ಪ್ರಕರಣದ ತನಿಖೆ ಯಾವ ಹಾದಿ ಹಿಡಿದಿದೆಯೆಂದು ಮತ್ತೊಮ್ಮೆ ಬಿಡಿಸಿ ಹೇಳಬೇಕೆ?

ಲಿಂಗಣ್ಣನ ಹತ್ಯೆಯ ಬಗ್ಗೆ ಆಕ್ರೋಶಗೊಂಡ ಜನರು, ಸಂಘಸಂಸ್ಥೆಗಳು ಹಾಗೂ ನಾನಾ ಗಣ್ಯ ವ್ಯಕ್ತಿಗಳು ಬೀದಿಗಿಳಿದು ಪ್ರತಿಭಟಿಸಿದ್ದಾರೆ. ಗುಲ್ಬರ್ಗ, ಆಳಂದ, ಅಫಜಲ್‌ಪುರ,




ತಾಳಿಕೋಟೆ, ಸಿಂಧನೂರು, ಗಂಗಾವತಿ, ಯಾದಗಿರಿ, ಗುರುಮಿಟ್ಕಲ್, ಅಕ್ಕಲಕೋಟ ಮುಂತಾದೆಡೆಗಳಲ್ಲಿ ಪ್ರತಿಭಟನೆಗಳು ನಡೆದಿವೆ. ದಲಿತ ಸಂಘರ್ಷ ಸಮಿತಿ ಸುರಪುರ ಬಂದ್‌ಗೆ ಕರೆ ನೀಡಿದೆ. ಶಹಾಪುರದ ಪ್ರತಿಭಟನೆಯ ನೇತೃತ್ವವನ್ನು ಸ್ಥಳೀಯ ಸ್ವಾಮೀಜಿಯೊಬ್ಬರು ವಹಿಸಿಕೊಂಡಿದ್ದರು. ಇನ್ನೂ ಆಶ್ಚರ್ಯದ ಸಂಗತಿಯೆಂ... ಪ್ರಮೋದ್ ಮುತಾಲಿಕ್‌ನ ಶ್ರೀರಾಮಸೇನೆ ಕೂಡ ಒಂ... ಪ್ರತಿಭಟನಾ ಬೈಕ್ ರ‍್ಯಾಲಿ ನಡೆಸಿದೆ.

ಹೀಗೆ ಜನರ ಆಕ್ರೋಶ ತೀವ್ರಗೊಂಡಿದ್ದಾಗ ಜಿ... ಉಸ್ತುವಾರಿ ಸಚಿವ ರಾಜುಗೌಡ, ಕಾನೂನು ಸ... ಸುರೇಶ್‌ಕುಮಾರ್ ಮತ್ತು ಶಾಸಕ ಚಂದ್ರಕಾಂತ ಬೆ... ಮುಂತಾದ ಬಿಜೆಪಿ ಪಟಾಲಂ ಲಿಂಗಣ್ಣನವರ ಮ... ಭೇಟಿ ನೀಡಿ ನಿಷ್ಪಕ್ಷಪಾತ ತನಿಖೆ ನಡೆಸುವ ಬ... ಆಶ್ವಾಸನೆಗಳನ್ನು ನೀಡಿದ್ದಾರೆ. ತೀರಾ ಇತ್ತೀಚೆಗೆ ಇಳಕ... ಮಠದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಸಿಎಂ ಶೆಟ್ಟರ್‌ರ... ತರಾಟೆಗೆ ತೆಗೆದುಕೊಂಡ ಇಳಕಲ್ ಸ್ವಾಮಿ ಈ ... ಸೂಕ್ತ ತನಿಖೆಯಾಗಬೇಕೆಂದರೆ ಮೊದಲು ಸ್ಥಳೀ... ಎಸ್‌ಪಿಯನ್ನು ವರ್ಗಾವಣೆ ಮಾಡಿ ಎಂದು ಆಗ್ರಹಿಸಿದ್ದಾ... ಗದುಗಿನ ತೋಂಟದಾರ್ಯ ಸ್ವಾಮಿಗಳೂ ಶೆಟ್ಟರ್‌ರ... ತರಾಟೆಗೆ ತೆಗೆದುಕೊಂಡರೆಂಬ ಸುದ್ದಿಯಿದೆ. ಸರಿಯಾ... ತನಿಖೆ ನಡೆಸದೆ ಹೋದರೆ ನಮ್ಮ ಮಠಕ್ಕೆ ಬರ... ಸಿಎಂಗೆ ಅವಕಾಶವಿಲ್ಲವೆಂದು ಸ್ವಾಮಿಗಳು ನೊಂದ... ನುಡಿದರೆಂದೂ, ಈಗಾಗಲೇ ಸಿಓಡಿ ತನಿಖೆಗೆ ಆದೇ... ಹೊರಡಿಸಿಯೇ ತಾನು ಇಲ್ಲಿಗೆ ಬಂದಿರುವುದಾ... ಸಿಎಂ ಸಮಜಾಯಿಷಿ ನೀಡಿದರೆಂದ... ಪ್ರತ್ಯಕ್ಷದರ್ಶಿಗಳಾಗಿದ್ದ ಭಕ್ತರು ಹೇಳುತ್ತಿದ್ದಾರೆ.

ಇತ್ತೀಚೆಗೆ ಗುಲ್ಬರ್ಗ ಪೊಲೀಸರು ಅದೇ ದಾ... ಹಾದಿ ತಪ್ಪಿಸಿಕೊಳ್ಳಲು ನೋಡುತ್ತಿದ್ದಾರೆ. ಈಗಾಗಲೇ ಸಿಓಡಿ ತನಿಖೆಗೆ ಆದೇಶವಾಗಿರುವುದರಿಂದ ಇ... ತಮ್ಮ ಪಾತ್ರವೇನೂ ಇರುವುದಿಲ್ಲ ಎಂಬಂ... ಮಾತುಗಳನ್ನಾಡುತ್ತಿದ್ದಾರೆ. ಆದರೆ ಇದುವರೆಗೆ ಸಿಓ... ಎಂಬ ಹೆಸರಿನಲ್ಲಿ ಯಾವೊಂದು ನರಪಿಳ್ಳೆಯೂ ... ತಲೆಹಾಕಿಲ್ಲವೆಂದು ಲಿಂಗಣ್ಣನ ಅಭಿಮಾನಿಗಳು ... ಕುಟುಂಬವರ್ಗದವರು ಒಕ್ಕೊರಲಿನಲ್ಲಿ ದೂರುತ್ತಿದ್ದಾರೆ.

ಇದು ಲಿಂಗವಂತ ಜಗದೀಶ್ ಶೆಟ್ಟರ್ ಸರ್ಕಾರ... ಘನಘೋರ ದ್ರೋಹವಲ್ಲದೆ ಮತ್ತೇನು? ಈ ಸರ್ಕಾರದ... ಸಜ್ಜನರಿಗೆ ನ್ಯಾಯ ಸಿಗುವ ಭರವಸೆ ಉಳಿದಿದೆಯೆ?


● ದೊಡ್ಡಿಪಾಳ್ಯ ನರಸಿಂಹಮೂರ್ತಿ



ನಾಗರಾಜ ಜಂಬಗಿ ಹೆಗಲಮೇಲೆ ಮುತಾಲಿಕ್ ಕೈ...



ಬಾಂಬ್ ಸ್ಫೋಟಗೊಂಡಾಗ ಹುಬ್ಬಳ್ಳಿ ಕೋರ್ಟ್



ಹೆಣವಾದ... ನಾಗರಾಜ ಜಂಬಗಿ

...ಬ್ಬಳ್ಳಿ ಕೋರ್ಟ್‌ನಲ್ಲಿ ಬಾಂಬ್ ಸ್ಫೋಟ-ಆರೋಪಿಗಳ ಖುಲಾಸ್

ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ... 2008ರಂದು ಹುಬ್ಬಳ್ಳಿಯ ನ್ಯಾಯಾಲಯದ ... ಮೊದಲನೇ ಮಹಡಿಯಲ್ಲಿ ಒಂದು ಬಾಂಬ್ ... ಅದೃಷ್ಟವಶಾತ್ ಅವತ್ತು ಕೋರ್ಟಿಗೆ ರಜೆ ... ಪ್ರಾಣಹಾನಿ ಆಗಿರಲಿಲ್ಲ. ಆದರೆ ಕೋರ್ಟ್ ... ಹಾನಿ ಆಗಿತ್ತು.

...ಭಯೋತ್ಪಾದಕ ಪ್ರಕರಣಕ್ಕೆ ...ವಂತೆ ಉಗ್ರ ಹಿಂದೂತ್ವವಾದಿ ...ರಾಮ ಸೇನೆಯ ನಾಯಕ ... ಮುತಾಲಿಕನ ಹಲವು ... ಪೊಲೀಸರು ಬಂಧಿಸಿದ್ದರು. ...ಅದೇ ಮುತಾಲಿಕನ ಶಿಷ್ಯರು ...ಸ್ಫೋಟಿಸಿದ್ದ ಆರೋಪದಿಂದ ... ಆಗುವಂತೆ ಹುಬ್ಬಳ್ಳಿ-... ಪೊಲೀಸರೇ ನೋಡಿಕೊಂಡಿ...



...ಯಾಲಯದ ಆವರಣದಲ್ಲಿ ...ಸ್ಫೋಟಿಸುವ ಮೂಲಕ ಆ ...ಲ್ಲಿ ಮುಸ್ಲಿಂ ಭಯೋತ್ಪಾದಕರು ...ಚರಣೆ ನಡೆಸುತ್ತಿದ್ದಾರೆಂದೂ, ... ಉಗ್ರರನ್ನು ಮಟ್ಟಹಾಕ ... ಬಿಜೆಪಿಯನ್ನು ಚುನಾವಣೆಯಲ್ಲಿ ಗೆಲ್ಲಿಸಬೇಕೆಂದೂ ... ಈ ಹಿಂದೂತ್ವವಾದಿ ಕ್ರಿಮಿನಲ್‌ಗಳು ಪ್ರಯತ್ನಿಸಿ ...ತಹ ಕುತಂತ್ರಿಗಳನ್ನು ಬಂಧಿಸಿದಾಗ ಎಲ್ಲರಿಂದ ...ಗಿರಿ ಪಡೆದಿದ್ದ ಪೊಲೀಸರೇ ಈಗ ಆರೋಪಿಗಳ ...ಕ್ತವಾದ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸದೆ ಅವರೆಲ್ಲ ...ಣದಿಂದ ಖುಲಾಸೆ ಆಗಲು ಕಾರಣರಾಗಿದ್ದಾರೆ.

...ತ್ತು ಎಸಿಪಿ ಆಗಿದ್ದ ಎಸ್.ಎಸ್.ಪಾಟೀಲ್ ಈ ...ಗಳ ವಿರುದ್ಧ ಚಾರ್ಜ್‌ಶೀಟ್ ಸಲ್ಲಿಸಿದ್ದ. ...ಷವೆಂದರೆ ಈಗ ಸಂಚಾರಿ ವಿಭಾಗದ ಎಸಿಪಿ ...ಲ್ಲಿ ಪಾಟೀಲ ಕುಳಿತುಕೊಂಡಿದ್ದಾರೆ. ಹಾಗೆಯೇ ...ಲಯ ಪೊಲೀಸ್ ನಿರೀಕ್ಷಕರಾಗಿದ್ದ ರಾಘವೇಂದ್ರ ...ರ ಪದೋನ್ನತಿ ಹೊಂದಿ ಗೃಹ ಕಾರ್ಯದರ್ಶಿ ...ರೆ. ಬಾಂಬ್ ಸ್ಫೋಟಿಸಿದ್ದವರು ನ್ಯಾಯಾಲಯದಿಂದ ... ಆಗುವಂತೆ ಮಾಡಿದ್ದೇ ಇವರಿಬ್ಬರ ಸಾಧನೆ ...ದು.

...ಲೆ, ದರೋಡೆ, ಕಳ್ಳತನ ಪ್ರಕರಣಗಳಿಗೆ ...ಸಿದಂತೆ ಹುಬ್ಬಳ್ಳಿ-ಧಾರವಾಡ ಪೊಲೀಸ್ ಠಾಣೆಗಳಲ್ಲಿ ಅಪರಾಧಿಗಳಿಗಿಂತ ನಿರಪರಾಧಿಗಳೇ ಹೆಚ್ಚು ಶಿಕ್ಷೆ ಅನುಭವಿಸುತ್ತಿದ್ದಾರೆ. ಇನ್ನು ಇಲ್ಲಿರುವ ಒಂದು ಮಹಿಳಾ ಪೊಲೀಸ್ ಠಾಣೆ ಮಹಿಳೆಯರಿಗೆ ರಕ್ಷಣೆ ಒದಗಿಸುವ ಬದಲು ಕಮೀಶನ್ ಆಫೀಸ್ ಆಗಿ ಪರಿವರ್ತನೆಗೊಂಡಿದೆ. ನಿಜವಾದ ಅಪರಾಧಿಗಳನ್ನು ಹೊರಗೆ ಬಿಟ್ಟು ಅವರಿಂದಲೇ ಕಳ್ಳತನ, ದರೋಡೆ ಗಳನ್ನು ಮಾಡಿಸಿ ಆ ಅಪರಾಧಗಳಲ್ಲಿ ಇಲ್ಲಿನ ಹೆಚ್ಚಿನ ಪೊಲೀಸರು ಪಾಲುದಾರರಾಗಿದ್ದಾರೆ. ಇದು ಹುಬ್ಬಳ್ಳಿ-ಧಾರವಾಡ ಪೊಲೀಸರ ಹಾಗೂ ಅಪರಾಧಿಗಳ ನಡುವಿನ ಅಲಿಖಿತ ಒಪ್ಪಂದ. ಸದ್ಯದ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಅವರ ಊರಲ್ಲಿ ನಡೆಯುತ್ತಿರುವ ಕಥೆ.

ಸ್ಥಳೀಯ ಪೊಲೀಸರ ಕಾರ್ಯಕ್ಷಮತೆಗೆ ಒಂದು ಸೂಕ್ತ ಉದಾಹರಣೆ ಕಿಮ್ಸ್‌ನ ಅಧೀಕ್ಷಕ ಡಾ.ಶಿವಾನಂದ ದೊಡ್ಡಮನಿ ಮೇಲಿನ ಶೂಟೌಟ್ ಪ್ರಕರಣ. ಆ ಪ್ರಕರಣದಲ್ಲೂ ಸಾಕ್ಷ್ಯಾಧಾರಗಳ ಕೊರತೆಯಿಂದ ಆರೋಪಿಗಳು ಖುಲಾಸೆಗೊಂಡಿದ್ದರು. ಮಾತ್ರವಲ್ಲ, ಜೈಲಿನಿಂದ ಹೊರಗೆ ಬಂದ ಆರೋಪಿಗಳು ಪೊಲೀಸರ ವಿರುದ್ಧವೇ ಮೊಕದ್ದಮೆ ದಾಖಲಿಸಿದ್ದರು. ಪೊಲೀಸರ ಮುಖಕ್ಕೆ ಎಷ್ಟೇ ಮಸಿ ಬಳಿದರು ಅವರು ಅದನ್ನು ಒರೆಸಿಕೊಂಡು ಮತ್ತೆ ದಕ್ಷ ಪೊಲೀಸರಂತೆ ಪೋಜು ಕೊಡುವುದಕ್ಕೆ ತಯಾರಾಗುತ್ತಾರೆ. ಕಳೆದ ವರ್ಷಕ್ಕಿಂತ ಈ ವರ್ಷ ಅಪರಾಧಗಳ ಸಂಖ್ಯೆ ಕಡಿಮೆಯಾಗಿದೆ ಎಂದೆಲ್ಲ ಹಳಿ ಇಲ್ಲದ ರೈಲು ಬಿಡುವುದು ಅವರಿಗೆ ಅಭ್ಯಾಸವಾಗಿ ಹೋಗಿದೆ.

ಘಟನೆಯ ಹಿನ್ನೆಲೆ


ಬಾಗಲಕೋಟೆ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಕೊಲೆ ಹಾಗೂ ಸುಲಿಗೆ ಪ್ರಕರಣಗಳಲ್ಲಿ ಭಾಗಿಯಾಗಿ ಪೊಲೀಸರಿಗೆ ಸಿಕ್ಕುಬಿದ್ದಿದ್ದ ಭಜರಂಗದಳದ ನಾಗರಾಜ ಜಂಬಗಿ ಹಾಗೂ ಅವನ ಗ್ಯಾಂಗ್‌ನಲ್ಲಿದ್ದ ರಮೇಶ್ ಪವಾರ, ಹನುಮಂತ ಸಾಕಳೆ, ಬಸವರಾಜ ರೋಗಿ ಮತ್ತು ಹುಸೇನ್ ಸಾಬ್‌ನನ್ನು ಬಾಗಲಕೋಟೆ ಪೊಲೀಸರು ಬಂಧಿಸಿದ್ದರು. ವಿಚಾರಣೆ ಸಮಯದಲ್ಲಿ, ಹಿಂಡಲಗಾ ಜೈಲಿನಲ್ಲಿ ಇರಿಸಲಾಗಿದ್ದ ಶಂಕಿತ ಸಿಮಿ ಉಗ್ರರನ್ನು ಹುಬ್ಬಳ್ಳಿ ಕೋರ್ಟಿಗೆ ಕರೆತಂದಾಗ ಅವರನ್ನು ಕೋರ್ಟ್ ಆವರಣದಲ್ಲಿ ಕೊಲ್ಲಲೆಂದು ಹುಬ್ಬಳ್ಳಿ ಕೋರ್ಟ್‌ನಲ್ಲಿ ಬಾಂಬ್ ಇಟ್ಟಿದ್ದು ತಾವೇ ಎಂದು ಬಾಯಿ ಬಿಟ್ಟಿದ್ದರು. ಅಷ್ಟೇ ಅಲ್ಲದೆ, ಶಂಕಿತ ಉಗ್ರರನ್ನು ಕೋರ್ಟಿಗೆ ಕರೆತರುವ ಮಾರ್ಗದಲ್ಲಿ ಧಾರವಾಡ ಹತ್ತಿರದ ಸಿಂಗನಹಳ್ಳಿ ಸಮೀಪದ ಸೇತುವೆ ಕೆಳಗೆ ಬಾಂಬ್ ಇರಿಸಿ ಅಲ್ಲೂ ಅವರನ್ನೆಲ್ಲ ಕೊಲ್ಲುವ ಸಂಚನ್ನು ರೂಪಿಸಿದ್ದಾರೆ ಅವರು ಒಪ್ಪಿಕೊಂಡಿದ್ದರು.

ಈ ಮಾಹಿತಿಯನ್ನಾಧರಿಸಿ ಪೊಲೀಸರು ತನಿಖೆ ನಡೆಸಿದಾಗ ಆ ಸೇತುವೆ ಕೆಳಗೆ ಸ್ಫೋಟಗೊಳ್ಳದೆ ನಿಷ್ಕ್ರಿಯವಾಗಿದ್ದ ಬಾಂಬ್‌ಗಳು ದೊರೆತಿದ್ದವು. ಜೊತೆಗೆ ಇವರ ಗ್ಯಾಂಗಿನ ಇನ್ನೊಬ್ಬನಾದ ನಾಗರಾಜ ಎಂಬಾತನ ಮನೆ ಮೇಲೆ ದಾಳಿ ನಡೆಸಿದಾಗ ಎರಡು ಬಾಂಬ್‌ಗಳು, ಗನ್ ಪೌಡರ್, ಲಕ್ಷಾಂತರ ರೂಪಾಯಿಗಳು, ಮಾರಕ ಅಸ್ತ್ರಗಳೂ ಸಿಕ್ಕಿದ್ದವು.

2008ರ ಮೇ 10 ಎರಡನೇ ಶನಿವಾರವಾದ್ದರಿಂದ ಅವತ್ತು ಕೋರ್ಟ್‌ಗೆ ರಜೆ ಇತ್ತು. ಅಂದು ಮಧ್ಯಾಹ್ನ ಜೆಎಂಎಫ್‌ಸಿ 1ನೇ ನ್ಯಾಯಾಲಯದಲ್ಲಿ ಆರೋಪಿಗಳು ನಿಲ್ಲುವ ಕಟಕಟೆಯ ಅಡಿಯಲ್ಲಿ ಈ ಬಾಂಬ್‌ಗಳು ಸ್ಫೋಟಗೊಂಡಿದ್ದರಿಂದ ಕೋರ್ಟ್ ಹಾಲ್‌ಗೆ ಧಕ್ಕೆಯಾಗಿತ್ತು.

ಮೊದಲು ಈ ಪ್ರಕರಣದ ಹಿಂದೆ ಮುಸಲ್ಮಾನ ಉಗ್ರರು ಕೈವಾಡ ಇದೆ ಎಂದು ಸಂಘಪರಿವಾರ ಡಂಗೂರ ಸಾರಿತ್ತು. ಅದರಲ್ಲೂ ಚೆಡ್ಡಿಗಳ ಹಿರಿಯ ನಾಯಕ ಎಲ್.ಕೆ.ಅಡ್ವಾಣಿ ಇದೇ ಪ್ರಕರಣವನ್ನು ಆಧಾರವಾಗಿಟ್ಟುಕೊಂಡು ಕೇಂದ್ರದಲ್ಲಿ ಅಧಿಕಾರದಲ್ಲಿರುವ ಯುಪಿಎ ಸರ್ಕಾರ ಭಯೋತ್ಪಾದಕರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುತ್ತಿಲ್ಲ ಎಂದು ಗುಡುಗಿದ್ದರು. ಆದರೆ ಯಾವಾಗ ಈ ಭಯೋತ್ಪಾದಕ ಕೃತ್ಯದ ಹಿಂದೆ ತಮ್ಮವರೇ ಆದ ಕೇಸರಿ ಉಗ್ರರು ಇದ್ದಾರೆಂದು ಸಾಬೀತಾಯಿತೋ ಆನಂತರ ಈ ಚೆಡ್ಡಿಗಳ್ಯಾರೂ ತುಟಿಪಿಟಕ್ ಎನ್ನಲಿಲ್ಲ. ಅಷ್ಟೇ ಅಲ್ಲ, ಆಗ ಭಜರಂಗದಳದ ನಾಯಕನಾಗಿದ್ದ ಮತ್ತು ವಿಶ್ವ ಹಿಂದೂ ಪರಿಷತ್ತಿನಲ್ಲಿ ಸಕ್ರಿಯನಾಗಿದ್ದ ಪ್ರಮೋದ ಮುತಾಲಿಕನ ಬಲಗೈ ಬಂಟ ನಾಗರಾಜ ಜಂಬಗಿ ತಮ್ಮ ಸಂಘದ ಸದಸ್ಯ ಅಲ್ಲ ಎಂದೂ, ಈ ಬಾಂಬ್ ಸ್ಫೋಟ ಪ್ರಕರಣಕ್ಕೂ ಭಜರಂಗದಳಕ್ಕೂ ಯಾವುದೇ ಸಂಬಂಧವಿಲ್ಲವೆಂದೂ ಕೈತೊಳೆದುಕೊಂಡಿದ್ದರು ಚೆಡ್ಡಿಗಳು.

ಬಾಂಬ್ ಸ್ಫೋಟದ ಈ ಹಿಂದೂ ಭಯೋತ್ಪಾದಕರು ಜೈಲು ಸೇರಿದ ನಂತರ ಅವರ ನಡುವೆ ಅದೇನಾಯಿತೊ, ಬಾಗಲಕೋಟೆ ಜೈಲಿನಲ್ಲಿ 2009ರ ಜುಲೈ 18ರಂದು ನಾಗರಾಜ ಜಂಬಗಿಯನ್ನು ಆತನ ಗ್ಯಾಂಗಿನವರೇ ಆಟ ರಮೇಶ್ ಪವಾರ, ಹನುಮಂತ ಸಾಕಳೆ, ಬಸವರಾಜ ರೋಗಿ ಮತ್ತು ಹುಸೇನ್ ಸಾಬ್ ಮಾರಣಾಂತಿಕವಾಗಿ ಹಲ್ಲೆ ಮಾಡಿದರು. ನಾಗರಾಜ ಜಂಬಗಿಯನ್ನು ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಗೆ ಸೇರಿಸಲಾಯಿತಾದರೂ ಆತ ಅಲ್ಲೇ ಸಾವನ್ನಪ್ಪಿದ. ನಾಗರಾಜ ಜಂಬಗಿಯ ಸಹೋದರ ಹಾಗೂ ತಾಯಿ ಹಲವಾರು ಬಾರಿ ನಾಗರಾಜ ಜಂಬಗಿ ಸಾವಿಗೆ





ಎಸ್.ಎಸ್.ಪಾಟೀಲ್

ಪ್ರಮೋದ ಮುತಾಲಿಕನೇ ಕಾರಣವೆಂದು ಹೇಳಿದರು. ಆದರೆ ಪೊಲೀಸರು ಮಾತ್ರ ಮುತಾಲಿಕನ ವಿರುದ್ಧ ಒಂದೇ ಒಂದು ದೂರನ್ನೂ ದಾಖಲಿಸಲಿಲ್ಲ. ನಾಗರಾಜ ಜಂಬಗಿ ಸತ್ತಾಗ ಈ ಪತ್ರಿಕೆ ಈ ಪ್ರಕರಣ ಮುಚ್ಚಿಹೋಗುತ್ತದೆ ಎಂದು ವರದಿ ಮಾಡಿತ್ತು.

ಪೊಲೀಸರ ಬೇಜವಾಬ್ದಾರಿಯಿಂದಾಗಿ ಪ್ರಕರಣದ ಮುಖ್ಯ ರೂವಾರಿ ನಾಗರಾಜ ಜಂಬಗಿ ಜೈಲಿನಲ್ಲಿದ್ದಾಗಲೇ ಕೊಲೆಯಾದ. ಈ ಎಲ್ಲಾ ಅಂಶಗಳನ್ನು ಕೋರ್ಟ್‌ನಲ್ಲಿ ನ್ಯಾಯಾಧೀಶರ ಗಮನಕ್ಕೆ ತರಬೇಕಾದ ಸರಕಾರಿ ವಕೀಲರು ಸುಮ್ಮನೆ ಇದ್ದದ್ದು ಯಾಕೆ?

ಬಾಂಬ್ ಸ್ಫೋಟದ ಪ್ರಕರಣದಲ್ಲಿ ನಾಗರಾಜ ಜಂಬಗಿ ಗ್ಯಾಂಗ್ ಈಗ ಖುಲಾಸೆಯಾಗಿದ್ದರೂ ಅವರ ವಿರುದ್ಧ ಹಲವು ದರೋಡೆ, ಕೊಲೆ ಪ್ರಕರಣಗಳು ಇರುವುದರಿಂದ ಅವರೆಲ್ಲ ಇನ್ನೂ ಜೈಲಿನಲ್ಲಿದ್ದಾರೆ.

ಇವರೆಲ್ಲ ಹುಬ್ಬಳ್ಳಿ ಕೋರ್ಟ್‌ನಲ್ಲಿ ಬಾಂಬ್ ಸಿಡಿಸಲಿಲ್ಲ ಎಂದರೆ ಅದನ್ನು ನಿಜವಾಗಲೂ ಸ್ಫೋಟಿಸಿದ್ದು ಯಾರು? ಈ ಮಿಲಿಯನ್ ಡಾಲರ್ ಪ್ರಶ್ನೆಗೆ ಹುಬ್ಬಳ್ಳಿ-ಧಾರವಾಡದ ಪೊಲೀಸರು ಉತ್ತರ ನೀಡುವರೇ?

● ಹುಬ್ಬಳ್ಳಿಯಾಂವ


...ವೇರಿಯನು ಹರಿಯಲು ಬಿಟ್ಟು ಕೃಷ್ಣರಾಜ ಒಡೆಯರ್ ಶ್ರಮ ಪಡದಿದ್ದರೆ...

ಒಂದು ಚಿತ್ರ

...ದಷ್ಟು ಪ್ರಶ್ನೆಗಳು: ತಾಜ್‌ಮಹಲ್ ಕಟ್ಟಿದ್ದು ಯಾರು? ಉತ್ತರ: ...ನ್. ವಿಧಾನಸೌಧ ಕಟ್ಟಿದ್ದು ಯಾರು? ಉತ್ತರ: ಕೆಂಗಲ್ ಹನುಮಂತಯ್ಯ. ...ಎಸ್. ಕಟ್ಟಿದ್ದು ಯಾರು? ಉತ್ತರ: ವಿಶ್ವೇಶ್ವರಯ್ಯ!

...! ಇದೇನಿದು? ತಾಜ್‌ಮಹಲ್ ಕಟ್ಟಿದ್ದು ಆಗಿನ ಮೊಗಲ್ ಸಾಮ್ರಾಜ್ಯದ ...ಷಹಜಹಾನ್. ವಿಧಾನಸೌಧ ಕಟ್ಟಿದ್ದು ಅಂದಿನ ಮುಖ್ಯಮಂತ್ರಿ ... ಹನುಮಂತಯ್ಯ. ಅದೇ ಕೆ.ಆರ್.ಎಸ್. ಕಟ್ಟಿದ್ದು ಅಂದಿನ ...ವಾದ ವಿಶ್ವೇಶ್ವರಯ್ಯ! ಹಾಗಿದ್ದರೆ ಅಂದಿನ ಅರಸ ಕೃಷ್ಣರಾಜ ...? ಕೆ.ಆರ್.ಎಸ್ ಕಟ್ಟಿದ ಅಷ್ಟೂ ವರ್ಷ (1911ರಿಂದ ...ವರೆಗೆ) ರಾಜರಾಗಿದ್ದ ರಾಜರ್ಷಿ ನಾಲ್ವಡಿ ಯಾಕೆ ಕೆ.ಆರ್.ಎಸ್ ...ಕಿರಾಗಲಿಲ್ಲ?

...ದು, ಇತಿಹಾಸದಲ್ಲಿ ಕೆ.ಆರ್.ಎಸ್ ನಿರ್ಮಾಣದ ವಿಷಯದಲ್ಲಿ ...ಟ್ಟಿರುವ ಅತಿ ದೊಡ್ಡ ಸುಳ್ಳು ಎಂದರೆ ಇದೇ. ಇಂತಹ ಸುಳ್ಳಿಗೆ ...ಯನು ಹರಿಯಲು ಬಿಟ್ಟು ವಿಶ್ವೇಶ್ವರಯ್ಯ ಶ್ರಮ ಪಡದಿದ್ದರೆ..." ... ಒಗ್ಗರಣೆ ಬೇರೆ! ಮೊನ್ನೆ ಕಾರ್ಯಕ್ರಮವೊಂದರಲ್ಲಿ ಹಿರಿಯ ... [illegible]




ಆ ಸ್ಥಾಪನಾ ಫಲಕದಲ್ಲಿ ಅಣೆಕಟ್ಟೆಯ ನಿರ್ಮಾಣ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್‌ರವರ ಆಡಳಿತದಲ್ಲಿ ಆಯಿತು ಎಂದು ಬರೆದಿದೆ. ಸಾಲದ್ದಕ್ಕೆ 21 ವರ್ಷಗಳ ಅದರ ಸುದೀರ್ಘ ನಿರ್ಮಾಣ ಅವಧಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅಷ್ಟೂ ಜನ ದಿವಾನರುಗಳ ಅಂದರೆ ಟಿ. ಮಾಧವರಾವ್, ಸರ್ ಎಮ್.ವಿಶ್ವೇಶ್ವರಯ್ಯ, ಸರ್.ಕಾಂತರಾಜ ಅರಸ್, ಸರ್ ಬ್ಯಾನರ್ಜಿ, ಸರ್ ಮಿರ್ಜಾ ಇಸ್ಮಾಯಿಲ್ ಅವರುಗಳ ಹೆಸರುಗಳನ್ನು ಅದರ ಮೇಲೆ ಕೆತ್ತಲಾಗಿದೆ. ಅಂದಹಾಗೆ ಆ ಸ್ಥಾಪನಾ ಫಲಕದಲ್ಲಿ ತಪ್ಪಿಯೂ ಕೂಡ ಕೆ.ಆರ್.ಎಸ್. ನಿರ್ಮಾತೃ ವಿಶ್ವೇಶ್ವರಯ್ಯ ಎಂದು ದಾಖಲಾಗಿಲ್ಲ!


ನಿಜಾಂಶವೆಂದರೆ ಜಲಾಶಯದ ಪ್ಲಾನಿಂಗ್ ರೂಪಿಸಿದ್ದು ಮ್ಯಾಕ್‌ಹಚ್ ಎಂಬ ಬ್ರಿಟಿಷ್ ಎಂಜಿನಿಯರ್! ಅಲ್ಲದೆ ಅದರ ನಿರ್ಮಾಣದ ಅಂತಿಮ ವರ್ಷಗಳಲ್ಲಿ ದಿವಾನರಾಗಿದ್ದವರು ಸರ್ ಮಿರ್ಜಾ ಇಸ್ಮಾಯಿಲ್. ವಾಸ್ತವ

ಹೀಗಿರುವಾಗ ಕೆ.ಆರ್.ಎಸ್. ನಿರ್ಮಾಣದ ಸಂಪೂರ್ಣ ಶ್ರೇಯಸ್ಸು ಸಲ್ಲಬೇಕಾದ್ದು ಯಾರಿಗೆ? ಅದರ ನಿರ್ಮಾಣದ ಅವಧಿಯಲ್ಲಿ ಮಂತ್ರಿಗಳಾಗಿದ್ದ, ಎಂಜಿನಿಯರ್‌ಗಳಾಗಿದ್ದ ಕೆಲಸಗಾರರಿಗೋ ಅಥವಾ ಷಹಜಹಾನ್‌ನ ಹಾಗೆ ಅದನ್ನು ಕಷ್ಟಪಟ್ಟು ಕಟ್ಟಿದ ಮಹಾರಾಜರಿಗೋ? ಖಂಡಿತ ಮಹಾರಾಜರಿಗೆ. ತಮ್ಮ ತನು, ಮನ, ಧನ, ಅರ್ಪಿಸಿ, ಕಷ್ಟಕಾಲದಲ್ಲಿ ಜಲಾಶಯದ ನಿರ್ಮಾಣಕ್ಕಾಗಿ ಅರಮನೆಯ ಒಡವೆಗಳನ್ನೂ ಅಡವಿಟ್ಟ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್‌ಗೆ.

ಈ ನಿಟ್ಟಿನಲ್ಲಿ ಈಗಲಾದರೂ ಕೃಷ್ಣರಾಜ ಒಡೆಯರ್ ಅವರಿಗೆ ಅವರ ಶ್ರೇಷ್ಠ ಸಾಧನೆಯ ಶ್ರೇಯಸ್ಸು ತಡವಾದರೂ ಸಲ್ಲಬೇಕು. ಅಂದಹಾಗೆ ಅದು ಸಾಧ್ಯವಾಗಬೇಕಾದರೆ ವಿಶ್ವೇಶ್ವರಯ್ಯನವರು ಕೆ.ಆರ್.ಎಸ್. ನಿರ್ಮಾತೃ ಎಂದು ಸಾರುವ ಎಲ್ಲಾ ಸಾಹಿತ್ಯವೂ ನಾಶವಾಗಬೇಕು. ಹಾಗೆ ಆ ಸಾಹಿತ್ಯವನ್ನು ಸಂಗೀತವಾಗಿ ಹಾಡುವ "ಕಾವೇರಿಯನು ಹರಿಯಲು ಬಿಟ್ಟು..." ಎಂಬ 'ಬಂಗಾರದ ಮನುಷ್ಯ' ಚಿತ್ರದ ಆ ಹಾಡು ಕೂಡ ನಿಷೇಧಕ್ಕೊಳಗಾಗಬೇಕು ಮತ್ತು ಅದರ ಬದಲು "ಕಾವೇರಿಯನು ಹರಿಯಲು ಬಿಟ್ಟು ಕೃಷ್ಣರಾಜ ಒಡೆಯರ್ ಶ್ರಮಪಡದಿದ್ದರೆ... ಕನ್ನಂಬಾಡಿಯ ಕಟ್ಟುವರ..." ಎಂಬ ಹಾಡು ಚಾಲ್ತಿಗೆ ಬರಬೇಕು ಮತ್ತು ... [illegible]

[illegible]





ಈಗ ಸಂವಿಧಾನದ 371ನೆಯ ತಿದ್ದುಪಡಿಯಡಿಯಲ್ಲಿ ವಿಶೇಷ ಸ್ಥಾನಮಾನ ಹಾಗೂ ವಿಶೇಷ ಅನುದಾನ ಗುಲಬರ್ಗಾ ವಿಭಾಗಕ್ಕೆ ದೊರೆಯುತ್ತದೆ. ಆದರೆ ಇದರ ಅನುಷ್ಠಾನ ಮತ್ತು ನಿರ್ವಹಣೆ ಹೇಗೆ? ಈ ಪ್ರದೇಶದಲ್ಲಿನ ಬಡತನ, ಹಸಿವು, ಅಪೌಷ್ಠಿಕತೆ, ಅನಕ್ಷರತೆ, ಅಸಮಾನತೆ ಮುಂತಾದವು ವಿಶೇಷ ಕ್ರಮಗಳನ್ನು ತೆಗೆದುಕೊಂಡಾಕ್ಷಣ ಬಗೆಹರಿದು ಬಿಡುತ್ತವೆಯೇ? ಉತ್ತರ ಸ್ಪಷ್ಟವಾಗಿ ಇಲ್ಲ. ಈ ಪ್ರದೇಶದಲ್ಲಿ ಯೋಜನೆಗಳು ಕೇವಲ ರೆಟ್ಟರಿಕ್ಕಿನ ಮಟ್ಟಕ್ಕೆ ನಿಲ್ಲುತ್ತವೆಯೇ ವಿನಾ ನಿಜವಾಗಿ ಕಡುಬಡವರನ್ನು ತಲುಪುವುದಿಲ್ಲ. ಎಲ್ಲಿಯವರೆಗೆ ಸಂಬಂಧಿಸಿದ ಪ್ರದೇಶದ ಜನರು, ಜನಪ್ರತಿನಿಧಿಗಳು ಮತ್ತು ಜನಪ್ರತಿನಿಧಿ ಸಂಸ್ಥೆಗಳು ಎಚ್ಚರದಿಂದಿರುವುದಿಲ್ಲವೋ ಮತ್ತು ಕ್ರಿಯಾಶೀಲವಾಗಿರುವುದಿಲ್ಲವೋ ಅಲ್ಲಿಯವರೆಗೆ 371ನೆಯ ಕಲಮಾಗಲಿ ಅಥವಾ ಎಂಟು ವರ್ಷಗಳ ವಿಶೇಷ ಯೋಜನೆಯಾಗಲಿ ಅಥವಾ ಅದಕ್ಕೆ ಸಂಬಂಧಿಸಿದ ಕಾನೂನುಗಳಾಗಲಿ ಯಶಸ್ವಿಯಾಗುವುದು ಸಾಧ್ಯವಿಲ್ಲ. ಇದು ಕಳೆದ 20-25 ವರ್ಷಗಳ ನಮ್ಮ ಅನುಭವವಾಗಿದೆ.

371ನೆಯ ಕಲಮಿನ ತಿದ್ದುಪಡಿಯಿಂದ ಸಮಸ್ಯೆ ಬಗೆಹರಿಯುತ್ತದೆಯೇ

ಕೇಂದ್ರ ಸರ್ಕಾರವು ಸಂವಿಧಾನದ 371ನೆಯ ಕಲಮನ್ನು ತಿದ್ದುಪಡಿ ಮಾಡಿ ಕರ್ನಾಟಕ ರಾಜ್ಯದ ಗುಲಬರ್ಗಾ ವಿಭಾಗದ (ಹೈದರಾಬಾದ್ ಕರ್ನಾಟಕ ಪ್ರದೇಶ? ಬಳ್ಳಾರಿ ಜಿಲ್ಲೆ) ಆರು ಜಿಲ್ಲೆಗಳಿಗೆ ವಿಶೇಷ ಸ್ಥಾನಮಾನ ನೀಡಿ ಅವುಗಳ ಅಭಿವೃದ್ಧಿಗೆ ಸೌಲಭ್ಯ ನೀಡುವಂತಹ ಕ್ರಮವನ್ನು ಕೈಗೊಂಡಿರುವುದು ಸ್ವಾಗತಾರ್ಹ. ಕೆಲವು ದಶಕಗಳ ಹಿಂದೆಯೇ ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶಗಳಿಗೆ 371ರ ಸೌಲಭ್ಯಗಳನ್ನು ಒದಗಿಸಲಾಗಿತ್ತು. ನಮಗೆ ಇದನ್ನು ನೀಡುವುದು ತಡವಾಗಿದೆ. ತಡವಾದರೂ ಪರವಾಗಿಲ್ಲ, ಬಂದಿದೆಯಲ್ಲಾ ಎಂಬುದು ಸಮಾಧಾನದ ಸಂಗತಿಯಾಗಿದೆ. ಇದಕ್ಕಾಗಿ ಸತತವಾಗಿ ಹೋರಾಟ ಮಾಡಿಕೊಂಡು ಬಂದ ಹೈದರಾಬಾದ್ ಕರ್ನಾಟಕ ಪ್ರದೇಶದ ಹಿರಿಯ ಮುತ್ಸದ್ದಿಗಳಿಗೆ ಮತ್ತು ಇದಕ್ಕಾಗಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುವುದರಲ್ಲಿ ಯಶಸ್ವಿಯಾದ ಕೇಂದ್ರ ಸರ್ಕಾರದಲ್ಲಿ ಮಂತ್ರಿಗಳಾಗಿರುವ ನಮ್ಮ ರಾಜಕಾರಣಿಗಳಿಗೆ ಕೃತಜ್ಞತೆ ಹೇಳುವುದು ನಮ್ಮ ಕರ್ತವ್ಯವಾಗಿದೆ.

ಸಂವಿಧಾನದ 371ನೆಯ ಕಲಮಿನ ತಿದ್ದುಪಡಿಯಿಂದ ಮೊದಲನೆಯದಾಗಿ ಶಿಕ್ಷಣ ಮತ್ತು ಉದ್ಯೋಗಗಳಲ್ಲಿ ಸಂಬಂಧಿಸಿದ ಪ್ರದೇಶಕ್ಕೆ ಮೀಸಲಾತಿ ಸೌಲಭ್ಯ ದೊರೆಯುತ್ತದೆ. ಎರಡನೆಯದಾಗಿ ನಮ್ಮ ರಾಜ್ಯಕ್ಕೆ ಸಂಬಂಧಿಸಿದಂತೆ 371ರ ಅಡಿಯಲ್ಲಿ ವಿಶೇಷ ಅಭಿವೃದ್ಧಿ ಅನುದಾನವನ್ನು ಕೇಂದ್ರವು ನೀಡುವ ಕ್ರಮವೂ ಇದೆ ಎಂದು ಹೇಳಲಾಗಿದೆ. ಆದರ ಸ್ವರೂಪದ ಬಗ್ಗೆ ಸ್ಪಷ್ಟ ವಿವರಗಳು ಲಭ್ಯವಿಲ್ಲ. ವಿಶೇಷ ಅಭಿವೃದ್ಧಿ ಅನುದಾನವನ್ನು 371ರಡಿಯಲ್ಲಿ ಕೇಂದ್ರವು ರಾಜ್ಯಕ್ಕೆ ನೀಡುವುದಾದರೆ ಅದೊಂದು ವಿಶಿಷ್ಟ ಕೊಡುಗೆಯೆಂದು ಹೇಳಬೇಕಾಗುತ್ತದೆ. ಈಗ ನಮ್ಮ ಮುಂದೆ ನಿಲ್ಲುವ ಪ್ರಶ್ನೆಯೆಂದರೆ ಇದರಿಂದ ಸಂಬಂಧಿಸಿದ ಪ್ರದೇಶದ ಜಿಲ್ಲೆಗಳು ಅಭಿವೃದ್ಧಿಯಾಗಿ ನಮ್ಮ ರಾಜ್ಯವನ್ನು ಕಾಡುತ್ತಿರುವ ಪ್ರಾದೇಶಿಕ ಅಸಮಾನತೆಯ ಸಮಸ್ಯೆಯ ನಿವಾರಣೆಯಾಗುತ್ತದೆಯೇ ಎಂಬುದಾಗಿದೆ.

ಪ್ರಾದೇಶಿಕ ಅಸಮಾನತೆ ನಿವಾರಣೆ ಬಗ್ಗೆ ನಮ್ಮ ಅನುಭವವೇನು?


ಪ್ರಾದೇಶಿಕ ಅಸಮಾನತೆ ನಿವಾರಣೆ ಬಗ್ಗೆ ನಮ್ಮ ರಾಜ್ಯದ ಅನುಭವ ಉತ್ಸಾಹದಾಯಕವಾಗಿಲ್ಲ. ಇದಕ್ಕೆ ಸಂಬಂಧಿಸಿದಂತೆ ರೆಟ್ಟರಿಕ್ ಜಾಸ್ತಿಯಿದೆ: ಸತ್ವ ಕಡಿಮೆಯಿದೆ. ಡಾ.ಡಿ.ಎಂ.ನಂಜುಂಡಪ್ಪ ಸಮಿತಿ ವರದಿಯ ಒಂದು ಮುಖ್ಯ ಶಿಫಾರಸ್ಸಾದ ರೂ. 16000 ಕೋಟಿ ಮೊತ್ತದ ಎಂಟು ವರ್ಷಗಳ ವಿಶೇಷ ಅಭಿವೃದ್ಧಿ ಯೋಜನೆಯನ್ನು ರಾಜ್ಯ ಸರ್ಕಾರ 2007-08ರಲ್ಲಿ ಅನುಷ್ಠಾನಗೊಳಿಸಿತು. ಅದು ಜಾರಿಗೆ ಬಂದು ಐದು ವರ್ಷಗಳಾಗಿವೆ. ಈ ಯೋಜನೆಯಡಿಯಲ್ಲಿ 2007-08 ರಿಂದ 2011-12ರ ಅವಧಿಯಲ್ಲಿ ಈ ವಿಶೇಷ ಯೋಜನೆಗಾಗಿ ಸರ್ಕಾರವು ಬಜೆಟ್ಟಿನಲ್ಲಿ ತೆಗೆದಿಟ್ಟ ಒಟ್ಟು ಹಣ ರೂ 12265.82 ಕೋಟಿ. ಆದರಲ್ಲಿ ಬಿಡುಗಡೆಯಾದದ್ದು ರೂ. 8342.05 ಕೋಟಿ. ಕೊನೆಗೆ ವೆಚ್ಚವಾದದ್ದು ಕೇವಲ ರೂ. 7881.18 ಕೋಟಿ. ನಿಗದಿಪಡಿಸಿದ್ದ ಮೊತ್ತದಲ್ಲಿ ವೆಚ್ಚವಾದ ಮೊತ್ತದ ಪ್ರಮಾಣ ಶೇ 67.86. ವಿಚಿತ್ರವೆಂದರೆ ಈ ವೈಫಲ್ಯವನ್ನು ಕುರಿತಂತೆ 371ರ ಕಲಮಿನ ಬಗ್ಗೆ ಹೋರಾಟವನ್ನು ಸಂಘಟಿಸಿದವರು ಮಾತನಾಡುತ್ತಿಲ್ಲ. ರಾಜ್ಯ ಸರ್ಕಾರವು ತನ್ನ 'ಪ್ರಾದೇಶಿಕ ಅಭಿವೃದ್ಧಿ ನೀತಿ'ಯನ್ನು ಮೊಟ್ಟ ಮೊದಲನೆಯದಾಗಿ ಘೋಷಿಸಬೇಕು ಎಂಬುದು ಡಾ.ಡಿ.ಎಂ.ನಂಜುಂಡಪ್ಪ ಸಮಿತಿ ವರದಿಯ ಮತ್ತೊಂದು ಮುಖ್ಯ ಶಿಫಾರಸ್ಸು. ಆದರೆ ವರದಿಯು ಸರ್ಕಾರಕ್ಕೆ ಸಲ್ಲಿಕೆಯಾಗಿ 10 ವರ್ಷ ಕಳೆದರೂ ಅದರ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ. ನೀತಿಯೇ ಇಲ್ಲದ ಮೇಲೆ ಯಾವ ಚೌಕಟ್ಟಿನಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಮತ್ತು ಮೌಲ್ಯಮಾಪನ ಮಾಡುವುದು?

ಇವೆಲ್ಲಕ್ಕಿಂತ ಪ್ರಧಾನವಾಗಿ ಎಂಟು ವರ್ಷಗಳ ವಿಶೇಷ ಯೋಜನೆಗೆ ರೂ. 16,000 ಕೋಟಿಯನ್ನು ಹೆಚ್ಚುವರಿಯಾಗಿ ಒದಗಿಸಬೇಕು ಎಂಬುದು ಡಾ.ಡಿ.ಎಂ.ನಂಜುಂಡಪ್ಪ ಸಮಿತಿ ವರದಿಯ ಶಿಫಾರಸ್ಸು. ಈ ಯೋಜನೆಯ ಒಟ್ಟು ಮೊತ್ತ ರೂ. 31,000 ಕೋಟಿ. ಇದರಲ್ಲಿ ರೂ. 15,000 ಕೋಟಿಯು ವಾರ್ಷಿಕವಾಗಿ ರೂಢಿಗತವಾಗಿ ಯೋಜನೆಯ ಭಾಗವಾಗಿ ಹಿಂದುಳಿದ 114 ತಾಲ್ಲೂಕುಗಳಿಗೆ ಹರಿದುಬರುವ ಮೊತ್ತವಾಗಿರುತ್ತದೆ. ಅದನ್ನು ಬಿಟ್ಟು ಹೆಚ್ಚುವರಿಯಾಗಿ ರೂ. 16,000 ಕೋಟಿಯನ್ನು ರಾಜ್ಯ ಸರ್ಕಾರ ಎಂಟು ವರ್ಷಗಳಲ್ಲಿ ಒದಗಿಸಬೇಕು ಎಂಬುದು ಸಮಿತಿಯ ಶಿಫಾರಸ್ಸಾಗಿತ್ತು, ಆದರೆ ಸರ್ಕಾರವು ರೂ. 16,000 ಕೋಟಿಯನ್ನು ಯೋಜನಾ ವೆಚ್ಚದ ಭಾಗವಾಗಿ ಒದಗಿಸುತ್ತಿದೆಯೇ ವಿನಃ ಅದು ಹೆಚ್ಚುವರಿಯಾಗಿಯಲ್ಲ.

ಎಂಟು ವರ್ಷಗಳ ವಿಶೇಷ ಯೋಜನೆಯ ಅನುದಾನವನ್ನು 114 ಹಿಂದುಳಿದ ತಾಲ್ಲೂಕುಗಳ ನಡುವೆ ಹಂಚಲು ಸಮಿತಿಯು ಒಂದು ಸೂತ್ರವನ್ನು ರೂಪಿಸಿಕೊಟ್ಟಿತ್ತು, ಆದರೆ ಸರ್ಕಾರವು ಈ ವಿಶೇಷ ಯೋಜನೆಯನ್ನು 2007-08ರಲ್ಲಿ ಅನುಷ್ಠಾನಗೊಳಿಸುವಾಗ ಅನುದಾನ ಹಂಚಿಕೆಯ ಸಮಿತಿ ಸೂತ್ರವನ್ನು ಬಿಟ್ಟು ತನ್ನದೇ ಸರ್ಕಾರಿ ಸೂತ್ರವನ್ನು ಅಳವಡಿಸಿಕೊಂಡಿತು. ಸರ್ಕಾರಿ ಸೂತ್ರವನ್ನು ಆಧರಿಸಿ ಅನುದಾನ ಹಂಚಿದ್ದರ ಪರಿಣಾಮವಾಗಿ ಯೋಜನೆಯ ಮೊದಲ ವರ್ಷವೇ ಗುಲಬರ್ಗಾ ವಿಭಾಗದ ಹಿಂದುಳಿದ 28 ತಾಲ್ಲೂಕುಗಳಿಗೆ ಸಮಿತಿ ಸೂತ್ರವನ್ನು ಆಧರಿಸಿದ್ದರೆ ಎಷ್ಟು ದೊರೆಯಬೇಕಾಗಿತ್ತೋ ಅದಕ್ಕಿಂತ ರೂ. 128 ಕೋಟಿ ಅನುದಾನ ಕಡಿಮೆಯಾಯಿತು. ಈ ವಿಕೃತಿಯನ್ನು ಸರ್ಕಾರದ ಗಮನಕ್ಕೆ ನಾನು ಮತ್ತು ಡಾ.ಡಿ.ಎಂ.ನಂಜುಂಡಪ್ಪ ಸಮಿತಿಯ ಸದಸ್ಯರಲ್ಲಿ ಒಬ್ಬರಾದ ಡಾ.ಬಿ.ಶೇಷಾದ್ರಿ ಅವರು ಕೂಡಿ ಸರ್ಕಾರದ ಗಮನಕ್ಕೆ ತರುವ ಪ್ರಯತ್ನ ಮಾಡಿದೆವು. ಅದಕ್ಕಾಗಿ ಜನಜಾಗೃತಿಯನ್ನು ಮಾಡಿದೆವು ಮತ್ತು ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆದೆವು. ಸರ್ಕಾರಿ ಸೂತ್ರದ ಪ್ರಕಾರ ಅನುದಾನ ಹಂಚಿದರೆ ಎಂಟು ವರ್ಷಗಳಲ್ಲಿ ಗುಲಬರ್ಗಾ ವಿಭಾಗದ 28 ತಾಲ್ಲೂಕುಗಳಿಗೆ ದೊರೆಯಬಹುದಾಗಿದ್ದ ಮೊತ್ತದಲ್ಲಿ ಕಡಿತ ರೂ. 1,308 ಕೋಟಿಯಷ್ಟಾಗುತ್ತಿತ್ತು. ಈ ಅನಾಹುತದ ವಿರುದ್ಧ ನಾವು ಸತತ ಪ್ರಯತ್ನ ಮಾಡಿದ್ದರಿಂದ ಸರ್ಕಾರವು ಸೂತ್ರವನ್ನು 2008-09ರ ಸಾಲಿನಲ್ಲಿ ಬದಲಾಯಿಸಿತು. ನಮ್ಮ ಪ್ರಯತ್ನದಿಂದಾಗಿ ಎಂಟು ವರ್ಷಗಳ ವಿಶೇಷ ಅಭಿವೃದ್ಧಿ ಯೋಜನೆ ಬಾಬ್ತು ಗುಲಬರ್ಗಾ ವಿಭಾಗಕ್ಕೆ ಉಂಟಾಗುತ್ತಿದ್ದ ರೂ. 1,308 ಕೋಟಿ ಹಾನಿಯು ತಪ್ಪಿತು.

ಸಂಸ್ಥೆಗಳು/ಸಂವಿಧಾನಾತ್ಮಕ ವ್ಯವಸ್ಥೆ ಇದ್ದು ಬಿಟ್ಟರೆ ಸಾಕಾಗುವುದಿಲ್ಲ!

ಗುಲಬರ್ಗಾ ವಿಭಾಗದ ಜಿಲ್ಲೆಗಳ ಅಭಿವೃದ್ಧಿಗಾಗಿ 1990ರಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯನ್ನು ಸ್ಥಾಪಿಸಲಾಯಿತು. ಕಳೆದ 20 ವರ್ಷಗಳಲ್ಲಿ ಅದು ಸುಮಾರು ರೂ. 700-800 ಕೋಟಿ ಹಣವನ್ನು ವ್ಯಯ ಮಾಡಿದೆ. ಅದರಿಂದ ಸಂಬಂಧಿಸಿದ ಪ್ರದೇಶದ ಅಭಿವೃದ್ಧಿಯಾಗಲಿಲ್ಲ, ಅದು ರಸ್ತೆ ಕಾಮಗಾರಿಗಳನ್ನು ಬಿಟ್ಟು ಬಹಳಷ್ಟು ಬೇರೇನೂ ಕೆಲಸ ಮಾಡಲಿಲ್ಲ. ಡಾ.ಡಿ.ಎಂ.ನಂಜುಂಡಪ್ಪ ಸಮಿತಿಯ ಶಿಫಾರಸ್ಸಿನ ಎಂಟು ವರ್ಷದ ವಿಶೇಷ ಅಭಿವೃದ್ಧಿ ಯೋಜನೆಯನ್ನು 2007-08ರಲ್ಲಿ ಅನುಷ್ಠಾನಗೊಳಿಸಲಾಗಿದೆ. ಅದರಲ್ಲಿ ಮೀಸಲಿಟ್ಟ ಹಣವನ್ನು ಪೂರ್ಣವಾಗಿ ವೆಚ್ಚ ಮಾಡುವುದು ನಮಗೆ ಸಾಧ್ಯವಾಗಿಲ್ಲ, ಈಗ ಸಂವಿಧಾನದ 371ನೆಯ ತಿದ್ದುಪಡಿಯಡಿಯಲ್ಲಿ ವಿಶೇಷ ಸ್ಥಾನಮಾನ ಹಾಗೂ



ವಿಶೇಷ ಅನುದಾನ ಗುಲಬರ್ಗಾ ವಿಭಾಗಕ್ಕೆ ದೊರೆಯುತ್ತದೆ. ಆದರೆ ಇದರ ಅನುಷ್ಠಾನ ಮತ್ತು ನಿರ್ವಹಣೆ ಹೇಗೆ? ಈ ಪ್ರದೇಶದಲ್ಲಿನ ಬಡತನ, ಹಸಿವು, ಅಪೌಷ್ಠಿಕತೆ, ಅನಕ್ಷರತೆ, ಅಸಮಾನತೆ ಮುಂತಾದವು ವಿಶೇಷ ಕ್ರಮಗಳನ್ನು ತೆಗೆದುಕೊಂಡಾಕ್ಷಣ ಬಗೆಹರಿದು ಬಿಡುತ್ತವೆಯೇ? ಉತ್ತರ ಸ್ಪಷ್ಟವಾಗಿ ಇಲ್ಲ. ಅಭಿವೃದ್ಧಿ ಸಂಸ್ಥೆಗಳು ಹೇಗೆ ಕಾರ್ಯ ನಿರ್ವಹಿಸುತ್ತಿವೆ ಮತ್ತು ಕಾರ್ಯಕ್ರಮಗಳು ಹೇಗೆ ಅನುಷ್ಠಾನಗೊಳ್ಳುತ್ತಿವೆ ಎಂಬುದರ ಮೇಲೆ ನಿಗಾ ಇಡುವ ವ್ಯವಸ್ಥೆಯಿಲ್ಲ.


ಅಭಿವೃದ್ಧಿ ಕಾರ್ಯಕ್ರಮಗಳ ಕಾರ್ಯಕ್ಷಮತೆಯ ಮೌಲ್ಯಮಾಪನ ಮಾಡುವ ಕ್ರಮ ಜಾರಿಯಲ್ಲಿಲ್ಲ. ಈ ಪ್ರದೇಶದಲ್ಲಿ ಯೋಜನೆಗಳು ಕೇವಲ ರೆಟ್ಟರಿಕ್ಕಿನ ಮಟ್ಟಕ್ಕೆ ನಿಲ್ಲುತ್ತವೆಯೇ ವಿನಾ ನಿಜವಾಗಿ ಕಡುಬಡವರನ್ನು ತಲುಪುವುದಿಲ್ಲ. ಎಲ್ಲಿಯವರೆಗೆ ಸಂಬಂಧಿಸಿದ ಪ್ರದೇಶದ ಜನರು, ಜನಪ್ರತಿನಿಧಿಗಳು ಮತ್ತು ಜನಪ್ರತಿನಿಧಿ ಸಂಸ್ಥೆಗಳು ಎಚ್ಚರದಿಂದಿರುವುದಿಲ್ಲವೋ ಮತ್ತು ಕ್ರಿಯಾಶೀಲವಾಗಿರುವುದಿಲ್ಲವೋ ಅಲ್ಲಿಯವರೆಗೆ 371ನೆಯ ಕಲಮಾಗಲಿ ಅಥವಾ ಎಂಟು ವರ್ಷಗಳ ವಿಶೇಷ ಯೋಜನೆಯಾಗಲಿ ಅಥವಾ ಅದಕ್ಕೆ ಸಂಬಂಧಿಸಿದ ಕಾನೂನುಗಳಾಗಲಿ ಯಶಸ್ವಿಯಾಗುವುದು ಸಾಧ್ಯವಿಲ್ಲ. ಇದು ಕಳೆದ 20-25 ವರ್ಷಗಳ ನಮ್ಮ ಅನುಭವವಾಗಿದೆ.

ಸಂವಿಧಾನದ 371ನೆಯ ಕಲಮಿನ ಸಾಧನೆ

ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶಗಳಲ್ಲಿ 371ರ ವಿಶೇಷ ಕಾರ್ಯಯೋಜನೆಯು 20-25 ವರ್ಷಗಳ ಹಿಂದೆಯೇ ಜಾರಿಗೆ ಬಂದಿದೆ. ಆ ರಾಜ್ಯಗಳಲ್ಲಿ ಪ್ರಾದೇಶಿಕ ಅಸಮಾನತೆಯು ಇಂದಿಗೂ ನಿವಾರಣೆಯಾಗಿಲ್ಲ. ಸಂವಿಧಾನದ 371ರ ಅಡಿಯಲ್ಲಿನ ಕಾರ್ಯಯೋಜನೆಯು ಮಹಾರಾಷ್ಟ್ರದಲ್ಲಿ ಮತ್ತು ಆಂಧ್ರಪ್ರದೇಶದಲ್ಲಿ ವಿಫಲ... ಎಂಬ ಕಾರಣದ ಮೇಲೆ ಅದು ನಮ್ಮಲ್ಲಿ... ವಿಫಲವಾಗುತ್ತದೆ ಎಂದು ಭಾವಿಸುವುದು ಸರಿ... ಆಂಧ್ರಪ್ರದೇಶದಲ್ಲಿ ಅಭಿವೃದ್ಧಿ ಸಂಬಂಧಿ ಪ್ರಾ... ಅಸಮಾನತೆಯು 371ರ ಕಲಮು ಜಾರಿಗೆ ಬಂದ ಮೇ... ಮುಂದುವರಿದ ಪರಿಣಾಮವಾಗಿ ತೆಲಂಗಾಣ ಪ್ರದೇಶ... ಪ್ರತ್ಯೇಕ ರಾಜ್ಯವನ್ನಾಗಿ ಮಾಡಬೇಕೆಂದು ಒತ್ತಾ... ತೆಲಂಗಾಣ ಭಾಗದಲ್ಲಿ ಉಗ್ರ ಹೋರಾಟದ ಸ್ವ... ತಳೆದಿದೆ. ಮಹಾರಾಷ್ಟ್ರದಲ್ಲೂ ಸ್ಥಿ... ಇದಕ್ಕಿಂತ ಭಿನ್ನವಾಗಿಲ್ಲ.

ಅಭಿವೃದ್ಧಿ ಮತ್ತು ದುಸ್ಥಿ... ಮೂಲ ನೆಲೆಗಳ ಬಗ್ಗೆ ನ... ಸೂಕ್ಷ್ಮವಾಗಿ ಗಮನಿಸದಿದ್ದರೆ ನ... ಯೋಜನೆಗಳನ್ನು ಜಾರಿಗೆ ತಂದರೂ ಸಮಸ್ಯೆ... ಬಗೆಹರಿಯುವುದಿಲ್ಲ. ಗುಲಬರ್ಗಾ ವಿಭಾಗದ ಜಿಲ್ಲೆಗಳಲ್ಲಿನ ಮೂಲ ಸಮಸ್ಯೆಗಳಾವುವು? ಮೊ... ಹೇಳಬೇಕಾದುದು ಅಲ್ಲಿನ ಅನಕ್ಷರತೆಯ ಸ... ಈ ವಿಭಾಗದ ಒಟ್ಟು 31 ತಾಲ್ಲೂಕುಗಳ... ಒಂಬತ್ತರಲ್ಲಿ ಒಟ್ಟು ಸಾಕ್ಷರತೆಯ ಪ್ರಮಾಣ 201... ಶೇ. 60ಕ್ಕಿಂತ ಕಡಿಮೆಯಿದೆ ಮತ್ತು ಹನ್ನೆ... ತಾಲ್ಲೂಕುಗಳಲ್ಲಿ ಮಹಿಳೆಯರ ಸಾಕ್ಷರತಾ ಪ್ರಮಾ... 2011ರಲ್ಲಿ ಶೇ. 50ಕ್ಕಿಂತ ಕಡಿಮೆಯಿದೆ. ದೇಶಾ... ನಡೆದ 2007-08ರಲ್ಲಿನ ಡಿ.ಎಲ್.ಎಚ್ ಸ... ಪ್ರಕಾರ ಗುಲಬರ್ಗಾ ವಿಭಾಗದ ಜಿಲ್ಲೆಗಳಲ್ಲಿ... ವರ್ಷ ತುಂಬುವುದಕ್ಕೆ ಮೊದಲೇ ಮದುವೆಯಾ... ಹೆಣ್ಣುಮಕ್ಕಳ ಪ್ರಮಾಣ ಶೇ. 35ಕ್ಕಿಂತ ಅಧಿಕವಾ... ರಾಜ್ಯಮಟ್ಟದಲ್ಲಿ ಒಟ್ಟು ದುಡಿಮೆಗಾರರಲ್ಲಿ ಭೂರ... ದಿನಗೂಲಿ ದುಡಿಮೆಗಾರರ ಪ್ರಮಾಣ 20... ಜನಗಣತಿ ಪ್ರಕಾರ ಶೇ. 26ರಷ್ಟಿದ್ದರೆ ಗುಲಬ... ವಿಭಾಗದ ಜಿಲ್ಲೆಗಳಲ್ಲಿ ಅದು ಶೇ. 40... ಅಧಿಕವಾಗಿದೆ. ಭೂರಹಿತ ದಿನಗೂಲಿ ದುಡಿಮೆಗಾ... ಸಂಬಂಧಿಸಿದಂತೆ ಗಮನಿಸಬೇಕಾದ ಸಂಗತಿಯೆ... ಅವರಲ್ಲಿ ಮಹಿಳೆಯರ ಪ್ರಮಾಣ ಶೇ. 60... ಅಧಿಕವಾಗಿರುತ್ತದೆ. ಈ ಪ್ರದೇಶದಲ್ಲಿನ ಮಕ್ಕಳ ಅಪೌ... ಮತ್ತು ಮಹಿಳೆಯರ ಅನಿಮಿಯಾದ ಬಗ್ಗೆ ಏನ... ಹೇಳದಿರುವುದೇ ಲೇಸು! ಗುಲಬರ್ಗಾ ವಿಭಾಗ... 2004-05 ರಿಂದ 2009-2010ರ ನಡುವೆ ಐದರಿ... ಹತ್ತನೆಯ ತರಗತಿಗಳಿಗೆ ಸಂಬಂಧಿಸಿದಂತೆ ಶಾಲೆಯ... ಮಧ್ಯದಲ್ಲಿ ಬಿಡುವ ಮಕ್ಕಳ ಪ್ರಮಾಣ ಶೇ.50... ಅಧಿಕವಿದೆ.

ಈ ವಿಭಾಗದ ಜಿಲ್ಲೆಗಳಲ್ಲಿರುವ ಮೂಲಸಮಸ್ಯೆಗಳ... ವೆಂದರೆ ಅನಕ್ಷರತೆ, ಮಕ್ಕಳ ಮತ್ತು ಮಹಿಳೆಯರ... ಅಪೌಷ್ಟಿಕತೆ, ಶಾಲೆಯನ್ನು ಮಧ್ಯದಲ್ಲಿ ಬಿಡುವ ಮಕ್ಕ... ಭೂರಹಿತ ದಿನಗೂಲಿ ದುಡಿಮೆಗಾರರು, ವಲಸೆ, ತ್ರಿ... ಲಿಂಗ ತಾರತಮ್ಯ, ಕುಡಿಯುವ ನೀರಿನ ಪೂ... ಮುಂತಾದವು. ಸಂವಿಧಾನದ 371ನೆಯ ತಿದ್ದುಪಡಿಯ... ಯಲ್ಲಿ ಜಾರಿಗೆ ಬರುವ ಯಾವ ಕಾರ್ಯ ಯೋಜನೆ... ಗುಲಬರ್ಗಾ ವಿಭಾಗದ ಜಿಲ್ಲೆಗಳಲ್ಲಿನ ಬಡ... ಮಹಿಳೆಯರ, ದಿನಗೂಲಿಗಳ, ವಲಸಿಗರ, ಶಾಲೆ ಬಿ... ಮಕ್ಕಳ, ಅನಿಮೀಯಾದಿಂದ ನರಳುವವರ ಬದುಕ... ಉತ್ತಮಪಡಿಸುವ ಉದ್ದೇಶವನ್ನು ಒಳಗೊಂಡಿರುತ್ತವೆ? ಯ... ಯೋಜನೆಗಳು ಜಾರಿಗೆ ಬಂದರೂ ಅವು ಸಮಾಜದ... ಎಲೀಟ್ ವರ್ಗದ ಹಿತಾಸಕ್ತಿಗಳನ್ನು ಮಾತ್ರ ಈಡೇರಿಸಬ... ಎಂಬುದನ್ನು ಹೇಳಬೇಕಾದ ಅಗತ್ಯವಿಲ್ಲ. ಈ ಪ್ರದೇ... ಕೆಲವು ರಾಜಕಾರಣಿಗಳಿಗೆ ರಾಜ್ಯಮಟ್ಟದಲ್ಲಿ ಅಭಿವೃದ್ಧಿ... ಶ್ರಮಪಡುವುದರ ಬಗ್ಗೆ ಇರುವಷ್ಟು ಆಸಕ್ತಿ ತಮ್ಮ ಪ್ರದೇ... ಅಭಿವೃದ್ಧಿ ಕುರಿತಂತೆ ಕಂಡುಬರುತ್ತಿಲ್ಲ ಎಂಬುದ... ವಿಷಾದದಿಂದ ಹೇಳಬೇಕಾಗುತ್ತದೆ. ಡಾ.ಡಿ.ಎಂ.ನಂಜುಂ...



ಶಿಫಾರಸ್ಸುಗಳ ಅನುಷ್ಠಾನಕ್ಕೆ ಉನ್ನತಾಧಿಕಾರ ...ಒಂದನ್ನು ಸರ್ಕಾರ ರಚಿಸಿದೆ. ಇದರ ಮೊದಲ ... ಚುನಾವಣೆಯೊಂದರಲ್ಲಿ ಸೋತ ಮೇಲೆ ಆ... ಮತ್ತೊಬ್ಬರಿಗೆ ವಹಿಸಿಕೊಡಲಾಯಿತು. ಆದರೆ ... ಅಧಿಕಾರವನ್ನು ವಹಿಸಿಕೊಳ್ಳಲಿಲ್ಲ. ಈಗ ಅವರಿಗೆ ಶೆಟ್ಟರ್ ಮಂತ್ರಿಮಂಡಳದಲ್ಲಿ ಸಚಿವ ಸ್ಥಾನ ...ತೆ. ಅದನ್ನು ಅವರು ಒಪ್ಪಿಕೊಂಡಿದ್ದಾರೆ. ಈಗಲೂ ...ನಂಜುಂಡಪ್ಪ ಸಮಿತಿ ಶಿಫಾರಸ್ಸು ಅನುಷ್ಠಾನ ...ಕಾರ ಮಂಡಳಿಯ ಅಧ್ಯಕ್ಷ ಸ್ಥಾನ ಖಾಲಿಯಿದೆ. ...ದಯಲ್ಲಿ ನಾವು ಸಂವಿಧಾನದ 371ರ ತಿದ್ದುಪಡಿ ...ಜಾರಿಗೆ ಬರಲಿರುವ ಯೋಜನೆಗಳ ಸ್ಥಿತಿಗತಿಗಳ ...ೀಟಿಸಬೇಕಾಗಿದೆ.

...ಪ್ರದೇಶಿಕ ಅಭಿವೃದ್ಧಿಯ ಲಿಂಗ ...ಸಂಬಂಧಿ ಆಯಾಮಗಳು

...ಡಿ.ಎಂ.ನಂಜುಂಡಪ್ಪ ಸಮಿತಿ ವರದಿಯ ...ಗಳಲ್ಲಾಗಲಿ ಮತ್ತು ಹೈದರಾಬಾದ್ ಕರ್ನಾಟಕ ...ಅಭಿವೃದ್ಧಿ ಮಂಡಳಿಯ ಕಾರ್ಯಯೋಜನೆಯ ...ಗುಲಬರ್ಗಾ ವಿಭಾಗದ ಮಹಿಳೆಯರ ಅಭಿವೃದ್ಧಿ ...ಶೇಷ ಕ್ರಮಗಳಿರಲಿಲ್ಲ. ಮುಂದೆ ಸಂವಿಧಾನದ ...ತಿದ್ದುಪಡಿಯ ಮೂಲಕ ಅಸ್ತಿತ್ವಕ್ಕೆ ಬರಲಿರುವ ... ಮಹಿಳಾ ಸ್ನೇಹಿಯಾಗಿರುತ್ತದೆ ಎಂಬುದಕ್ಕೆ ಯಾವ ...ಗಳು ನಮಗೆ ಕಾಣುತ್ತಿಲ್ಲ. 'ಬಡತನವು ಯಾವ ...ದೇಶದಲ್ಲಿ ತೀವ್ರವಾಗಿರುತ್ತದೋ ಅಲ್ಲಿ ಲಿಂಗ ...ತೆಯು ಅತ್ಯಂತ ತೀವ್ರವಾಗಿರುತ್ತದೆ' ಎಂಬುದು ...ಸೆನ್ ಅವರ ಒಂದು ಪ್ರಸಿದ್ಧ ಪ್ರಮೇಯವಾಗಿದೆ. ...ರ್ಗಾ ವಿಭಾಗದಲ್ಲಿನ ಅನಕ್ಷರಸ್ಥರಲ್ಲಿ, ಶಾಲೆಯನ್ನು ... ಬಿಡುವ ಮಕ್ಕಳಲ್ಲಿ, ಭೂರಹಿತ ದಿನಗೂಲಿ ...ಗಾರರಲ್ಲಿ, ಅಪೌಷ್ಠಿಕತೆ ಮತ್ತು ಅನಿಮಿಯಾ ...ಯುತ್ತಿರುವವರಲ್ಲಿ ಮಹಿಳೆಯರ ಪ್ರಮಾಣ ...ಗಿರುತ್ತದೆ. ಅಭಿವೃದ್ಧಿ ಸಿದ್ಧಾಂತಗಳು ಮೊದಲೇ ...ರಪೇಕ್ಷ ಧೋರಣೆ ತಳೆದಿವೆ. ಈ ಹಿನ್ನೆಲೆಯಲ್ಲಿ ... ಕಾರ್ಯಕ್ರಮಗಳು ವಿಶಿಷ್ಟವಾಗಿ ಲಿಂಗ ...ಗಿರಬೇಕಾಗುತ್ತದೆ. ಆದರೆ 371ರ ಬಗ್ಗೆ ಚಳವಳಿ ...ವರು ರೆಟ್ಟರಿಕ್ಕಾಗಾದರೂ ಅದು ಮಹಿಳಾ ...ಗಿರಬೇಕು ಎಂಬ ಒತ್ತಾಯ ಮಾಡಲಿಲ್ಲ. ಈ ...ಲ್ಲಿ ಶಾಲೆಯನ್ನು ಮಧ್ಯದಲ್ಲಿ ಬಿಟ್ಟ ಮಕ್ಕಳ ಬಗ್ಗೆ ...ಕ್ಕೊಂದು ಕ್ಷೇತ್ರಕಾರ್ಯ ಮಾಡುವಾಗ ಒಂದು ...ದ ಮುಖ್ಯಸ್ಥನನ್ನು ತನ್ನ ಹೆಣ್ಣು ಮಗಳನ್ನು ಯಾಕೆ ...ಡಿಸಿದೆ ಎಂದು ಕೇಳಿದಾಗ ಅವ 'ಅದಕ್ಕೇನು ...ತ್ತದೆ' ಎಂದು ನಿರ್ಜೀವಿ ವಸ್ತುವಿನ ಬಗ್ಗೆ ...ಡಿದಂತೆ ಹೆಣ್ಣು ಮಗುವಿನ ಬಗ್ಗೆ ಮಾತನಾಡಿದ. ...ಶದಲ್ಲಿ ಪ್ರಧಾನವಾಗಿ ಪುರುಷಶಾಹಿ ಮೆರೆಯುತ್ತಿದೆ. ... ಈ ಭಾಗದಲ್ಲಿ ಊಳಿಗಮಾನ್ಯ ವ್ಯವಸ್ಥೆಯು ...ಜೀವಂತವಾಗಿದೆ. ಉರವಲಿಂದ ಅಡುಗೆ ...ಳ್ಳುವ ಕುಟುಂಬಗಳ ಪ್ರಮಾಣ 2011ರಲ್ಲಿ ...ಮಟ್ಟದಲ್ಲಿ ಶೇ. 60ರಷ್ಟಿದ್ದರೆ ಗುಲಬರ್ಗಾ ...ದಲ್ಲಿ ಅವುಗಳ ಪ್ರಮಾಣ ಶೇ. 80ಕ್ಕಿಂತ ಅಧಿಕ. ...ಕುಟುಂಬಗಳ ಮಹಿಳೆಯರು ಎದುರಿಸುತ್ತಿರುವ ...ಯ ಬಹುಮುಖ್ಯ ಸೂಚಿ ಇದಾಗಿದೆ.

...ಮಗೆಲ್ಲ ಗೊತ್ತಿರುವಂತೆ ಒಂದು ಪ್ರದೇಶದ ...ಖ್ಯೆಯಲ್ಲಿ ಮತ್ತು ಮತದಾರರಲ್ಲಿ ಮಹಿಳೆಯರು ...ಮಾರು ಅರ್ಧದಷ್ಟಿರುತ್ತಾರೆ. ಸಂಭಾವನಾ-ಸಹಿತ ...ಯಲ್ಲಿ ಒಂದನೆಯ ಮೂರರಷ್ಟನ್ನು ಮತ್ತು ...ವನಾ-ರಹಿತ ದುಡಿಮೆಯಲ್ಲಿ ಮುಕ್ಕಾಲು ಭಾಗವನ್ನು ...ಯರು ನಿರ್ವಹಿಸುತ್ತಿದ್ದಾರೆ. ವಿಶ್ವಬ್ಯಾಂಕಿನ ವಿಶ್ವ ...ವೃದ್ಧಿ ವರದಿ-2012ರಲ್ಲಿ ಲಿಂಗ ಸಮಾನತೆಯನ್ನು ...ರ್ಟ್ ಎಕನಾಮಿಕ್ಸ್' ಎಂದು ಕರೆಯಲಾಗಿದೆ. ...ಎನ್‌ಡಿಪಿಯು 1995ರ ಮಾನವ ಅಭಿವೃದ್ಧಿ ...ಯಲ್ಲಿ 'ಅಭಿವೃದ್ಧಿಯು ಮಹಿಳೆಯರನ್ನು ...ಳ್ಳದಿದ್ದರೆ ಅದಕ್ಕೆ ಅಪಾಯ ತಪ್ಪಿದ್ದಲ್ಲ' ಎಂದು ...ತಿ. ಹೇಳಲಾಗಿದೆ. ಮುಂದೆ ಜಾರಿಗೆ ಬರಲಿರುವ ...ನದ 371ರ ತಿದ್ದುಪಡಿಯ ಕಾರ್ಯ ಯೋಜನೆಯು ...ಸ್ನೇಹಿಯಾಗಿರದಿದ್ದರೆ ಅದರಿಂದ ಪ್ರಾದೇಶಿಕ ...ಸಮತೆಯು ನಿವಾರಣೆಯಾಗುವುದು ಸಾಧ್ಯವಿಲ್ಲ.

... ಪ್ರದೇಶದ ಅಭಿವೃದ್ಧಿಗೆ ನಾವೇನು ಮಾಡಬಹುದು ...ದರ ಬಗ್ಗೆ ಇಲ್ಲಿ ಪ್ರತ್ಯೇಕವಾಗಿ ಚರ್ಚೆ ಮಾಡಿಲ್ಲ ... ಅದು ಈ ಪ್ರಬಂಧದಲ್ಲಿ ಅಂತರ್ಗತವಾಗಿದೆ ಎಂದು ...ಭಾವಿಸ್ದೇನೆ. ಸಂವಿಧಾನದ 371ರಡಿಯಲ್ಲಿ ಗುಲಬರ್ಗಾ ...ಗದ ಆರು ಜಿಲ್ಲೆಗಳಿಗೆ ವಿಶೇಷ ಸ್ಥಾನಮಾನ ...ನೀಡುವುದನ್ನು ಸ್ವಾಗತಿಸುತ್ತಾ ಅದರ ಅನುಷ್ಠಾನದ ...ಜನಸಂಘಟನೆ ಮೂಲಕ ಒತ್ತಡ ತರವುದು ನಮಗೆ ...ಸಾಧ್ಯವಾಗದಿದ್ದರೆ ಅದರಿಂದ ಹೆಚ್ಚಿನದೇನನ್ನೂ ನಿರೀಕ್ಷಿಸಲು ...ಸಾಧ್ಯವಿಲ್ಲ ಎಂಬುದನ್ನು ಹೇಳಲು ಬಯಸುತ್ತೇನೆ.

– ಡಾ.ಟಿ.ಆರ್.ಚಂದ್ರಶೇಖರ

ಪ್ರಾಧ್ಯಾಪಕ, ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಜಮಖಂಡಿ: ಲಿಂಗಾಯತರೇ ಬಿಜೆಪಿಯನ್ನು ಸೋಲಿಸುವ ತವಕದಲ್ಲಿದ್ದಾರೆ

ಜಮಖಂಡಿಯ ರಾಜಕಾರಣಕ್ಕೀಗ ರಂಗು ಬಂದಿದೆ. ಚುನಾವಣೆ ಯಾವ ಸಮಯದಲ್ಲಾದರೂ ಎದುರಾಗಬಹುದೆಂಬ ಲೆಕ್ಕಾಚಾರ ಎಲ್ಲಾ ಪಕ್ಷಗಳಲ್ಲೂ ಚಟುವಟಿಕೆಗಳು ಗರಿಗೆದರಲು ಕಾರಣವಾಗಿದೆ. ಆಡಳಿತ ಪಕ್ಷದ ಕಾರ್ಯಕರ್ತರಿಗೂ ಸರಕಾರ ಪೂರ್ಣ ಅವಧಿ ಮುಗಿಸುವ ಭರವಸೆ ಇಲ್ಲ. ಅಧಿಕಾರಕ್ಕೆ ಬರುತ್ತಿದ್ದಂತೆ ಕರ್ನಾಟಕ ಎಂದೂ ಕಂಡರಿಯದ ಭ್ರಷ್ಟಾಚಾರ, ಸ್ವಜನಪಕ್ಷಪಾತ, ಗಣಿಹಗರಣ ಮುಂತಾದವುಗಳನ್ನೆಲ್ಲಾ ಮೆತ್ತಿಕೊಂಡು ಹೇಗೋ ತೆವಳಿಕೊಂಡು ಬಿಜೆಪಿ ಸರಕಾರ ನಾಲ್ಕು ವರ್ಷದ ಅವಧಿ ಪೂರೈಸುವುದರೊಳಗೆ ಮೂರು ಮುಖ್ಯಮಂತ್ರಿಗಳನ್ನು ಕಂಡಿದೆ. ಇಷ್ಟೆಲ್ಲ ಆದರೂ ಮುಖಂಡರ ಕಚ್ಚಾಟ ಇನ್ನೂ ನಿಂತಿಲ್ಲ. ಇದೆಲ್ಲವನ್ನೂ ಕಣ್ಣಾರೆ ಕಂಡ ಸ್ವತಃ ಬಿಜೆಪಿ ಕಾರ್ಯಕರ್ತರೇ ಇಂದು ಪಕ್ಷದ ಮೇಲಿನ ವಿಶ್ವಾಸ ಕಳೆದುಕೊಂಡಿದ್ದಾರೆ. ಕಳೆದ ಬಾರಿ ಬಿಜೆಪಿಯ ಪರವಾಗಿ ಕೆಲಸ ಮಾಡಿದ್ದಕ್ಕೆ ಪರಿತಪಿಸುತ್ತಿದ್ದಾರೆ. ಅದರ ಪರಿಣಾಮವಾಗಿ ಬಿಜೆಪಿ ಕಾರ್ಯಕರ್ತರು ಬಿಜೆಪಿ ತೊರೆದು ತಂಡೋಪತಂಡವಾಗಿ ಜೆಡಿಎಸ್ ಮತ್ತು ಕಾಂಗ್ರೆಸ್‌ನತ್ತ ತೆರಳುತ್ತಿದ್ದಾರೆ.

ಈ ಮಧ್ಯೆ ಸದ್ಯದಲ್ಲೇ ಜೈಲು ಸೇರುವ ಹಾದಿಯಲ್ಲಿ ನಿಂತಿರುವ ಗಣಿ ಲೂಟಿಕೋರ ಬಳ್ಳಾರಿ ಗ್ಯಾಂಗ್‌ನ ಪ್ರಮುಖ ಆಸಾಮಿ ಶ್ರೀರಾಮುಲು ಗಣಿ ದರೋಡೆಯಿಂದ ಗಳಿಸಿದ ಹಣದಲ್ಲೇ ಹುಟ್ಟುಹಾಕಿರುವ ಬಿಎಸ್‌ಆರ್ ಪಕ್ಷದ ಕಡೆಗೂ ಕೆಲವರು ಪಾದ ಬೆಳೆಸಿದ್ದಾರೆ. ಇದು ಇಡೀ ಕರ್ನಾಟಕದಲ್ಲಿ ನಡೆಯುತ್ತಿರುವ ಬೆಳವಣಿಗೆ, ಇದರಿಂದ ಜಮಖಂಡಿ ಕ್ಷೇತ್ರ ಕೂಡ ಹೊರತಲ್ಲ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ಸಿದ್ದು ನ್ಯಾಮಗೌಡ ಅಪ್ಪಟ ರೈತ ವಿರೋಧಿತನ ಪ್ರದರ್ಶಿಸಿದ್ದರು. ಯಾವತ್ತೂ ತಳಮಟ್ಟದ ಕಾರ್ಯಕರ್ತರೊಂದಿಗೆ ಸರಳವಾಗಿ ಬೆರೆಯದೆ, ಸದಾ ಸ್ವಯಂ ಅಭಿವೃದ್ಧಿಯನ್ನು ಧ್ಯಾನಿಸುವ ನ್ಯಾಮಗೌಡರು ರೈತಸಮುದಾಯಕ್ಕೆ ತಮ್ಮ ಕಾರ್ಖಾನೆಯಿಂದ ಪಾವತಿಸಬೇಕಾಗಿದ್ದ ಕಬ್ಬಿನ ಬಿಲ್ಲನ್ನು ಕೊಡದೆ ಸತಾಯಿಸಿ ರೈತರ ಆಕ್ರೋಶಕ್ಕೆ ಕಾರಣವಾಗಿದ್ದರು. ಇತ್ತ ಕಾರ್ಯಕರ್ತರ ಬೆಂಬಲವಿಲ್ಲದೆ ಅತ್ತ ರೈತರ ಆಕ್ರೋಶಕ್ಕೆ ಗುರಿಯಾಗಿದ್ದ ಇವರಿಗೆ ಕಾಂಗ್ರೆಸ್ ವಿವೇಚನಾರಹಿತವಾಗಿ ಟಿಕೆಟ್ ನೀಡಿತ್ತು, ಮತ್ತೊಂದೆಡೆ ಜೆಡಿಎಸ್ ತನ್ನ ಅಸ್ತಿತ್ವವನ್ನೇ ಕಳೆದುಕೊಂಡು ನಾಮಕಾವಸ್ತೆ ಎಂಬಂತೆ ರಮೇಶ್ ನಾಯಕರನ್ನೇ ಕಣಕ್ಕಿಳಿಸಿತ್ತು, ಇದರ ಜೊತೆಗೆ ರಾಜ್ಯದಲ್ಲಿ ಕುಮಾರಸ್ವಾಮಿ ಅಧಿಕಾರಾವಧಿ ಮುಗಿಸಿ ಯಡಿಯೂರಪ್ಪನಿಗೆ ಅಧಿಕಾರ ಹಸ್ತಾಂತರಿಸಿಲ್ಲವೆಂಬ ಅನುಕಂಪದ ಅಲೆ ಎದ್ದಿತು. ಇವೆಲ್ಲ ಕಾರಣಗಳಿಂದಾಗಿ ಆರೆಸ್ಸೆಸ್ ಒತ್ತಡದ ಮೂಲಕ ಬಿಜೆಪಿಯ ಅಭ್ಯರ್ಥಿಯಾಗಿದ್ದ ಶ್ರೀಕಾಂತ ಕುಲಕರ್ಣಿ ಅನಾಯಾಸವಾಗಿ ಗೆದ್ದು ಬಂದಿದ್ದರು. ಇವರು ರೈತ ಪರ ಹೋರಾಟಗಾರ ಎಂಬ ಇಮೇಜು ಇದ್ದು, ಹಳೆಯ ಜನತಾದಳದ ಬಹುಪಾಲು ಮುಖಂಡರು ಬಿಜೆಪಿ ಸೇರಿ ಅಲ್ಲಿ ತಮ್ಮ ಅಸ್ತಿತ್ವ ಹುಡುಕಲಾರಂಭಿಸಿದ್ದರಿಂದ ಇವರ ಗೆಲುವು ಸಾಧ್ಯವಾಗಿತ್ತು.

ಅಖಾಡಕ್ಕಿಳಿದ ಜೆಡಿಎಸ್

ಈಗ ಪರಿಸ್ಥಿತಿ ಸಂಪೂರ್ಣ ಬದಲಾಗಿದೆ. ಜನತಾ ದಳದಿಂದ ಬಿಜೆಪಿಗೆ ವಲಸೆ ಬಂದಿದ್ದ ಸಾವಳಗಿ ಭಾಗದ ಪ್ರಮುಖ ಲಿಂಗಾಯತ ನಾಯಕ ಬಿ.ಎಸ್.ಸಿಂಧೂರ ಬಿಜೆಪಿಯ ಆಂತರಿಕ ಕಚ್ಚಾಟದಿಂದ ಬೇಸತ್ತು ಈಗ ಜೆಡಿಎಸ್ ಸೇರಿದ್ದಾರೆ. ಬಹುವರ್ಷಗಳಿಂದ ಕಾಂಗ್ರೆಸ್ ಮುಖಂಡರಾಗಿದ್ದ ಕಾಡು ಮಾಳಿ ಸಹ ಜೆಡಿಎಸ್ ಮನೆ ಪ್ರವೇಶಿಸಿದ್ದಾರೆ. ಉಳಿದಂತೆ ಮೂಲತಃ ಜೆಡಿಎಸ್ ನಾಯಕರಾದ ಸುರೇಶ್ ಬಾಡಗಿ, ಪಿ.ಎನ್.ಪಾಟೀಲ, ಎಸ್.ಎಲ್.ನ್ಯಾಮಗೌಡ ಮುಂತಾದವರು ತಮ್ಮ ತಮ್ಮಲ್ಲಿನ ಅಸಮಾಧಾನಗಳನ್ನು ಬದಿಗಿಟ್ಟು ಒಂದಾಗಿದ್ದಾರೆ. ಜನರು ಸಹ ದೊಡ್ಡ ಪ್ರಮಾಣದಲ್ಲಿ ಜೆಡಿಎಸ್ ಕಡೆ ವಾಲುತ್ತಿರುವ ಈ ಸಂದರ್ಭವನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಂಡು ಮುಂದಿನ ಚುನಾವಣೆಯನ್ನು ಗೆಲ್ಲಲೇಬೇಕೆಂದು ಪಣತೊಟ್ಟವರಂತೆ ಮತ ಕ್ಷೇತ್ರದ ತುಂಬಾ ಸುತ್ತುತ್ತಿದ್ದಾರೆ. ಜನರ ಸಕಾರಾತ್ಮಕ ಸ್ಪಂದನೆ ಇವರ ಓಡಾಟಕ್ಕೆ ಮತ್ತಷ್ಟು ಉತ್ತೇಜನ ನೀಡುತ್ತಿದೆ.

ಮೂಲತಃ ಇಲ್ಲಿನ ಜೆಡಿಎಸ್‌ಗೆ ದೊಡ್ಡ ಶಕ್ತಿ ಎಂದರೆ ಬಿಜೆಪಿಯಿಂದ ಬಂದಿರುವ ಬಿ.ಎಸ್.ಸಿಂಧೂರ. 1983ರಿಂದ ಜನತಾ ಪರಿವಾರದೊಂದಿಗೆ ಗುರುತಿಸಿಕೊಂಡು ರಾಜಕಾರಣ ಆರಂಭಿಸಿರುವ ಇವರು ನಂತರ 2004ರಲ್ಲಿ ಬಿಜೆಪಿ ಸೇರಿ ಟಿಕೆಟ್ ಆಕಾಂಕ್ಷಿಯಾಗಿದ್ದರು. ಮತಕ್ಷೇತ್ರದ ತುಂಬ ತಮ್ಮದೇ ಆದ ಪ್ರಭಾವ ಹೊಂದಿರುವ ಇವರು ಈಗ ಜೆಡಿಎಸ್ ಸಂಘಟನೆಯಲ್ಲಿ ತೊಡಗಿರುವುದು ಬಿಜೆಪಿಗೆ ಅರಗಿಸಿಕೊಳ್ಳಲಾರದಂತಾಗಿದೆ.

ನಿದ್ರೆಯಿಂದೆದ್ದ ಕಾಂಗ್ರೆಸ್

ಹಾಗೆ ನೋಡಿದರೆ ಜಮಖಂಡಿ ಕಾಂಗ್ರೆಸ್‌ನ ಭದ್ರಕೋಟೆಯಾಗಿತ್ತು. 2004ಕ್ಕೂ ಮುಂಚಿನ ಮೂರು ಅವಧಿಗೆ ಕಾಂಗ್ರೆಸ್‌ನ ರಾಮಣ್ಣ ಕಲೂಟಿ ಶಾಸಕರಾಗಿದ್ದರು. ಅವರ ನಂತರ 2004ರಲ್ಲಿ ಸಿದ್ದು ಸವದಿ ಗೆದ್ದು ಬಂದರು. ನಂತರ ಸುಮಾರು ಎರಡು ಅವಧಿಗೆ ಕಾಂಗ್ರೆಸ್ ಅಕ್ಷರಶಃ ಸಮಾಧಿ ಸ್ಥಿತಿಯಲ್ಲಿತ್ತು. 2008ರಲ್ಲಿ ಸಿದ್ದು ನ್ಯಾಮಗೌಡ ತಮ್ಮ ಸೋಲನ್ನು ತಾವೇ ತಂದುಕೊಂಡು ಕುಲಕರ್ಣಿಯವರ ಗೆಲುವಿಗೆ ಸಹಕರಿಸಿದ್ದರು. ಆದರೆ ಈ ಬಾರಿ ಕೂಡ ಕಾಂಗ್ರೆಸಿಗರು ಪಾಠ ಕಲಿತಂತಿಲ್ಲ. ಸಿದ್ದು ನ್ಯಾಮಗೌಡರನ್ನು ಹೊರತುಪಡಿಸಿ ಬಹುಪಾಲು ಕಾಂಗ್ರೆಸಿಗರು ಒಂದಾಗಿದ್ದಾರೆ. ನ್ಯಾಮಗೌಡರು ಮತ್ತೆ ಟಿಕೆಟ್ ಎಗರಿಸಲು ರೈತ ಪರ ಹೋರಾಟ, ನೀರಿಗಾಗಿ ಹೋರಾಟ ಎಂಬೆಲ್ಲ ಗಿಮಿಕ್ ಆರಂಭಿಸಿದ್ದಾರೆ. ನ್ಯಾಮಗೌಡರ ಬಣ ಈಗ ಚಟುವಟಿಕೆ ಆರಂಭಿಸಿ ಜೀವಂತಿಕೆ ತೋರಿಸಹೊರಟಿದೆ. ಅವರ ವಿರೋಧಿ ಪಾಳೆಯದಲ್ಲಿರುವ ಸುಶಿಲಕುಮಾರ ಬೆಳಗಲಿ, ಆರ್.ಎಂ.ಕಲೂಡಿ, ಶ್ರೀಶೈಲ ದಳವಾಯಿ, ಜಗದೀಶ ಗುಡಗುಂಟಿ, ಇಲಾಯಿ ಕಂಗೊನಳ್ಳಿ, ಮುಂತಾದವರು ಒಕ್ಕೊರಲಿನಿಂದ ನ್ಯಾಮಗೌಡನನ್ನು ವಿರೋಧಿಸುತ್ತಿದ್ದಾರೆ. ಇವರಲ್ಲಿ ಸುಶಿಲಕುಮಾರ ಬೆಳಗಲಿ, ಆರ್.ಎಂ.ಕಲೂಡಿ, ಶ್ರೀಶೈಲ ದಳವಾಯಿ, ಜಗದೀಶ ಗುಡಗುಂಟಿ, ಎನ್.ಎಸ್.ದೇವರವರ ಇವರೆಲ್ಲ ಟಿಕೆಟ್ ಆಕಾಂಕ್ಷಿಗಳೇ. ಆದರೆ ನ್ಯಾಮಗೌಡರನ್ನು ಬಿಟ್ಟು ಇವರಲ್ಲಿ ಯಾರಿಗೆ ಟಿಕೆಟ್ ಸಿಕ್ಕರೂ ಒಗ್ಗಟ್ಟಾಗಿ ನಿಂತು ಚುನಾವಣೆ ಎದುರಿಸಲು ಸಜ್ಜಾಗಿರುವುದು ಸಹ ಪಕ್ಷದ ದೃಷ್ಟಿಯಿಂದ ಒಳ್ಳೆಯದೇ.

ಆದರೆ ಮತಕ್ಷೇತ್ರದ ಜನರ ಹಿತದೃಷ್ಟಿಯಿಂದ ನೋಡಿದರೆ ಎನ್.ಎಸ್. ದೇವರವರ ಅಪ್ಪಟ ಜನಪರ ಆಲೋಚನೆ ಹೊಂದಿರುವವರು. ಖ್ಯಾತ ನ್ಯಾಯವಾದಿಯಾಗಿರುವ ಅವರು ಬಡವರು, ಅಸಹಾಯಕರು, ರೈತರು, ದಲಿತ ಪರ ಕಾಳಜಿ ಹೊಂದಿದ್ದಾರೆ. ಈ ಭಾಗದಲ್ಲಿ ಪ್ರಬಲವಾಗಿರುವ ಶುಗರ್ ಲಾಬಿಯ ವಿರುದ್ಧ ನಿಂತು ಹಲವಾರು ಬಾರಿ ಜನಸಾಮಾನ್ಯರಿಗೆ ನ್ಯಾಯ ಒದಗಿಸಿಕೊಟ್ಟಿದ್ದಾರೆ. ಇಂತಹವರು ಜನರ ಆಯ್ಕೆ ಆಗಬೇಕು ಎಂಬುದೇನೋ ನಿಜ. ಆದರೆ ಪಕ್ಷದಲ್ಲಿ ಅವರ ಪ್ರಭಾವ ಇನ್ನೂ ಬಹಳಷ್ಟು ಬೆಳೆಯಬೇಕಾಗಿದೆ. ಆದರೆ ಒಟ್ಟಾರೆಯಾಗಿ ಕಾಂಗ್ರೆಸ್‌ನಲ್ಲಿ ಟಿಕೆಟ್ ಆಕಾಂಕ್ಷಿಗಳ ಪಟ್ಟಿ ದೊಡ್ಡದಿದೆ.


ಮುದುಡಿದ ಕಮಲ


2008ರಲ್ಲಿ ಸಿದ್ದು ಸವದಿ ತೇರದಾಳ ಮತಕ್ಷೇತ್ರಕ್ಕೆ ಹೋದಾಗ ಜಮಖಂಡಿ ಕ್ಷೇತ್ರದ ಅವಕಾಶ ಅನಾಯಾಸವಾಗಿ ಶ್ರೀಕಾಂತ ಕುಲಕರ್ಣಿಯವರಿಗೆ ಸಿಕ್ಕಿತು. ಆರಂಭದಲ್ಲಿ ಅಲ್ಲಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು ಸ್ವಲ್ಪ ನಿರೀಕ್ಷೆ ಹುಟ್ಟಿಸಿದ್ದರಾದರೂ ಬರಬರುತ್ತ ಜನರ ನಿರೀಕ್ಷೆ ಹುಸಿಯಾಗತೊಡಗಿದವು. ಹಳೆಯ ಸಾವಳಗಿ ಏತ ನೀರಾವರಿ ಯೋಜನೆಗೆ ಜೀವ ತುಂಬಿದ್ದು ಜಂಬಗಿ ಬ್ರಿಡ್ಜ್ ಮಂಜೂರು ಮಾಡಿಸಿದ್ದು ಬಿಟ್ಟರೆ ಹೇಳಿಕೊಳ್ಳುವಂತಹ ಕಾರ್ಯಗಳನ್ನು ಕುಲಕರ್ಣಿ ಅವರಿಗೆ ಮಾಡಲಾಗಿಲ್ಲ. ಪಕ್ಷದ ಆಂತರಿಕ ಕಚ್ಚಾಟ, ರಾಜ್ಯ ನಾಯಕರ ಕಿತ್ತಾಟದಿಂದಾಗಿ ಜನರಿಂದ ನಿರೀಕ್ಷಿಸಿದಷ್ಟು ಕೆಲಸ ಕುಲಕರ್ಣಿಯಿಂದ ಆಗಲಿಲ್ಲ.

ಇದಕ್ಕೆ ಇರುವ ಮತ್ತೊಂದು ಪ್ರಮುಖ ಕಾರಣವೆಂದರೆ ಇಲ್ಲಿನ ಲಿಂಗಾಯತ ಮುಖಂಡರ ಅಸಹಕಾರ. ಆರಂಭದಿಂದಲೂ ಇಲ್ಲಿನ ಬಿಜೆಪಿ ಲಿಂಗಾಯತ ಮುಖಂಡರು ಮತ್ತು ಕಾರ್ಯಕರ್ತರು ಸಿದ್ದು ಸವದಿ ಪರವಾಗಿ ಕೆಲಸ ಮಾಡುತ್ತಾರೆ. ಸವದಿ ಹಾಗೂ ಕುಲಕರ್ಣಿ ಮಧ್ಯ ಪ್ರಭಾವಕ್ಕಾಗಿ ಭಿನ್ನಾಭಿಪ್ರಾಯವಿದೆ. ಆ ಕಾರಣಕ್ಕೆ ಇಲ್ಲಿ ಲಿಂಗಾಯತ ಮುಖಂಡರು ಸದಾ ಕುಲಕರ್ಣಿಯವರನ್ನು ವಿರೋಧಿಸುತ್ತಾರೆ. ನಗರದಲ್ಲಿಯೇ ಇರುವ ನಗರಸಭೆಯಲ್ಲಿ ಇವರ ಪ್ರಭಾವ ಸೊನ್ನೆ, ಇನ್ನೂ ತಾಲೂಕು ಪಂಚಾಯತಿ, ಗ್ರಾಮ ಪಂಚಾಯತಿಗಳಲ್ಲೂ ಇವರು ಅಷ್ಟಕ್ಕಷ್ಟೇ. ಸದಾ ಸ್ವಜಾತಿ ಹಿತಚಿಂತನೆಯಲ್ಲಿ ತೊಡಗಿರುವ ಬಹುಪಾಲು ಲಿಂಗಾಯತ ಮುಖಂಡರು ಮುಂಬರುವ ಚುನಾವಣೆಯಲ್ಲಿ ಕುಲಕರ್ಣಿ ವಿರುದ್ಧ ಕೆಲಸ ಮಾಡಲಿದ್ದಾರೆ. ಇದು ಕಾಂಗ್ರೆಸ್ ಮತ್ತು ಜೆಡಿಎಸ್‌ಗೆ ವರದಾನವಾಗುವ ಸಾಧ್ಯತೆ ನಿಚ್ಚಳವಾಗಿದೆ.


ಒಟ್ಟಾರೆ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಕೂಡಾ ಬೆಳೆದು ನಿಲ್ಲುವುದರಿಂದ ಮೂರು ಪಕ್ಷಗಳ ಮಧ್ಯ ತುರುಸಿನ ಹಣಾಹಣಿ ನಡೆಯುವುದಂತೂ ಸತ್ಯ. ಆದರೆ ಮತದಾರ ಮಾತ್ರ ಈ ಸಾರಿ ಎಚ್ಚರದಿಂದಿದ್ದು ಒಳ್ಳೆಯ ಅಭ್ಯರ್ಥಿಯನ್ನು ಆಯ್ಕೆ ಮಾಡಬೇಕಿದೆ.


● ಮಹಾಲಿಂಗಪ್ಪ ಆಲಬಾಳ


ಸಿದ್ದು ನ್ಯಾಮಗೌಡ


ಜಗದೀಶ್ ಗುಡಗುಂಟಿ



ಶ್ರೀಕಾಂತ ಕುಲಕರ್ಣಿ


ಬಿ.ಎಸ್.ಸಿಂಧೂರ



ಎನ್.ಎಸ್.ದೇವರವರ


ಸುಶೀಲ್‌ಕುಮಾರ್

ಕಥೆಯ ಆರಂಭಕ್ಕೂ ಮುಂಚೆ ಒಂದು disclaimer!? ಈ ಕಥೆಯಲ್ಲಿ ಉಪಯೋಗಿಸಿರುವ ಜಾತಿ ಧರ್ಮದ ಹೆಸರುಗಳು ಕೇವಲ ಸಾಂಕೇತಿಕ. ಒಂದು ಜಾತಿಯ ಬದಲಿಗೆ ಮತ್ತೊಂದು ಜಾತಿಯ ಹೆಸರು ಬರೆದಾಗ್ಯೂ ಈ ಕಥೆಯ ಪ್ರಸ್ತುತತೆಗೆ ಧಕ್ಕೆಯಾಗುವುದಿಲ್ಲವೆಂಬುದು ನಮ್ಮ ಇವತ್ತಿನ ಸಮಾಜದ ದುರಂತ ಮತ್ತು ನಮ್ಮ ಲೇಖಕನ ಪ್ರಯತ್ನದ ಫಲ. ಈ ಕಥೆಗೆ ಹೆಸರಿಸಿರುವ ಯಾವುದಾದರೂ ಜಾತಿ ಧರ್ಮದವರು ನೀವಾಗಿದ್ದ ಪಕ್ಷದಲ್ಲಿ ಕಥೆ ಓದಿ ಮುಗಿಸಿದ ನಂತರ ನಿಮ್ಮಲ್ಲಿ ಖುಷಿ ಅಥವಾ ಕೋಪದ ಭಾವನೆ ಮೂಡಿದರೆ ಅದು ನಿಮ್ಮ ಕಲ್ಪಿತ ಜಾತಿಪ್ರಜ್ಞೆಯ ಸಂಕೇತ!



ಬ್ರಹ್ಮಚಾರಿ



ಪದವಿಯ ಕೊನೆಯ ವರುಷದಲ್ಲಿ ಓದುತ್ತಿದ್ದ ಮಗ ಸಂಜೆಯ ಕಾಫಿಯೊಂದಿಗೆ ಅಪ್ಪನೊಂದಿಗೆ ಹರಟುತ್ತಿದ್ದ.

"ಇನ್ನೇನೋ. ಪದವಿ ಮುಗೀತು. ಕೆಲಸ ಸಿಗೋದು ಇದ್ದಿದ್ದೇ. ಮದುವೆಗೆ ಹೆಣ್ಣು ನೋಡಲು ಶುರು ಮಾಡ್ಲಾ?"

"ಮ್. ಅಪ್ಪ ಒಂದು ವಿಷಯ..."

"ಹೇಳು..."

"ನನಗೇನೋ ದೊಡ್ಡೋರು ನೋಡಿ ಒಪ್ಪಿದವಳ ಜೊತೆ ಐದು ನಿಮಿಷ ಮಾತನಾಡಿ ನಾನು ಹುಡುಗಿಯನ್ನು ಅರ್ಥಮಾಡಿಕೊಂಡಂತೆ, ಅವಳು ನನ್ನನ್ನು ಅರ್ಥಮಾಡಿಕೊಂಡಂತೆ ನಟಿಸಿ ಮದುವೆಯಾಗುವುದು ಸರಿ ಬರುವುದಿಲ್ಲ, ನನ್ನ ಜೀವನ ಸಂಗಾತಿಯನ್ನು ನಾನೇ ಆರಿಸಿಕೊಳ್ಳಬೇಕು ಅನ್ಸುತ್ತೆ."

"ಭೇಷ್! ಭೇಷ್ ಮಗನೇ! ನನ್ನದೂ ಅದೇ ಅಭಿಪ್ರಾಯ. ನೀನು ಯಾರನ್ನಾದ್ರೂ ಇಷ್ಟಪಟ್ಟಿದ್ದೀಯ?"

"ಒದೋ ಸಂಭ್ರಮದಲ್ಲಿ ಅದರ ಕಡೆಗೆ ಗಮನ ಕೊಡಲಿಲ್ಲ."

"ಸರಿ, ಇನ್ನು ಮುಂದೆ ಗಮನಹರಿಸು. ಯಾರಾದ್ರೂ ಇಷ್ಟವಾದರೆ ಆ ಹುಡುಗಿಗೆ ಹೇಳುವ ಮೊದಲು ನನಗೆ ತಿಳಿಸು. ಆಯ್ತಾ?"

"ಹ್ಞೂ ಅಪ್ಪ ನೀವಿಷ್ಟೊಂದು ಸ್ವಾತಂತ್ರ್ಯ ಕೊಡುತ್ತೀರೆಂದ ಮೇಲೆ ಮೊದಲು ನಿಮಗೇ ತಿಳಿಸುತ್ತೇನೆ."

ಎರಡು ತಿಂಗಳ ನಂತರ ಹುಡುಗಿಯೋರ್ವಳ ಫೋಟೋದೊಂದಿಗೆ ಅಪ್ಪನ ಬಳಿಗೆ ಬಂದ.

"ಇವಳು ಇಷ್ಟವಾಗಿದ್ದಾಳೆ ಅಪ್ಪ..."

"ಅಲೆಲೇ! ಏನ್ ಚೆನ್ನಾಗಿದ್ದಾಳೋ ಹುಡುಗಿ. ಮೆಚ್ಚಿದೆ ನಿನ್ನ ಆಯ್ಕೆಯನ್ನು. ಏನಿವಳ ಹೆಸರು?"

"ಫಾತಿಮಾ."

"ಫಾತಿಮಾ?! ಥೂ ಥೂ ಹಿಂದೂ ಆಗಿದ್ದು ಕೊಂದು ದನ ತಿನ್ನೋ ಸಾಬರ ಹುಡುಗಿಯನ್ನು ಮದುವೆ ಯಾಗ್ತೀಯ. ಸಲ್ಲದು ಸಲ್ಲದು."

ಫಾತಿಮಾಳ ಫೋಟೋವನ್ನು ದೂರವೆಸೆದು ಬಂದ. ಮತ್ತೆರಡು ತಿಂಗಳು ಕಳೆಯಿತು.

"ಅಪ್ಪ ಈ ಹುಡುಗಿ ನನಗೆ ಒಳ್ಳೆ ಜೋಡಿಯೆನ್ನಿಸುತ್ತೆ" ಎಂದು ಫೋಟೋ ಮುಂದೆ ಮಾಡಿದ.

"ಫೋಟೋ ಇರಲಿ. ಸಾಬರವಳಾ?"

"ಅಲ್ಲ."

"ಕ್ರಿಶ್ಚಿಯನ್ನೋ?"

"ಅಲ್ಲ, ಹಿಂದೂನೇ."

ಫೋಟೋ ತೆಗೆದುಕೊಂಡ. ನೋಡಿ ನಕ್ಕ.

"ಯಾವ ಜಾತಿ?"

"ಬ್ರಾಹ್ಮಣಳೋ ಲಿಂಗಾಯತಳೋ ಇರಬೇಕು, ಸರಿ ಗೊತ್ತಿಲ್ಲ. ಮಾಂಸ ತಿನ್ನಲ್ಲ ಅಂತಷ್ಟೇ ಗೊತ್ತು."

"ಛೀ ಛೀ! ಪುಳಿಚಾರ್ ಊಟ ಮಾಡೋರನ್ನು ಕಟ್ಕೊಂಡು ಏನ್ ತಿನ್ತೀಯೋ. ತೆಗಿ ತೆಗಿ. ಇವಳು ಸರಿ ಹೋಗಲ್ಲ."

ಮತ್ತೆ ಸುಮ್ಮನಾದ. ಫೋಟೋ ಎಸೆದ. ಕಾಲೇಜು ಮುಗಿದು ಸರಕಾರಿ ಕೆಲಸಕ್ಕೆ ಸೇರಿದ. ಸಹೋದ್ಯೋಗಿಯೊಬ್ಬಳು ಇಷ್ಟವಾದಳು. ಮೊಬೈಲಿನಲ್ಲಿ ಫೋ... ಕ್ಲಿಕ್ಕಿಸಿಕೊಂಡು ಮನೆಗೆ ಹೋದ.

"ಇವಳು ಹಿಂದೂ. ಮಾಂಸಾನೂ ತಿಂತಾಳೆ..." ನಗುತ್ತ ಅಪ್ಪ ಮೊಬೈಲು ನೋಡಿದ.

"ಯಾವ ಜಾತಿ?"

"ಗೊತ್ತಿಲ್ಲ, ಕೆಟಗರಿ ಮೇಲೆ ಕೆಲಸ ಸಿಕ್ಕಿ... ಎಸ್ಸೀನೋ ಎಸ್ಟೀನೋ ಯಾವುದೋ ಇರಬೇ..."

"ಅಯ್ಯೋ ನಿನ್ನ, ಗೌಡನಾಗಿ ಹು... ಜಾತಿಯವರನ್ನು ಮದುವೆ ಮಾಡಿಕೊ... ತ್ತೀಯ? ಸಮಾಜ ಏನನ್ನಲ್ಲ?"

ಫೋಟೋ ಡಿಲೀಟ್ ಮಾಡಿದ. ...

ದಿನ ಬಸ್ಸಿನಲ್ಲಿ ಹೋಗುವಾಗ ಪರಿಚಿತಳಾದವಳೊ... ಮೆಚ್ಚುಗೆಯಾದಳು. ಅಪ್ಪನ ಬಳಿ ಬರುವ ಮುಂಚೆ ಧೈ... ಜಾತಿ ಗೋತ್ರಗಳನ್ನೆಲ್ಲ ತಿಳಿದುಕೊಂಡ. ಖುಷಿಯಾ... ಫೋಟೋ ಇಲ್ಲದೆ ಬಂದ.

"ಯಾವ ಜಾತಿ?"

"ಅದೆಲ್ಲ ಕೇಳಿದ್ದೀನಿ. ನಮ್ಮದೇ ಜಾತಿ. ಗೌಡರ ಹು... ಕೊನೆ ವರ್ಷದ ಬಿಎಸ್ಸಿ."

"ಒಳ್ಳೇದು ಒಳ್ಳೇದು. ಗಂಗಟಕಾರರೇ ಅಂಥ...?"

"ಅಂದ್ರೆ!?!"

"ಒಕ್ಕಲಿಗ ಜಾತಿಯ ಒಳಪಂಗಡ ಕಣೋ. ಬೆ..."

"ಓ ಅದಾ! ದಾಸ ಒಕ್ಕಲಿಗರಂತೆ."

"ಹೋಗ್ಹೋಗು ಕೆಲಸ ನೋಡು. ಗಂಗಟಕಾರ... ದಾಸ ಒಕ್ಕಲಿಗರ ಜೊತೆ ಸಂಬಂಧ ಬೆಳೆಸೋದಾ?..."

ವಿವಾಹಾನಂತರದ ಕಷ್ಟಗಳ ಸುಖವನ್ನು ಅನುಭವಿ... ಹಾತೊರೆಯುತ್ತಿದ್ದ ಮಗ ಮದುವೆ ಮಾ... ಬ್ರಹ್ಮಚಾರಿಯಾದ!

● ಡಾ.ಅಶೋಕ್ ಕೆ.ಆ...


ಜಾತಿಮುಕ್ತ ಸಂಬಂಧ ವೇದಿಕೆಯ ಸಮಾವೇಶ-ಒಂದು ವರದಿ


ಅಂತರ ಜಾತಿಯ ವಿವಾಹ ಚಳವಳಿಗಳು ಇಂದು ಸಾಂಸ್ಕೃತಿಕ ರೂಪ ಪಡೆಯುತ್ತಿವೆ. ಜಾತಿ - ಧರ್ಮ - ಭಾಷೆ- ದೇಶಗಳ ಗಡಿಯನ್ನು ಮೀರಿ ಪರಸ್ಪರ ವಿಶ್ವಾಸದಿಂದ ಪ್ರೀತಿಸಿ ಮದುವೆಯಾಗುವವರಿಗೆ ಕಾನೂನು, ಸಂವಿಧಾನದಲ್ಲಿಯೂ ಮುಕ್ತ ಸ್ವಾತಂತ್ರ್ಯವಿದೆ. ಆದರೆ ಉಡುಪಿ-ದಕ್ಷಿಣ ಕನ್ನಡದ ಕರಾವಳಿ ಭಾಗದಲ್ಲಿ ಪ್ರಗತಿಪರರು ಮೌನವಾಗುಳಿಯುವುದರಿಂದ ಮತ-ಮತಗಳಿಂದಾಗುವ ದೌರ್ಜನ್ಯ ವೃದ್ಧಿಸುತ್ತಿದೆ ಎಂದು ಹೈಕೋರ್ಟ್ ವಕೀಲ, ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಪ್ರೊ.ರವಿವರ್ಮಕುಮಾರ್ ಆರೋಪಿಸಿದ್ದಾರೆ.

ಉಡುಪಿಯಲ್ಲಿ ನೂತನವಾಗಿ ಅಸ್ತಿತ್ವಕ್ಕೆ ಬಂದಿರುವ ಜಾತಿಮುಕ್ತ ಸಂಬಂಧ ವೇದಿಕೆ ಆಯೋಜಿಸಿದ್ದ ರಾಜ್ಯ ಮಟ್ಟದ ಸ್ಥಾಪನಾ ಸಮಾವೇಶವನ್ನು ಉಡುಪಿಯ ಎಂ.ಜಿ.ಎಂ. ಕಾಲೇಜಿನ ನೂತನ ರವೀಂದ್ರ ಮಂಟಪದ - ಹರಳಯ್ಯ ಮಧುವರಸ ಮಂಟಪ- ದಲ್ಲಿ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಕರಾವಳಿ ಜಿಲ್ಲೆಗಳಲ್ಲಿ ನಾಗರಿಕರು, ಅದರಲ್ಲೂ ಪ್ರಗತಿಪರರು ಧರ್ಮಾಧಾರಿತ ಅತ್ಯಾಚಾರ, ಅನಾಚಾರ, ಮೌಢ್ಯಗಳಿಗೆ ಸೆಡ್ಡು ಹೊಡೆದು ನಿಲ್ಲಬೇಕು. ಇಲ್ಲದೇ ಹೋದರೆ ಮೌಢ್ಯದ ಹೆಸರಲ್ಲಿ ಮತದ ಹೆಸರಲ್ಲಿ ನಡೆಯುವ ಅಟ್ಟಹಾಸಗಳೇ ಸರಿ ಅನ್ನುವಂತಾಗುತ್ತದೆ ಎಂದವರು ಎಚ್ಚರಿಸಿದರು.

ಪುರಾಣವನ್ನೇ ಗಮನಿಸಿದರೂ ದೇವರುಗಳೆಂಬ ಶಿವ, ರಾಮ, ಕೃಷ್ಣ ಎಲ್ಲರೂ ಜಾತಿ ಮೀರಿ ಮದುವೆಯಾದವರು. ಈ ದೇವರನ್ನು ಮೊದಲು ಜಾತಿಮುಕ್ತರನ್ನಾಗಿ ಮಾಡಬೇಕಿದೆ. ಋಷಿ ಮುನಿಗಳಾದ ವ್ಯಾಸ, ಜಮದಗ್ನಿ, ವಶಿಷ್ಠ, ವಿಶ್ವಾಮಿತ್ರರೂ ಅಂತರಜಾತಿ ವಿವಾಹವಾದವರೇ, ಆ ಪರಂಪರೆ ಮುಂದುವರಿಯಬೇಕು. ಬರಹದ ಮೂಲಕ ವಿಶ್ವ ಮಾನವ ತತ್ವವನ್ನು ಸಾರುತ್ತಿದ್ದ ರಾಷ್ಟ್ರಕವಿ ಕುವೆಂಪು ಅವರು ಮಗ ತೇಜಸ್ವಿ ಅಂತರಜಾತಿ ವಿವಾಹಕ್ಕೆ ಮುಂದಾದಾಗ, ತಾನೇ ನಿಂತು ಮದುವೆ ಮಾಡಿ, ಸರಳ ಮದುವೆಗೆ ನಾಂದಿ ಹಾಡಿ ಮದುವೆಯಾಗಿದ್ದರು. ಅದೊಂದು ಮೈಲಿಗಲ್ಲು, ಶಿವರಾಮ ಕಾರಂತರು ಕೂಡಾ ಅಂತರಜಾತಿ ವಿವಾಹವಾಗಿದ್ದರು. ಪ್ರೊ.ಕೃಷ್ಣಪ್ಪ, ಪ್ರೊ.ನಂಜುಂಡಸ್ವಾಮಿ ಮೊದಲಾದವರ ಮದುವೆ ಕೂಡಾ ಮಾದರಿಯೇ. ತಾನು ಮತ್ತು ಇಬ್ಬರು ಗೆಳೆಯರು ಅಂತರಜಾತಿ ಮದುವೆಯನ್ನು ಅಮಾವಾಸ್ಯೆಯ ರಾಹುಕಾಲದಲ್ಲಿ ಆಗಿದ್ದೇವೆ. ಕಿಶಾನ್ ಪಟ್ನಾಯಕ್ ಅಂತರಜಾತಿ ವಿವಾಹ ಆಗಲು ಸಾಧ್ಯವಾಗದೆ ಸ್ವಜಾತಿ ಮದುವೆಯಾದಾಗ ತಮಗೆ ಮಕ್ಕಳು ಬೇಡ, ಬೇರೆ ಮಕ್ಕಳನ್ನು ನಮ್ಮ ಮಕ್ಕಳೆಂದು ಪಾಲನೆ ಮಾಡುವ ಎಂದು ನಿರ್ಧರಿಸಿದ್ದಲ್ಲದೇ ಹಾಗೇನೇ ನಡೆದುಕೊಂಡರು. ರಾಮ ಮನೋಹರ ಲೋಹಿಯಾ ಅವರು ಅಂತರಜಾತಿ ವಿವಾಹಗಳೇ ನಡೆಯಬೇಕು, ಗೆಜೆಟೆಡ್ ಆಫೀಸರುಗಳು, ಸೇನೆ- ಅರೆಸೇನೆಗೆ ಅಂತರಜಾತಿ ಮದುವೆಯಾದವರನ್ನೇ ನೇಮಕ ಮಾಡಬೇಕೆಂದಿದ್ದರು ಎಂದವರು ನೆನಪಿಸಿಕೊಂಡರು. ಕಾನೂನಿನ ಚೌಕಟ್ಟಿನಲ್ಲಿ, ಸಂವಿಧಾನದ ನೆಲೆಯಲ್ಲಿ ಪರಸ್ಪರ ಗೌರವ, ವಿಶ್ವಾಸ, ಒಡಂಬಡಿಕೆಯಿಂದ ವಯಸ್ಸಿಗೆ ಬಂದ ಇಬ್ಬರು ಯುವಕ- ಯುವತಿಯರು ಮದುವೆಯಾಗಲು ಯಾವುದೇ ತೊಡಕಿಲ್ಲ, ಇದನ್ನು 2006 ರ ಲತಾ ಸಿಂಗ್ ಪ್ರಕರಣ, 2011 ರ ಪ್ರಿಯಾಂಕ ರಿಜ್ವಾನ್ ಪ್ರಕರಣ ಸೇರಿದಂತೆ ಹಲವು ಬಾರಿ ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ. ತನಗಿಷ್ಟ ಬಂದ ವ್ಯಕ್ತಿಯನ್ನು ಮದುವೆಯಾದಾಗ ಜೀವಿಸುವ ಮೂಲಭೂತ ಹಕ್ಕು ಎಂದು ಘೋಷಣೆ ಮಾಡಲಾಗಿದೆ. ಪರಸ್ಪರ ಒಪ್ಪಿಗೆಯಿಂದ ಮದುವೆಯಾದರೆ ಅಲ್ಲಿ ಮೂಗು ತೂರಿಸಲು ಪೊಲೀಸರಿಗೆ ಅಧಿಕಾರ ಇಲ್ಲ ಎನ್ನುವುದನ್ನು ಸುಪ್ರೀಂಕೋರ್ಟ್ ಹೇಳಿದೆ ಎಂದವರು ಹೇಳಿದರು.





ಅಧ್ಯಕ್ಷತೆ ವಹಿಸಿದ್ದ ಪ್ರಗತಿಪರ ಚಿಂತಕ/ಬರಹಗಾರ ಪ್ರೊ.ಎಚ್.ಎಲ್.ಕೇಶವಮೂರ್ತಿ ಜಾತಿ ಭ್ರಮೆ, ಮೂಢನಂಬಿಕೆ ಎಂದು ಗೊತ್ತಿದ್ದರೂ ಜಾತಿಯನ್ನು ನಾಶ ಮಾಡಲು ಸಾಧ್ಯವಿಲ್ಲ. ಜಾತಿ ವಿರುದ್ಧ ಸಾವಿರಾರು ವರ್ಷಗಳಿಂದಲೂ ಹೋರಾಟಗಳು ನಡೆಯುತ್ತಿದ್ದರೂ ಕಾಲದ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಮುಂದಕ್ಕೆ ಬಂದಿದೆ. ಜಾತಿ ಸುಧಾರಣೆ ಮಾಡಲು ಸಾಧ್ಯವೇ ಎಂದು ಯೋಚಿಸಬೇಕಿದೆ ಎಂದರು. 1970 ರ ಸಮಯದಲ್ಲಿ ಜಾತಿ ಸಮಾವೇಶಗಳಿಗೆ ಬಹಿಷ್ಕಾರ ಹಾಕಲಾಗುತ್ತಿತ್ತು, ಅದರಲ್ಲಿ ರಾಜಕಾರಣಿಗಳು ಭಾಗವಹಿಸಿದರೆ ಧಿಕ್ಕಾರ ಹಾಕುತ್ತಿದ್ದರು. ಆದರೆ ಇಂದು ಜಾತಿ ಗೌರವ, ಅಭಿಮಾನವಾಗಿ ಮಾರ್ಪಟ್ಟಿದೆ. ಕಲ್ಯಾಣ ಮಂಟಪಗಳು, ವಸತಿ ನಿಲಯಗಳು ಜಾತಿ ಹೆಸರಲ್ಲಿ ನಡೆಯುತ್ತಿವೆ. ಗುಣಾತ್ಮಕ ಬದಲಾವಣೆಗಳು ಆಗಬೇಕು ಎಂದು ನಾವು ಬಯಸಿದ್ದರೆ, ಈಗ ಸಂಕುಚಿತ ದೃಷ್ಟಿ ಕಡೆಗೆ ತೆರಳುತ್ತಿದ್ದೇವೆ ಎಂದು ಟೀಕಿಸಿದರು. ನಮ್ಮವರು ಇಲ್ಲಿಂದ ಅಮೆರಿಕಕ್ಕೆ ಹೋದರೆ ಅಲ್ಲಿಗೂ ಜಾತಿ ಹೊತ್ತುಕೊಂಡೇ ಹೋಗಿದ್ದಾರೆ. ಲಿಂಗಾಯತ, ಒಕ್ಕಲಿಗ, ಕುರುಬ, ಬ್ರಾಹ್ಮಣರ ಸಂಘ-ಹೀಗೆ ಜಾತಿ ಸಂಘಗಳೂ ಅಲ್ಲಿಯೂ ಹುಟ್ಟಿಕೊಂಡಿದೆ ಜಾತ್ಯತೀತ ಮನಸ್ಸುಗಳು, ಸಮಾನ ಮನಸ್ಕರ ನಡುವೆ ಸಂಬಂಧಗಳು ಬೆಳೆಯಬೇಕು. ಮತ್ತೆ ಇದೇ ಒಂದು ಜಾತಿ ಆಗುವ ಅಪಾಯವೂ ಇದೆ. ಇದರ ಎಚ್ಚರವೂ ಇರಬೇಕು. ಜಾತಿ - ಧರ್ಮದ ಕಾಲಂ ತುಂಬಿಸುವಾಗ ಸಮಾನ ಪದ ಕಂಡು ಹುಡುಕಿ ಎಲ್ಲರೂ ಒಂದೇ ರೀತಿ ಬಳಕೆ ಮಾಡಬೇಕು. ಅದನ್ನೇ ಸರಕಾರಕ್ಕೆ ಮುಟ್ಟಿಸುವ ಕಾರ್ಯ ಆಗಬೇಕು ಎಂದವರು ಹೇಳಿದರು. ಉದ್ಘಾಟನಾ ಸಮಾರಂಭದಲ್ಲಿ ಡಾ.ವನಜಾಕ್ಷಿ, ಗಿರಿಜಾ ಬಾಲಕೃಷ್ಣ ಮತ್ತು ಸಂಚಲನಾ ಸಮಿತಿ ಸದಸ್ಯರು ಉಪಸ್ಥಿತರಿದ್ದರು. ಖ್ಯಾತ ನುಡಿಮುತ್ತುಗಳ ಭಿತ್ತಿಪತ್ರವನ್ನು ಅನಾವರಣಗೊಳಿಸುವ ಮೂಲಕ ಸಮಾವೇಶವನ್ನು ಉದ್ಘಾಟಿಸಲಾಯಿತು.

ಉದ್ಘಾಟನಾ ಸಮಾರಂಭದ ನಂತರ ಎರಡು ಪ್ರಮುಖ ಗುಂಪು ಚರ್ಚೆಗಳು ನಡೆದವು. ಮೊದಲನೆಯ ಗುಂಪು ಜಾತಿ ಮುಕ್ತ ವಿವಾಹಿತರ ಗುಂಪಾಗಿದ್ದು ಆ ಗುಂಪಿನಲ್ಲಿ - ಜಾತಿಮುಕ್ತ ಸಂಬಂಧಗಳ ಅನುಭವದ ವಿನಿಮಯ - ದ ಬಗ್ಗೆ ಪಾಲ್ಗೊಂಡ ವಿವಾಹಿತರೆಲ್ಲರೂ ಪಾಲ್ಗೊಂಡರು. ಎರಡನೆಯ ಗುಂಪು ಜಾತಿಮುಕ್ತ ಸಮಾಜ ಸ್ಥಾಪಿಸುವ ಯುವಕರದ್ದಾಗಿದ್ದು ಅವರು - ಜಾತಿಮುಕ್ತ ಸಂಬಂಧ ಯುವಜನರ ನಿರೀಕ್ಷೆ ಮತ್ತು ಅಭಿಪ್ರಾಯ - ದ ಬಗ್ಗೆ ಗುಂಪು ಚರ್ಚೆ ನಡೆಸಿದರು. ಅದಕ್ಕಾಗಿ ಪ್ರಶ್ನಾವಳಿಯನ್ನು ಮುದ್ರಿಸಿ ನೀಡಲಾಗಿದ್ದು ಆ ಪ್ರಶ್ನಾವಳಿಯ ಸುತ್ತ ಚರ್ಚೆಗಳು ನಡೆದವು.

ಮೂರನೆಯ ಗುಂಪು ಜಾತಿ ಮುಕ್ತ ವಿವಾಹಿತ ದಂಪತಿಗಳ ಮಕ್ಕಳದ್ದಾಗಿತ್ತು, ಈ ಗುಂಪಿನ ಉಸ್ತುವಾರಿಯನ್ನು ಶ್ರೇಷ್ಠ ರಂಗಕರ್ಮಿ ಬಾಸುಮ ಕೊಡಗು - ಕಾವ್ಯವಾಣಿ ದಂಪತಿ ವಹಿಸಿದ್ದು ಇದರಲ್ಲಿ ಮಕ್ಕಳು ಸಕ್ರಿಯವಾಗಿ ಭಾಗವಹಿಸಿ ಕಿರು ಪ್ರಹಸನಗಳನ್ನು ಪ್ರದರ್ಶಿಸಿದರು.

ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಕರ್ನಾಟಕ ಕೋಮು ಸೌಹಾರ್ದ ವೇದಿಕೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಎಲ್.ಅಶೋಕ್ ಭಾಗವಹಿಸಿ, ಜಾತಿ ಮುಕ್ತ ಸೌಹಾರ್ದ ಸಮಾಜದ ಅನಿವಾರ್ಯತೆ ಕರಾವಳಿಯ ಈ ಭಾಗಕ್ಕೆ ಅತೀ ಅಗತ್ಯವಿದೆ ಎಂದು ಒತ್ತಿ ಹೇಳಿದರು. ಅಧ್ಯಕ್ಷತೆ ವಹಿಸಿದ್ದ ಖ್ಯಾತ ವಿಮರ್ಶಕ ಜಿ.ರಾಜಶೇಖರ್ ಮಾತನಾಡುತ್ತಾ ಶರಣರ ಕಾಲದಲ್ಲಿ ಬ್ರಾಹ್ಮಣ ಮಧುವರಸನ ಮಗಳು ಮತ್ತು ಮಾದಿಗ ಹರಳಯ್ಯನ ಮಗನಿಗೆ ಮದುವೆ ಮಾಡಿಸಿದ್ದರಿಂದ ಶರಣರು ಕಲ್ಯಾಣ ಬಿಟ್ಟು ಹೋಗಬೇಕಾದ ಪರಿಸ್ಥಿತಿ ಉಂಟಾಗಿತ್ತು, ಇಂದಿಲ್ಲಿ ಆ ಹರಳಯ್ಯ ಮಧುವರಸ ವೇದಿಕೆಯಲ್ಲಿ ಸಮಾವೇಶ ನಡೆಯುತ್ತಿದೆ. ನಾವು ಇವತ್ತು ವಿವಾಹ ಮತ್ತು ಜಾತಿ ಬಗ್ಗೆ ಆಡುವ ಮಾತುಗಳು ನಮ್ಮದಲ್ಲ, ಹಿಂದೆ ಬೇರೆ ಬೇರೆ ಸಂದರ್ಭಗಳಲ್ಲಿ ಅನೇಕರು ಆಡಿ ಮಾಡಿ ತೋರಿಸಿದ್ದನ್ನೇ ಮಾಡುತ್ತಿದ್ದೇವೆ ಎಂಬ ಅರಿವು ನಮಗಿರಬೇಕು. ಆಗ ಅದರಿಂದ ಉಂಟಾಗುವ ಪರಿಣಾಮ ಕೂಡಾ ಗೊತ್ತಾಗುತ್ತದೆ ಅಂದರು.

ಪುರುಷಾಧಿಪತ್ಯದ ಸಂಸ್ಕೃತಿ ಹೇಗೆ ಕೆಲಸ ಮಾಡುತ್ತದೆ ಎಂಬ ಅರಿವು ಕೂಡಾ ನಮಗಿರಬೇಕು. ಮುಸ್ಲಿಂ ಹು... ಹಿಂದೂ ಹುಡುಗಿ ಮಾತನಾಡಿದರೆ ಹಿಂದೂ ರಕ್ಷ... ಗಲಾಟೆ ಮಾಡುತ್ತಾರೆ. ಅದೇ ಹಿಂದೂ ಹುಡುಗ ಮು... ಹುಡುಗಿ ಮಾತನಾಡಿದರೇ ಇವರು ಮಾತನಾಡುವು... ಈ ಸಮಸ್ಯೆ ಪುರುಷ ಸಮಾಜದ ಮೂಲದಲ್ಲಿದೆ. ... ಭೂಮಿ, ಗಂಡು ಬೀಜ; ಹೆಣ್ಣು ಸ್ವೀಕರಿಸುವವಳು, ಗ... ಕೊಡುವವ; ಹೆಣ್ಣು ವಸ್ತು, ಗಂಡು ಪ್ರಜ್ಞೆ ಎನ್ನುವ... ಇಲ್ಲಿ ಕೆಲಸ ಮಾಡುತ್ತಿದೆ. ಜಾತಿ ಅಂದರೆ ವಿ... ಮಾತ್ರವಲ್ಲ, ಗಂಡು-ಹೆಣ್ಣು-ಸಮಾಜ-ಸಂಪತ್ತು- ಸಂಬ... ಈ ಎಲ್ಲವನ್ನೂ ಒಳಗೊಂಡಿರುತ್ತದೆ. ಹಾಗಾಗಿ ... ಕೇವಲ ವಿವಾಹ ವೇದಿಕೆಯಲ್ಲ ಬದಲಾಗಿ ಸಂಬಂ... ವೇದಿಕೆಯಾಗಿ ಕೆಲಸ ಮಾಡಬೇಕು ಎಂದು ಆಶಿಸಿ... 60 ವರ್ಷದ ಹಿಂದೆ ಇದ್ದ ಸಂಪ್ರದಾಯಗಳು ಈ... ಅವೆಲ್ಲವನ್ನೂ ಧಿಕ್ಕರಿಸಿ ಮುನ್ನಡೆಯುತ್ತಿರುವುದನ್ನೂ ನ... ಕಾಣುತ್ತಿದ್ದೇವೆ. ಇದು ದಕ್ಷಿಣ ಕನ್ನಡ - ಉಡು... ಮಾತ್ರ ಸೀಮಿತವಾಗಿಲ್ಲ, ರಾಜ್ಯಾದ್ಯಂತ ಕಾಣಬಹುದಾ... ಇಲ್ಲವಾದಲ್ಲಿ ಶೇ.90ರಷ್ಟು ಮಂದಿ ಸೇವಿಸುವ ಆಹಾರ... ತಾಮಸ ಎಂದು ಕರೆದುಕೊಳ್ಳಲು ಸಾಧ್ಯವಿತ್ತೇ ಎ... ಪ್ರಶ್ನಿಸಿದರು.

ಮೈಸೂರಿನ ಉಗ್ರ ನರಸಿಂಹೇಗೌಡ, ಮುನಿರಾ... ಬೆಂಗಳೂರಿನ ಗೌರಿ, ಶೃಂಗೇರಿಯ ಕಲ್ಕುಳಿ ವಿಠಲ ... ಚಿಕ್ಕಮಗಳೂರಿನ ಟಿ.ಎಲ್.ಉಮೇಶ್, ಶಿವಮೊ... ಸರ್ಜಾಶಂಕರ ಹರಳಿಮಠ, ಸಾಗರದ ಎಚ್.ಬಿ.ರಾಘವೇ... ಕುಂದಾಪುರದ ಶಶಿಧರ ಹೆಮ್ಮಾಡಿ ಮತ್ತಿತರರು ತ... ವೈವಾಹಿಕ ಜೀವನ ಮತ್ತು ಸಮಾಜದ ಸ್ಪಂದನೆಗಳ ... ಅನುಭವಗಳನ್ನು ವಿನಿಮಯ ಮಾಡಿಕೊಂಡ... ಸಮಾರೋಪ ಸಮಾರಂಭದಲ್ಲಿ ಅತಿಥಿಯಾಗಿ ಮಾ... ಹಕ್ಕು ಹೋರಾಟಗಾರ ನಗರೀ ಬಾಬಯ್ಯ ಉಪಸ್ಥಿತರಿದ್ದ...

ವೇದಿಕೆಯ ಸಂಚಾಲಕ ಹಯವದನ ಮೂಡು...ಯವರು ಪ್ರಾಸ್ತಾವಿಕವಾಗಿ ಮಾತನಾಡುತ್ತಾ ನಿತ್ಯನರಕ... ನಾಡಿನಲ್ಲಿ ಪುರೋಹಿತರಿಂದ ಬಂಧಿಯಾಗಿರುವ ಶ್ರೀ ಕೃಷ್ಣನ ಬಿಡುಗಡೆಯಾಗಬೇಕಿದೆ. ಅದಕ್ಕಾಗಿ ಜಾ... ಮುಕ್ತ ಸಂಬಂಧದ ಸಮಾಜ ನಿರ್ಮಾಣವಾಗಬೇಕೆಂ... ಈ ಸಂಘಟನೆ ಅಸ್ತಿತ್ವಕ್ಕೆ ಬಂದಿದೆ ಅಂದರು. ಅದಕ್ಕಾಗಿ... ಈ ಸಮಾವೇಶ ಎಂದರು. ಕೊನೆಗೆ ವಂದನಾರ್ಪಣೆ... ಮುನ್ನ ಅವರು ಈ ಹಿಂದೆಯೂ ಕೇಳಿಬಂದ ಒ... ನಿರ್ಣಯವನ್ನು ಈ ಸಮಾವೇಶದ ಮೂಲಕ ಪುನ... ನೆನಪಿಸಿಕೊಳ್ಳುತ್ತಾ ಜಾತಿ ಮುಕ್ತ ವಿವಾಹ ಸಂಬಂಧಿಗ... ಸರ್ಕಾರದ ಎಲ್ಲಾ ಇಲಾಖೆಗಳಲ್ಲೂ ಶೇ.5 ಮೀಸಲಾ... ಸರ್ಕಾರವನ್ನು ಒತ್ತಾಯಿಸುವ ನಿರ್ಣಯವ... ಕೈಗೊಳ್ಳಲಾಗುತ್ತಿದೆ ಎಂದು ಹೇಳಿದರು.

ಪ್ರಾರಂಭದಲ್ಲಿ ಸಂಚಲನಾ ಸಮಿತಿಯ ಡಾ.ಉದ... ಬಾರ್ಕೂರು ಸ್ವಾಗತಿಸಿದ್ದು, ಸುಮಾ ಎಸ್. ಕಾರ್ಯಕ್ರ... ನಿರ್ವಹಿಸಿದರು. ನಾಗರಾಜ ಜಿ.ಎಸ್.ಧನ್ಯವಾದ ಸಮರ್ಪಿ... ದರು. ವೇದಿಕೆಯ ಸಂಚಲನಾ ಸಮಿತಿಯ ಬಾಲ... ಪರ್ಕಳ, ರಾಬರ್ಟ್ ಜೋಸ್, ಶಾಂತರಾಮ್ ಸೋಮಯಾ... ಮಂದೀಪ್ ಮತ್ತು ಇತರರು ಈ ಸಮಾವೇಶದ ಯಶ... ಸಹಕರಿಸಿದ್ದರು. ಕರ್ನಾಟಕ ಕೋಮು ಸೌಹಾರ್ದ ವೇ... ಸಮಾವೇಶದ ಯಶಸ್ಸಿಗೆ ಸಹಕರಿಸಿತ್ತು.

...ಮ್ಮೆಲ್ಲೆಗಳು ಪಾರಿನ್ನಿಗೋಗಿ ಏನು ಕಿಸ್ತು ಬಂದರೂ?

...ಲ್ಲಿನ ಹುಡುಗರು ಬ್ಯಾಂಡ್ ಸೆಟ್ ಬಡಿಯುತ್ತ ... ಮೆರವಣಿಗೆ ತೆಗೆದು ಯಂತದೊ ಸಿಹಿ ...ಡು ತಿಂದು ಕಣ್ಮರೆಯಾದವು. ತರಾತುರಿಯಿಂದ ...ಗಳು ತಮ್ಮ ಬೈಕುಗಳನ್ನು ಹತ್ತಿ ಪರಾರಿಯಾದರು. ...ಈ ವರ್ಷದ ಸ್ವಾತಂತ್ರೋತ್ಸವ ಮುಗಿಯಿತು. ...ಮುಂಭಾಗ ಎಂದಿನಂತೆ ಬಸ್ಸೊ ಎಂಬ ಗಾಳಿ ...ದಿಗೆ ಅನಾಥವಾಯ್ತು. ಇದನ್ನೆಲ್ಲಾ ಕಾಳಮಾವ ...ಲದಿಂದ ನೋಡುತ್ತಿರುವಾಗ ಬಂದ ಉಗ್ರಿ, ...ಮ್ಮಿ ಇನ್ನೂ ಬಂದಿಲವೆ ಮಾವ?" ಎಂದ.

...ಚಾತಿ ಆಫೀಸಿಗೋದಲಂತೆ."

...ಗರ ಭಾಸಣ ಮಾಡಿ ಬತ್ತಳೆ" ಎಂದು ಉಗ್ರಿ ...ವಾಗಲೇ ಕಾಣಿಸಿಕೊಂಡ ಜುಮ್ಮಿ, ...ಕ್ಕ ನೀನು ಬರಲಿಲ್ಲ?" ಎಂದಳು.

...ಪಂಚಾತಿ ಮೆಂಬ್ರು ಮುಖ ...ನೇಕಲ್ಲಾ ಅಂತ ಬರಲಿಲ್ಲ ಕಣೆ."

...ವ್ರುರೇನು ನಿನ್ನ ದಾಯಾದಿಗಳೆ?"

...ಯಾದಿಗಳಲ್ಲ, ಒಂದು ಚೂರಾರ ...ರಿ, ವಳ್ಳೆ ಮಾತು, ನಡವಳಿಕೆನೆ ...ಮುಂಡೆವು. ಆ 2ಎ ಮೆಂಬರು ...ದ ಮನೆ ಜನಗಳ ಮ್ಯಾಲೆ ...ಯ್ತಳೆ. ಇನ್ನು ನೀರು ಬುಡೊ ...ಬುಡಬೇಕಾಯ್ತದೆ ಅಂತ ಪೈಸನೆ ...ಬುಟ್ಟವುನೆ. ಇನ್ನ ಅಧ್ಯಕ್ಷನ ಮಕ ...ಯ್ತದಾ. ಆಟೋ ಓಡುಸತಿದ್ದವ್ನಲ್ಲ ...ಏನಾಯ್ತದೇಳು."

...ಕೊ ಓಡುಸೋರು ಅದ್ಯಕ್ಸಾಗೆ ..."

...ಗಲವ್ವ. ಡ್ಯಮಾಕ್ರಸಿಲಿ ಅಂತವ್ನಲ್ಲ ನ್ಯಡದೇ ನ್ಯಡಿತದೆ. ...ಶ್ ಏಜೆಂಟಾಗಿದ್ದ ಗುಂಡೂರಾಯ ಚೀಪ್ ...ಗಿದ್ದ. ಇನ್ನ ಈ ಸರ್ಕಾರದಲ್ಲಂತೂ ಯಾವ್ಯಾವನು ...ಗಿದ್ದ ಅನ್ನದ ಹೇಳಿದ್ರೆ ನೀನು ದಂಗುಬಡಿತಿ."

...ದೇನಾಗಿದ್ರು ಹೇಳ್ಳ."

...ವ್ರುರು ಬಂದು ಮಾಡಿರೊ ಕ್ಯಲಸ ನೋಡಿದ್ರೆ ...ರು ವ್ಯಭಿಚಾರಿಗಳಾಗಿದ್ರು, ಕೆಲುವುರು ಕಳ್ಳರಾಗಿದ್ರು, ಇನ್ನು ಕೆಲವುರು ನ್ಯಲಗಳ್ಳರಾಗಿದ್ರು, ಕೆಲುವುರು ಮತಾಂಧರಾಗಿದ್ರು, ಹೆಡತಿಗೆ ತೊಂದ್ರೆ ಕೊಡೋರಾಗಿದ್ರು. ಖಾಲಿ ಜಮೀನು ಕಂಡೇಟಿಗೆ ತಮ್ಮ ಹೆಸರಿಗೆ ಬರಿಸಿಗಳೊ ಅಂಥೋರಾಗಿದ್ರು. ಅಂತೂ ಯಲ್ರೂ ಒಂದಲ್ಲಾ ಒಂದು ದಂಧೆ ಮಾಡತಿದ್ರು. ಸರ್ಕಾರ ಸಿಕ್ಕಿದೇಟಿಗೆ ಅದ್ನೆ ಮಾಡಿ ಈಗ ಮೆಲಕಾಕತಾ ಅವ್ರುರೆ."


"ಮಾಡದನ್ನೆಲ್ಲ ಮಾಡಿ ಪಾರಿನ್ನಿಗೊಂಟಿದ್ರುಂತೆ ಕಂಡ್ಯ" ಎಂದ ಸೀರ.

"ಪಾರಿನ್ನಿಗೇನು ಮಾಡಕ್ಕೆ ಹ್ವಂಟಿದ್ರೂ?"

"ವಟ್ಟೆ ತುಂಬ ತಿಂದೋರು ಸುಧರಾಯಿಸಿಗಳದಿಲವೆ ಮಾವ. ಅಂಗೆ ಬಿಡುವಿಲ್ಲದಂಗೆ ದುಡುದು ಸಾಕಾಗಿ ಇನ್ನೇನು ಕದಿಗಾಲಬತ್ತು ಅಂತ ಪಾರಿನ್ನಿಗೋಗಿ ಮಜಮಾಡಿಕಂಡು ಬರನ ಅಂತ ವಂಟಿದ್ರು. ಅದ್ಕೆ ಶೆಟ್ರು ಬರಗಾಲದೆ, ಹಿಂಗಾರು ಮಳಿಯಾಗಿ ವಳ್ಳೆ ಬೆಳೆಬಂದ್ರೆ ಹೋಗಿ ಅಂದವ್ರುನಂತೆ."

"ಹೋಗದೆ ಬ್ಯಾಡಿ ಅಂತ ಹೇಳಿಲ್ಲಾ ಅನ್ನು."

"ಅದ್ಯಂಗೆ ಹೇಳತನೆ ದೊಡಪ್ಪ? ಪಾರಿನ್ನಿಗೋಗಿ ಬರದು ಯಮ್ಮೆಲ್ಲೆಗಳ ಹಕ್ಕು ಅಂತ ಕುಂತವ್ರುರೆ" ಎಂದು ವಾಟಿಸ್ಸೆ ಬಂದ.



"ಸರಿ ಕಂಡ್ಯ, ಪಾರಿನ್ನಿಗೋಗಿ ಏನು ಕಿಸ್ತು ಬಂದರಿವ್ರುರು?"

"ಏನುವಿಲ್ಲ, ಅಲ್ಲಿ ಹೆಂಗಸರ ಕೈಲಿ ಮಸಾಜ್ ಮಾಡಿಸಿಗಂಡು, ಪಾರಿನ್ ಡ್ರಿಂಕ್ಸ್ ತಗಂಡು ತಿಂದು ಉಂಡು, ಇದ್ದಷ್ಟು ದಿನ ಮಜ ಮಾಡಿಕಂಡು ಮನೆ ಜನಕೆ ಬೇಕಾದ ಪದಾರ್ಥ ತಗಂಡು ಬತ್ತರೆ. ಬೇಕಾದಷ್ಟು ದುಡ್ಡಿರುವಾಗ ಅದ ಕರ್ಚು ಮಾಡಬೇಕಲವೆ. ನಮ್ಮ ಮಂಡ್ಯದವುನೆ ಒಬ್ಬ ಸಾಬಿ ದುಂಬಾಯ್‌ನಲ್ಲಿ ಹೋಟ್ಲು ಮಡಿಗಿದ್ದನಂತೆ. ಅಲ್ಲಿಗೆ ಚಲುವಣ್ಣ ಕುಮಾರಣ್ಣ ಜಪುರುಲ್ಲಣ್ಣ ಹೋಗಿ ಏನೇನು ಮಾಡಿಕಂಡು ಬತ್ತರೆ ಅಂತ ತಿಳಕಂಡೆ. ಅದೇ ತರ ಈ ಎಮ್ಮೆಲ್ಲೆಗಳು ಮಾಡಿಕಂಡು ಬರಕ್ಕೆ ಅಂತ ವಂಟಿದ್ರು. ಸದ್ದಿಕ್ಕೆ ಸ್ವಾಪಾಗ್ಯದೆ."

"ಅಲ್ಲಾ ಕಂಡ್ಯ, ಇಲ್ಲಿ ಬರಗಾಲ ಬಂದು ದನಿಗೆ ಹುಲ್ಲಿಲ್ಲ, ಕುಡಿಯಕ್ಕೆ ನೀರಿಲ್ಲ ಅನ್ನೊ ನ್ಯದರು ಬ್ಯಾಡವೆ?"

"ಬರಗಾಲ ಅವ್ರುರು ತಂದು ಮಡಗಿದ್ದಾ? ಅದಾಗೆ ಬಂದದೆ. ಆದಾಗೆ ಏನಾರ ಒಂದು ದಾರಿ ಕಂಡಕತ್ತದೆ. ಅದಕೂ ಎಮ್ಮೆಲ್ಲೆಗಳಿಗೂ ಸಮಂಧ ಇಲ್ಲ. ದೊಡಪ್ಪ ನೀರಿಲ್ಲ ಅಂದ್ರಿ ಬೋರ್‌ವೆಲ್ ಕೊರಿಸಿದ್ರು ಹೋದ್ರು."

"ಕ್ವರಸಿದ್ರು ಸರಿ ಕಂಡ್ಯ. ಆದ್ರೆ ಅದ್ಕೆ ಮಿಸಿನ್ ಹಾಕಿ, ಕರಂಟ್ ಕೊಟ್ಟು, ಪೈಪ್ ಯಳದಿರೋದೆಲ್ಲಾ ಸರಿ ಕಣಯ್ಯ ಇವುರು ಅಪ್ಪನಗುಟ್ಟದ ಮಕ್ಕಳು ಅಂತಿದ್ದೆ."

"ಸರಿಯಪ್ಪ, ಅವುರಪ್ಪನಿಗೆ ಹುಟ್ಟೇಯಿಲ್ಲ ಅಂದ್ರೂ ಅವುರಿಗೇನೂ ಬೇಜಾರಾಗದಿಲ್ಲ ಗೊತ್ತೆ. ನೀನು ಯಂತ ಬೋಗಳನೆ ಬೈಯಿ, ಅವುರಿಗೆ ಏನೂ ಅನ್ನದಿಲ್ಲಾ, ಅಂತ ಸ್ಥಿತಿ ತಲುಪಿ ಆಗ್ಯದೆ. ಅಂಗಾದಾಗ ಬೈಗಳಕ್ಕೆ ಅವುಮಾನಾಯ್ತದೆ. ಕ್ಯಲಸ ಮಾಡದೆಯಿರೊ ಪಾಯಿಜನ್ನ ಯಸ್ತುಬುಡದಿಲವೆ ಅಂಗೆ ಇವುರ ಬೈಯ್ದು ಬ್ಯಾಡ ಸುಮ್ಮನಿರು. ಅವುರೆ ನಾಯಿಸರಿ ಅಂತ ಬೋದಾಡತಾ ಅವುರೆ."

"ಅಂತ ಸದಾನಂದ ಗೌಡನೆ ಎಡೂರಪ್ಪನ್ನ ಬಗಳೊ ನಾಯಿ ಅಂದುಬುಟ್ಟನಲ್ಲೊ" ಎಂದ ಉಗ್ರಿ.

ಬಯಲುಸೀಮೆ ಕಟ್ಟೆಪುರಾಣ

• ಬಿ.ಚಂದ್ರೇಗೌಡ

"ಅಂಗಂದಿದ್ದನೆ? ಅದ್ಕೆ ಎಡೂರಪ್ಪ ಏನು ಬೋದ?"

"ಬಾಯಿಬುಡಲಿಲ್ಲ ದೊಡಪ್ಪ, ಯಾಕೆ ಅಂದ್ರೆ ಬಾಯಿಬುಟ್ರೆ ಬೊಗಳೊ ನಾಯಿ ನಾನೆ ಆಯ್ತಿನಿ ಅಂತ ಸುಮ್ಮನಾದ. ಅದ್ಕೆ ಎಡೂರಪ್ಪನ ಜೊತೆ ಇದ್ದೊರು ನಾಯಿಗಳಾದ್ರು."

"ಅದ್ಯಾವು ನಾಯಿಗಳಾದುವುಲ?"

"ಇನ್ಯಾವು? ರೇಣುಕಾಚಾರಿ, ಶಿವನಗೌಡ, ಸುರೇಶ ಇಂತ ಕಂತ್ರಿ ನಾಯಿಗಳೆ. ಸದಾನಂದ ಗೌಡನ ಬೈಗಳವ ರಿಸೀವ್ ಮಾಡಿಕಂಡು ತಿರಗಾ ಬಗಳತಾ ಕುಂತವೆ."

"ಅಲ್ಲಾ ಸದಾನಂದ ಗೌಡನಂಥ ತೂಕವಾದ ಮನುಸನೆ ಅಂಗಂದವುನೆ ಅಂದ್ರೆ ಎಲ್ಲೋ ನೋವಾಗಿರಬೇಕು."

"ಇನ್ನೂ ಒಂದು ತಮಾಸಿ ಏನಂದ್ರೆ, ಸಾಮಾನ್ಯವಾಗಿ ನಾವು ಜಾತಿ ಜನಗಳ ಜೊತೆಲಿರುವಾಗ ಇನ್ನೊಂದು ಜಾತಿ ಬಗ್ಗೆ ಹಗುರವಾಗಿ ಮಾತಾಡ್ತಿವಿ. ಅಂಗೆ ಈ ಸದಾನಂದ ಗೌಡ ಜಾತಿ ಜನಗಳ ಸಭೆಲಿದ್ದಾಗ ಎಡೂರಪ್ಪನ ಕಂಡು ಸಿಟ್ಟು ಬಂದಿರಬೇಕು ಅನ್ನದು ನನ್ನ ಡವುಟು."

"ಆದ್ರು ವಾಟಿಸ್ಸೆ, ಎಡೂರಪ್ಪ ಯಾವ ಬೋಗಳನಾದ್ರು ಬೈಸಿಗಳಕ್ಕೆ ಯೋಗ್ಯ ಕಣೊ. ಅಲ್ಲಾ, ಕಾಡಿನ ಜಾಗನೆ ಒತ್ತುವರಿ ಮಾಡಿ ಬೇಲಿ ಹಾಕ್ತನೆ ಅಂದ್ರೆ ಇನ್ಯಂಥಾ ದುರಾಸೆ ಮನಸ ಇವುನು? ಇನ್ನು ಮುಖ್ಯಮಂತ್ರಿಯಾಗಿದ್ರೆ ಕತಿಯೇನೂ ಅಂತ."

"ಇನ್ನೇನು ಟೂರು ಬತ್ತನಂತೆ. ನೀನೆ ಕೇಳೊ." ❖

...ಾಪ ಎಂಬ ಯಕ್ಷಿಣಿ ▶▶▶



ಒಬ್ಬಳು ನೋಡಲು ಚೆನ್ನಾಗಿರಬಹುದು -ಅವಳ ಕತೆ ನಮ್ಮನ್ನು ಪುಳಕಿತರನ್ನಾಗಿಸಿ ಮಾಡಿರಬಹುದು. ಆದರೆ ಅಷ್ಟರಿಂದಲೇ ಅವಳನ್ನು ಅಪ್ಸರೆ ಅನ್ನಲಾಗುವುದಿಲ್ಲ.

ಇಲ್ಲಿ ಒಂದು ಉದಾಹರಣೆ ಕೊಡುತ್ತೇನೆ. ಸುಮಾರು ಮೂವತ್ತು ವರ್ಷಗಳ ಹಿಂದೆ ಆಡ್ರೆ ಹೆಬ್ಬರ್ನ್ ಎಂಬ ನಟಿ ಬೆಳ್ಳಿಯ ತೆರೆಯ ಮೇಲೆ ಕಾಣಿಸಿಕೊಳ್ಳತೊಡಗಿದಳು. 'ರೋಮನ್ ...ಡೇ', 'ಸಬ್ರಿನಾ' ಮುಂತಾದ ಚಿತ್ರಗಳಲ್ಲಿ ನಟಿಸಿದ ಈ ಪುಟ್ಟ ಹುಡುಗಿ ...ಮು, ಮೊಲೆ, ನಿತಂಬ ಮುಂತಾದ ಏನೂ ಇಲ್ಲದ, ಹೊಳೆವ ಕಣ್ಣುಗಳ, ...ಮಿಸುವ ಪ್ರತಿಭೆಯ ಹುಡುಗಿ-ಅಲ್ಲಿಯವರೆಗೆ ಸಿನಿಮಾ ನಟಿ ಎಂದರೆ ...ಂಗ ಸುಂದರಿಯಾಗಿ ಇರಬೇಕು ಎಂದು ತಿಳಿದಿದ್ದವರಿಗೆ ಆಶ್ಚರ್ಯ ...ತು. ಈ ಪುಟ್ಟ ನಟಿಗೆ ನಾವು ಬಲ್ಲ ಪರಂಪರಾಗತ ಅರ್ಹತೆಗಳಾವುವೂ ... ಆದರೆ ಈಕೆಯ charm ಬೇರೆ ಇನ್ನಾರಲ್ಲೂ ಇಲ್ಲ.

...Bosom became a thing of the past. ನಾವು ...ಚಿತ್ರಗಳಲ್ಲಿ ನೋಡಿದ್ದ ಮೀನಾಕ್ಷಿ, ಚಂದ್ರವದನೆ ಹಳೆಯ ...ಕ್ಕೆ ಸೇರಿದರು.

...ದು ಸೌಂದರ್ಯ. ಆಡ್ರೆಯ ಸೌಂದರ್ಯ ಯಾವ ...ದ್ದು ಅಂದರೆ.... ಆಕೆಯ 'ರೋಮನ್ ಹಾಲಿಡೇ', 'ವೈಯ್ಟ್ ...ಟ್ ಡಾರ್ಕ್' ಮುಂತಾದ ಚಿತ್ರಗಳನ್ನು ಬೇರೆ ನಟಿಯರನ್ನು ...ಕೊಂಡು ಮಾಡಲು ಯತ್ನಿಸಿದರು. ಎಲ್ಲ ರಿಮೇಕ್‌ಗಳು ...ವಾದವು. ಅವಳಂಥ ಇನ್ನೊಬ್ಬಳನ್ನು ತರಲು ಯತ್ನಿಸಿದರು. ... ವ್ಯರ್ಥವಾಯಿತು.

...ದಯಾನಾ ಸೌಂದರ್ಯದ ಬಗ್ಗೆ ಮಾತಾಡುವವರು ಆಡ್ರೆಯ ...ಮೋಹಕತೆ, ಮಾಂತ್ರಿಕತೆಯ ಬಗ್ಗೆ ಚಿಂತಿಸಬೇಕು. ಸ್ತನ, ...ಸ, ಕಣ್ಣು, ಗಲ್ಲ ಎಲ್ಲವನ್ನೂ ಮೀರಿದ ವಿಚಿತ್ರ ಸಮ್ಮೋಹಿನಿ ...ದ ಬಗ್ಗೆ ಧ್ಯಾನಿಸಬೇಕು.

...ನಾವು ಎಂತೆಂಥ ಅಮೂಲ್ಯ ವಸ್ತುಗಳನ್ನು ನಮ್ಮಿಂದ ಕಿತ್ತುಕೊಂಡು ...ಗುತ್ತದೆ ಎಂಬುದು ಆಗ ಗೊತ್ತಾಗುತ್ತದೆ.

ಕಾಲದ ದಾಖಲೆ

...ದಳೇ ಕಾಗದಗಳನ್ನು ಗೋಡುತ್ತಾ ಕೂತಿದ್ದಾಗ ಸುಮಾರು ಮೂವತ್ತು ...ರ ಹಿಂದೆ ತೆಗೆದ ನನ್ನ ಗೆಳತಿಯೊಬ್ಬಳ ಫೋಟೋ ಸಿಕ್ಕಿತು. ಅದನ್ನು ಎತ್ತಿಕೊಂಡು ನೋಡಿದೆ. ಲಂಗದಾವಣಿಯಲ್ಲಿರುವ, ಎರಡು ಪುಟ್ಟ ಜಡೆಗಳ, ಮಲ್ಲಿಗೆಯ ಹೂವು ಇಣುಕಿ ನೋಡುತ್ತಿರುವ, ಹಳೇ ಕಾಲದ ಲೌಲಕ್, ನಿರಿಗೆಗಳ ನೊರೆ ಇರುವ ಕುಪ್ಪಸದ ತೋಳು, ದಾವಣಿಯೊಳಗಿಂದಲೇ ಇಣುಕುವ ಮೊಲೆಗಳು.....ಇವನ್ನೆಲ್ಲ ನೋಡಿ ನಕ್ಕು ಬಿಟ್ಟೆ. ಅನೇಕ ಕಾಯಿಲೆ, ಸಂಸಾರದ ತಾಪತ್ರಯಗಳು, ಕನಸು, ಹತಾಶೆ-ಎಲ್ಲದರಲ್ಲಿ ಕುಗ್ಗಿಹೋಗಿರುವ ಗೆಳತಿಗೆ ಇದನ್ನು ತೋರಿಸುವುದೋ ಬೇಡವೋ ಎಂದು ಹಿಂಜರಿದೆ. ಆದರೆ ನನಗೆ ಆ ಫೋಟೋ ಮಹಾ ಅರ್ಥಪೂರ್ಣವಾಗಿತ್ತು.



ಕ್ಯಾಮರಾ ತೋರುವ ಕಾಲದ ಅವಾಂತರ ಅಚ್ಚರಿ ಹುಟ್ಟಿಸುವಂಥಾದ್ದು. ಕಾಲ ನಮ್ಮನ್ನು ಮಾಗಿಸುತ್ತದೆ, ಬದಲಾಯಿಸುತ್ತದೆ, ಕೊಲ್ಲುತ್ತದೆ, ಸೃಷ್ಟಿಸುತ್ತದೆ. ಹಾಗೆಯೇ ಈ ಕಾಲ ನಮಗೆ ಪಾಠ ಕಲಿಸುತ್ತದೆ. ಇಲ್ಲಿ ಯಾವುದೂ ಶಾಶ್ವತವಲ್ಲ, ಇವತ್ತಿನ ಅನುಭವ ನಾಳೆಯ ನೆನಪು. ಮೂವತ್ತು ವರ್ಷಗಳಾದ ಮೇಲೆ ಇದೆಲ್ಲ ಸಾಕ್ಷಿಯ ಕಲ್ಲು ಮಾತ್ರ.

ಫ್ಯಾಶನ್‌ಗಳ ಬಗ್ಗೆ ವ್ಯಾಖ್ಯಾನವನ್ನು ಕ್ಯಾಮರಾ ತನ್ನದೇ ಆದ ರೀತಿಯಲ್ಲಿ ಮೂಡಿಸುತ್ತದೆ. ಕೂದಲಿನ ಶೈಲಿಯನ್ನು ನೋಡಿ. ಜಡೆ, ಬಾಬ್‌ಕಟ್, ಕ್ರಾಪ್ ಇವೆಲ್ಲವು ಗಳಂತೆಯೇ ಹುಡುಗನೊಬ್ಬನ ಮೀಸೆಯ ವಿವಿಧ ರೂಪಗಳನ್ನು ನೋಡಿ...



ಕ್ಯಾಮರಾದ ಎದುರು ನಿಂತು ಕುಣಿದವಳ ಕಾಲು ಚೈತನ್ಯ ಕಳೆದುಕೊಂಡಿರುತ್ತದೆ. ಕಣ್ಣು ಮಂದವಾಗಿರುತ್ತವೆ. ಚರ್ಮ ಗೋಡೆಯಂತಾಗಿರುತ್ತದೆ...

ಕಾಲನ ಗೆಳೆಯನಾಗಿ ಬಂದ ಕ್ಯಾಮರಾ ಕಾಲನ ಬಗ್ಗೆ ಎಚ್ಚರ ನೀಡಿದಂತೆ ನಾವೆಲ್ಲ ಬೆಚ್ಚುತ್ತೇವೆ.

'ಮುಗುಳ್ನಗಿ'

ಇದನ್ನು ನಾನು ಮತ್ತೆ ಮತ್ತೆ ಹೇಳಿರುವುದನ್ನು ನೀವು ಗಮನಿಸಿರಬಹುದು. ಫೋಟೋ ತೆಗೆಯುವವರು 'Smile' ಎಂದು ಸೂಚಿಸುವುದು ಸಾಮಾನ್ಯ. ಆದು ಎಂಥ ಸಂಪ್ರದಾಯವಾಗಿದೆ ಅಂದರೆ, ಹಾಗೆ ಹೇಳದೆ ಫೋಟೋ ತೆಗೆಯುವವನು ನಾಲಾಯಕ್ ಫೋಟೋಗ್ರಾಫರ್ ಎಂದು ತೀರ್ಮಾನಿಸಿರುತ್ತೇವೆ. ನಿಮಗೆ ಇಷ್ಟವಿರಲಿ, ಬಿಡಲಿ ನೀವು ಮುಗುಳ್ನಗುತ್ತಾ ಇರಬೇಕೆಂಬುದು ಇವರೆಲ್ಲರ ಆಶೆ; ನೀವು ಬಲ್ಲಂತೆ ಒಬ್ಬ ನಟ ನಗುವುದಕ್ಕೂ ನಟನಲ್ಲದವ ನಗುವುದಕ್ಕೂ ವ್ಯತ್ಯಾಸವಿದೆ. ನೀವು ಇಷ್ಟವಿಲ್ಲದಿದ್ದರೆ ಮುಗುಳ್ನಕ್ಕರೆ ಅತ್ತಂತೆ ಕಾಣುತ್ತೀರಿ. ಫೋಟೋಗ್ರಾಫರ್ ತಾನು ಎಲ್ಲ ಹೊಂದಿಸಿಕೊಂಡು ಎದುರಿಗಿದ್ದವರಿಗೆ 'ರೆಡಿ' ಎಂದು ಹೇಳಿದರೆ ಸಾಕು ಅಥವಾ 'ಈಗ ಟೇಕ್' ಎಂದರೆ ಸಾಕು. ಅದಕ್ಕೆ ಬದಲು ಮುಗುಳ್ನಗು, ಮುಖ ಸಿಂಡರಿಸು, ಸಿಟ್ಟು ಮಾಡು ಎಂದು ಹೇಳುವುದೆಲ್ಲ Tall order!

ಮೈಲ್ಸ್ ಡೇವೀಸ್ ಎಂಬ ನೀಗ್ರೋ ಕ್ಲಾರಿನೆಟ್ ವಾದಕ ಮಹಾಪ್ರತಿಭಾವಂತ; ಆತ ಇಪ್ಪತ್ತನೆ ಶತಮಾನದ 'ಜಾಸ್'ಗೆ ಅಮೂಲ್ಯ ಕಾಣಿಕೆ ಕೊಟ್ಟವನು. ಅವನು ಹಾಡು ಬಾರಿಸಿದಾಗ ಜನ ಮೆಚ್ಚುಗೆಯಿಂದ ಚಪ್ಪಾಳೆ ತಟ್ಟಿ ಹರ್ಷೋದ್ಗಾರ ಮಾಡುತ್ತಿದ್ದರು; ಆದರೆ ಆತ ಸುಮ್ಮನೇ ನಿಂತಿರುತ್ತಿದ್ದ. ಒಮ್ಮೆ ಅವನ ತಾಯಿ 'ಅಲ್ಲಯ್ಯ ಜನ ಅಷ್ಟೊಂದು ಮೆಚ್ಚಿ ಚಪ್ಪಾಳೆ ತಟ್ಟಿ ಕೂಗಾಡಿದರೆ ನೀನು ಸುಮ್ಮನೆ ನಿಂತಿರ್ತೀಯಲ್ಲ' ಎಂದು ಆಕ್ಷೇಪಿಸಿದಳು. ಮೈಲ್ಸ್ ಡೇವೀಸ್, 'ನನಗೇನೂ ಹುಚ್ಚು ಹಿಡಿದಿಲ್ಲ, ನಾನು ಮೆಚ್ಚುಗೆಗೆ ಪ್ರತಿಕ್ರಿಯೆ ತೋರುವುದು ಹಾಗೇ' ಎಂದು ಹೇಳಿದ.



ಒಮ್ಮೆ ಪ್ರಸಿದ್ಧ ನಟನೊಬ್ಬ ಒಂದು ಚಿತ್ರದಲ್ಲಿ ಯುದ್ಧಮಾಡಿ ಜಯಶಾಲಿಯಾಗಿ ಹಿಂದಿರುಗುತ್ತಾನೆ; ಆತ ತೆರೆದ ರಥದಲ್ಲಿ ಬರುವಾಗ ರಸ್ತೆಯ ಇಕ್ಕೆಲದಲ್ಲಿ ನಿಂತ ಸಾವಿರಾರು ಜನ ಜಯಘೋಷ ಮಾಡುತ್ತಾರೆ; ಆತನ ಪರಾಕ್ರಮದ ಬಗ್ಗೆ ಹರ್ಷದಿಂದ ಕೂಗುತ್ತಾರೆ. ಆತ ರಥದ ಮೇಲೆ ನಿಂತು ಇಕ್ಕೆಲಕ್ಕೆ ದೃಷ್ಟಿ ಹರಿಸುತ್ತಾ ಸಾಗಿಹೋಗುತ್ತಾನೆ.


ಆ ದೃಶ್ಯವನ್ನು ನೋಡಿದ ಕೆನೆತ್ ಟೈನಾನ್ ಆ ನಟನನ್ನು ಸಂದರ್ಶಿಸಿದಾಗ, 'ನೀನು ಶೂರನಾದ ನಟನ ಪಾತ್ರ ಮಾಡುವಾಗ ಜನರ ಜಯಘೋಷಕ್ಕೆ ಪ್ರತಿಕ್ರಿಯೆಯಾಗಿ ಮುಗುಳ್ನಗಬೇಡವೇ?' ಅನ್ನುತ್ತಾರೆ.

'ಯಾಕೆ?' ಅನ್ನುತ್ತಾನೆ ನಟ.

'ಅದು ಸಹಜ ಸ್ಪಂದನ.'

'ಅಲ್ಲ, ಅದು ವಿಕೃತ ಪ್ರತಿಕ್ರಿಯೆ. ಹಾಗೆ ನಗುತ್ತಾ ವ್ಯಾಪಾರ ಮಾಡಲು ನಾನೇನೂ ವೇಶ್ಯೆಯಲ್ಲ' ಅನ್ನುತ್ತಾನೆ ನಟ. ಅನ್ನಿಸಿದ್ದಕ್ಕೆ ತಕ್ಕಂತೆ ಅಭಿವ್ಯಕ್ತಿ ಸಾಧಿಸುವುದು ನಿಜವಾದ ಪ್ರಾಮಾಣಿಕತೆ. ಕಲೆ ಇರುವುದು ಅಲ್ಲಿಯೇ.

ಎಚ್.ಎಲ್. ಕೇಶವಮೂರ್ತಿ



ಅಣಕ

ಸಾಬರಿಗೆ ಹುಟ್ಟಿದವರು ಇರಬೇಕು

2012ರ ಒಲಂಪಿಕ್ಸ್ ಕ್ರೀಡಾಕೂಟ ಬಂತು. ಮುಗಿಯಿತು. ಭಾರತ ಚಿನ್ನದ ಪದಕ ಪಡೆಯುವುದು ಹಾಗಿರಲಿ. ರಜತದ್ದೋ, ಕಂಚಿನದ್ದೋ ಎಂತಹುದ್ದೋ ಒಂದು ಪದಕ ಅಂತ ಬಂತು ಅನ್ನೋ ಸುದ್ದಿ ತಿಳೀತಿದ್ದಂಗೆ ಇಡೀ ದೇಶ ಸಂಭ್ರಮದಿಂದ ಕುಣೀತಾ ಇತ್ತು. ರಾಜ್ಯಗಳು ಏನೂ ಹಿಂದೆ ಬಿದ್ದಿರಲಿಲ್ಲ. ಅದೆಷ್ಟೋ ಲಕ್ಷಾನೋ, ಕೋಟಿನೋ ಕೊಡ್ತೀವಿ ಅಂತ ಹೇಳಿ ಟಿವಿಲಿ ಮಿಂಚುತ್ತಿದ್ದೊ. ಕೆಲವು ಹೊಟ್ಟೆಕಿಚ್ಚಿನವು ಇರುತ್ತವೆ. ಇದನ್ನು ಸಹಿಸಿಕೊಳ್ಳುವುದಿಲ್ಲ. ಇಂತಹ ಜುಜುಬಿ ಪದಕ ಬಂದದ್ದಕ್ಕೇ ಹೀಗೆ ಹಾರಾಡುತ್ತಿದ್ದೀವಲ್ಲ, ಅಮೆರಿಕ, ಚೀನಾದಂತಹ ದೇಶ ನೋಡಿ. ಪದಕಗಳ ಕೊಳ್ಳೆ ಹೊಡೆದರೂ ಇದು ಸಹಜ ಅನ್ನುವ ಹಾಗೇ ಇರುತ್ತವೆ. ನಮಗೇನಾದರೂ ಬುದ್ಧಿ ಇದೆಯಾ ಎಂದು ಹೀಯಾಳಿಸುತ್ತಿವೆ. ಅಯ್ಯೋ ಶಿವನೆ ಅವರಿಗೇನೋ ದಂಡಿಯಾಗಿ ಪದಕಗಳು ಬರುತ್ತವೆ. ಅದಕ್ಕೇ ಹಾಗೆ ಇರುತ್ತಾರೆ. ನಮ್ಮದು ಹಾಗಲ್ಲವಲ್ಲ. ಪದಕಗಳ ಮುಖ ಕಾಣುವುದೇ ಅದಮ ಸಂಕಟ ಆಗಿದೆ. ಅವು ಸಿಕ್ಕದಾಗಲೂ ಸಂಭ್ರಮಿಸಬಾರದಾ? ಅದೇ ಭಾರೀ ಅಪರಾಧ ಅನ್ನುವ ಹಾಗೆ ಮಾತನಾಡುತ್ತಿದ್ದಾವಲ್ಲ ಇವು?

ಭಾರತಕ್ಕೆ ಪದಕಗಳು ಬಾರದಿರಲು ಕಾರಣ ಅಂತ ಏನೇನೋ ಹೇಳುತ್ತವಂತೆ. ಕ್ರೀಡಾಕ್ಷೇತ್ರದ ಮಧ್ಯೆ ಪ್ರವೇಶಿಸುತ್ತಿರುವ ರಾಜಕಾರಣವೇ ಇದಕ್ಕೆ ಕಾರಣ ಅಂತ ಏನೋ ಮಹಾಸಂಶೋಧನೆ ಮಾಡಿರುವಂತೆ ಹೇಳುತ್ತಿವೆ. ಅಷ್ಟೇ ಅಲ್ಲ ಕಣ್ರೀ. ರಾಜಕಾರಣಿಗಳನ್ನು ಕ್ರೀಡಾಕ್ಷೇತ್ರದಿಂದ ನಿಷೇಧಿಸಬೇಕು ಅಂತ ಫರ್ಮಾನು ಹೊರಡಿಸುತ್ತಾ ಬಿದ್ದವೆ. ಹೀಗೆ ಮಾಡುವುದು ಮಕ್ಕಳ ಆಟದ ಸಮಾಚಾರಾನಾ. ರಾಜಕಾರಣಿಗಳು ಹಸ್ತಕ್ಷೇಪ ಮಾಡದೇ ಇರುವ ಯಾವುದಾದರೂ ಕ್ಷೇತ್ರ ಇದ್ದರೆ ತೋರಿಸಲಿ. ಸಾಧ್ಯ ಆಗಲ್ಲ ಅಲ್ಲವಾ. ಇವು ಯಾವ್ರೋ ಕ್ರೀಡಾಕ್ಷೇತ್ರದಿಂದ ರಾಜಕಾರಣಿಗಳನ್ನು ನಿಷೇಧಿಸಿ ಅನ್ನುತ್ತಿವೆ. ಇನ್ನೊಂದು ಯಾವುದೋ ಮತ್ತೆ ಯಾವುದೋ ಕ್ಷೇತ್ರದಿಂದ ನಿಷೇಧಿಸಿ ಅನ್ನುತ್ತೆ. ಮಗದೊಂದು ಯಾವುದೋ ಕ್ಷೇತ್ರ ಹಿಡಿದುಕೊಂಡು ಬರುತ್ತವೆ. ಇದಕ್ಕೆ ಕೊನೆ ಅನ್ನುವುದು ಇರುತ್ತಾ, ಹಾಗೆ ಮಾಡುತ್ತಾ ಹೋದರೆ ಎಲ್ಲಾ ಕ್ಷೇತ್ರಗಳಿಂದಲೂ ಅವರನ್ನು ನಿಷೇಧಿಸಬೇಕಾಗುತ್ತದೆ ಅಷ್ಟೆ!

ಅಂತಹ ರಾಜಕಾರಣಿಗಳು ಇರುವುದರಿಂದ ಕೆಲವರಿಗಾದರೂ ಅನುಕೂಲ ಆಗುತ್ತಿದೆ. ಯಾವ ಯಾವ ನೆಪದಲ್ಲೊ ವಿದೇಶಕ್ಕೆ ಹಾರಿ ಮೋಜು ಮಸ್ತಿ ಮಾಡುತ್ತವೆ. ಹಾಗೆಂದರೆ ಅವರು ಅರ್ಹರಲ್ಲ ಅನರ್ಹರು ಅನ್ನುವ ಆಕ್ಷೇಪಣೆ ಎತ್ತುತ್ತವೆ. ಎಲ್ಲ ಕಡೆಯೂ ಅರ್ಹರೇ



ತುಂಬಿಕೊಂಡರೆ ಅನರ್ಹರಿಗೆ ಎಲ್ಲೂ ಜಾಗವೇ ಬೇಡವಾ? ಅಲ್ಲದೆ ಅವರೂ ಒಂದು ರೀತೀಲೀ ಅರ್ಹರೆ ಕಣ್ರಿ. ಹೀಗೆ ಸ್ಥಾನಗಿಟ್ಟಿಸುವ 'ಅರ್ಹತೆ' ಅವರಿಗಿದೆ.

ನಮ್ಮ ದುರಾದೃಷ್ಟ. ರಾಜಕೀಯ ಆಟದ ಸ್ಪರ್ಧೆ ಒಲಂಪಿಕ್ಸ್‌ನಲ್ಲಿ ಇಲ್ಲ. ಇದ್ದಿದ್ದರೆ ಚಿನ್ನದ ಪದಕ ಭಾರತಕ್ಕೆ ದಕ್ಕುತ್ತಿತ್ತು. ಇದು ಖಂಡಿತ! ಒಂದು ವೇಳೆ ಇದೂ ಹಾಕಿಯ ಜಾಡನ್ನೇ ಹಿಡಿಯಿತು ಅನ್ನಿ. ಆಗಲೂ ಭಯಪಡಬೇಕಿಲ್ಲ. 'ಸ್ವಾಭಿಮಾನಿ' ಹತ್ತಿರವ್ರೋ, ರೆಡ್ಡಿ ಬ್ರದರ್ಸ್ ಬಳಿಯೋ 'ಅಣ್ಣಾ ಹಿಂಗಿಂಗೆ ಆಗೋಗದೆ. ನಮ್ಮ ದೇಶಕ್ಕೆ ಒಲಂಪಿಕ್ಸ್ ಪದಕಗಳ ಬರ ಬಂದದೆ' ಅಂದರೆ ಸಾಕು. 'ಬರ' ಅನ್ನೋದ ಕೇಳುತ್ತಿದ್ದಂತೆ ಅವರ ಕಿವಿ ನಿಮಿರುತ್ತೆ. 'ನಮ್ಮ ಪಕ್ಷ ಅಧಿಕಾರಕ್ಕೆ ಬಂದರೆ ಬರ ಹಿಂಗಿಸುತ್ತೀನಿ. ದೇಶದಲ್ಲಿರುವ ಎಲ್ಲರಿಗೂ ಒಲಂಪಿಕ್ಸ್ ಪದಕ ಹಂಚ್ತೀನಿ' ಅನ್ನೊ ಘೋಷಣೆ ಮಾಡುತ್ತಾರೆ ಗೊತ್ತಾ!


ಇನ್ನು ಕೆಲವು ಇದಾವೆ ಕಣ್ರಿ. ಅದೇನೋ ಸ್ವಾಮಿ ವಿವೇಕಾನಂದರು 'ನಮ್ಮ ದೇಶದ ಜನರು ಅವರವರ ಜಾತಿಯ ಒಳಗೆ, ಅವರವರ ಸಂಬಂಧದ ಒಳಗೆ ಮದುವೆ ಮಾಡಿಕೊಂಡು ಭಾರತೀಯ ಜನತೆ ಶಾರೀರಿಕವಾಗಿ ದುರ್ಬಲ ಆಗಿದೆ' ಅಂತಾ ಹೇಳವರಂತೆ. 'ಬಲಿಷ್ಠ ಭಾರತ ನಮ್ಮ ಧ್ಯೇಯ' ಎಂದೆಲ್ಲ ಹಾರಾಡ್ತವಲ್ಲ, ಹಾಗೆಂದರೇನು ಎಂಬುದು ಅವರಿಗೆ ಮನವರಿಕೆಯಾಗಿದೆಯಾ? ಆರ್ಥಿಕ ಬಲಿಷ್ಠತೆ ಒಂದೇ ಸಾಲದು. ದೈಹಿಕವಾಗಿಯೂ ದೇಶದ ಜನರು ಬಲಶಾಲಿಯಾಗಿರಬೇಕಾದ್ದು ಅನಿವಾರ್ಯ. 'ಹಿಂದೂ ನಾವೆಲ್ಲ ಒಂದು' ಎಂದು ಕಿರುಚಾಡುವ ಜನ ಭಾರತೀಯರನ್ನು ವಿಭಜಿಸಿ ಪ್ರತ್ಯೇಕ ಕಂಪಾರ್ಟ್‌ಮೆಂಟುಗಳಲ್ಲಿ ಕೂಡಿಹಾಕಿ ಸೀಲು ಹಾಕಿ ಕುಂತವ್ರಲ್ಲಾ. ಹೀಗೆ ಬಂಧಿಯಾಗಿರುವ ಜನ ಹೇಗೆ ತಾನೆ ಬಲಿಷ್ಠ ಭಾರತೀಯರನ್ನು ಹುಟ್ಟಿಸಿಯಾರು? ಅಂತೆಲ್ಲ ಸಂಘಪರಿವಾರದ ಮೇಲೆ ವಿಷ ಕಾರುತ್ತಾ ಇವೆ. ಇಂತಹವರು ಇದ್ದಾರಲ್ಲ ಇವರನ್ನು ಯಾವತ್ತೂ ನಂಬಬಾರದು. ಭಲೇ ಐನಾತಿ ಆಸಾಮಿಗಳು ಇವ್ರೆ. ಮೆತ್ತಗೆ 'ಹಿಂದೂ ಸಂಸ್ಕೃತಿ'ಬೇರಿಗೇ ನೀರು ಬಿಡೋಕೆ ನೋಡುತ್ತಾ ಅವ್ರೆ! ಮೊದಲು ಅದು ಉಳಿಬೇಕು. ಒಲಂಪಿಕ್ಸ್ ಪದಕ ಬರದಿದ್ದರೆ ಕುದುರೆ ಬಾಲ, ಕತ್ತೆ ಜುಟ್ಟು. ಹೀಗೆ ಮಾತನಾಡುವುದನ್ನ ನೋಡಿದರೆ ಇಂತಹವರು ಎಲ್ಲೋ ಸಾಬರಿಗೆ ಹುಟ್ಟಿದೊರು ಇರಬೇಕು!

ಧರ್ಮಗುರುಗಳು ನೈತಿಕ ಭಯೋತ್ಪಾದಕರು

ಸುಮ್‌ಸುಮ್ಮನೆ ಹೇಳಬಾರದು. ಹಿಂದೂಗಳಾಗಲಿ, ಮುಸಲ್ಮಾನರೇ ಆಗಿರಲಿ ಕರಾವಳಿ ಜನವೇ ಸರಿ. ಹೀಗೆ ಹೇಳಲು ಕಾರಣ ಇದೆ. ಅಲ್ಲಿ ಧರ್ಮವನ್ನು ಎಷ್ಟು ಚೆನ್ನಾಗಿ ರಕ್ಷಿಸಿಕೊಂಡಿದ್ದಾರೆ ಅಂತೀರಿ. ಹಿಂದೂ ಯುವತಿಯ ಸಂಗಡ ಯಾವನಾದರೂ ಗಡ್ಡದವನು ಅಥವಾ ಅದಿಲ್ಲದಿರೋ ಸಾಬಿಯವ ಮಾತನಾಡುತ್ತಿದ್ದ ಅಂದಿಟ್ಟುಕೊಳ್ಳಿ. ಅದು ಹಿಂದೂ ಸಂಸ್ಕೃತಿಯ ಅವನತಿಯ ಪ್ರಥಮ ಹೆಜ್ಜೆ ಅಲ್ಲವಾ. ಆದಕ್ಕೆ ಅದರ ರಕ್ಷಕರು ಜಾಗೃತರಾಗುತ್ತಾರೆ. ತಕ್ಷಣ ಕಾರ್ಯಪ್ರವೃತ್ತರಾಗುತ್ತಾರೆ. ರಣರಂಗಕ್ಕೆ ಸಿದ್ಧರಾಗುತ್ತಾರೆ. ಆಯುಧಗಳ ಸಹಿತ ಹೋಗಿ ಆ ಹುಡುಗನನ್ನ ಹಣ್ಣುಗಾಯಿ ನೀರುಗಾಯಿ ಮಾಡುತ್ತಾರೆ. ಹಿಂದೂ ಸ[...] ಅವನತಿಯಹಾದಿ ಹಿಡಿಯುವುದರಿಂದ [...] ಮಾಡುತ್ತಾರೆ! ಮುಸಲ್ಮಾನರೇನೂ ಹಿಂದೆ ಬಿದ್ದಿಲ್ಲ. ಬ[...] ಯುವತಿ ಕಾಫಿರ್ ಯುವಕನೊಡನೆ ನಿಂತಿದ[...] ಮಾತನಾಡಿದ್ದಾಗಲೀ ಮಾಡಿದರೆ ಅದು ಇಸ್ಲಾಂ ಧ[...] ಎಸಗಿದ ದ್ರೋಹವೇ ಅಲ್ಲವಾ. ಈ ವಿಷಯ [...] ಸಂಸ್ಕೃತಿ' ರಕ್ಷಕರ ಗಮನಕ್ಕೆ ಬಂದೇ ಬರುತ್ತದೆ. ಆ[...] ಧರ್ಮ ರಕ್ಷಕ ಪಡೆ ಸ್ಥಳಕ್ಕೆ ಧಾವಿಸಿ 'ಹಿಂದೂ ಸ[...] ರಕ್ಷಕರು ಆ ಯುವಕನಿಗೆ ಮಾಡಿದ ಹಾಗೇ ಇವ[...] ಯುವಕನಿಗೆ ಮಾಡುತ್ತಾರೆ. 'ಇಸ್ಲಾಂ ಸಂಸ್ಕೃತಿ' ಅವ[...] ಹಾದಿ ಹಿಡಿಯುವುದರಿಂದ ತಡೆಯುತ್ತಾರೆ! ಬ[...] 'ಹಿಂದೂ ಸಂಸ್ಕೃತಿ' 'ಇಸ್ಲಾಂ ಸಂಸ್ಕೃತಿ' ಉ[...] ಬಂದಿರುವುದೇ ಇಂತಹವರಿಂದ! ಕೆಲವರು ಈ '[...] ರಕ್ಷಕ'ರನ್ನೇ ಮೂಲಭೂತವಾದಿಗಳು ಎನ್ನುತ್ತಿರು[...] ದುರಂತವೇ ಸರಿ.

ಅದು ಹೇಗೇರಿ ಹಾಗೆ ಆಗುತ್ತಾರೆ? ಎಂದರೆ [...] ಯಾವುದೋ ಪುರಾಣ ಹೊಡೆಯುತ್ತಾರೆ. ದೊ[...] ಹೆಸರು ಬಳಸಿದರೆ ತಮ್ಮ ವಾದಕ್ಕೆ ಬಲ ಬ[...] ಎಂದೋ ಏನೋ ಅಂಬೇಡ್ಕರ್ ಹೆಸರು ಎಳೆದು ತರ[...] ಧರ್ಮಗಳನ್ನು ಅವರು ನೋಡಿರುವ ರೀತಿ[...] ಹೇಳುತ್ತಾರೆ. ಅವರ ಪ್ರಕಾರ ಎಲ್ಲ ಧರ್ಮಗಳ ಸ[...] ಒಂದೇ ಅಂತೆ. ಅದು ಜನತೆಗೆ ಒಳಿತನ್ನು ಬಯಸು[...] ಅಂತೆ. ಅವರ ಪ್ರಕಾರ ಧರ್ಮಗಳಲ್ಲಿ ಎರಡು [...] ಇದೆಯಂತೆ. ಒಂದು ತತ್ವ ಆಧಾರಿತ ಧರ್ಮ. ಮತ್[...] ನಿಯಮ ಆಧಾರಿತ ಧರ್ಮ. ಮೊದಲನೆಯ[...] ಬೌದ್ಧಿಕವಾದದ್ದಂತೆ. ಎರಡನೆಯದು ವ್ಯಾವಹಾರಿಕವಾ[...] ಅಂತೆ. ತಾತ್ವಿಕ ಧರ್ಮದಲ್ಲಿ ಹೊಣೆಗಾರಿಕೆ ಇರು[...] ವ್ಯಾವಹಾರಿಕ ಧರ್ಮದಲ್ಲಿ ಅದು ಇರುವುದಿಲ್ಲವಂತೆ.

ಚೆಡ್ಡಿ ಕಿರಾತಕರಿಗೆ ಪಿಂಕ್ ಚೆಡ್ಡಿ!



2009ರ ಮಂಗಳೂರಿನ ಪಬ್ ದಾಳಿಯ ರೂವಾರಿ ಶ್ರೀರಾಮಸೇನೆಯ ಹೊಣೆಗೇಡಿ ಹಿಂದೂ ಉಗ್ರಗಾಮಿ ಪ್ರಮೋದ್ ಮುತಾಲಿಕ್‌ನಿಗೆ ಸಾವಿರಾರು ಹೆಣ್ಣು ಮಕ್ಕಳು ಪಿಂಕ್ ಚೆಡ್ಡಿ ಕಳುಹಿಸಿ ಅವನಿಗೆ ಮಂಗಳಾರತಿ ಮಾಡಿದ್ದರು. ಮುತಾಲಿಕನ ಬಲಗೈ ಬಂಟ ಭೂಗತ ಕ್ರಿಮಿ ಪ್ರಸಾದ್ ಅತ್ತಾವರ್ ಬಳ್ಳಾರಿ ಜೈಲಿನಲ್ಲಿ ಮುದ್ದೆ ತಿಂದು ಬಂದ.

ಇದೀಗ ಪಡೀಲ್‌ನ ಹೋಮ್ ಸ್ಟೇ ಒಂದರಲ್ಲಿ ಹುಡುಗಿಯರ ವಸ್ತ್ರಾಪಹರಣ ಮಾಡಿದ ಹಿಂದೂ ಜಾಗರಣ ವೇದಿಕೆಯ ಕೋಮುವಾದಿ ಕಿರಾತಕ ಜಗದೀಶ ಕಾರಂತನಿಗೆ 'ಪಿಂಕ್ ಕುಪ್ಪಸ' ಹಾಗೂ ತಾಲಿಬಾನಿ ಕಾಳಿಂಗ ಸರ್ಪ ಆರ್‌ಎಸ್‌ಎಸ್ ಡಾನ್ ಹಿಂದೂ ಭಯೋತ್ಪಾದಕ ಕಲ್ಲಡ್ಕ ಪ್ರಭಾಕರ ಭಟ್ಟನಿಗೆ 'ಪಿಕ್ ಲಂಗ'ಗಳನ್ನು ಕಳುಹಿಸಿ ಗೌರವಿಸಬೇಕಿದೆ. ಹಾಗೆಯೇ ಹಿಂದೂ ಪರ ಸಂಘಟನೆಗಳ ಹಫ್ತಾ ವಸೂಲಿ, ಕಿರಾತಕ ಹಾಗೂ ದುಶ್ಯಾಸನರಾದ ಸುಭಾಷ್ ಪಡೀಲ್, ಮೋಹನ್ ಪಡೀಲ್, ಮುನ್ನ ಗಣೇಶ್, ಸತ್ಯಜಿತ್ ಸುರತ್ಕಲ್, ಶರಣ್ ಪಂಪ್‌ವೆಲ್, ತಾರನಾಥ್, ರಾಜೇಶ್, ಕಿರಣ್, ಅರುಣ್ ಪುತ್ತಿಲ ಮತ್ತಿತರ ಭಜರಂಗದಳದ, ಶ್ರೀರಾಮಸೇನೆಯ ಹಾಗೂ ಹಿಂದೂ ಜಾಗರಣ ವೇದಿಕೆಯ ಎಲ್ಲಾ ದಂಡಪಿಂಡ ರೌಡಿ, ಗೂಂಡಾಗಳಿಗೆ 'ಪಿಂಕ್ ಚಪ್ಪಲಿ' ಮತ್ತು 'ಪಿಂಕ್ ಬಳೆ'ಗಳನ್ನು ಕಳುಹಿಸಬೇಕಿದೆ.

ಇಂತಹ ರೋಲ್‌ಕಾಲ್ ಕಿರಾತಕರನ್ನು ಪರೋಕ್ಷವಾಗಿ ಪ್ರೋತ್ಸಾಹಿಸುವ ಪೇಜಾವರ ಶ್ರೀ, ಧರ್ಮಸ್ಥಳದ ವೀರೇಂದ್ರ ಹೆಗ್ಗೆ ಪ್ರಮೀಳಾ ನೇಸರ್ಗಿ, ಸೀಮಂತ್ ಕುಮಾರ್ ಸಿಂಗ್ ಮತ್ತು ಮಹಿಳಾ ಆಯೋಗದ ಅಧ್ಯಕ್ಷೆ ಮಂಜುಳಾ ಅವರಿಗೆ ಶೋಭೆ ತರುವಂಥದ್ದಲ್ಲ.

- ಅಶ್ವಿನಿ. ಮಂಗಳೂರು

ಹಿಂದೂ ಪುಂಡರನ್ನು ಗಡಿಪಾರು ಮಾಡಬೇಕು

ಆಗಸ್ಟ್ 15, 2012ರ ಸಂಚಿಕೆಯ 'ಚೆಡ್ಡಿ ರಿಪಬ್ಲಿಕ್' ವರದಿಯು ಬಿಜೆಪಿ ಸರ್ಕಾರದ ಮುಖವಾಡವನ್ನು ಕಿತ್ತೆಸೆದಿದೆ.

ಮಂಗಳೂರು ಮಾರ್ನಿಂಗ್ ಮಿಸ್ಟ್ ಹೋಮ್ ಸ್ಟೇ ಮೇಲೆ ಹಿಂದೂ ಜಾಗರಣ ವೇದಿಕೆಯ ಪುಂಡರು ದಾಳಿ ನಡೆಸಿದ್ದು ಇಡೀ ನಾಗರಿಕ ಸಮಾಜ ತಲೆ ತಗ್ಗಿಸುವಂತೆ ಮಾಡಿದೆ. ಚೆಡ್ಡಿ ಸರ್ಕಾರದ ಈ ಅತಿರೇಕ ತರುಣಿಯರ ಮೇಲೆ ದೌರ್ಜನ್ಯ ನಡೆಸುವ ಯಾ[...] ಸಂಘಟನೆಯಾಗಲಿ ಸರ್ಕಾರ ಈ ಕೂಡಲೇ ಅ[...] ಸಂಘಟನೆಗಳನ್ನು ನಿಷೇಧಿಸಬೇಕು.


- ಆರ್.ಕೆ. ಕೊರ್ತಿ, ಬಾದ[...]

ದಕ್ಷಿಣ ಕನ್ನಡದ ಹಲವು ಶಿಕ್ಷಣ ಸಂಸ್ಥೆಗಳು [...] ಆಸ್ಪತ್ರೆಗಳು ಕೋಮುವಾದದ ತಾಣಗಳಾಗಿವೆ. [...] ಪತ್ರಿಕೆಯ ಅಭಿಮಾನಿ ಓದುಗಳು.

- ಮಂಜುಳ. ಪುತ[...]

ಬಿಜೆಪಿಯವರ ಭ್ರಷ್ಟದಾರಿ, ರೇಷ್ಮೆ ಅವರ ಅಡ್ಡ[...] ಮಂಜುಳಮ್ಮನ ಮಂಕುಧಾರಿ, ಸಂಸ್ಕೃತಿ ರ[...] ರಹದಾರಿಗಳನ್ನು ಕುರಿತು ಓದಿ ಬೇಸರವಾಯಿತು. [...] ಯಾವ ದೇಶದಲ್ಲಿದ್ದೇವೆ? ನಮ್ಮ ದೇಶದ ಸಂವಿ[...] ಅಂಬೇಡ್ಕರದ್ದೋ, ಮನುಸ್ಮೃತಿಯದ್ದೋ? ನ[...] ಪ್ರಜ್ಞಾವಂತರು ಇಷ್ಟು ಕಡಿಮೆ ಸಂಖ್ಯೆಯಲ್ಲಿದ್ದಾರೆಯೆ[...]

- ವಿಕಾಸ್ ಆರ್. ಮೌರ್ಯ, ಬೆಂಗಳ[...]



ತಮ್ಮ ಬುಡಕ್ಕೆ ಬಂದಾಗ ಎಚ್ಚೆತ್ತ 'ದೊಡ್ಡವರು'

ಮಂಗಳೂರಿನ ಹೋಮ್ ಸ್ಟೇಯಲ್ಲಿ ಹೆಣ್ಣುಮಕ್ಕಳ ಮೇಲೆ ನಡೆದ ಅಮಾನುಷ ದಾಳಿಯ ದೃಶ್ಯಗಳನ್ನು ಭಾರತದ ಇತರ ರಾಜ್ಯಗಳಲ್ಲಿ ಮಾತ್ರವಲ್ಲ ಕೊಲ್ಲಿ ದೇಶಗಳ ಟಿವಿಗಳಲ್ಲೂ ಬಿಬಿಸಿಯಲ್ಲೂ ಪ್ರಸಾರವಾಗಿ, ಜೊತೆಗೆ ಯುಟ್ಯೂಬ್/ಫೇಸ್ ಬುಕ್‌ಗಳಲ್ಲೂ ಹರಿದಾಡಿ ವಿಶ್ವದೆಲ್ಲೆಡೆ ಇರುವ ಅನಿವಾಸಿ ಭಾರತೀಯರಿಗೆ ಮಂಗಳೂರಿನ ಕೇಸರಿ ಪಡೆಗಳ ಕರಾಳ ಮುಖ ಪರಿಚಯವಾದುದರಿಂದ ಕರಾವಳಿಯ ಕ್ಯಾಪಿಟೇಷನ್ ಕಾಲೇಜು ಮಾಫಿಯಾ ಹಾಗೂ ರಿಯಲ್ ಎಸ್ಟೇಟ್ ದಂಧೆಯವರಿಗೆ ಭಾರಿ ಪೆಟ್ಟು ಬಿದ್ದಿರುವುದು ನಿಜ.

ಶಿಕ್ಷಣದ ವ್ಯಾಪಾರಿಗಳನ್ನು ಹಾಗೂ ಬಿಲ್ಡರ್‌ಗಳನ್ನು ಕಂಗೆಡಿಸಲು ಮೂಲ ಕಾರಣ ಕಳೆದ ಎರಡು ವಾರಗಳಲ್ಲಿ ಸಿಇಟಿಯಲ್ಲಿ ಕರಾವಳಿಯ ಕಾಲೇಜುಗಳಿಗೆ ಪ್ರವೇಶ ಪಡೆದ ಹೊರ ರಾಜ್ಯದ ವಿದ್ಯಾರ್ಥಿಗಳು ಮಾತ್ರವಲ್ಲ ರಾಜ್ಯದೊಳಗಿನ ವಿದ್ಯಾರ್ಥಿಗಳೂ ಬೆಳಗಾವಿ, ಮೈಸೂರು, ಹುಬ್ಬಳ್ಳಿ ಕಾಲೇಜುಗಳಿಗೆ ವರ್ಗಾವಣೆ ಕೋರಿರುವುದು.

ಹಿಂದೆಲ್ಲಾ ಮಂಗಳೂರಿನ ರಿಯಲ್ ಎಸ್ಟೇಟ್ ಎಷ್ಟೊಂದು ದುಬಾರಿಯಾಗಿತ್ತೆಂದರೆ ಅದು ಬೆಂಗಳೂರನ್ನೂ ಮೀರಿಸಿತ್ತು. ಇದಕ್ಕೆ ಕಾರಣ ಇಲ್ಲಿಯ ಫ್ಲಾಟುಗಳಲ್ಲಿ ಹಣ ಹೂಡುತ್ತಿರುವವರಲ್ಲಿ ಹೆಚ್ಚಿನವರು ಕೊಲ್ಲಿ ದೇಶಗಳಲ್ಲಿರುವ ಅನಿವಾಸಿ ಭಾರತೀಯರು. ಆದರೆ ಈಗ ಹೋಮ್ ಸ್ಟೇ ಘಟನೆ ಟಿವಿಯಲ್ಲಿ ನೋಡಿದ ನಂತರ ಶೇ. 30ಕ್ಕೂ ಹೆಚ್ಚು ಎನ್‌ಆರ್‌ಐಗಳು ತಮ್ಮ ಫ್ಲಾಟ್ ಬುಕ್ಕಿಂಗ್‌ಗಳನ್ನು ಕ್ಯಾನ್ಸಲ್ ಮಾಡಿದ್ದರಿಂದ ರಿಯಲ್ ಎಸ್ಟೇಟ್ ಧಾರಣೆ ಹತ್ತೇ ದಿನಗಳಲ್ಲಿ 20% ಬಿದ್ದಿದೆ. ಈ ಬೀಳುವಿಕೆ ಇನ್ನೂ ತೀವ್ರವಾಗುತ್ತದೆ ಎಂದು ನನ್ನ ಬಿಲ್ಡರ್ ಮಿತ್ರನೊಬ್ಬ ಸ್ವತಃ ಆತಂಕ ವ್ಯಕ್ತಪಡಿಸಿದರು.

ಕೇಸರಿ ಪಡೆಗಳ ಹಿಂದೂ ಸಮಾಜೋತ್ಸವ ಹಾಗೂ ಇತರ ಪೂಜೆ, ಯಾಗ, ಬ್ರಹ್ಮಕಲಶ, ಜೀರ್ಣೋದ್ಧಾರ ಇವುಗಳಿಗೆಲ್ಲಾ ಹಣ ಪೂರೈಸುತ್ತಿದ್ದವರು ಕ್ಯಾಪಿಟೇಶನ್ ಕಾಲೇಜು ಧಣಿಗಳು ಮತ್ತು ರಿಯಲ್ ಎಸ್ಟೇಟ್ ಕುಳಗಳು. ಈಗ ಅದುವೇ ತಮ್ಮ ಬುಡಕ್ಕೆ ಬಂದಾಗ 'ಅರೈಸ್ ಮಂಗಳೂರು' ಎನ್ನುತ್ತಿದ್ದಾರೆ! ಮಾಜಿ ಲೋಕಾಯುಕ್ತ ಸಂತೋಷ್ ಹೆಗ್ಡೆ ಎಷ್ಟು ಪ್ರಾಮಾಣಿಕರು ಹಾಗೂ ಸಾಮಾಜಿಕ ಬದ್ಧತೆಯುಳ್ಳವರೋ ಅಷ್ಟೇ ತದ್ವಿರುದ್ಧ ಅವರ ಸಹೋದರ ವಿನಯ್ ಹೆಗ್ಡೆ. ಜತೆಗೆ ಮಾಜಿ ಶರಾಬು ದೊರೆ ಎ.ಜೆ.ಶೆಟ್ಟಿ ಎಂಬುವವರಿಗೆ ಎರಡಕ್ಷರ ಇಂಗ್ಲಿಷ್ ಬಾರದಿದ್ದರೂ ಈತ ಎರಡು ಮೆಡಿಕಲ್ ಕಾಲೇಜು ಮತ್ತು ನಾಲ್ಕು ಇತರ ಕಾಲೇಜುಗಳ ಧಣಿ. ತುಳು ಭಾಷಿಕ ಮೈನಾರಿಟಿ ಕೋಟಾದಡಿ ಕಾಲೇಜುಗಳನ್ನು ಸ್ಥಾಪಿಸಿಯೂ ಇವರೆಲ್ಲಾ ತಮ್ಮ ತುಳು ಬಾಂಧವರಿಗೆ ರಿಯಾಯಿತಿಯಲ್ಲಿ ಒಂದು ಸೀಟೂ ಕೊಟ್ಟವರಲ್ಲ. ಈಗ ತಮ್ಮ ದಂಧೆಗೆ ಪೆಟ್ಟು ಬಿದ್ದಾಗ ಇವರಿಗೆಲ್ಲಾ ಸಾಮಾಜಿಕ ಕಾಳಜಿ ಹುಟ್ಟಿದೆ ಹಾಗೂ ತುಳುವರ ಮಂಗಳೂರಿನ ಬ್ರಾಂಡ್‌ಗೆ ಡ್ಯಾಮೇಜ್ ಆಗಿರುವುದು ನೆನಪಾಗಿದೆ. ಇದಕ್ಕೆ ಮೊದಲು ಹಿಂದಿನ ನಾಲ್ಕು ವರ್ಷದಿಂದ ನೂರಾರು ಕಾಲೇಜು ಹುಡುಗ-ಹುಡುಗಿಯರು ನಿಸ್ಸಹಾ[...]ರಾಗಿ ನಡುಬೀದಿಯಲ್ಲಿ ನೈತಿಕ ಪೊಲೀಸ್ ಹಾಗೂ ನಿಜ[...] ಪೊಲೀಸರಿಂದ ವಿನಾಕಾರಣ ಪೆಟ್ಟು ತಿಂದಾಗ ಮಂಗಳ[...] ಅಂತರರಾಷ್ಟ್ರೀಯ ಇಮೇಜ್‌ಗೆ ಧಕ್ಕೆಯಾಗುವ [...] ಆಲೋಚನೆಯೇ ಇವರೆಲ್ಲರಿಗೆ ಬರಲಿಲ್ಲ!

"ಆ ನೀಲಿ ಚೆಕ್ಸ್ ಶರ್ಟ್‌ನ ರೌಡಿ ಯಾರು?" ಎ[...] ಮಾನ್ಯ ಹೈಕೋರ್ಟ್ ನ್ಯಾಯಮೂರ್ತಿಗಳು ಕೇಳಿ[...] ಆತ ಗೂಂಡಾ ಗಣೇಶ್ ಕಾಟಿ. ದಾಳಿಯ ಕೊನೆಯ[...]ದಲ್ಲಿ ಅವನು ಒಂದು ಕೆಂಪು ಲೇಡೀಸ್-ಜಾಕೆಟ್ ತೊ[...] ಪೊಲೀಸರೊಂದಿಗೆ ಹರಟುತ್ತಿದ್ದಾನೆ. ಆ ಕೆಂಪು ಜಾಕೆಟ್ [...] ಆತ ಒಬ್ಬ ಹುಡುಗಿಯಿಂದ ಬಲಾತ್ಕಾರವಾಗಿ ಎ[...] ತೆಗೆದದ್ದು. ಜಾಕೆಟ್ ಕಳೆದುಕೊಂಡ ಆ ಹುಡುಗಿ ಯ[...] ಅರೆಬೆತ್ತಲೆ ಎಂದು ಟೀಕಿಸುವವರು ಜಾಕೆಟ್ ಕದ್ದ ಗಣ[...] ಕಾಟಿಗೆ ತಿರುಕನಿಗಿಂತಲೂ ಕೆಳಮಟ್ಟದವ ಎನ್ನುತ್ತಿಲ್ಲವ[...]

ಕರಾವಳಿಯು ಕೇಸರಿ ರಿಪಬ್ಲಿಕ್ ಆಗಿರುವುದು [...] ನವೀನ್ ಸೂರಿಂಜೆ ಹೇಳಿರುವಂತೆ ವಾರಕ್ಕೊಂದಾ[...] ಕಾಲೇಜು ಹುಡುಗ-ಹುಡುಗಿಗೆ ಪಡ್ಡೆಗಳು ಹೊ[...] ಪೊಲೀಸ್ ಸ್ಟೇಷನ್‌ಗೆ ಎಳೆದುಕೊಂಡು ಹೋಗುವ[...] ಪೊಲೀಸರು ತಮ್ಮ ಅಧಿಕಾರ ಮೀರಿ ಆ ಹುಡುಗ[...] ಮುಚ್ಚಳಿಕೆ ಬರೆಸಿ, ಚರ್ಚ್‌ನ ಪಾದ್ರಿಯಂತೆ ಪೊಲೀ[...] ಪಾಲಕರಿಗೆ ಮಕ್ಕಳ ಪಾಲನೆ, ಸಂಸ್ಕೃತಿಯ ಬಗ್ಗೆ ಬೋ[...] ಕೊರೆಯುವ ಪ್ರಕರಣಗಳು ಇಲ್ಲಿ ನಿರಂತರ ನಡೆಯು[...]

...ಸುತ್ತಿರುವ ಧರ್ಮ ತತ್ವ ಆಧಾರಿತ ಧರ್ಮ ಅಲ್ಲವಂತೆ. ಪರಂತು ನಿಯಮಗಳ ...ಅಂತೆ! ಆಷಾಢಭೂತಿ ಧರ್ಮಾಧಿಕಾರಿಗಳು ತಮ್ಮ ಮುಖದ ನೇರಕ್ಕೆ ...ಸುತ್ತಾರಂತೆ. ಇಂತಹವರೇ ಪ್ರಜಾಪ್ರಭುತ್ವದಲ್ಲಿ ನೈತಿಕ ಭಯೋತ್ಪಾದಕರಂತೆ! ...ಳಿಕ್ಕೆ ತಕ್ಕಂತ ಹೆಜ್ಜೆ ಹಾಕುವ ಯುವಕರು ಮೂಲಭೂತವಾದಿಗಳು. ಭಯೋತ್ಪಾದಕರು ...ರಲ್ಲೀ!

...ಕ್ಕೇ ನಿಲ್ಲಿಸುವುದಿಲ್ಲ. ಇಡೀ ದೇಶದಲ್ಲೇ ಅತಿ ಹೆಚ್ಚು ಮಠಗಳು ಇರುವುದು ...ಕದಲ್ಲಿಯೇ ಅಂತೆ. ಆದರೂ ಇನ್ನೂ ಹೊಸ ಹೊಸ ಮಠಗಳು ಬರುತ್ತಾನೇ ಇವೆ ...ರೆ. ಇವು ಜಾತಿಗಳ ಬೇರುಗಳನ್ನು ಭದ್ರಪಡಿಸುತ್ತವಂತೆ. 'ಹೌದುರೀ ಅದಕ್ಕೇನು ...ಕು ಎನ್ನುತ್ತೀರಿ' ಅಂತ ಕೇಳಿದರೆ? 'ಅವುಗಳ ಸಂಖ್ಯೆಗೆ ಮಿತಿ ಹೇರಬೇಕು' ...ಲ್ಲೀ ಗುರುದ್ರೋಹಿಗಳು! 'ಅವಕ್ಕೆ ನಿಯಂತ್ರಣ ಹೇರಿದರೆ ಸಾಕಾ' ಎಂದು ಪ್ರಶ್ನಿಸಿದರೆ ... ಪೂಜಾಸ್ಥಳಗಳ ಸಂಖ್ಯೆಗೂ ಮಿತಿ ಹೇರಬೇಕು' ಅಂತಾವಲ್ಲ ನಾಸ್ತಿಕ ಮುಂಡೇವು! ...ಬುದ್ಧಿ ಕಲಿಸಲು 'ಸಂಸ್ಕೃತಿ ರಕ್ಷಕ'ರೇ ಬರಬೇಕೋ ಏನೋ...!

ಖಟ್ಜು ಬೊಗಳಿದರೆ ದೀದಿ ಬೆದರ್ತಾರಾ...

...ಚೆಗೆ ಜನ ಭಲೇ ತಲೆಹರಟೆ ಮಾಡ್ತಾ ಇವೆ. ಅದೇನೋ ಕಪ್ಪು ತಾನಿರುವ ...ಆನೆ ಆದ್ಮಂತಿತ್ತಲ್ಲ ಹಂಗಾಗದೆ. ತಮ್ಮ ಮಿತೀನೆ ಅರೀದೆ ಎಲುಬಿಲ್ಲದ ನಾಲಗೆ ...ತ ಬಾಯಿಗೆ ಬಂದಂಗೆ ಆಡ್ತವೆ. ಪ್ರಶ್ನೆ ಕೇಳ್ತೀನಿ ಅಂತ ಯಾವು ಯಾವ್ರೋ ಕೈಗೆ ...ಟುಕದೋವೆಲ್ಲ ಬಹಿರಂಗ ಸಭೇಲೀ ಕೇಳಿದರೆ ಎಂತಹವರಿಗಾದರೂ ರೇಗೋದೆಯ. ... ಹಂಗೇ ಆಗದೆ. ಹಾಳಾದ ರೈತರು ಸಾಯ್ತಾನೆ ಇರ್ತವೆ. ಇವರೇನು ಸಾಯಿ ...ಹೇಳಿದ್ರಾ ಇಲ್ಲ ಸಾಯಿಸಿದ್ರಾ. ಎರಡೂ ಇಲ್ವಲ್ಲ. ಸತ್ತವೆ. ಸಾಯ್ತಾನೂ ಇರ್ತವೆ. ಜನ ...ಕ್ಕೋಳದಿಲ್ಲ. ಬಾಯಿಗೆ ಬಂದಂಗೆ ಅಂತವೆ. ದೀದಿ ಮುಖ್ಯಮಂತ್ರಿ ಅಲ್ವಾ. ಹಂಗನ್ನೋರ್ಗೂ ...ಸಮಾಧಾನದ ಮಾತ ಹೇಳಬೇಕಾಯ್ತದೆ. ಅದ ಮಾಡ್ತಿದ್ದರಂತೆ. ಯಾವ್ರೋನೋ ...ಲೆ ಮಾಸದೋನು 'ರೈತರ ಸಾವಿನ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ' ...ಳಿಬುಟ್ಟವನೆ. ಇಂತೋರ್ನ ಎಷ್ಟು ನೋಡಿಲ್ಲ ದೀದಿ. ಹಿಂಗೆ ಕೇಳಬೇಕಾರೆ ಅವನು ...ವಾದೀನೆ ಸರಿ ಅಂತ ಸಡನ್ ಆಗಿ ಪತ್ತೆ ಹಚ್ಚವ್ರೆ. ಇಂತೋರಿಗೆ ಸದರ ಕೊಟ್ಟರೆ ...ಕೈಹಾಕಕ್ಕೆ ಬತ್ತವೆ ಅನ್ನೋದು ಗೊತ್ತಿತ್ತಲ್ಲ. ಅದ್ಕೆ ಏನು ಮಾಡಬೇಕೋ ಆದ ... ಪೋಲೀಸ್ನೋರೇನು ದಡ್ಡರಾ. ದೀದಿ ಇಂಗಿತ ತಿಳೀತಿದ್ದಂಗೆ ಅದು ಯಾವಯಾವದೋ ...ಜಡ್ಡು ತಲೆಹರಟೆ ಮುಂಡೇದು ಕಂಬಿ ಎಣಿಸೋ ಹಂಗೆ ಮಾಡವ್ರೆ!

...ರ್ಕಂಡೇಯ ಖಟ್ಜು ಅಂತ ಯಾರೋ ಹೈಕೋರ್ಟಿನ ಜಡ್ಜು ಇದ್ದಾರಂತೆ. ಅದೂ ...ಅಲ್ಲ ಮಾಜಿ. ಅವುರ್ಗೆ ದೀದಿ ಬಗ್ಗೆ ಮೊದಲು ಗೌರವ ಇತ್ತಂತೆ. ಇಂತಹವೆಲ್ಲ ಆದ ...ಹಂಗಿಲ್ಲವಂತೆ. ಆಕೆ ದುರಹಂಕಾರಿ, ಪ್ರಜಾಪ್ರಭುತ್ವದಲ್ಲಿ ಬಹಳ ಮುಖ್ಯವಾದ ... ಸ್ವಾತಂತ್ರ್ಯದ ಅರಿವೇ ಆಕೆಗಿಲ್ಲ ಅಂತಾರಂತೆ. ಅಲ್ಲಾ ದೀದಿ ಏನು 'ನನಗೆ ...ಕೇಟ್ ಕೊಡಿ ಸ್ವಾಮಿ' ಅಂತ ಈ ಹಳೆ ಜಡ್ಜ್ ಹತ್ತಿರ ಹೋಗಿದ್ದರಾ: ಯಾವ್ರೋನ ...ನೆಯಾದರೂ ಯಾಕೆ ಬೇಕು ಮುಖ್ಯಮಂತ್ರಿಗೆ ಅಂತೀನಿ. ಅದೇನೋ ಹೇಳ್ತಾರಲ್ಲ ...ಬೊಗಳಿದರೆ ದೇವಲೋಕ ಹಾಳಾಯ್ತದಾ ಅಂತಾವ... ಹಂಗೆ ಖಟ್ಜು ಬೊಗಳಿಕೆಗೆ ...ಬೆದರ್ತಾರಾ...! ❦



'ಶಿವ' ಬಗ್ಗೆ ಅಭಿಮಾನಿಗಳ ಕಾತರ

ಸುಮಾರು ಒಂದೂವರೆ ವರ್ಷದ ನಂತರ ಶಿವರಾಜ್‌ಕುಮಾರ್ ನಟಿಸಿರುವ ಚಿತ್ರ 'ಶಿವ' ಬಿಡುಗಡೆಯಾಗುತ್ತಿದೆ. ಖಂಡಿತವಾಗಿಯೂ ಶಿವಣ್ಣನ ಅಭಿಮಾನಿಗಳಿಗೆ ಇದು ಖುಷಿ ಕೊಡುವ ವಿಷಯ. ಈ ಹಿಂದೆ ಶಿವಣ್ಣ ನಟಿಸಿ ಬಿಡುಗಡೆಯಾದ ಚಿತ್ರ 'ಜೋಗಯ್ಯ'. ಅದು ಅವರು ನಟಿಸಿದ್ದ ನೂರನೆ ಚಿತ್ರವಾಗಿದ್ದು ಅದರ ಬಗ್ಗೆ ಅಭಿಮಾನಿಗಳಿಗೆ ಭಾರೀ ನಿರೀಕ್ಷೆ ಇತ್ತು. ಅಂತಹ ನಿರೀಕ್ಷೆಗೆ ಕಾರಣವೂ ಇತ್ತು. ಅದೇನೆಂದರೆ ಪ್ರೇಮ್ ನಿರ್ದೇಶಿಸಿ, ಶಿವಣ್ಣ ಅಭಿನಯಿಸಿದ್ದ 'ಜೋಗಿ' ಚಿತ್ರ ಬಾಕ್ಸ್ ಆಫೀಸನ್ನು ಚಿಂದಿ ಮಾಡಿತ್ತು. ಅದೇ ರೀತಿ ಆ ಚಿತ್ರದ ಮುಂದುವರಿದ ಭಾಗವಾದ 'ಜೋಗಯ್ಯ' ಕೂಡಾ ಬಾಕ್ಸ್ ಆಫೀಸ್‌ನಲ್ಲಿ ಗೆಲ್ಲುತ್ತದೆ ಎಂದು ಉದ್ಯಮದವರು ಮತ್ತು ಅಭಿಮಾನಿಗಳು ಭಾವಿಸಿದ್ದರು. ಆದರೆ 'ಜೋಗಯ್ಯ' ಬಿಡುಗಡೆಯಾದ ಒಂದು ವಾರದಲ್ಲೇ ಸೊರಗಿ ಹೋಯಿತು. ಈ ಚಿತ್ರದ ಸೋಲು ನಿರ್ದೇಶಕ ಪ್ರೇಮ್‌ಗೆ ಮಾತ್ರವಲ್ಲ, ಶಿವಣ್ಣನ ತಾರಾ ವರ್ಚಸ್ಸಿಗೂ ಧಕ್ಕೆ ತಂದಿತ್ತು.

ಈ ಹಿನ್ನೆಲೆಯಲ್ಲಿ ಶಿವಣ್ಣ ನಟಿಸಿರುವ 101ನೇ ಚಿತ್ರವಾದ 'ಶಿವ' ಬಗ್ಗೆ ಈಗ ಅದೇ ರೀತಿಯ ಕುತೂಹಲ ಎಲ್ಲೆಡೆ ಕಾಣಿಸುತ್ತಿದೆ. ನಿರ್ಮಾಪಕ ಶ್ರೀಕಾಂತ್ ಮುಂದಿನ ಎರಡು ವಾರಗಳಲ್ಲಿ ಈ ಚಿತ್ರವನ್ನು ಬಿಡುಗಡೆ ಮಾಡಲು ತಯ್ಯಾರಿ ನಡೆಸುತ್ತಿದ್ದಾರೆ. ಕನಿಷ್ಠವೆಂದರೂ ದಾಖಲೆಯ 200 ಚಿತ್ರಮಂದಿರಗಳಲ್ಲಿ ಅದನ್ನು ಬಿಡುಗಡೆ ಮಾಡುವ ಯೋಜನೆ ಅವರದ್ದು.

ಈ ಚಿತ್ರ ಖಂಡಿತವಾಗಿಯೂ ಹಿಟ್ ಆಗುತ್ತದೆ ಎಂದು ಶಿವಣ್ಣನ ಅಭಿಮಾನಿಗಳು ಯಾಕೆ ನಂಬಿದ್ದಾರೆ ಗೊತ್ತಾ? ಈ ಚಿತ್ರದಲ್ಲಿ ಸುಮಾರು ಎಂಟು ವರ್ಷಗಳ ನಂತರ ಶಿವಣ್ಣ ಮತ್ತು ನಿರ್ದೇಶಕ ಓಂಪ್ರಕಾಶ್ ಮತ್ತೆ ಒಂದಾಗಿದ್ದಾರೆ. ಈ ಜೋಡಿಯ ಈ ಹಿಂದಿನ ಚಿತ್ರಗಳೆಲ್ಲಾ ಬಾಕ್ಸ್ ಆಫೀಸ್‌ನಲ್ಲಿ ಗೆದ್ದಿದ್ದವು ಎಂಬುದನ್ನು ಇಲ್ಲಿ ಸ್ಮರಿಸಬೇಕು.

ನೂರು ಚಿತ್ರಗಳ ಸರದಾರ ಶಿವಣ್ಣನ ದೃಷ್ಟಿಯಿಂದಲೂ ಈ ಚಿತ್ರದ ಗೆಲುವು ಅತೀಮುಖ್ಯವಾಗಿದೆ. ಈ ಚಿತ್ರ ಗೆದ್ದರೆ ಶಿವಣ್ಣ ಮತ್ತೆ ಕನ್ನಡ ಚಿತ್ರರಂಗದಲ್ಲಿ ನಾಯಕನಾಗಿ ಮೆರೆಯುತ್ತಾರೆ. ಇತ್ತೀಚೆಗೆ ಶಿವಣ್ಣನ ಸ್ಥಾನದಲ್ಲಿ ಬೇರೊಬ್ಬ ಯುವ ನಾಯಕ ನಟನನ್ನು ಕೂರಿಸಲು ದೊಡ್ಡ ಪಿತೂರಿ ನಡೆಯುತ್ತಿರುವುದರಿಂದ 'ಶಿವ' ಚಿತ್ರದ ಗೆಲುವು ಅಥವಾ ಸೋಲು ಚಿತ್ರರಂಗದಲ್ಲಿಯೂ ಅನೇಕ ಬದಲಾವಣೆಗಳಿಗೆ ನಾಂದಿಯಾಗುವುದು ಖಂಡಿತ. ❦

...ಂಗಳೂರು ಹೋಮ್ ಸ್ಟೇ ಮೇಲಿನ ದಾಳಿ' ... ಬರುವ ದಿನಗಳಲ್ಲಿ ಕರ್ನಾಟಕ ಸರ್ಕಾರದ ವಿವಿಧ ...ಗಳು ಹಮ್ಮಿಕೊಳ್ಳಲಿರುವ ವಿಚಾರ ಸಂಕಿರಣಗಳು ಅವುಗಳಲ್ಲಿ ಚರ್ಚಿಸಲ್ಪಡುವ ವಿಷಯಗಳು ಹೀಗಿದ್ದರೆ ...ಇಲ್ಲ;

...ರಾಜ್ಯ ಕೈಮಗ್ಗ ಅಭಿವೃದ್ಧಿ ಇಲಾಖೆ ಮತ್ತು ರೇಷ್ಮೆ ...: 'ನಮ್ಮ ಸಂಸ್ಕೃತಿ, ನಮ್ಮ ವಸ್ತ್ರ'

...ಮುಜರಾಯಿ ಇಲಾಖೆ: 'ದೇವಸ್ಥಾನಗಳಲ್ಲಿ ಹಿಂದೂ ...ಯದ ಪ್ರಕಾರ ಆಧುನಿಕ ಬರ್ತ್‌ಡೇ ಪಾರ್ಟಿಗಳನ್ನು ಆಚರಿಸುವುದು ಹೇಗೆ'

* ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ: 'ಪಾರ್ಟಿಗಳಿಗಾಗಿ ಸಾತ್ವಿಕ ಆಹಾರ ಸಾಮಗ್ರಿಗಳ ಪಟ್ಟಿ'

* ಆರೋಗ್ಯ ಇಲಾಖೆ: 'ಭಾರತೀಯ ಸೋಮರಸಗಳು ಮತ್ತು ಆಯುರ್ವೇದ ಉಲ್ಲಾಸ ಚೂರಣಗಳು'

* ಪೊಲೀಸ್ ಇಲಾಖೆ: 'ಬಾರ್, ಪಬ್, ರೆಸಾರ್ಟ್ ಮತ್ತು ಹುಕ್ಕಾ ಬಾರ್‌ಗಳನ್ನು ನಡೆಸುತ್ತಿರುವ ಅಲ್ಪಸಂಖ್ಯಾತರನ್ನು ಗುರುತಿಸಲು ಮಾಸ್ಟರ್ ಪ್ಲಾನ್'

* ಸಂಸ್ಕೃತಿ ಇಲಾಖೆ: 'ಪಾರ್ಟಿಗಳಿಗಾಗಿ ಪಾರಂಪಾರಿಕ ನೃತ್ಯಗಳು'

– ಈ ಎಲ್ಲ ವಿಚಾರಸಂಕಿರಣಗಳು ಮಹಿಳಾ ಆಯೋಗದ ಅಧ್ಯಕ್ಷೆ ಶ್ರೀಮತಿ ಮಂಜುಳಾ ಅವರ ಮಾರ್ಗದರ್ಶನದಲ್ಲಿ ನಡೆದು ಇವೆಲ್ಲಕ್ಕೆ ಚಿಮೂ ಅವರು ಅಧ್ಯಕ್ಷತೆ ವಹಿಸಲಿದ್ದಾರೆ.

- ಓದುಗ, ಎಸ್‌ಎಂಎಸ್ ಮೂಲಕ

ಗೃಹ ಸಚಿವನೇ ಭೂಗಳ್ಳ

ಕರ್ನಾಟಕದ ಗೃಹ ಮಂತ್ರಿ ನೆಲಗಳ್ಳನಾಗಿರುವಾಗ ಕಾನೂನನ್ನು ಕಾಯೋದು ಯಾರಿಂದಲೂ ಸಾಧ್ಯವಿಲ್ಲ. ಮಂತ್ರಿ ಅಶೋಕನ ಲೂಟಿ ಸ್ಟೋರಿ ಸಮಾಜವನ್ನು ಬೆಚ್ಚಿ ಬೀಳಿಸುವಂತಿದೆ. ಇಂಥವರು ಮಂತ್ರಿ ಆಗಿರುವುದರಿಂದ ಕ್ರಿಮಿನಲ್‌ಗಳ ಆರ್ಭಟ ಜಾಸ್ತಿಯಾಗಿದೆ. ಮಂತ್ರಿ ಅಶೋಕನ ಹಗರಣ ತನಿಖೆಯಾಗಲಿ.

- ಬಿ.ಬಿ.ರಾಜ್, ಹಂಪಪಟ್ಟಣ, ಎಚ್ ಬಿ ಹಳ್ಳಿ

ಸೋನಿ ಸೋರಿಗೆ ನಮ್ಮ ಕಣ್ಣೀರು

ಛತ್ತೀಸಗಢ ರಾಜ್ಯದ ಕಾಡುಗಳ ತುಂಬ ವನವಾಸಿ ಕಲ್ಯಾಣ ಆಶ್ರಮಗಳು ಆದಿವಾಸಿಗಳನ್ನು ಆರೆಸ್ಸೆಸ್‌ಗೆ ಮತಾಂತರ ಮಾಡುವ ದುಷ್ಕೃತ್ಯದಲ್ಲಿ ಭಾಗಿಯಾಗಿವೆ. ಒಂದು ವೇಳೆ ಸೋನಿ ಸೋರಿ ಇಂತಹದ್ದೊಂದು ಆಶ್ರಮಕ್ಕೆ ಸೇರಿದ್ದರೆ ಭಜನೆ ಮಾಡಿಕೊಂಡು, ದ್ವೇಷದ ಪಾಠಗಳನ್ನು ಕಲಿಯಬಹುದಾಗಿತ್ತು. ಆದರೆ ಆಕೆ ಮನುಷ್ಯಳಂತೆ ಬದುಕುವುದಕ್ಕೆ ಬಯಸಿದ್ದು ತಪ್ಪೇ? ಈ ವಾರದ ಕಂಡ ಹಾಗೆ ಓದಿ ಮನಸ್ಸು ಭಾರವಾಯಿತು.

- ರವಿಕುಮಾರ್, ಹಾಸನ

ನ್ಯಾಯಾಧೀಶರಿಗೆ ಆದಿವಾಸಿ ಮಹಿಳೆ ಸೋನಿ ಸೋರಿ ಬರೆದ ಪತ್ರವನ್ನು ಓದಿ ಕಣ್ಣೀರು ಬಂತು.

ಈ ದೇಶದಲ್ಲಿ ಯಾವ ಪ್ರಭುತ್ವ ಅಸ್ತಿತ್ವದಲ್ಲಿದೆ?

- ಬಸವರಾಜ ಹಳ್ಳಿ, ಸಿಂಧನೂರು

ಸೋನಿ ಸೋರಿಯ ಬಗ್ಗೆ 'ಕಂಡಹಾಗೆ' ಅಂಕಣ ಓದಿ ತುಂಬಾ ಬೇಸರವಾಯಿತು. ಓರ್ವ ವ್ಯಕ್ತಿ ಇದರ ವಿರುದ್ಧ ಏನು ಮಾಡಲು ಸಾಧ್ಯ? ಸುಮ್ಮನೆ ಓದಿ ಅದನ್ನು ನಿರ್ಲಕ್ಷಿಸುವುದೇ?

- ಜಾನ್, ಕಾರ್ಕಳ

ಆಗಸ್ಟ್ 22, 2012ರ ಪತ್ರಿಕೆಯ ಸಂಚಿಕೆ ಅದ್ಭುತವಾಗಿ ಬಂದಿದೆ. ಸಾರಾ ಅಬೂಬಕ್ಕರ್, ಚಂದ್ರೇಗೌಡ, ಸಬಿಹಾ ಭೂಮಿಗೌಡರ ಲೇಖನಗಳು ಸಂಗ್ರಹ ಯೋಗ್ಯವಾಗಿವೆ.

- ಸರ್ಜಾಶಂಕರ್ ಹರಳಿಮಠ, ಶಿವಮೊಗ್ಗ



...ದಾಳಿಕೋರರ ಮೇಲೆ 'ಪಾದ್ರಿ ಪೊಲೀಸರು' ಕೇಸ್ ...ೇ ಸಂತ್ರಸ್ತರ ಮೇಲೆಯೇ ಕೇಸ್ ದಾಖಲಿಸುವ ... ನಿಯಮ ಕರಾವಳಿ ಬಿಟ್ಟರೆ ಜಗತ್ತಿನಲ್ಲಿ ಬೇರೆಲ್ಲಿಯೂ ... ಇಲ್ಲ! ಮರ್ಯಾದೆಗೆ ಹಾಗೂ ಪೊಲೀಸ್ ಕಿರು... ಹೆದರಿ ಪಾಲಕರೂ ಕೋರ್ಟ್ ಅಥವಾ ಮಾನವ ...ಆಯೋಗದ ಮೆಟ್ಟಿಲು ಹತ್ತುತ್ತಿಲ್ಲ. ಹಾಗಾಗಿ ಇವೆಲ್ಲಾ ...ಮ ಗಳಲ್ಲಿ ಪ್ರಸಾರವಾಗುತ್ತಿಲ್ಲ ಹಾಗೂ ಇತರ ...ು ಜನರಿಗೆ ಗೊತ್ತಾಗುತ್ತಿಲ್ಲ ಅಷ್ಟೇ. ಹಿಂದಿನ ಐದು ...ದಿಂದ ಅನೈತಿಕ ಪೊಲೀಸ್‌ಗಿರಿ ಇಲ್ಲಿ ಯಾವ ಪರಿ ...ಯುತ್ತಿದೆ ಎಂದರೆ ಅಣ್ಣಾ-ತಂಗಿಯೂ ಒಟ್ಟಿಗೆ ಹೊರಗೆ ...ಗಲು ಹೆದರುತ್ತಾರೆ!

... ಅನೈತಿಕ ಪೊಲೀಸ್‌ಗಿರಿಗೆ ಸಮರ್ಥನೆ ...ಮಂತಹ ಕೆಲವು ನೈಜ ಪ್ರಕರಣಗಳು ನಡೆದಿರುವುದೂ ... ನಾನಿರುವ ಉಪನಗರದಲ್ಲೇ ಒಂದು ಹಿಂದುಳಿದ ...ು ಹುಡುಗಿಯ ಫೋಟೋವನ್ನು ಅವಳ ಕಾಲೇಜಿನ ...ಮಂತ ಹುಡುಗನೇ ತೆಗೆದು ಅದಕ್ಕೆ ಕಂಪ್ಯೂಟರ್‌ನಲ್ಲಿ ...ರದೋ ಬೆತ್ತಲೆ ದೇಹ ಜೋಡಿಸಿ ಅವಳನ್ನು ...ಮೇಲ್ ಮಾಡಲು ಪ್ರಯತ್ನಿಸಿದ. ಕೊನೆಗೆ ಆಕೆಯ ...ಸಿದ ಒದೆ ತಿಂದು ಪೊಲೀಸ್ ಅತಿಥಿಯಾದ. ... ಆ ಬ್ಲ್ಯಾಕ್‌ಮೇಲ್ ಮಾಡಿದವನು ಬ್ರಾಹ್ಮಣನಾಗಿ...ದ ರಾಜಕೀಯ ಒತ್ತಡಕ್ಕೆ ಮಣಿದು ಪೊಲೀಸರು ಆ ..., ಹೆಚ್ಚು ಉದ್ದ ಎಳೆಯಲಿಲ್ಲ. ಇನ್ನೊಂದು ಹುಡುಗಿ ...ಂತಹದ್ದೇ ಬ್ಲ್ಯಾಕ್‌ಮೇಲ್‌ಗೆ ಬಲಿಯಾಗಿ ಆತ್ಮಹತ್ಯೆ ...ಮಾಡಿಕೊಂಡಿದ್ದೂ ನಿಜ. ಅಂತೆಯೇ ಇಲ್ಲಿಯ ಕಾಲೇಜು ಸಮಾರಂಭಗಳಲ್ಲಿ ಡ್ಯಾನ್ಸ್ ಮಾಡಿದ ಹುಡುಗಿಯರಿಗೆ, ಮುಂಬೈ-ಬೆಂಗಳೂರಲ್ಲಿ ಟಿವಿಗಳ ರಿಯಾಲಿಟಿ-ಶೋಗಳಲ್ಲಿ ಭಾಗವಹಿಸಲು ಉಚಿತ ತರಬೇತಿ ಕೊಡುವುದಾಗಿ ಆಮಿಷ ತೋರಿಸಿ ಅಥವಾ ಸ್ಥಳೀಯ ಸಿಟಿ ಚಾನೆಲ್‌ಗಳಲ್ಲಿ ಛಾನ್ಸ್ ಕೊಡಿಸಲು ಪ್ರೋಮೊ ಬೇಕು ಎಂದು ಪುಸಲಾಯಿಸಿ, ಅಮಾಯಕ ಹುಡುಗಿಯರನ್ನು ಬ್ಲ್ಯೂಫಿಲ್ಮ್‌ಗೆ ಬಳಸುವ ಖತರ್‌ನಾಕ್ ಗುಂಪೊಂದು ಮೂರು ವರ್ಷದ ಹಿಂದೆ ಮಂಗಳೂರಲ್ಲಿ ಪತ್ತೆಯಾಗಿತ್ತು. ಹೊಸ ವರ್ಷದ ಸಮಾರಂಭದಲ್ಲಿ ಅಮಲು ಪದಾರ್ಥವನ್ನು ಜ್ಯೂಸ್‌ಗೆ ಬೆರೆಸಿ ಹುಡುಗಿಯರಿಗೆ ಕುಡಿಸಿ ಕೆಡಿಸುವ ಪ್ರಯತ್ನಗಳೂ ಇಲ್ಲಿಯ ಕೆಲವು ಪ್ರತಿಷ್ಠಿತವೆನಿಸಿದ ಕಾಲೇಜಿನ ಶ್ರೀಮಂತ ಹುಡುಗರಿಂದ ನಡೆದಿದ್ದು ನಿಜ. ಮಂಗಳೂರಿಗೆ ಮುಂಬೈ ಮತ್ತು ಕೊಲ್ಲಿ ದೇಶಗಳ ನೇರಸಂಪರ್ಕ ಇರುವುದರಿಂದ ನೈಜೀರಿಯಾದ ಡ್ರಗ್ ಮಾಫಿಯಾ ಸ್ಥಳೀಯ ಮಾಫಿಯಾಗಳೊಂದಿಗೆ ಕೈಜೋಡಿಸಿ ಕಾರ್ಯ ನಿರ್ವಹಿಸುತ್ತಿರುವುದೂ ನಿಜ. ಮಾಜಿ ಮೇಯರ್‌ನ ಮಗನೊಬ್ಬ ಡ್ರಗ್ ಮತ್ತು ಬಾಲಕಿಯರ ಟ್ರಾಫಿಕಿಂಗ್‌ನಲ್ಲಿ ಪೊಲೀಸರಿಗೆ ಸಿಕ್ಕಿಬಿದ್ದು ನಂತರ ಆ ಕೇಸ್ 'ಪುಸ್ಕಾ' ಆಗಿರುವುದೂ ನಿಜ. ಆದರೆ ಇವೆಲ್ಲಾ ಆಗಿರುವುದು ರಾಜಕಾರಣಿಗಳ ಹಾಗೂ ಪೊಲೀಸರ ಕೃಪಾಶ್ರಯದಲ್ಲಿಯೇ. ಇದಕ್ಕಾಗಿ ಬೇರೆ ಅಮಾಯಕ ಹುಡುಗಿಯರನ್ನು ಹಿಡಿದು ಧರ್ಮದ ಹೆಸರಲ್ಲಿ ದೌರ್ಜನ್ಯ ಎಸಗುವುದು ಯಾವ ನ್ಯಾಯ?

ಹುಡುಗಿಯರು ಬಿಯರ್, ವೈನ್ ಕುಡಿದರೆ ಅದನ್ನೇ ದೊಡ್ಡದು ಮಾಡುವ ಅರೆ ಸಾಕ್ಷರ ಕೇಸರಿಪಡೆಗೆ ಗೊತ್ತಿರುವಂತೆ ತುಳುನಾಡಿನ ಎಲ್ಲಾ ಹಳ್ಳಿಗಳಲ್ಲೂ ಗದ್ದೆ ಕೂಲಿ ಕೆಲಸಕ್ಕೆ ಹೋಗುವ ಮುನ್ನ ಮಹಿಳೆಯರೆಲ್ಲಾ ಉತ್ಸಾಹಕ್ಕಾಗಿ ಈಗಲೂ 2-3 ಗ್ಲಾಸ್ ಕಳ್ಳು ಕುಡಿಯುತ್ತಾರೆ. ಕಳ್ಳು ಬಿಯರ್‌ಗಿಂತ ಮೂರುಪಾಲು ಹೆಚ್ಚು ಅಮಲುಕಾರಕ. ಕೃಷಿಕ ಯುವತಿಯರೂ ಗದ್ದೆಯ ಕೆಸರಲ್ಲಿ ಕೆಲಸ ಮಾಡುವಾಗ ಸೆರಗಿಲ್ಲದ ವೀರಗಚ್ಚೆ ಹಾಕುತ್ತಾರೆ. ಆದರಲ್ಲಿ ಸಂಪೂರ್ಣ ತೊಡೆ ಹಾಗೂ ಎದೆ ಕಾಣುತ್ತದೆ. ಹೋಮ್ ಸ್ಟೇ ಹುಡುಗಿಯರು ಹಾಕಿದ ಬರ್ಮುಡಾ-ಟೀ ಶರ್ಟ್ ಇದಕ್ಕಿಂತ ಬಹಳ ಹೆಚ್ಚು ಮೈ ಮುಚ್ಚುತ್ತಿತ್ತು. ಜಗತ್ತಿನ ವಿವಿಧ ಡ್ರೆಸ್‌ಗಳಲ್ಲಿ ಬಿಕಿನಿಯ ನಂತರ ಸೀರೆಯೇ ಅತಿಹೆಚ್ಚು ಪ್ರಚೋದಕ (ಸೆಕ್ಸಿ, ಪ್ರೊವೊಕೇಟಿವ್) ಎನ್ನುತ್ತದೆ ಸಮೀಕ್ಷೆಯೊಂದು. ಹೆಣ್ಣಿನ ಸೊಂಟ ದೇಹದ ಉಳಿದ ಭಾಗಕ್ಕಿಂತ ಗಂಡಸರ ಕಣ್ಣಿಗೆ ಹೆಚ್ಚು ಪ್ರಚೋದಕವಂತೆ. ಹೊಕ್ಕಳಿಂದ ಆರು ಇಂಚು ಕೆಳಗಿರುವ ಸೀರೆ, ಹೊಕ್ಕಳಿಂದ ಎಂಟು ಇಂಚು ಮೇಲಿರುವ 'ಬ್ರಾ'ದ ಸೈಜಿನದೇ ಬ್ಲೌಸು, ಬೆನ್ನೆಲ್ಲಾ ಪೂರ್ತಿ ಬೆತ್ತಲೆ, ಇದೆಲ್ಲಾ ಈಗಿನ ಮೇಲ್ವರ್ಗದ ಮದುವೆಯ ದೃಶ್ಯ. ಕಾಲೇಜು ಹುಡುಗಿಯರ ಬರ್ಮುಡಾ-ಟಿಶರ್ಟ್‌ಗಿಂತ ಭಾರತೀಯ ಸಂಸ್ಕೃತಿಯ ಪ್ರತೀಕವಾದ ಸೀರೆಯೇ ಹೆಚ್ಚು ಪ್ರಚೋದಕ. ಇಂತಹ ಮದುವೆಗಳಿಗೇಕೆ ಕೇಸರಿ ಪಡೆ ನುಗ್ಗುತ್ತಿಲ್ಲ? ಹಿಂಜಾವೇಯ ಸಂಚಾಲಕ ಜಗದೀಶ್ ಕಾರಂತರು ಮಂಗಳೂರಲ್ಲಿ 'ಸೆಕ್ಸ್- ಟ್ಯೂರಿಸಮ್' ನಡೆಯುತ್ತಿದೆ ಎಂದಿದ್ದಾನೆ. ಗೋವೆಯ ಬಗ್ಗೆಯೂ ಈ ಮಾತು ಯಾರೂ ಹೇಳಿಲ್ಲ. ಬಹುಶಃ ಕಾರಂತನ ಕುಲಬಾಂಧವರೇ ಮಂಗಳೂರಲ್ಲಿ ಹೋಟೆಲ್- ಲಾಡ್ಜ್ ಉದ್ಯಮದಲ್ಲಿ ಹೆಚ್ಚಿರುವುದರಿಂದ ತಮ್ಮವರ ಕುಲಕಸುಬಿನ ಒಳಗುಟ್ಟು ಅವರಿಗೇ ಹೆಚ್ಚು ಗೊತ್ತಿರುವ ಸಾಧ್ಯತೆ ಇದೆ ಬಿಡಿ!

ಇಂಟರ್‌ನೆಟ್‌ನಲ್ಲಿ ಕೆಲವು ಕರಾವಳಿಗರ ಕಾಮೆಂಟ್ ಈ ರೀತಿ ಇವೆ: ಗೊಮ್ಮಟೇಶನಿಗೆ ಖಾಕಿ ಚಡ್ಡಿಯಾದರೂ ಹಾಕಿ. 25 ವರ್ಷದ ಯುವತಿಯಂತೆ ಇರುವ ಮೂಕಾಂಬಿಕೆಗೆ ರವಿಕೆ ಹಾಕಿ ಸೆರಗು ಹೊದಿಸಿ ಹೊಕ್ಕಳು ಮುಚ್ಚಿ, ಕಾಳಿಮಾತೆಯನ್ನು ಪೂರ್ತಿ ಬಟ್ಟೆಯಿಂದ ಮುಚ್ಚಿ, ಗಂಡು ದೇವರಿಗೆಲ್ಲಾ ಶಾಲು ಹೊದಿಸಿ 'ಸಿಕ್ಸ್ ಪ್ಯಾಕ್' ಮುಚ್ಚಿ, ಬೇಲೂರು ಶಿಲಾ-ಬಾಲಕಿಗೆ ಸಂಪೂರ್ಣ ಬಟ್ಟೆ ಉಡಿಸಿ, ಕಟೀಲು, ಸುಬ್ರಹ್ಮಣ್ಯದ ಅರ್ಚಕರೆಲ್ಲಾ 'ಸೀಥ್ರೂ' ಪಂಚೆ ತೆಗೆದು ದಪ್ಪನೆ ಪಂಚೆಯುಟ್ಟು ಶರ್ಟ್ ಹಾಕಿ ಮಹಿಳಾ ಭಕ್ತರೆದುರು ಬರಲಿ. ಖಜೂರಾಹೊದಲ್ಲಿ ಗಂಡು-ಹೆಣ್ಣು ಮಾತ್ರವಲ್ಲ ಮಾನವ-ಪ್ರಾಣಿ ಸಂಭೋಗದ ಶಿಲ್ಪಗಳನ್ನೆಲ್ಲಾ ನಾಶ ಮಾಡಲಿ. ದೇವರಿಗೆ ಕಾಮವೇ ಇಲ್ಲದಾಗ ಹಲವಾರು ಕಲ್ಯಾಣಗಳೇಕೆ ಬೇಕು. ಮಹಿಳಾ ದೇವರೂ ಸ್ಟ್ರಾಂಗ್ ಸೋಮರಸ ಕುಡಿಯುವಾಗ ಹುಡುಗಿಯರು ಬಿಯರ್ ಸಹಾ ಕುಡಿಯಬಾರದೇ. ಸಿನಿಮಾಗಳಲ್ಲಿ ಸಿಗರೇಟು ನಿಲ್ಲಿಸಿದಂತೆ ಹೀರೋ ಮಾಡುವ ಈವ್-ಟೀಸಿಂಗ್ ಲೈಂಗಿಕ ಕಿರುಕುಳ ನಿಲ್ಲಿಸಲಿ.


-ಪ್ರವೀಣ್.ಎಸ್. ಶೆಟ್ಟಿ, ಮಂಗಳೂರು

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಮಿಂಚೆ ಅಥವಾ ಬರಹ ರೂಪದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕವಾಗಿ ಕಳುಹಿಸಬಹುದು.

Registered No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 14/- 29-08-2012 RNI No. KARKAN

ನಟ ಶ್ರೀಧರ್ ಈಗ ಡಾಕ್ಟರ್!

ಡಾ.ಜಯಮಾಲಾ ನಂತರ ಈಗ ಚಿತ್ರರಂಗದಲ್ಲಿ ಮತ್ತೊಬ್ಬರು ಡಾಕ್ಟರೇಟ್ ಪಡೆಯುತ್ತಿದ್ದಾರೆ.



ಆರಂಭದಲ್ಲಿ ಕನ್ನಡ ಸಿನಿಮಾಗಳಲ್ಲಿ ನಾಯಕನಟನಾಗಿ ವಿಜೃಂಭಿಸಿದ್ದ ನಟ ಶ್ರೀಧರ್ ಆನಂತರ ಭರತನಾಟ್ಯದತ್ತ ಗಮನಹರಿಸಿದ್ದರು. ಅವರು ದೇಶವಿದೇಶಗಳಲ್ಲಿ ಕಾರ್ಯಕ್ರಮಗಳನ್ನು ಕೊಟ್ಟಿರುವುದು ನಿಮಗೆಲ್ಲರಿಗೂ ಗೊತ್ತಿದೆ. ಸಿನಿಮಾ ರಂಗದಿಂದ ದೂರವಾದ ಶ್ರೀಧರ್ ಆಲ್ಲೊಮ್ಮೆ, ಇಲ್ಲೊಮ್ಮೆ ಸಿನಿಮಾಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆಯೇ ವಿನಃ ಅವರೀಗ ಫುಲ್‌ಟೈಮ್ ನಟ ಅಲ್ಲ. ಆದರೆ ಇಂದಿಗೂ ಜನರು ಅವರನ್ನು ಪ್ರೀತಿಯಿಂದ ಕಲಾವಿದನಾಗಿಯೇ ನೋಡುತ್ತಾರೆ.

ಶ್ರೀಧರ್ ಮೂಲತಃ ಇಂಜಿನಿಯರ್ ಆದರೂ ಸದಭಿರುಚಿ ಸಿನಿಮಾಗಳಲ್ಲಿ ನಟಿಸಿದ್ದರು. ಮಾತ್ರವಲ್ಲ ಭರತನಾಟ್ಯ ಕ್ಷೇತ್ರದಲ್ಲೂ ಏನಾದರೂ ದೊಡ್ಡ ಸಾಧನೆ ಮಾಡಬೇಕೆಂದು ಒದ್ದಾಡುತ್ತಿದ್ದರು. ಈಗ ಶ್ರೀದರ್ ಭರತನಾಟ್ಯ ವಿಷಯದಲ್ಲಿ ಸಾಕಷ್ಟು ಅಧ್ಯಯನ ಮಾಡಿ ಡಾಕ್ಟರೇಟ್ ಪದವಿ ಪಡೆಯುವ ಹಂತದಲ್ಲಿದ್ದಾರೆ. ಇನ್ನೇನು ಕೆಲವೇ ವಾರಗಳಲ್ಲಿ ಅವರು ಡಾ.ಶೀಧರ್ ಎಂದೆನಿಸಿಕೊಳ್ಳಲಿದ್ದಾರೆ. ಇವರು ಬರೆದಿರುವ ಪ್ರಬಂಧ ಬಹುಶಃ ಮುಂದಿನ ದಿನಗಳಲ್ಲಿ ಭರತನಾಟ್ಯ ರಂಗಕ್ಕೆ ಬರುವವರಿಗೆ ಬಹಳ ಸಹಕಾರಿಯಾಗಲಿದೆ.

ಸಿನಿಮಾ ರಂಗದ ಅನೇಕರು ಡಾಕ್ಟರೇಟ್ ಪದವಿಯನ್ನು ಪಡೆದಿದ್ದಾರೆ. ಆದರೆ ಅವೆಲ್ಲವೂ ಗೌರವ ಡಾಕ್ಟರೇಟ್ ಪದವಿಗಳು ಎಂಬುದನ್ನು ಇಲ್ಲಿ ಸ್ಮರಿಸಿಕೊಳ್ಳಬೇಕು. ಇಂತಹ ಸನ್ನಿವೇಶದಲ್ಲಿ ಸಿನಿಮಾ ವಿಷಯದ ಹೊರತಾಗಿ ಬೇರೆ ಕ್ಷೇತ್ರದಲ್ಲಿ ಅಧ್ಯಯನ ಮಾಡಿ ಡಾಕ್ಟರೇಟ್ ಪಡೆದವರು ಡಾ. ಜಯಮಾಲಾ ಮಾತ್ರ. ಈಗ ಅವರ ಸಾಲಿಗೆ ಶ್ರೀಧರ್ ಸೇರುತ್ತಿರುವುದು ಸಂತೋಷದ ವಿಷಯ.

'ನೀವು ಹುಡುಗಿಯರನ್ನು ತಂ... ನಾನು ನಿರ್ದೇಶಕರನ್ನು ತರುತ್ತೇ...



ಪ್ರಿಯಾ ಹಾಸನ್ ಮತ್ತೊಂದು ಚಿತ್ರದಲ್ಲಿ ನಾಯಕಿಯಾಗಿ ನಟಿಸುತ್ತಿದ್ದಾಳೆ. ಚಿತ್ರದ ಹೆಸರು 'ಸ್ಮಗ್ಲರ್'. ಈ ಹಿಂದೆ 'ಬಿಂದಾಸ್ ಹುಡುಗಿ' ಮತ್ತು 'ಜಂಭದ ಹುಡುಗಿ' ಎಂಬ ಚಿತ್ರಗಳಲ್ಲಿ ಪ್ರಿಯಾ ನಾಯಕಿಯಾಗಿ ನಟಿಸಿದ್ದಳಲ್ಲದೆ ಸಿನಿಮಾ ನಿರ್ದೇಶನದ ಜವಾಬ್ದಾರಿಯನ್ನೂ ನಿಭಾಯಿಸಿದ್ದಳು. ಆದರೆ ಈ ಹುಡುಗಿ ಈ ಬಾರಿ ತೆಲುಗಿನಿಂದ ಒಬ್ಬ ಜನಪ್ರಿಯ ನಿರ್ದೇಶಕರನ್ನು ಕರೆದುಕೊಂಡು ಬಂದಿದ್ದಾಳೆ. ಆತನ ಹೆಸರು ವೀರೂ. ಈತ ತೆಲುಗಿನಲ್ಲಿ ಜೂನಿಯರ್ ಎನ್.ಟಿ.ಆರ್ ತರಹದ ದೊಡ್ಡ ನಟನ ಚಿತ್ರವನ್ನು ನಿರ್ದೇಶಿಸಿದ್ದಾರೆ.

"ಕನ್ನಡ ಚಿತ್ರರಂಗದಲ್ಲಿ ದೊಡ್ಡ ನಿರ್ದೇಶಕರು ಇಲ್ಲವೇ? ತೆಲುಗಿನಿಂದ ಯಾಕೆ ಅವರನ್ನು ಕರೆದುಕೊಂಡು ಬಂದಿದ್ದೀರಾ?" ಎಂದು ಕೇಳಿದರೆ ಪ್ರಿಯಾ ಕೊಟ್ಟ ಉತ್ತರ ಏನು ಗೊತ್ತಾ? "ನಮ್ಮ ನಿರ್ದೇಶಕರು ತೆಲುಗಿನಿಂದ ನಾಯ... ಕರೆದುಕೊಂಡು ಬರಬಹುದಾದರೆ ನಾನೇಕೆ ತೆಲುಗಿನಿಂದ ನಿರ್ದೇಶಕರನ್ನು ಕರೆದುಕೊಂಡು ಬರಬಾ... ಕನ್ನಡದ ಹುಡುಗಿಯರನ್ನು ತುಚ್ಛವಾಗಿ ನೋಡುವ ಕನ್ನಡದ ನಿರ್ದೇಶಕರಿಗೆ ಪ್ರಿಯಾ ಹಾಸನ್ ... ಶೈಲಿಯಲ್ಲಿ ಸರಿಯಾದ ಉತ್ತರ ನೀಡಿ ಒಂದು ರೀತಿಯಲ್ಲಿ ಸೇಡು ತೀರಿಸಿಕೊಂಡಿದ್ದಾ... ಹೇಳಬಹುದು.

ಅಂದಹಾಗೆ, ಪ್ರಿಯಾ ಹಾಸನ್ ಈಗಾಗಲೇ 'ಲೇಡಿ ಟೈಗರ್...' ಚಿತ್ರದಲ್ಲಿ ನಾಯಕಿಯಾಗಿ ನಟಿಸಿ ಅದನ್ನು ಸಂಪೂರ್ಣಗೊಳಿಸಿದ್ದಾಳೆ... ರಾಜ್ಯ ಸರ್ಕಾರದ ಪ್ರಶಸ್ತಿಗಳ ವಿರುದ್ಧವೂ ಕೋರ್ಟ್ ... ಪ್ರಿಯಾ ಹಾಸನ್ ಖಂಡಿತವಾಗಿಯೂ ನಮ್ಮ ಬೇರೆ ನಾಯ... ನಡೆ ಮತ್ತು ನುಡಿಯಲ್ಲಿ ವಿಭಿನ್ನಳಾಗಿದ್ದಾಳೆ.

ಸುಮನ್ ರಂಗನಾಥ್



ಸುಮನ್‌ಳ 'ಬಿಚ್ಚು' ಮಾ...

ಕನ್ನಡ ಚಿತ್ರರಂಗದಲ್ಲಿ ಈಗ ದಿನಕೊ... ಬಟ್ಟೆ ಬಿಚ್ಚಿ ಐಟಂ ಸಾಂಗ್‌ಗಳಲ್ಲಿ ... ತ್ತಿರುವುದು ಒಂದು ಹೊಸ ಟ್ರೆಂಡ್ ... ಕಳೆದ ವಾರ ಇದೇ ಪುಟಗಳಲ್ಲಿ ಪೂ... ಮತ್ತು ರಾಗಿಣಿ ಐಟಂ ಸಾಂಗ್‌ಗಳಲ್ಲಿ ... ಕುಣಿದು ಕುಪ್ಪಳಿಸಲು ಸಜ್ಜಾಗಿರುವ ಬಗ್ಗೆ ... ಈಗ ಅವರ ಸಾಲಿಗೆ ಸೇರಿ ಅವರಿಬ್ಬರಿ... ಪೈಪೋಟಿ ನೀಡಲು ಮಾಜಿ ನಾಯಕಿ... ರಂಗನಾಥ್ ಹೊರಟಿದ್ದಾರೆ.

ಇತ್ತೀಚೆಗೆ 'ಸಿದ್ಲಿಂಗು' ಚಿತ್ರದಲ್ಲಿ ಸೀರೆ ಉಟ್ಟ... ಪಾತ್ರದಲ್ಲಿ ಕಾಣಿಸಿಕೊಂಡಿದ್ದ ಸುಮನ್‌ಗೆ ಮತ್ತೆ ಆಕೆಯ... ಬಟ್ಟೆ ಬಿಚ್ಚಿ ಪಡ್ಡೆ ಹುಡುಗರ ನಿದ್ದೆ ಕೆಡಿಸುವ ಪಾತ್ರ ... ಆಶ್ಚರ್ಯವೇನಲ್ಲ. ಯಾಕೆಂದರೆ ಸುಮನ್ ರಂಗನಾಥ್... ಕಾಣಿಸಿಕೊಂಡಿರುವುದೇ ಇಂತಹ ಪಾತ್ರಗಳಲ್ಲಿ.


ಸುಮನ್ ಮೂಲತಃ ಕನ್ನಡದ ಹುಡುಗಿಯಾದರೂ ... ಅದೃಷ್ಟ ಹುಡುಕಿಕೊಂಡು ಬಾಲಿವುಡ್‌ಗೆ ಹೋಗಿದ್ದಳು. ಈಕೆ ... ಕಾಲಿಟ್ಟದ್ದೇ ತಡ, ಅಲ್ಲಿಯ ನಿರ್ದೇಶಕರು ಸುಮನ್‌ಳ ಸೌಂದರ್ಯ ಮತ್ತು ಮೈ... ಜಗತ್ತಿಗೆ ತೋರಿಸುತ್ತಾ ಹೋದರು. ಆಕೆಯೂ ಅಂತಹ ಪಾತ್ರಗಳಲ್ಲೇ ಸು... ಸಂತೋಷವನ್ನು ಕಂಡಳು. ಕೊನೆಕೊನೆಗೆ ಆಕೆ ಸಿನಿಮಾ ಪತ್ರಿಕೆಗಳಲ್ಲಿಯೂ ತುಂಬ... ಆಗಿ ಅರೆನಗ್ನಳಾಗಿ ಕಾಣಿಸಿಕೊಂಡಿದ್ದಳು.

ಆದರೆ ಒಂದು ಮಾತಂತೂ ನಿಜ. ಸುಮನ್ ರಂಗನಾಥ್ ಯಾವತ್ತೂ ನಮ್ಮ ಕನ್ನಡದ ಇತರೆ ಹುಡು... ಐಟಂ ಸಾಂಗ್‌ಗಳಲ್ಲಿ ಕಾಣಿಸಿಕೊಳ್ಳುವ ಬಗ್ಗೆ ಅಲರ್ಜಿ ಪ್ರದರ್ಶಿಸಿದವಳಲ್ಲ. "ಈ ಐಟಂ ಸಾಂಗ್... ಐಡೆಂಟಿಟಿ ನೀಡಿವೆ. ಹೆಸರು, ಹಣ ತಂದುಕೊಟ್ಟಿವೆ. ಅದಕ್ಕಿಂತಲೂ ಮುಖ್ಯವಾಗಿ ಈ ಪಾತ್ರಗಳ... ಸಂತೋಷದಿಂದ ಒಪ್ಪಿಕೊಂಡಿದ್ದೇ ವಿನಃ ಯಾರ ಒತ್ತಾಯಕ್ಕೆ ಅಲ್ಲ. ಹೀಗಾಗಿ ನಾನು ಯಾವ... ಸಾಂಗ್‌ಗಳ ಬಗ್ಗೆ ಕೀಳರಿಮೆಯಿಂದ ಮಾತನಾಡುವುದಿಲ್ಲ" ಎಂದು ಬೋಲ್ಡ್ ಆಗಿ ಹೇಳುತ್ತಾಳೆ ಸು...

ಇಂತಹ ಬೋಲ್ಡ್ ಅಂಡ್ ಬ್ಯುಟಿಫುಲ್ ಹುಡುಗಿ ಈಗ 'ಜಿಂಕೆ ಮರಿ' ಎಂಬ ಚಿತ್ರದಲ್ಲಿ ನಟ... ಮಾತಲ್ಲೇ ಮಾತ್ರವಲ್ಲ ನಟಿಸುವುದರಲ್ಲಿ, ಬಿಚ್ಚುವುದರಲ್ಲಿ ಕೂಡಾ ಈಕೆಯದು ಎತ್ತಿದ ಕೈ. ಅದಕ್ಕೆ ... ಫೋಟೋ ಒಂದು ಸಣ್ಣ ಉದಾಹರಣೆ.

'ಬ್ರೂಸ್ಲಿ'ಯಾಗಿ ವಿಜಯ್

ಮೊನ್ನೆ ಮೊನ್ನೆಯಷ್ಟೇ 'ಅದ್ದೂರಿ' ಎಂಬ ಸೂಪರ್ ಹಿಟ್ ಚಿತ್ರವನ್ನು ನೀಡಿದ್ದ ನಿರ್ದೇಶಕ ಅರ್ಜುನ್ ಈಗ ಇನ್ನೊಂದು ಚಿತ್ರವನ್ನು ನಿರ್ದೇಶಿಸಲು ಹೊರಟಿದ್ದಾರೆ. ಚಿತ್ರದ ಹೆಸರು 'ಬ್ರೂಸ್ಲಿ'. ಈ ಚಿತ್ರದ ನಾಯಕ ನಟನಾಗಿ ದುನಿಯಾ ಖ್ಯಾತಿಯ ವಿಜಯ್ ಆಯ್ಕೆಯಾಗಿದ್ದರೆ. ಈ ಚಿತ್ರವನ್ನು ಖ್ಯಾತ ಹಂಚಿಕೆದಾರ ಜಯಣ್ಣ ನಿರ್ಮಿಸುತ್ತಿದ್ದಾರೆ.



ಬಹುಶಃ 'ಅದ್ದೂರಿ' ಚಿತ್ರದ ಯಶಸ್ಸು ಅರ್ಜುನ್ ಅವರ ಎಲ್ಲಾ ಸಂಕಷ್ಟಗಳನ್ನು ಪರಿಹರಿಸಿದಂತೆ ಕಾಣಿಸುತ್ತಿದೆ. ಯಾಕೆಂದರೆ ಈ ಹಿಂದೆ ಅವರ ಮೊದಲ ನಿರ್ದೇಶನದ ಚಿತ್ರ 'ಅಂಬಾರಿ' ಬಾಕ್ಸ್ ಆಫೀಸಿನಲ್ಲಿ ಗೆದ್ದಿದ್ದರೂ ಸುಮಾರು ನಾಲ್ಕು ವರ್ಷಗಳ ಕಾಲ ಅವರಿಗೆ ಯಾರೂ ಒಂದೇ ಒಂದು ಅವಕಾಶವನ್ನು ನೀಡಿರಲಿಲ್ಲ.

ಅರ್ಜುನ ವಿಷಯದಲ್ಲಿ ತಡವಾಗಿಯಾದರೂ ಗಾಂಧಿನಗರದ ಜನ ಎಚ್ಚೆತ್ತುಕೊಂಡಿದ್ದಾರೆ ಎಂಬುದು ಸಂತೋಷದ ವಿಷಯವಲ್ಲವೇ? 'ಅದ್ದೂರಿ' ಚಿತ್ರ ತುಂಬಿದ ಪ್ರದರ್ಶನಗಳನ್ನು ಕಾಣುತ್ತಿರುವಾಗಲೇ ಅರ್ಜುನ್‌ಗೆ ಮತ್ತೊಂದು ಅವಕಾಶ ಸಿಕ್ಕಿರುವುದು ನಮ್ಮ ಗಾಂಧಿನಗರದಲ್ಲೂ ಪ್ರತಿಭೆಗೆ ಬೆಲೆ ಕೊಡುವ ಜನ ಇದ್ದಾರೆಂದಾಯಿತಲ್ಲವೆ?

ಅಂದಹಾಗೆ 'ಬ್ರೂಸ್ಲಿ' ಎಂಬ ಹೆಸರು ಮತ್ತು ವಿಜಯ್ ಅದಕ್ಕೆ ನಾಯಕನಾಗಿ ಆಯ್ಕೆಯಾಗಿರುವುದು ಈ ಚಿತ್ರದ ಬಗ್ಗೆ ಎಲ್ಲೆಡೆ ಈಗಾಗಲೇ ಸಂಚಲನವನ್ನು ಹುಟ್ಟು ಹಾಕಿದೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com